1954

ಪ್ರತಿಭಾ ಗ್ರಂಥಮಾಲೆ, ಧಾರವಾಡ :: ೧೨ನೇ ವರುಷದ ೧ನೇ ಕಿರಣ

ಮೃಗಜಲ

(ಸಾಮಾಜಿಕ ಕಾದಂಬರಿ)

ಮೂಲ ಲೇಖಕರು:

ಶ್ರೀ. ಅನಂತ ಗಣೇಶ ಶೇವಡೆ

ಅನುವಾದಕರು:

ಶ್ರೀ. ಪೆರ್ವಾಜೆ ಸದಾಶಿವಭಟ್ಟ

ಅಗಸ್ಟ ೧೯೫೪ ಬೆಲೆ: ೧—೪—೦

ಮುಂದಿನ ಪ್ರಕಟನೆ

ಶ್ರೀ. ವರದರಾಜ ಹುಯಿಲಗೋಳರ

ಇತಿ—ಶ್ರೀ

ಮುದ್ರಕರು:
ಭಾಲಚಂದ್ರ ಘಾಣೇಕರ
ಪ್ರತಿಭಾ ಮುದ್ರಣ
ಧಾರವಾಡ.

ಪ್ರಕಾಶಕರು:
ಭಾಲಚಂದ್ರ ಘಾಣೇಕರ
ಪ್ರತಿಭಾ ಗ್ರಂಥಮಾಲೆ
ಧಾರವಾಡ.

ಬಿನ್ನಹ

ಬಹಳ ವರ್ಷಗಳಿಂದ ಸಾಹಿತ್ಯಸೇವೆ ಮಾಡಬೇಕೆಂದು ನನಗೆ ಆಸೆ ಇತ್ತು. ಆದರೆ ಸರಿಯಾದ ಪರಿಸ್ಥಿತಿ ಹಾಗೂ ವಾತಾವರಣ ದೊರಕಿರಲಿಲ್ಲ. ಈಗ್ಗೆ ಕೆಲವು ವರ್ಷಗಳ ಹಿಂದೆ ನಾನು ಇಲ್ಲಿಗೆ ಬಂದಾಗಷ್ಟೇ ನನ್ನ ಆಶಾಲತೆಗೆ ನೀರಿನಾಸರ ಸಿಕ್ಕು ಅದು ಚಿಗುರಿ ಹೂ ಬಿಡಲಾರಂಭಿಸಿದೆ. ಇನ್ನೂ ಕಾಯಿ ಬಿಡುವ ಸಂಭವವಿಲ್ಲ. ಮುಂದೆ ಹಣ್ಣಾಗುವುದೆಂದೋ ತಿಳಿಯದು. ಫಲ ಬಿಟ್ಟಾಗಲ್ಲವೇ ಲತೆಯು ಪುಲಕಿತವಾಗುವದು.

ಅನುವಾದವು ಸುಲಭಕಾರ್ಯವಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಇದು ನನಗೆ ಮೊದಲು ತಿಳಿದಿರಲಿಲ್ಲ. ಕಾದಂಬರಿ ಚೆನ್ನಾಗಿದೆ. ಸ್ವಾರಸ್ಯ ವಾಗಿದೆ, ವಸ್ತು ಒಂದು ಬಗೆಯಲ್ಲಿ ಹೊಸದು ಎಂದು ತಿಳಿದು ಒಡನೆ ಹಿಂದೆ ಮುಂದೆ ನೋಡದೆ ‘ ಮೃಗಜಲ ’ ವನ್ನು ಹಿಂದಿಯಿಂದ ಕನ್ನಡಕ್ಕೆ ರೂಪಾಂತ ರಿಸಿ ಪ್ರಿಯ ಕನ್ನಡಿಗರಿಗೆ ನೀಡಬೇಕೆಂದೆಣಿಸಿದೆ. ಆದರೆ ಮತ್ತೆ ತಿಳಿಯಿತು ರೂಪಾಂತರ ಎಷ್ಟು ಕಠಿಣ ಕಾರ್ಯವೆಂದು. ಆದರೂ ಹಿಡಿದುದನ್ನು ಅರ್ಧ ದಲ್ಲಿ ಬಿಡುವುದೇ ? ಬಾರದು. ಎಂದು ಅನುವಾದ ಮುಂದರಿಸಿದೆ. ತುಂಬ ಪ್ರಯಾಸದಿಂದ ಪೂರ್ತಿಗೊಳಿಸಿದೆ.

ಆಮೇಲೆ ಪ್ರಕಾಶನಕ್ಕೆಂದು ಅಲೆದಾಟ. ಕೊನೆಗೆ ಪ್ರತಿಭಾ ಗ್ರಂಥ ಮಾಲೆಯ ಒಡೆಯರಾದ ಸಹೃದಯ ಶ್ರೀ. ಭಾಲಚಂದ್ರ ಘಾಣೇಕರ ಅವರು ಕಾದಂಬರಿಯನ್ನು ಪ್ರಕಟಿಸುವೆನೆಂದು ತಿಳಿಸಿದರು. ಆಗ ನನಗಾದ ಆನಂದ ಅಪರಿಮಿತ. ಏಕೆಂದರೆ ಹೊಸ ಹುರುಪು. ಆಶ್ರಯವಿಲ್ಲದೆ ಅತ್ತ ಇತ್ತ ಬಿತ್ತರಿಸಿ ರುವಾಗ ಅದಕ್ಕೆ ಆಶ್ರಯ ದೊರಕಿತು. ಶ್ರೀ. ಘಾಣೇಕರ ಅವರಿಗೆ ನನ್ನ ಮೊದಲ ಹೃತ್ಪೂರ್ವಕ ವಂದನೆಗಳು.

ಕಾದಂಬರಿಯ ಚಲನೆಯು ಆರಂಭದಲ್ಲಿ ತುಸು ಮಂದವಾಗಿ ಕಾಣ ಬಹುದು. ಆದರೆ ಇದು ಕಲಾವಿದನಿಗೆ ಸಂಬಂಧಿಸಿರುವ ಕಾರಣ ಕಲೆಯ ವಿಚಾರವಾಗಿ ಪಾಠಕರಿಗೆ ಕೊಂಚವಾದರೂ ತಿಳುವಳಿಕೆಯನ್ನು ಕೊಡುವುದೂ ಕಾದಂಬರಿಕಾರರ ಉದ್ದೇಶವಾಗಿದೆಯೆನ್ನಬಹುದು.

ಕಾದಂಬರಿಯನ್ನು ಕನ್ನಡಕ್ಕೆ ಪರಿವರ್ತಿಸಿಕೊಳ್ಳಲು ಒಪ್ಪಿಗೆಯನ್ನಿತ್ತ ಮೂಲಲೇಖಕ ಶ್ರೀ ಅನಂತ ಗೋಪಾಲ ಶೇವಡೆಯವರಿಗೆ ನನ್ನ ಅನಂತ ವಂದನೆಗಳು. ಇದರ ಕರಡು ಪ್ರತಿಯನ್ನು ಶುದ್ಧಪಡಿಸಿಕೊಟ್ಟು ನನ್ನ ಕಾರ್ಯದಲ್ಲಿ ನೆರವನ್ನಿತ್ತ ಶ್ರೀ. ಶಾಮಾ ಶಾಸ್ತ್ರಿಯರು ಮತ್ತು ಪ್ರಕಾಶನಕ್ಕೆ ದಾರಿ ಯಾವುದೆಂದು ತೋರಿಸಿದ ಶ್ರೀ. ' ನಿರಂಜನ ' ಅವರಿಗೂ ನಾನು ಎಂದಿಗೂ ಕೃತಜ್ಞನಾಗಿದ್ದೇನೆ.

ಅಂತೂ ಮೊದಲ ಯತ್ನದಲ್ಲೇ ಈ ದೀರ್ಘ ಕಾದಂಬರಿಯನ್ನು ಅನುವಾದಿಸುವ ದಿಟ್ಟತನವನ್ನು ಮಾಡಿದ್ದೇನೆ. ಇದು ಪಾಠಕರ ಹೃದಯದನ್ನು ಮುಟ್ಟಿದರೆ ಆಗ ನನ್ನ ಈ ಅಲ್ಪ ಕಾರ್ಯವು ಸಾರ್ಥಕವಾಯಿತೆಂದು ಭಾವಿಸುವೆ.

ಮೈಸೂರು
೧೫—೭—೫೪

ಪೆರ್ಾಜೆ ಸದಾಶಿವ ಭಟ್ಟ

ಅರ್ಪಣೆ

ಬಗೆಬಗೆಯ ಬವಣೆಗಳಿಂದ
ಬನ್ನಬಡುತ್ತಿರುವ ಭಾರತದ ಭಗಿನಿಯರಿಗೆ

ಮೃ ಗ ಜ ಲ

ಒಂದು

ವಿಕ್ಟೋರಿಯಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಭವ್ಯ ಕಟ್ಟಡದ ಸುತ್ತಲೂ ಆ ದಿನ ಒಂದು ದೊಡ್ಡ ಕೋಲಾಹಲವು ಕಂಡು ಬರುತ್ತಿತ್ತು. ಆ ಕಟ್ಟಡವು ದೊಡ್ಡ ದೊಡ್ಡ ಧ್ವಜಗಳಿಂದ ಅಲಂಕೃತವಾಗಿತ್ತು. ಅದರ ಪ್ರವೇಶ ದ್ವಾರವು ದೊಡ್ಡ ಎರಡು ಬಾಳೆ ಕಂಬಗಳಿಂದಲೂ, ಅಲ್ಲದೆ ಮಾವಿನೆಲೆಗಳ ತೋರಣಗಳಿಂದಲೂ, ' ಸುಸ್ವಾಗತಂ ' ಎಂಬ ಪತಾಕೆಯಿಂದಲೂ ಶೋಭಿಸುತ್ತಿತ್ತು. ಎಲ್ಲೆಲ್ಲಿಯೂ ಹೂ-ಎಲೆಗಳ ಚಿಕ್ಕ ಚಿಕ್ಕ ಅಲಂಕಾರದ ಬುಟ್ಟಿಗಳನ್ನಿರಿಸಿದ್ದರು. ಈ ಎಲ್ಲ ಅಲಂಕಾರಗಳಲ್ಲಿಯೂ ಕಂಡುಬರುವ ವಿಶೇಷತೆಯು ಬೇರೆ ಕಡೆಗಳಲ್ಲಿ ಕಂಡುಬರುವುದು ಕಷ್ಟ. ಅದೇನಂದರೆ ಇವೆಲ್ಲವುಗಳ ಮರೆಯಲ್ಲಿಯೂ ಇದರ ವ್ಯವಸ್ಥಾಪಕರ ಕಲಾದೃಷ್ಟಿಯು ಚೆನ್ನಾಗಿ ಎದ್ದು ಕಾಣುತ್ತಿತ್ತು. ಹೂ, ಗಿಡ, ಬಳ್ಳಿ ಎಲ್ಲವುಗಳನ್ನು ಇರಿಸಿದ್ದರಲ್ಲಿಯೂ ಒಂದು ರೀತಿಯ ಕುಶಲತೆಯು ಎದ್ದು ಕಾಣುತ್ತಿತ್ತು. ಹೌದು! ಯಾಕೆ ಹೀಗಿರಬಾರದು? ಆ ಹಾಲಿ (Hall) ನೊಳಗೆ ಭಾರತೀಯ ಚಿತ್ರಕಲಾ ಪ್ರದರ್ಶನದ ಉದ್ಘಾಟನಾ ಸಮಾರಂಭವು ನಡೆಯಲಿದೆಯಲ್ಲವೇ? ಕಲಾಪ್ರದರ್ಶನವು ಜಾತ್ರೆ, ಸಂತೆಗಳಂತೆ ಅಲ್ಲವಷ್ಟೇ? ಆದ್ದರಿಂದ ಇದರ ಯೋಜನೆಯಲ್ಲಿ ಇಂತಹ ಅಪರಿಮಿತ ಸೌಂದರ್ಯದ ಸಾಕ್ಷಾತ್ಕಾರವಾದರೂ ಆಶ್ಚರ್ಯವೇನಿಲ್ಲ.

ಬಹಳ ಶ್ರಮ ಮತ್ತು ಹೆಚ್ಚಿನ ಪ್ರಯತ್ನಗಳಿಂದ ಈ ವರ್ಷದ ಕ್ರಿಸ್‌ಮಸ್‌ನಲ್ಲಿ ಈ ಪ್ರದರ್ಶನವನ್ನು ನಾಗಪುರದಲ್ಲಿ ನಡೆಸಲು ಸಾಧ್ಯವಾಯಿತು. ನಮ್ಮ ಕಲಾವಿದ ಹಿಮಾಂಶುಬಾಬೂ ಅವರಿಗೇನೇ ಇದರ ಎಲ್ಲಾ ಕೀರ್ತಿಯೂ ಸೇರತಕ್ಕುದೆಂದು ಹೇಳಬಹುದು. ಅವರೇ ಎಲ್ಲೆಲ್ಲಿಯೂ ಓಡಾಡಿ ಈ ಕಾರ್ಯವನ್ನು ಇಲ್ಲಿ ನೆರವೇರುವಂತೆ ಮಾಡಿದವರು. ಆದ್ದರಿಂದಲೇ ಅವರ ಮುಖದಲ್ಲಿ ವಿಜಯೋಲ್ಲಾಸದ ಒಂದು ಹೆಮ್ಮೆಯ ಮುಗುಳ್ನಗೆಯು ಎದ್ದು ಕಾಣುತ್ತಿತ್ತು.

ಕಟ್ಟಡದ ಹೊರಗಿನ ಮಹಾರಾಜ್ ಗಾರ್ಡನಿನ ಮೈದಾನದಲ್ಲಿಯೂ, ಅದರ ದೊಡ್ಡ ಗೇಟಿನ ಹೊರಭಾಗದಲ್ಲಿಯೂ ಮೋಟಾರುಕಾರುಗಳೂ, ಜಟ್ಕಾ ಗಾಡಿಗಳೂ, ಆಟೊ ಸೈಕಲ್ಲುಗಳೂ ತಮ್ಮದೇ ಆದ ಒಂದು ಗಲಭೆಯನ್ನು ಎಬ್ಬಿಸುತ್ತಿದ್ದವು. ಸುಂದರವಾದ ಪೋಷಾಕುಗಳಿಂದ ಅಲಂಕೃತರಾದ ನಿತ್ಯ ನವೀನ ಫೇಶನಿನ ಅಲಂಕಾರಗಳಿಂದಲೂ ಮತ್ತು ವೇಷಭೂಷಣಗಳಿಂದಲೂ ಸುಸಜ್ಜಿತರಾದ ಅಸಂಖ್ಯ ನರನಾರಿಯರು ಅದೇ ಕಟ್ಟಡದ ಆ ಹಾಲಿನ ಕಡೆಗೆ ನುಗ್ಗುತ್ತಿದ್ದರು. ಎಲ್ಲರ ಮುಖದಲ್ಲಿಯೂ ಆನಂದದ ಸೌಮ್ಯ ದೀಪ್ತಿಯು ಬೆಳಗುತ್ತಿತ್ತು. ವಿಶೇಷವಾಗಿ ಸ್ತ್ರೀಯರಲ್ಲಿ ಈ ಭಾವವು ಚೆನ್ನಾಗಿ ತೋರುತ್ತಿತ್ತು. ಈ ದಿನ ಅವರ ನಗರದಲ್ಲಿ ಕಲಾದೇವತೆಯ ಆಗಮನವಾಗುವುದೇ ಆದರೆ ಅದು ಅವರಿಗೊಂದು ಉತ್ಸವ ಮತ್ತು ಹೆಮ್ಮೆಯ ಮಾತಲ್ಲವೇ? ಎಂದರೆ ಈ ಘಟನೆಯು ಅವರ ಮನೆಯ ಗಂಡಸರಿಂದ ನಿರ್ಮಿಸಲ್ಪಟ್ಟ ಶ್ರಮದ ಫಲವೆಂದು ನಂಬಿ ಸಂತೋಷಪಡುತ್ತಿದ್ದರು. ಇದರಲ್ಲಿಯ ಸತ್ಯಾಂಶವಾದರೂ ಅಷ್ಟೆ! ಈ ಕಾರಣದಿಂದಲೇ ಅವರ ಶೃಂಗಾರ ವಿಲಾಸಗಳಲ್ಲಿ ಇಷ್ಟರಮಟ್ಟಿನ ಅಪೂರ್ವತೆಯು ತೋರಿಬರುತ್ತಿತ್ತು ಎನ್ನಬಹುದು. ಆ ಸ್ತ್ರೀಯರ ಗುಂಪನ್ನು ನೋಡುತ್ತಲೇ ಚಿತ್ರಕಲೆಯ ಪ್ರದರ್ಶನದ ಬದಲು ಇವರದೇ ಪ್ರದರ್ಶನವು ನೆರವೇರಬಹುದೋ ಏನೋ ಎಂಬುದೊಂದು ಕಲ್ಪನೆಯು ಮನಸ್ಸಿನಲ್ಲಿ ಹೊಳೆಯುತ್ತಿತ್ತು.

ಮಹಾರಾಜ್ ಗಾರ್ಡನಿನ ಹತ್ತಿರದ ಸುಂದರವಾದ ಲತಾಕುಂಜದ ಬಳಿಯಲ್ಲಿ ಸೈನಿಕ ವಾದ್ಯವು ಕೇಳಬರುತ್ತಿತ್ತು. ಅದರ ಸುಮಧುರ ಸ್ವರವು ಆ ರಮಣೀಯ ವಾತಾವರಣದ ಆಲ್ಹಾದ ಮತ್ತು ಉಲ್ಲಾಸವನ್ನು ಹೆಚ್ಚಿಸುತ್ತಿತ್ತು.

ಬನ್ನಿರಿ, ಈಗ ಸ್ವಲ್ಪ ಈ ಕಲಾಪ್ರದರ್ಶನದ ಒಳಗಡೆ ಏನಿದೆ ನೋಡೋಣ! ಹೌದು! ಖಂಡಿತವಾಗಿಯೂ ಹಿಮಾಂಶು ಬಾಬೂ ಅವರೊಬ್ಬ ಕಾಲ್ಪನಿಕ ಮತ್ತು ಕಲಾಸಕ್ತ ವ್ಯಕ್ತಿ ಹೌದು. ಪ್ರವೇಶಿಸುತ್ತಲೇ ನಿಮಗೆ ಒಂದು ಮಿರುಗುವ ನೀಲವರ್ಣದ ಬಟ್ಟೆಯ ಮೇಲೆ ಕೆಂಪು ಅಕ್ಷರಗಳಲ್ಲಿ ನೋಡಸಿಗುವುದು 'ಸುಸ್ವಾಗತಂ'. ಆಮೇಲೆ ಅದರ ಕೆಳಗಡೆ ನಾಗಪುರದ ಭಾರತೀಯ ಚಿತ್ರಕಲಾ ಪ್ರದರ್ಶನದ ಧ್ವಜವು ತರತರನೆಂದು ಹಾರಾಡುವುದು. ಅದರಡಿಯಲ್ಲಿ ಭಾರತಮಾತೆಯ ಒಂದು ಭವ್ಯವಾದ ಚಿತ್ರ. ಅದರ ಮಕುಟ ಸ್ಥಾನದಲ್ಲಿ ಹಿಮಾಲಯದ ಶೈಲಶೃಂಗವಿದೆ. ಕೊರಳಲ್ಲಿ ಗಂಗಾ ಯಮುನೆಯರ ಉಜ್ವಲ

ಧಾರೆಗಳ ಹಾರವು ಶೋಭಿಸುವುದು. ಕಟಿಪ್ರದೇಶವನ್ನು ಪಾವನವಾದ ನರ್ಮದಾ ತಪತಿಗಳು ಅಲಂಕರಿಸಿದ್ದವು. ಅವಳ ಸೀರೆಯ ಅಂಚಿನಲ್ಲಿ ಕೃಷ್ಣಾ, ಕಾವೇರಿ, ತುಂಗಭದ್ರೆಗಳು ಶೋಭಾಯಮಾನವಾಗಿದ್ದವು. ಅವಳ ಪಾದಪದ್ಮಗಳನ್ನು ಹಿಂದೂಮಹಾಸಾಗರವು ತನ್ನ ನಿರ್ಮಲ ಜಲದಿಂದ ತೊಳೆಯುವಂತೆ ಭಾಸವಾಗುವುದು. ಚಿತ್ರದ ಮಧ್ಯದಲ್ಲಿ ಅಲ್ಲಲ್ಲಿ ವಿಂಧ್ಯಾ, ಶತಪುತ್ರಾ, ಸಹ್ಯಾದ್ರಿ, ನೀಲಗಿರಿ ಇತ್ಯಾದಿ ಪರ್ವತಗಳು ತಮ್ಮ ತಮ್ಮ ಹಸರು ಹಳದಿ ಬಣ್ಣಗಳಿಂದೊಡಗೂಡಿ ಶೋಭಿಸುವುದೇ ಒಂದು ಸೊಬಗು. ಇದರಲ್ಲಿಯ ಪ್ರಾಕೃತಿಕತೆಯನ್ನು ಉಳಿಸಲು ಹಚ್ಚಿದ ಬಣ್ಣಗಳು ಆ ಚಿತ್ರದ ಅಂದವನ್ನು ದ್ವಿಗುಣಗೊಳಿಸುತ್ತಿದ್ದವು. ಆ ಭಾರತಮಾತೆಯ ಕಾಲಡಿಯಲ್ಲಿ ಕೊನೆಯದಾಗಿ ಬರೆದದ್ದೆಂದರೆ—

‘ ಸುಜಲಾಂ ಸುಫಲಾಂ ಮಲಯಜ ಶೀತಲಾಂ’.

ಇಬ್ಬದಿಯ ಗೋಡೆಗಳಮೇಲೆ ಹಸರು, ನೀಲ, ಕೇಸರಿ, ಮೇಘವರ್ಣದ ಬಟ್ಟೆಗಳ ಮೇಲೆ ವಿವಿಧ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಆ ಬಟ್ಟೆಗಳೂ ಮತ್ತು ಅವುಗಳ ಮೇಲೆ ಬರೆದ ಚಿತ್ರಗಳೂ ಒಂದಕ್ಕೊಂದು ಹೊಂದಿಕೊಂಡಿವೆ. ಕೆಲ ಚಿತ್ರಗಳ ಮಧ್ಯದಲ್ಲಿ ಚಿಕ್ಕ ಹೂಗಿಡದ ಬುಟ್ಟಿಯೊ, ಇಲ್ಲವೇ ಅಂದವಾದ ಹಸುರೆಲೆಯ ಬಳ್ಳಿಯೋ, ಅಥವಾ ತೋರಣದ ಮಾಲೆಯೋ ನೇತಾಡುತ್ತಿದೆ. ಆ ಕಲಾಶಾಲೆಯ ಒಳಗೆ ಪ್ರವೇಶಿಸಿದೊಡನೆಯೇ ಮನಸ್ಸು ಈ ರೀತಿಯಾಗಿ ನುಡಿಯಬಹುದು: “ ತಾವೆಲ್ಲಿಯಾದರೂ ಮರ್ತ್ಯಲೋಕವನ್ನು ಬಿಟ್ಟು ಸ್ವರ್ಗಲೋಕದ ದೇವತೆಗಳ ರಮ್ಯೋದ್ಯಾನಕ್ಕೆ ಬಂದಿಳಿದಿಲ್ಲ ತಾನೆ ? ”

ಭಾರತ ವರ್ಷದ ಚಿತ್ರಕಲೆಯ ತರತರದ ಅತ್ಯುತ್ತಮ ಚಿತ್ರಗಳು ಇಲ್ಲಿಯ ಪ್ರದರ್ಶನದಲ್ಲಿ ಕಾಣಸಿಗುವುದರಲ್ಲಿ ಸಂದೇಹವಿಲ್ಲ. ಇವುಗಳಲ್ಲಿ ಬಂಗಾಲದ ನಂದಲಾಲ್ ಬಸು ಮತ್ತು ಮಿತ್ರಾ, ನೇಪಾಳದ ರಾಣಾ ಜಂಗ ಬಹೂದ್ದೂರ್‌ಸಿಂಗ್, ಗುರ್ಜರ ಪ್ರಾಂತ್ಯದ ಕನೂ ದೇಸಾಯಿ, ಕೇರಳದ ಪಾರ್ಥಸಾರಥಿ, ಆಂಧ್ರ ದೇಶದ ಚಕ್ರಪಾಣಿ, ಮಹಾರಾಷ್ಟ್ರದ ಧುರಂಧರ, ಔಂಧದ ರಾಜಕುಮಾರಿ ಹಾಗೆಯೇ ಮಧ್ಯಪ್ರಾಂತ್ಯದ ಅಶೋಕ ಠಾಕೂರ, ಕನ್ನಡದ ಕೆ. ವೆಂಕಟಪ್ಪರ ಕೆಲವು ಅದ್ಭುತ ಚಿತ್ರಗಳೂ ಕೂಡ ಇಲ್ಲಿ ತಮ್ಮದೇ ಆದ ಒಂದು ನಿರ್ದಿಷ್ಟ ಸ್ಥಾನವನ್ನು ಕಲ್ಪಿಸಿಕೊಂಡಿದ್ದವು. ಇವುಗಳಲ್ಲದೆ ಇನ್ನೂ ಎಷ್ಟೋ ಮಂದಿ ಮಹಿಳೆಯರು ಕಳುಹಿಸಿದ ಪ್ರಖ್ಯಾತ ಚಿತ್ರಗಳಿಗೂ ಇಲ್ಲಿ ಎಡೆ

ಇಲ್ಲದಿರಲಿಲ್ಲ. ಅಸಂಖ್ಯಾತ ಸುಂದರ ಚಿತ್ರಗಳಿಂದೊಡಗೂಡಿದ ಈ ವಾತಾವರಣವು ಒಂದು ಸುಂದರ ಕಲಾವಾಟಿಕೆಯ ಸ್ವರೂಪವನ್ನು ಪಡೆದಿತ್ತು. ಇಲ್ಲಿ ಕಲಾಪ್ರಿಯರು ಘಂಟೆಗಟ್ಟಲೆ ಸ್ವಚ್ಛಂದವಾಗಿ ವಿಹರಿಸುತ್ತಾ, ತಮ್ಮ ಸೌಂದರ್ಯ ಪಿಪಾಸೆಯನ್ನು ತೃಪ್ತಿಪಡಿಸುತ್ತಿದ್ದರು. ಎಲ್ಲ ತರದ ಅಭಿರುಚಿಗಳಿಗೂ ಅಲ್ಲಿ ಬೇಕಾದ ಸಾಮುಗ್ರಿಗಳು ಸಿದ್ಧವಾಗಿದ್ದವು.

ಒಂದೊಂದು ಚಿತ್ರದ ಬಳಿಯಲ್ಲಿ ನಾಲ್ಕು ನಾಲ್ಕೇ ಅಥವಾ ಐದೈದೇ ಸ್ತ್ರೀ ಪುರುಷರು ಒಟ್ಟುಗೂಡಿಕೊಂಡು ತಮ್ಮೊಳಗೆ ತಾವಾಗಿ ಅದರ ಕಲೆಯನ್ನೋ ಅಥವಾ ಅದರ ಸೌಂದರ್ಯವನ್ನೊ ಚರ್ಚಿಸುತ್ತಿದ್ದರು. ಅವರಿಗೆ ಈ ಕಲೆಯ ವಿಷಯವಾಗಿಯೇ ಅಥವಾ ಚಿತ್ರದ ವಿಚಾರವಾಗಿಯೇ ಹಿಂದೆ ಮುಂದೆ ತಿಳಿದಿರ ಬೇಕೆಂಬ ಅಗತ್ಯವಿರಲಿಲ್ಲ. ಕಲೆಯ ಮೇಲೆ ಪ್ರೇಮಭಾವನೆ ಉಂಟಾದರೆ ಅದೇ ಒಂದು ತರದ ಮನೋವಿನೋದವೆಂದು ಅವರ ಅಭಿಪ್ರಾಯ. ಮತ್ತು ಇದರಿಂದ ಪಡೆಯುವ ನಿರ್ಮಲ ಆನಂದವನ್ನು ಸುರಿಯಲು ಅವರು ಕಾದಿದ್ದರು. ಈ ಪ್ರೇಕ್ಷಕ ವರ್ಗದಲ್ಲಿ ಕೆಲವರು ಮಾತ್ರ ಕಲಾದೃಷ್ಟಿಯುಳ್ಳವರಾಗಿಯೂ, ಕಲಾಸಕ್ತಿಯುತರಾಗಿಯೂ ಇದ್ದಿರಬಹುದು. ಬಹಳ ಜನರು ಈ ಕಲಾಪ್ರದರ್ಶನವನ್ನೂ ಅಲ್ಲದೆ ಕಲೆಯನ್ನೂ (ಬಾಯಲ್ಲಿ) ಹೊಗಳುತ್ತ, ಕಲೆಯ ಮೇಲೆ ತಮಗೆ ಬಹಳ ಪ್ರೇಮವಿದೆ ಎಂಬುದನ್ನು ತೋರಿಸಿಕೊಳ್ಳುತ್ತಿರುವುದೇ ಈಗಿನ ಶಿಷ್ಟ ಸಮಾಜದ ಪ್ರತಿಷ್ಠೆಯ ಲಕ್ಷಣವೆಂದೇ ಅಲ್ಲಿಗೆ ಬಂದು ಮುತ್ತುತ್ತಿದ್ದರೆಂದರೂ ತಪ್ಪಾಗದು.

ಕೆಲವು ಜನರು ಚಿತ್ರವನ್ನು ಹತ್ತಿರದಿಂದ ನೋಡುತ್ತಿದ್ದರು. ಒಬ್ಬಿಬ್ಬರು ಐದು ಹೆಜ್ಜೆಯ ದೂರದಲ್ಲಿ ನಿಂತು ನೋಡುತ್ತಿದ್ದರು. ಒಬ್ಬೊಬ್ಬರು ಹತ್ತು ಹೆಜ್ಜೆಯಲ್ಲಿ ನಿಂತು ನೋಡುತ್ತಿದ್ದರು. ಒಬ್ಬನು ಮುಖವನ್ನು ತಗ್ಗಿಸಿ ನೋಡುತ್ತಿದ್ದನು. ಯಾರೋ ಒಬ್ಬ ೩೫ ಡಿಗ್ರಿಯ ಕೋನವನ್ನು ಮಾಡಿಕೊಂಡು ನೋಡುತ್ತಿದ್ದನು. ಒಬ್ಬನು ಸ್ಟೂಲಿನ ಮೇಲೆ ನಿಂತು ನೋಡುತ್ತಿದ್ದರೆ ಇನ್ನೊಬ್ಬನು ಬೆಂಚಿನ ಮೇಲೆ ಕುಳಿತೇ ತನ್ನ ಆಸೆಯನ್ನು ತೀರಿಸುತ್ತಿದ್ದನು. ಪ್ರತಿಯೊಬ್ಬನೂ ತಾನು ಒಬ್ಬ ಕಲಾವಿದನೆಂದೂ ಮತ್ತು ಚಿತ್ರಕಲೆಯಲ್ಲಿಯ ಗುಣದೋಷಗಳನ್ನು ತಿಳಿದವನೆಂದೂ ಇತರ ಪ್ರೇಕ್ಷಕರು ತಿಳಿದುಕೊಳ್ಳಲೆಂಬ ಒಂದು ತರದ ಪ್ರೌಢಿಮೆಯನ್ನು ತೋರುತ್ತಿದ್ದರೆನ್ನಬಹುದು. ಕೆಲವರು ಚಿತ್ರ

ಗಳನ್ನು ನೋಡುವವರ ಬದಲು ಈ ಜನರ ಚೇಷ್ಟೆ-ವಿಚೇಷ್ಟೆಗಳನ್ನು ನೋಡಿಯೆ ಆನಂದಪಡುತ್ತಿದ್ದರು.

ಯಾವ ಚಿತ್ರದ ಮುಂದೆಯಾದರೂ ಯಾರಾದರೊಬ್ಬ ಸುಂದರ ಯುವತಿಯು ನಿಂತಿದ್ದಳೆಂದರೆ ಅವಳ ಬಳಿ ನಾಲ್ವರು ಯುವಕರಾಗಲಿ ಇಲ್ಲವೇ ಸಭ್ಯ ಪುರುಷರಾಗಲೀ ಅಗತ್ಯವಾಗಿ ಸಾಗಿ ಅಲ್ಲಿ ನಿಲ್ಲುತ್ತಿದ್ದರು. ಅವರು ಆ ಚಿತ್ರಕ್ಕಾಗಿ ಅತ್ತಕಡೆ ಸಾಗಿದರೊ ಅಥವಾ ಆ ಚಿತ್ರದ ಪ್ರೇಕ್ಷಕಳಿಗಾಗಿ ಆ ಕಡೆಗೆ ನಡೆದರೋ ಹೇಳುವುದು ಕಷ್ಟವೇ ಹೌದು. ಆದರೂ ಆ ಸಮಯದಲ್ಲಿ ಆ ಸ್ತ್ರೀಯೊಡನೆ ಕೆಲವು ಮಾತುಗಳನ್ನಾಡದೆ ಇದ್ದರೂ ದೃಷ್ಟಿಮಿಲನದ ಲಾಭವನ್ನು ಎಂದಿಗೂ ಬಿಡುತ್ತಿರಲಿಲ್ಲ. ಆ ರಮಣಿಯು ಆಗಂತುಕನ ಪರಿಚಯವನ್ನು ತಿರಸ್ಕರಿಸಿದರೂ ಅದೇನೂ ವಿಶೇಷವಲ್ಲ. ಸ್ತ್ರೀ-ಪುರುಷರ ಮಧ್ಯದಲ್ಲಿ ಈ ರೀತಿಯ ಆಕರ್ಷಣೆಗಳು ನಿರ್ದೋಷವೇ ಅಲ್ಲವೇ? ಆದ್ದರಿಂದ ಯಾರೂ ಇದರಲ್ಲಿ ಯಾವ ತರದ ಅಡ್ಡಿ ಆತಂಕಗಳನ್ನು ಒಡ್ಡುತ್ತಿರಲಿಲ್ಲ.

ಪ್ರದರ್ಶನದ ಎಲ್ಲಾ ಚಿತ್ರಗಳನ್ನೂ ಇಲ್ಲಿಯೇ ಎಂದರೆ ಈ ವಿಭಾಗದಲ್ಲಿಯೇ ಇಟ್ಟಿರಲಿಲ್ಲ. ಯಾಕೆಂದರೆ ಉಳಿದವುಗಳೆಲ್ಲ ಪ್ರಾಂತ್ಯದ ಹೊರಗಿನವಾಗಿದ್ದವು. ಇದು ಪ್ರಾಂತೀಯ ಚಿತ್ರಕಲಾವಿಭಾಗ. ಇಲ್ಲಿ ಶೋಭಿಸುತ್ತಿದ್ದವುಗಳೆಂದರೆ ನಾಗಪುರದ ಪ್ರಸಿದ್ಧ ಕಲಾಕಾರರಾದ ಅಶೋಕ ಠಾಕೂರರ ನಾಲ್ಕೇ ನಾಲ್ಕು ಚಿತ್ರಗಳು. ಮತ್ತು ಅದೇ ಪ್ರಾಂತ್ಯದ ಕಲೋಪಾಸಿಕೆಯರಾದ ಮಹಿಳೆಯರ ಅಸಂಖ್ಯಾತ ಚಿತ್ರಗಳೂ ಅಲ್ಲಿ ಕಾಣಸಿಗಬಹುದು. ಠಾಕೂರರ ಚಿತ್ರಗಳು ನಾಲ್ಕೇ ಇಲ್ಲಿಗೆ ಬಂದಿದ್ದರೂ ಕೂಡ ಅವುಗಳಿಗೆ ಉತ್ತಮ ಸ್ಥಾನವು ದೊರಕಿತ್ತು.

ಈ ಚಿತ್ರಗಳಲ್ಲಿ ಕಲಾಕಾರನ ಪ್ರತಿಭೆಯು ಸೂಸಿ ಹೊರಹೊಮ್ಮುತ್ತಿತ್ತು. ಅವು ನಿಜವಾಗಿಯೂ ಅದ್ಭುತವಾಗಿದ್ದವೆಂಬುದರಲ್ಲಿ ಏನೂ ಆಶ್ಚರ್ಯವಿರಲಿಲ್ಲ. ಆ ಚಿತ್ರಗಳು ತಮ್ಮ ಸಜೀವತೆಯ ಸಂದೇಶಗಳನ್ನು ಸ್ಪಷ್ಟವಾಣಿಯಿಂದ ಹೇಳುವಂತಿದ್ದವು. ಪ್ರತಿಯೊಬ್ಬ ಕಲಾಭಿಮಾನಿಯೂ ಆ ಸಂದೇಶದ ಶುಚಿಯಾದ ವಾತಾವರಣದ ಉಪಯೋಗದಿಂದ ಪ್ರಭಾವಿತನಾಗದೆ ಇರುತ್ತಿರಲಿಲ್ಲ.

'ಸಂಧ್ಯಾರಾಣಿ' ಎಂಬುದು ಒಂದು ಚಿತ್ರದ ಹೆಸರಾಗಿತ್ತು. ಇದು ಹಗಲಿನ ಅವಸಾನ, ಹಾಗೆಯೇ ಸಂಧ್ಯಾರಾಣಿಯ ಆಗಮನದ ಸುಂದರ ಚಿತ್ರಣ

ವಾಗಿತ್ತು. ಎತ್ತರವಾದ ನೀಲಗಿರಿಯ ಮರಗಳ ಮೇಲೆ ದೂರದ ಆಕಾಶದಲ್ಲಿ ಪರ್ವತಮಾಲೆಗಳ ಹಿಂಬದಿಯಲ್ಲಿ ಚಂದ್ರನು ಉದಯಿಸುತ್ತಿದ್ದನು. ವೃಕ್ಷಲತೆಗಳೂ, ಹಕ್ಕಿಗಳೂ, ದನಕರುಗಳೂ ಮತ್ತು ನಾಯಿ ಬೆಕ್ಕುಗಳೂ ಈ ಗೋಧೂಳಿ ಸಮಯದಲ್ಲಿ ಮೌನವಾಗಿ ನಿಂತಲ್ಲೆ ಒಂದು ಗಳಿಗೆ ನಿಂತು ಮುಂದೆ ಸಾಗಿದವು. ಸುತ್ತಲಿನ ವಾತಾವರಣವು ಈ ದಿವಾರಾತ್ರಿಯ ಸಂಧಿಕಾಲದ ಮೂಕ ಸ್ವರೂಪವನ್ನು ನೋಡಿ—'ಬನ್ನಿರಿ ಮನೆಯ ಕಡೆ ಸಾಗೋಣ' ಎನ್ನುವಂತಿತ್ತು.

ಎರಡನೆಯ ಚಿತ್ರವೇ 'ಭ್ರಮೆ' ಭಕ್ತಿರಸದಿಂದ ಓತಪ್ರೋತಳಾಗಿ, ತನ್ನ ಗಿರಿಧಾರೀ ಗೋಪಾಲನ ಪ್ರಣಯಾನಂದದಿಂದ ಭ್ರಮೆ ಹೊಂದಿದವಳಾಗಿ ನಲಿಯುತ್ತಿರುವ ಮೀರಾಳ ಚಿತ್ರವದು. ಕೈಯಲ್ಲಿ ಚಿಟಿಕೆಗಳು, ಕಾಲಲ್ಲಿ ಗೆಜ್ಜೆಗಳು, ಶರೀರದ ಮೇಲೆ ಬಿಳೀ ಬಣ್ಣದ ಸೀರೆ, ಕೊರಳಲ್ಲಿ ಮಣಿಯ ಮಾಲೆ, ಎರಡೂ ಕಣ್ಣುಗಳಲ್ಲಿ ಪರಮಾನಂದಭರಿತ ಭಾವ, ಮತ್ತು ಪ್ರೇಮಾಶ್ರುಧಾರೆಯಿಂದೊಡಗೂಡಿ ತನ್ನನ್ನು ತಾನೇ ಮರೆತುಬಿಟ್ಟು ಭ್ರಮಿತಳಾಗಿ ಕಾಲನ್ನು ನೆಲದ ಮೇಲೆ ನಿಲ್ಲಿಸದೆ ಒಂದೇ ಸಮನೆ ಕಾಲಗೆಜ್ಜೆಯ ನಾದಕ್ಕೆ ಸರಿಯಾಗಿ ಹಾಡುತ್ತ ನಲಿಯುತ್ತಿದ್ದಳು.

'ಯುಗ್ಮಪ್ರಣಯೀ' ಎಂಬ ಚಿತ್ರವು ಮೂರನೆಯ ಸ್ಥಾನವನ್ನು ಅಲಂಕರಿಸಿತ್ತು. ಅದು ಯಾವುದೇ ಸ್ತ್ರೀಪುರುಷರ ಪ್ರೀತಿಯ ಪ್ರತಿಮೆಗಳ ಚಿತ್ರವಾಗಿರಲಿಲ್ಲ. ಬದಲಾಗಿ ಅದು ಹರಿಣಿ-ಹರಿಣಗಳ ಪ್ರಣಯದ ಕರುಣಕಥೆಯಾಗಿತ್ತು. ಆ ಚಿತ್ರವು ಮೇವಾಡದ ನಿರ್ಜಲ ಮರುಭೂಮಿಯ ವಾತಾವರಣದಲ್ಲಿದ್ದಂತೆ ಚಿತ್ರಿತವಾಗಿತ್ತು. ಆ ಯುಗ್ಮಪ್ರಣಯಿಗಳು ಒಂದು ಚಿಕ್ಕ ಜಲಾಶಯದ ಬಳಿ ಮೃತಾವಸ್ಥೆಯಲ್ಲಿ ಬಿದ್ದಿದ್ದವು. ಅವುಗಳಿಗೆ ದಾಹವು ಬಹಳವಾಗಿತ್ತು. ಕೊಳದಲ್ಲಿ ನೀರು ಬಹಳ ಕಡಿಮೆಯಾಗಿತ್ತು. ಆದರೆ ಅವುಗಳ ಸ್ನೇಹವು ಮಹಾಸಾಗರದಂತೆ ವಿಶಾಲವೂ ಮತ್ತು ಆಳವೂ ಆಗಿತ್ತು. ಪ್ರಾಣ ಉಳಿಸುವ ನೀರನ್ನು ಅರಸುತ್ತ ಎರಡೂ ಎಷ್ಟೋ ಮೈಲುಗಳಿಂದ ಓಡಿ ಓಡಿ ಬಂದಿದ್ದವು. ಕೊಳದ ಬಳಿ ಬರುತ್ತಲೇ ಅದರಲ್ಲಿದ್ದ ನೀರು ಒಬ್ಬರಿಗೂ ಸಾಲದೆಂದು ನೋಡಿ ಮನಗಂಡವು. ಎರಡೂ ಒಂದನ್ನೊಂದು 'ನೀನು ಕುಡಿ, ನೀನು ಕುಡಿ' ಎಂದು ಆಗ್ರಹ ಮಾಡಲಾರಂಭಿಸಿದವು. ಹೀಗೆ ಒಂದನ್ನೊಂದು ಉದ್ದೇಶಿಸಿ ಆಗ್ರಹಿಸುತ್ತಿದ್ದಂತೆಯೇ ಅವುಗಳ ಪ್ರಾಣಪಕ್ಷಿಯು ಹಾರಿಹೋಯಿತು. ಚಂದ್ರನ ಶೀತಲ

ವಾದ ಸುಂದರ ಕಿರಣಗಳಿಂದ ಆ ಜಿಂಕೆಗಳ ಮೃತ ಶರೀರಗಳು ಒಂದು ದಿವ್ಯ ತೇಜಸ್ಸಿನಿಂದ ಹೊಳೆಯುತ್ತಿದ್ದವು. ಅದೇ ಕಿರಣವು ತನ್ನ ಆ ಶೀತಲ ಪ್ರಭೆಯನ್ನು ಪಕ್ಕದಲ್ಲಿರುವ ಜಲಾಶಯದ ಮೇಲೂ ಹರಡಿತ್ತು. ಈ ಚಿತ್ರವನ್ನು ನೋಡಿದವರಾರೂ ಆ ಕರುಣಾಜನಕ ಅವಸ್ಥೆಯನ್ನು ಕಂಡು ಮನಕರಗಿ ದೊಡ್ಡ ದೊಂದು ನಿಟ್ಟುಸಿರು ಬಿಡದೆ ಇರುತ್ತಿರಲಿಲ್ಲ.

'ಸ್ವಾತಂತ್ರ್ಯದ ಪಥದಲ್ಲಿ' ಎಂಬುದೇ ನಾಲ್ಕನೆಯ ಚಿತ್ರ. ಮಹಾತ್ಮಾ ಗಾಂಧಿಯವರು ತಮ್ಮ ಎಪ್ಪತ್ತೊಂಬತ್ತು ಅನುಯಾಯಿಗಳೊಡನೆ ದಾಂಡಿಯ ಸಮುದ್ರದ ಕಡೆಗೆ ಪ್ರಯಾಣ ಮಾಡುತ್ತಿದ್ದ ಚಿತ್ರ. ಪ್ರಭಾತವು ಆಗಲೇ ಆಗ ಮಿಸಬೇಕಾಗಿತ್ತು. ಆದರೆ ನಿಶೆಯ ದರ್ಪವು ಇನ್ನೂ ಅಡಗಿರಲಿಲ್ಲ. ಆ ಛಾಯಾ ಪ್ರಕಾಶ ಮಿಶ್ರವಾದ ಸಮಯದಲ್ಲಿ ಗಾಂಧೀಜೀಯ ಧ್ಯಾನಮಗ್ನ ಮೂರ್ತಿಯು ತಲೆಯನ್ನು ತಗ್ಗಿಸಿಕೊಂಡು, ಕೈಯಲ್ಲಿಯ ಕೋಲನ್ನೂರುತ್ತ, ದೊಡ್ಡ ದೊಡ್ಡ ಹೆಜ್ಜೆಗಳನ್ನು ಹಾಕುತ್ತಾ ಮುಂದೆ ಸಾಗುತ್ತಿತ್ತು. ಲಲಾಟದಲ್ಲಿ ಕುಂಕುಮ ತಿಲಕವು ಶೋಭಿಸುತ್ತಿತ್ತು. ಮುಖದಲ್ಲಿ ಗಾಂಭೀರ್ಯ ಮತ್ತು ದೃಢ ಪ್ರತಿಜ್ಞೆಯ ಭಾವವು ದೃಷ್ಟಿಗೆ ಗೋಚರಿಸುತ್ತಿತ್ತು. ಎಡ ಮತ್ತು ಬಲ ಪಾರ್ಶ್ವಗಳಲ್ಲಿ ಅನೇಕ ನರನಾರಿಯರು ಅಲ್ಲಿಯೇ ಮೊಣಕಾಲುಗಳನ್ನೂರಿ ಶಿರಸ್ಸನ್ನೊಮ್ಮೆ ಭೂಮಿಗೆ ತಗಲಿಸಿ ಆ ಪವಿತ್ರ ದಾರಿಯ ಧೂಳನ್ನು ಹಣೆಗೆ ಇಟ್ಟುಕೊಳ್ಳುತ್ತಿದ್ದರು. ಚಿತ್ರದಲ್ಲಿ ಪ್ರಾಣ ಮತ್ತು ಗತಿಗಳಿರಲು ಸಾಧ್ಯವಿದೆ. ಇವುಗಳಲ್ಲದೆ ಇನ್ನೊಂದು ಪ್ರೇರಣೆಯೂ ಗೋಚರಿಸುತ್ತಿತ್ತು. ಇದನ್ನು ನೋಡುತ್ತಿದ್ದಂತೆ ಹೀಗೆ ಭಾಸವಾಗಬಹುದು 'ನೋಡಿರಿ, ಅವರೆಲ್ಲ ಹೇಗೆ ನಡೆಯುತ್ತಿದ್ದಾರೆ !'

ಈ ನಾಲ್ಕು ಚಿತ್ರಗಳ ಕೆಳಗಡೆ ಎಡಬದಿಯಲ್ಲಿ ಚಿತ್ರಕಾರರ ಸಹಿಯು 'ಅ. ಠಾ.' ಎಂದು ಇತ್ತು.

ಅಶೋಕ ಠಾಕೂರರ ಎಲ್ಲಾ ಚಿತ್ರಗಳಿಗೂ ಮನ್ನಣೆ ಇತ್ತು. ವಿಶೇಷ ವಾಗಿ 'ಯುಗ್ಮಪ್ರಣಯೀ' ಚಿತ್ರದ ಮುಂದೆ ಸ್ತ್ರೀಯರ ಗುಂಪು ಕಡಿಮೆಯೇ ಆಗುತ್ತಿರಲಿಲ್ಲ. ಕಲಾಪ್ರದರ್ಶನದ ವ್ಯವಸ್ಥಾಪಕರಾದ ಹಿಮಾಂಶ ಬಾಬೂ ಗಳಿಗೆ ತಮ್ಮ ವಿಜಯದಿಂದಾದ ಅಪಾರ ಆನಂದಕ್ಕೆ ಎಣೆಯೇ ಇಲ್ಲ. ಅವರು ಉಲ್ಲಾಸದಿಂದಲೂ ಒಂದು ತರದ ಹೆಮ್ಮೆಯಿಂದಲೂ ಆ ಸಾಲೆಯ ಕೊನೆ ಯಿಂದ ಕೊನೆಗೆ ಅಡ್ಡಾಡುತ್ತ, ದರ್ಶಕರೊಡನೆ ವಿಶೇಷವಾಗಿ ಸ್ವಲ್ಪ ಪ್ರತಿಷ್ಠಿತ

ರೊಂದಿಗೆ ಸೇರಿಕೊಂಡು ಅವರ ಬಾಯಿಂದ ತಾವು ಮಾಡಿದ ಯೋಜನೆ ಮತ್ತು ಯೋಚನೆಗಳ ವಿಷಯವಾಗಿದ್ದ ಪ್ರಶಂಸೆಯನ್ನು ಕೇಳುತ್ತ ತಮ್ಮಲ್ಲಿ ತಾವೇ ಹಿಗ್ಗುತ್ತಿದ್ದರು. ಆಗ ಅವರನ್ನೇ ಉದ್ದೇಶಿಸಿ, ಒಬ್ಬ ಲಾವಣ್ಯವತಿಯಾದ ತರುಣಿಯು 'ಯುಗ್ಮಪ್ರಣಯೀ' ಚಿತ್ರವನ್ನುದ್ದೇಶಿಸಿ—ಪ್ರಶ್ನಿಸಿದಳು.

"ಈ 'ಅ. ಠಾ.' ಎಂದರೆ ಯಾರು?"

"ಓ—ಹೋ ತಮಗೆ ಅಶೋಕ ಠಾಕೂರರ ಪರಿಚಯವಿಲ್ಲವೇ? ಇವರೂ ನಮ್ಮ ನಾಗಪುರದವರೇ ಮಾಯಾದೇವೀ?"

"ಒಳ್ಳೇದು, ಈ ಚಿತ್ರವು ನನಗೆ ತುಂಬಾ ಚೆನ್ನಾಗಿ ತೋರುತ್ತೆ. ಇದನ್ನು ಅವರು ವಿಕ್ರಯಿಸುವರೊ? ಇಲ್ಲವೊ? ಎಂಬುದನ್ನು ನನಗಾಗಿ ಕೇಳುವಿರಾ?"

"ಆದೀತು. ಅದಕ್ಕೇನಂತೆ ಈಗಲೇ ಹೋಗಿ ಕೇಳಿಕೊಂಡು ಬರುತ್ತೇನೆ. ಅವರೂ ಇಲ್ಲಿಗೆ ಬಂದಿದ್ದಾರೆ. ತಾವು ಇಲ್ಲಿ ಐದು ನಿಮಿಷ ನಿಂತುಕೊಳ್ಳಿ. ಬೇಗ ಹೋಗಿ ಬರುವೆ." ಎನ್ನುತ್ತ ಹಿಮಾಂಶು ಬಾಬು ಹೊರಟು ಹೋದರು.

ಹಾಗೆಯೇ ಹೋದ ಹಿಮಾಂಶು ಬಾಬೂ ಅವರು, ಒಬ್ಬ ಸುಂದರ ಗೌರ ವರ್ಣದ ಯುವಕನೊಂದಿಗೆ ಸಂಭಾಷಿಸುತ್ತಿದ್ದುದನ್ನು ಮಾಯಾದೇವಿಯು ನೋಡುತ್ತಲೇ ಇದ್ದಳು. ಮರುಕ್ಷಣದಲ್ಲೆ, ಆ ಯುವಕನನ್ನು ಹಿಡಿದೆಳೆಯುತ್ತ ತನ್ನೆಡೆಗೆ ಕರೆದು ತರುವುದನ್ನು ನೋಡಿದಳು. ಆದರೆ ಯುವಕನು ಆ ಕಡೆಗೆ ಬರಲು ಸಂಕೋಚಪಡುವಂತೆ ತೋರುತ್ತಿತ್ತು. ಕೊನೆಗೆ ಅವರಿಬ್ಬರೂ ತನ್ನ ಕಡೆಗೇ ಬರುತ್ತಿರುವುದನ್ನು ಕಂಡ ಮಾಯಾದೇವಿಯು ಪುನಃ ತಿರುಗಿ ಚಿತ್ರವನ್ನೇ ನೋಡಲಾರಂಭಿಸಿದಳು. ಆದರೆ ಅವಳ ಮನಸ್ಸೆಲ್ಲಾ ಆ ಚಿತ್ರದ ಕಲಾಕಾರನ ಕಾಲಿನ ಸಪ್ಪಳವನ್ನೇ ಕೇಳಲು ಆತುರಪಡುತ್ತಿತ್ತು.

"ಮಾಯಾದೇವೀ, ಇವರೇ ಆ ಕಲಾವಿದ ಶ್ರೀಮಾನ್ ಅಶೋಕ ಠಾಕೂರರು. ಇವರ ಚಿತ್ರದ ಮೇಲೆಯೇ ತಾವು ಆಸೆಪಡುತ್ತಿದ್ದುದು. ಶ್ರೀ. ಠಾಕೂರರೇ, ಇವರೇ ಶ್ರೀಮತಿ ಮಾಯಾದೇವಿ ನೀಲಕಂಠ. ಈ ಊರಿನ ಸಭ್ಯ ಜಾಗೀರುದಾರಿಣಿ..........."

"ಸಾಕು, ಸಾಕು! ಇರಲಿ ಬಿಡ್ರೀ. ಪರಿಚಯ ಮಾಡಿಸಿಕೊಟ್ಟದ್ದಕ್ಕೆ

ಧನ್ಯವಾದ" ಎನ್ನುತ್ತ ಅಶೋಕ ಠಾಕೂರನ ಕಡೆಗೆ ಮಧುರವಾದ ಮುಗುಳ್ನಗೆಯೊಂದಿಗೆ ನೋಡುತ್ತ, ಕೈ ಕುಲುಕಲು ತನ್ನ ಕೈಯನ್ನು ಮುಂದೊಡ್ಡುತ್ತ ಶ್ರೀಮತಿ ಮಾಯಾದೇವೀ ನೀಲಕಂಠ ಹೀಗೆಂದಳು:

" ನಿಮ್ಮಂತಹ ಕಲಾಕಾರರೊಂದಿಗೆ ಭೇಟಿಯಾಗುವ ಸೌಭಾಗ್ಯವು ನನಗೆ ಇಂದೇ ದೊರೆತದ್ದು. ಅದಕ್ಕಾಗಿ ತುಂಬಾ ಕೃತಜ್ಞಳಾಗಿದ್ದೇನೆ."

" ಧನ್ಯವಾದ. ತಮ್ಮ ಉಪಚಾರ ಮತ್ತು ನನಗೆ ಕೊಟ್ಟ ಮರ್ಯಾದೆಗೆ ನಾನೂ ತುಂಬಾ ಆಭಾರಿಯಾಗಿದ್ದೇನೆ. " ಅಶೋಕನು ದೂರದಿಂದಲೇ ಸೌಜನ್ಯದೊಂದಿಗೆ ನಮಸ್ಕರಿಸುತ್ತಾ ಹೇಳಿದನು. ಮಾಯಾದೇವಿಯು ತನ್ನ ನೀಡಿದ ಕೈಯನ್ನು ಹಿಂದಕ್ಕೆ ತೆಗೆದುಕೊಂಡಳು.

ಒಬ್ಬ ಆರೋಗ್ಯವಂತ, ಸಾಕಷ್ಟು ಗಾತ್ರದ ಸುಸಂಸ್ಕೃತ ಮತ್ತು ಸುಂದರನಾದ ಯುವಕನು ಎದುರಿಗೇ ನಿಂತದ್ದನ್ನು ನೋಡುತ್ತಿದ್ದಳು--ಆ ಮಾಯಾದೇವಿ. ಇಂತಹ ಮನುಷ್ಯನ ವ್ಯಕ್ತಿತ್ವವು ನೆನಸಿದ ಕೂಡಲೆ ಎದುರಿಗೆ ನಿಲ್ಲುವಂತಿರುವುದು ಆಶ್ಚರ್ಯದ ಸಂಗತಿಯಲ್ಲ. ವರ್ಷವೇನೋ ಮೂವತ್ತು ಮೂವತ್ತೊಂದಿರಬಹುದು. ಮುಖವು ಸ್ವಲ್ಪ ಉದ್ದವಾಗಿದೆ. ಕೂದಲು ಉದ್ದುದ್ದವಾಗಿ ಕಪ್ಪಗಾಗಿದೆ. ಕೈಗಳು ಉದ್ದವಾಗಿವೆ. ಅಲ್ಲದೆ ಕೈಬೆರಳುಗಳು ಕೂಡ. ಮುಖದಲ್ಲಿನ ಮೂಗೂ ಉದ್ದವೇ ಇದ್ದುದರಿಂದ ಗ್ರೀಸಿನ ಶಿಲ್ಪ ಮೂರ್ತಿಗಳ ನೆನಪನ್ನು ಹುಟ್ಟಿಸುವಂತಿತ್ತು ಅಶೋಕನ ವ್ಯಕ್ತಿತ್ವ. ಕಣ್ಣುಗಳಲ್ಲಿ ಒಂದು ತರದ ಆಲಸ್ಯತನವಿದ್ದು ಯಾವುದೋ ಒಂದು ವಸ್ತುವಿನ ಬಾಹ್ಯ ರೂಪವನ್ನು ಗಣಿಸದೆ ಅದರ ಅಂತರಾತ್ಮನನ್ನು ನೋಡಲು ಕಾತರವಾಗಿದ್ದಂತೆ ಕಾಣುತ್ತಿತ್ತು. ಇಂತಹ ಮನುಷ್ಯನ ಮೇಲೆ ಕೂಡಲೇ ಮಾಯಾದೇವಿಯ ದೃಷ್ಟಿ ಬಿದ್ದದ್ದರಲ್ಲಿ ಆಶ್ಚರ್ಯವೇನೂ ಇಲ್ಲವಷ್ಟೇ? ಆ ನಾರಿಗೆ ಸೌಂದರ್ಯದ ಮೇಲೆ ಅಭಿರುಚಿ ಇದೆ. ಆದರೆ ಅದು ಒಂದು ಸುಂದರ ಚಿತ್ರವೋ ಅಥವಾ ಸಂಗೀತವೋ ಇಲ್ಲವೇ ಇನ್ನೊಂದು ಯಾವುದಾದರೂ ಕಲಾವಸ್ತುವಾಗಿದ್ದರೆ............

ಅಶೋಕ ಠಾಕೂರನು ಮಾಯಾದೇವಿಯ ಕಣ್ಣುಗಳಿಗೆ ತನ್ನ ದೃಷ್ಟಿಯನ್ನು ಹೊಂದಿಸಿಕೊಂಡು ನೋಡಿದನು. ಈ ದೃಷ್ಟಿಯಿಂದಲೇ ಆ ರಮಣಿಯ ಪೂರ್ಣ ವ್ಯಕ್ತಿತ್ವದ ದಾಹವನ್ನು ಆರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಮಾಯಾದೇವಿಯು ಆ ಭೇದಕ ಕಣ್ಣುಗಳ ಪ್ರಖರತೆಯನ್ನು ಸಹಿಸಲಾರದಾ

ದಳು. ಆದರೆ ಆ ಅಲ್ಪಾವಕಾಶದಲ್ಲಿಯೇ ಅಶೋಕ ಠಾಕೂರನು ಅವಳ ವಿಷಯ ವಾಗಿ ತುಂಬಾ ತಿಳಿದುಕೊಂಡನು.

ಮಾಯಾದೇವಿಯು ಸಹಜ ಸುಂದರಿಯಾಗಿದ್ದಳು. ಅವಳ ವ್ಯಕ್ತಿತ್ವ ದಲ್ಲಿಯೂ ಸೌಂದರ್ಯ ಲಾಲಸೆ ಮತ್ತು ವಿಲಾಸಾಸಕ್ತಿ ಇದ್ದಿತು. ಇದೆಲ್ಲ ಅವಳ ಕೃತಕ ಹಾವಭಾವಗಳಿಂದ ವ್ಯಕ್ತವಾಗುತ್ತಿತ್ತು. ಅವಳ ವಯಸ್ಸು ಮೂವ ತ್ತೈದು ಇರಬಹುದು. ಆದರೂ ತನ್ನ ತಾರುಣ್ಯವು ಯಾವಾಗಲೂ ಚಿರಂಜೀವಿ ಯಾಗಿರಬೇಕೆಂದು ಎಣಿಸಿ ಪ್ರತಿಕ್ಷಣದಲ್ಲೂ ಅದಕ್ಕಾಗಿ ಪ್ರಯತ್ನಿಸುತ್ತಿದ್ದಳು. ಇದಕ್ಕಾಗಿ ಪೌಡರ್, ಸುಗಂಧಿತ ಎಣ್ಣೆ ಇತ್ಯಾದಿಗಳು ಉಪಯೋಗಿಸಲ್ಪಡುತ್ತಿ ದ್ದವು. ನಖಗಳನ್ನು ಸುಂದರವಾದ ಕೆಂಪು ವರ್ಣದಿಂದ ಲೇಪಿಸಿಕೊಂಡಿದ್ದಳು. ಎರಡೂ ಕಿವಿಗಳಲ್ಲಿ ಕರ್ಣಪುಷ್ಪಗಳನ್ನು ಧರಿಸಿಕೊಂಡು ಸೌಂದರ್ಯವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಮಾಯಾದೇವಿಯ ಬಣ್ಣವು ಅಚ್ಚ ಬಿಳುಪು. ಮುಖದ ಮೇಲಿನ ಕೃತಕ ವೇಷಗಳಲ್ಲದಿದ್ದರೂ ಅವಳು ನಿಜವಾ ಗಿಯೂ ಸೌಂದರ್ಯವತಿಯೇ ಹೌದು. ಆದರೆ ವಿಶೇಷವೆಂದರೆ— ಅವಳ ಕಣ್ಣುಗಳು. ಅವು ಸಾಧಾರಣ ಚಿಕ್ಕವಾಗಿದ್ದವು. ಕಣ್ಣಿನ ಗೊಂಬೆಗಳು ನೀಲ ವರ್ಣದವಾಗಿದ್ದು ಚಂಚಲವಾಗಿದ್ದವು. ಈ ಕಣ್ಣುಗೊಂಬೆಗಳ ಪ್ರಭಾವವೆಂದರೆ ಅವು ಹೆಚ್ಚು ಹೊತ್ತು ಒಂದೇ ಸ್ಥಾನದಲ್ಲಿ ನಿಲ್ಲುತ್ತಿರಲಿಲ್ಲ. ಇದೆಲ್ಲ ಕಂಡ ಅಶೋಕ ಠಾಕೂರನಿಗೆ ಇವಳು ಮಾಯಾದೇವಿ ನೀಲಕಂಠ ಹೆಸರಿನ ಬದಲು “ಮಾಯಾದೇವೀ ನೀಲಾಕ್ಷೀ” ಎಂದಿದ್ದರೆ ತುಂಬಾ ಸರಿಹೋಗುತ್ತಿತ್ತು ಎಂಬ ಎಣಿಕೆ.

“ಬಹಳ ಉತ್ತಮವಾದ ಚಿತ್ರ ಇದು. ಏನು—ತಾವಿದನ್ನು ಮಾರು ತ್ತೀರೋ?” ನಸುನಗೆಯೊಂದಿಗೆ ಮಾಯಾದೇವಿಯು ಪ್ರಶ್ನಿಸಿದಳು. ಅವಳಲ್ಲಿ ಪುರುಷರನ್ನು ಮೋಹಜಾಲದಲ್ಲಿ ಹಾಕಬಹುದಾದ ಒಂದು ತರದ ವಿಚಿತ್ರ ಶಕ್ತಿ ಇದೆ ಎಂಬುದನ್ನು ಅಶೋಕನು ತಿಳಿದುಕೊಂಡನು.

“ಹೌದು. ನನ್ನ ನಾಲ್ಕು ಚಿತ್ರಗಳೂ ವಿಕ್ರಯಕ್ಕೇನೇ ಇವೆ. ತಮಗೆ ಯಾವುದು ಚೆನ್ನಾಗಿ ತೋರುತ್ತೆ ಅದನ್ನು ತಾವು ತೆಗೆದುಕೊಳ್ಳಬಹುದು.”

“ನನಗೆ ಇದೇ ಚಿತ್ರ ಯುಗ್ಮಪ್ರಣಯಿಯೇ ಬೇಕು. ಮತ್ತು ಸಂಧ್ಯಾ ರಾಣಿಯನ್ನೂ ತೆಗೆದುಕೊಳ್ಳುತ್ತೇನೆ. ಭ್ರಮೆಗೆ ಭ್ರಮಿತ ಗಿರಾಕಿಯೇ ಬರ

ಬಹುದು. ಸ್ವಾತಂತ್ರ್ಯತೆಯ ಪಥದಲ್ಲಿ ಚಿತ್ರಕ್ಕೆ ಯಾರದಾದರೊಬ್ಬ ಕಾಂಗ್ರೆಸ್ಸಿನ ಸದಸ್ಯರೂ ಸಿಗಬಹುದಲ್ಲವೇ ? ಸರಿ ಅದು ಹೇಗೆಯೇ ಇರಲಿ. ಚಿತ್ರಗಳ ಬೆಲೆ ಯಾದರೂ ಏನು ?"

ಅಶೋಕನಿಗೆ ಇವಳ ಆಲೋಚನೆಯು ಚುಚ್ಚುವಂತಿತ್ತು. ತುಂಬ ಕ್ರೋಧಿತನಾದನು. ಇವಳಿಗೆ ಒಂದೂ ಚಿತ್ರವನ್ನು ಕೊಡಬಾರದೆಂದೆಣಿಸಿದನು. ಆದರೆ ಹೀಗೆ ಮಾಡುವುದು ಅನುಚಿತವೂ ಅಲ್ಲದೆ ತನ್ನ ವ್ಯವಹಾರ ವ್ಯಾಪಾರ ಗಳಿಗೂ ಕೊರತೆ ಎಂದೆಣಿಸಿ— "ನನ್ನ ಚಿತ್ರಗಳಿಗೆ ನಾನು ಕ್ರಯ ಕಟ್ಟುವುದಿಲ್ಲ ಕಲೆಯ ಬೆಲೆಯನ್ನು ಬೆಳ್ಳಿಯ ನಾಣ್ಯಗಳಿಂದ ಅಳೆಯಲಾಗುವುದಿಲ್ಲ. ಕಲೆಯನ್ನು ಕೊಂಡುಕೊಳ್ಳುವವನು ಏನನ್ನು ಕೊಡುತ್ತಾನೋ ಅದನ್ನು ನಾನು ತೆಗೆದು ಕೊಳ್ಳುತ್ತೇನೆ. ಯಾವ ನಿಜವಾದ ಕಲಾರಸಿಕನು ನನ್ನ ಚಿತ್ರವನ್ನು ಕೊಂಡು ಕೊಂಡು ಆ ಚಿತ್ರದ ಮೂಲಕ ಶುದ್ಧ ಆನಂದವನ್ನು ಪಡೆಯುತ್ತಾನೋ ಅಂಥ ವನು ಆ ಚಿತ್ರದ ಬೆಲೆಯ ವಿಷಯವಾಗಿ ಭಿಕ್ಷಾವೃತ್ತಿಯನ್ನು ಅವಲಂಬಿಸಲಾರ ನೆಂದು ನನ್ನ ದೃಢ ವಿಶ್ವಾಸ."

ಮಾಯಾದೇವಿಯು ಈ ವಿಚಿತ್ರವಾದ ವ್ಯಂಗದಿಂದ ತಲಿಮಿಲಿತಳಾದಳು. "ಸರಿ ಹಾಗಿದ್ದರೆ" ಎಂದಿಷ್ಟೇ ಹೇಳಿದಳು.

ಇದೇ ಕಾರಣದಿಂದಲೇ ಅಶೋಕನಿಗೆ ಆ ಚಿತ್ರಕ್ಕೆ ಮುನ್ನೂರು ರೂಪಾ ಯಿಗಳು ಸಿಕ್ಕಿದವು. ಸಂಧ್ಯಾರಾಣಿಗೆ ಮಾಯಾದೇವಿಯು ಇನ್ನೂರು ರೂಪಾ ಯಿಗಳನ್ನು ಕೊಡಲು ಸಿದ್ಧಳಿದ್ದಳು. ಆದರೆ ಹಿಮಾಂಶಬಾಬೂ ಅವರು ಅದೇ ಹೊತ್ತಿಗೆ ಲೇಡೀ ದಿನೇಶ್ ಕಾಂಗಾ ಅವರನ್ನು ಇನ್ನೂರೈವತ್ತಕ್ಕೆ ಗೊತ್ತುಪಡಿಸಿ ಕರೆತಂದಿದ್ದರು. ಸ್ವಾತಂತ್ರ್ಯತೆಯ ಪಥದಲ್ಲಿಯ ವಿಷಯವಾಗಿ ಇಬ್ಬರು ಗುಜ ರಾತೀ ವ್ಯಾಪಾರಿಗಳಲ್ಲಿ ಜಗಳವಾಗುತ್ತಿತ್ತು. ಕಡೆಗೆ ಒಬ್ಬನಿಂದ ಮುನ್ನೂರು ರೂಪಾಯಿ ತೆಗೆದುಕೊಂಡು, ಇನ್ನೊಬ್ಬನಿಗೆ ಆದಷ್ಟು ಬೇಗನೇ ಅದರ ಇನ್ನೊಂದು ಪ್ರತಿಯನ್ನು ತೆಗೆದು ಕಳುಹಿಸುವುದಾಗಿ ವಾಗ್ದಾನಮಾಡಿ ಕಳುಹಿಸ ಲಾಯಿತು. 'ಭ್ರಮೆ' ಚಿತ್ರವನ್ನು ಕೂಡ ನೋಡುತ್ತಿದ್ದಂತೆಯೇ ಒಬ್ಬ ಮಹಾ ರಾಷ್ಟ್ರೀಯ ಜಾಗೀರುದಾರನು ತೆಗೆದುಕೊಂಡೂ ಆಯಿತು. ಹೀಗೆ ಈ ಪ್ರದರ್ಶ ನವು ಠಾಕೂರರಿಗೆ ಸಾಧಾರಣ ಒಂದು ಸಾವಿರ ರೂಪಾಯಿಯ ಆದಾಯವನ್ನು ಕಲ್ಪಿಸಿತು. ತನ್ನ ಈ ಸಫಲತೆಯನ್ನು ಕಂಡ ಅವನಿಗೆ ತುಂಬಾ ಸಂತೋಷ.

ಅಲ್ಲಿಂದ ಹೋಗುವುದಕ್ಕಿಂತ ಮುಂಚೆ ಅಶೋಕನೊಡನೆ ಮಾಯಾದೇವಿಯು "ನನಗೆ ಚಿತ್ರಗಳ ಮೇಲೆ ತುಂಬಾ ಅಭಿರುಚಿ ಇದೆ. ತಮ್ಮ ಕೌಶಲ್ಯವನ್ನು ಕಂಡು ನನಗೆ ತುಂಬಾ ಸಂತೋಷವಾಯಿತು. ಯಾವಾಗಲಾದರೂ ತಾವು ಒಳ್ಳೆಯ ಚಿತ್ರಗಳನ್ನು ಚಿತ್ರಿಸಿದರೆ ಅದನ್ನು ನನಗೆ ತೋರಿಸದೆ ಇನ್ನೊಬ್ಬರಿಗೆ ಕೊಡಬಾರದು. ನಾನೇ ಅದನ್ನು ತೆಗೆದುಕೊಳ್ಳಬಹುದು." ಎಂದಳು.

"ಸರಿ. ಪ್ರಯತ್ನಿಸಿ ನೋಡುತ್ತೇನೆ."

"ನನ್ನ ಇನ್ನೊಂದು ವಿನಂತಿಯು ಇದೆ. ನನ್ನ ಅಭಿಪ್ರಾಯದಂತೆ ತಾವು ಮತ್ತು ನಾನು ಒಂದೇ ಕಲೆಯ ಭಕ್ತರು. ಆದರೆ ನಾವಿಬ್ಬರೂ ಮಿತ್ರರಾಗಬಹುದು. ಮುಂದಿನ ಶನಿವಾರ ನನ್ನ ಮನೆಯ ಭೋಜನಕ್ಕೆ ಬರುವುದಾದರೆ ಚೆನ್ನಾಗಿತ್ತು. ಬರುವಿರೋ?" ಮಾಯಾದೇವಿಯ ಮಾತುಗಳಲ್ಲಿ ವಿನಯವಿತ್ತು. ಅವಳ ಮೋಹದ ಪ್ರಭಾವದಿಂದ ಅಶೋಕನು ತನ್ನ ಶಕ್ತಿಯನ್ನೂ ತಾನು ಉಳಿಸಿಕೊಳ್ಳಲಾರದಾದ. ಸಂಕೋಚವೇನೋ ಆಯಿತು. ಆದರೆ ಅದು ಸಫಲವಾಗಲಿಲ್ಲ.

"ಶನಿವಾರವೇ?" ಎಂದು ಕೇಳಿದನು.

"ಹೌದು, ಸರಿಯಾಗಿ ಎಂಟೂವರೆ ಘಂಟೆ ರಾತ್ರಿಗೆ..........." ಇಂದಿನಿಂದ ಮೂರೇ ಮೂರು ದಿನಗಳ ಅಂತರ. ನೆನಪಿಗೋಸ್ಕರ ಲಿಖಿತ ಆಮಂತ್ರಣ ಪತ್ರಿಕೆಯನ್ನು ಕಳುಹಿಸುತ್ತೇನೆ. ಆ ದಿನ ಸರಿಯಾದ ಸಮಯಕ್ಕೆ ತಮ್ಮನ್ನು ಕರೆದುಕೊಂಡು ಹೋಗಲು ಮೋಟಾರೂ ಬರುವುದು. ತಾವು ನಿಶ್ಚಿಂತರಾಗಿರಬಹುದು."

ಮಾಯಾದೇವಿಯ ತೀಕ್ಷ್ಣವಾದ ಕಣ್ಣುಗಳು ಅಶೋಕನ ಮುಖದಲ್ಲಿಯ ಸಮ್ಮತಿಯ ಸೂಕ್ಷ್ಮ ಭಾವವನ್ನು ಕಂಡು ಅವನ ಉತ್ತರದ ನಿರೀಕ್ಷೆಯನ್ನು ಕೂಡ ಮಾಡಲಿಲ್ಲ. ಕೂಡಲೆ ಮಾಯಾದೇವಿಯು "ನಮಸ್ಕಾರ" ಎಂದು ಹೇಳಿ ತನ್ನ ಸೀರೆಯನ್ನು ಸರಿಪಡಿಸುತ್ತ ಅಲ್ಲಿಂದ ಹೊರಟುಹೋದಳು.

ಹಿಮಾಂಶು ಬಾಬುಗಳು ಸ್ವಭಾವದಿಂದಲೇ ತನ್ನನ್ನು ತಾನು ಅಷ್ಟು ಮಟ್ಟಿಗೆ ಹೇಳಿಕೊಳ್ಳಲಾರರು. ಆದರೆ ಇನ್ನೊಬ್ಬರ ಪರವಾಗಿ ತುಂಬಾ ಅಭಿರುಚಿಯಿಂದ ಮಾತನಾಡುವವರು. ಅವರು ವೇಗವಾಗಿ ಬಂದು "ಠಾಕೂರ್

ಬಾಬೂ, ಅಭಿನಂದನೆ, ನಿಮಗೆ ನನ್ನ ಹಾರ್ದಿಕ ವಂದನೆಗಳು. ನೀವಾದರೂ ಸಂತೋಷಪಡತಕ್ಕದ್ದೇ. ನಿಜವಾಗಿಯೂ ಚೆನ್ನಾಗಿರುವ ಬೇಟೆಯೇ ನಿಮಗೆ ದೊರಕಿತು. ಈ ದಿವಸ ನಿಮ್ಮ ಅದೃಷ್ಟದ ಹೆಬ್ಬಾಗಿಲು ತೆರೆದಿದೆ. ಮಾಯಾ ದೇವಿಯು ಯಾವುದರ ಮೇಲೆ ಅಭಿರುಚಿ ಪಡುತ್ತಾಳೋ ಅದು ಸಿಕ್ಕಿದರೆ ಸಾಕು. ಅದನ್ನು ಅಮೂಲ್ಯ ರತ್ನಗಳಂತೆ ಜೋಪಾನವಾಗಿಟ್ಟು ಕಾಪಾಡುತ್ತಾಳೆ. ಪಟ್ಟಣದ ಅರ್ಧ ಬಣ್ಣ ಬಳಕೊಂಡ ಯುವಕರು ಅವಳ ಗೆಳೆತನಕ್ಕೋಸ್ಕರವಾಗಿ ಅವಳ ಹಿಂದೆಯೇ ತಿರುಗುತ್ತಾರೆ. ಆದರೆ ನಿಮ್ಮೊಬ್ಬರ ಹತ್ತಿರ ಮಾತ್ರ ಅವಳು ತಾನು ಸ್ವತಃ ಬಂದ ಪ್ರಸಂಗವು ಇದೇ ಮೊದಲನೆಯದು. ಸಾಕು ಇದಕ್ಕೇನೇ ಭಾಗ್ಯ ಎನ್ನುತ್ತಾರೆ. ಆದರೆ ನೋಡಬೇಕು, ಠಾಕೂರರೇ, ಈ ಹಿಮಾಂಶು ಬಾಬುವನ್ನೆಲ್ಲಿಯಾದರೂ ಮರೆತೀರಿ! ನಾನೇ ಈ ಗೆಳೆತನವನ್ನು ಮಾಡಿಸಿದವನು. ಒಳ್ಳೆಯ ದಿನಗಳು ಬಂದಾವು! ಆಗ ಒಮ್ಮೊಮ್ಮೆ ನನ್ನನ್ನು ನೆನಪು ಮಾಡಿಕೊಂಡರೆ ಒಳ್ಳೆಯದು. ನಾನೂ ಒಬ್ಬ ಬಡವನಿದ್ದೇನೆ ಎಂದೆಣಿಸಿಕೊಂಡರೆ ಸಾಕು." ಎಂದರು. ಆಗ ಠಾಕೂರನು ಗೊಳ್ಳೆಂದು ನಕ್ಕನು. ಜೊತೆಗೆ ಬಾಬೂವೂ ಸೇರಿದ್ದರು.

ಠಾಕೂರರು ಈ ಎಲ್ಲ ಕಥನಗಳನ್ನು ಚೆನ್ನಾಗಿ ಕೇಳಲೂ ಇಲ್ಲ. ಅಥವಾ ಅದರ ಆಳವಾದ ಸೂಕ್ಷ್ಮ ಅರ್ಥವನ್ನೂ ತಿಳಿದುಕೊಳ್ಳಲು ಗಮನವನ್ನು ಕೂಡ ಕೊಡಲಿಲ್ಲ. ಹಿಮಾಂಶು ಬಾಬುಗಳನ್ನು ಒಂದು ಬದಿಗೆ ಕರೆದುಕೊಂಡು ಹೋಗಿ ಅವರ ಶ್ರಮಕ್ಕೆ ತಕ್ಕಂತೆ ಒಂದು ನೂರು ರೂಪಾಯಿಯ ಒಂದು ನೋಟನ್ನು ಅವರ ಕೈಗಿತ್ತು ಹೊರಗೆ ಹೋದನು.

ಎರಡು

"ಈ ದಿನ ರಾತ್ರೆ ಎಂಟೂವರೆ ಘಂಟೆಗೆ ಭೋಜನ ಸಮಾರಂಭಕ್ಕೆ ಹೊರಗೆ ಹೋಗಬೇಕಾಗಿದೆ ಅಬ್ದುಲ್ಲ—"

"ಮೋಟಾರಿಗೆ ಹೇಳಿಇಡುತ್ತೇನೆ, ಹುಜೂರ್."

" ಇಲ್ಲ. ಮೋಟಾರುಕಾರು ಬೇಡ. ಮೋಟಾರಿನೊಂದಿಗೆ ಅವಳೇ ಬರುತ್ತಾಳೆ."

" ಹುಜೂರ್, ಬಟ್ಟೆ ಯಾವುದನ್ನು ತೆಗೆಯಲಿ ? "

" ಬಹಳ ಸಾಧಾರಣವಾದುವೇ ಸಾಕು. ಅರಸಿನ ಶರ್ಟ್ಸ್, ಬೆಳ್ಳಗಿನ ದಾರ ಹಾಕಿದ ಪಾಯಜಾಮಾ ಇಷ್ಟೇ ಸಾಕು. "

" ಒಳ್ಳೇದು, ಹುಜೂರ್. "

" ಮತ್ತೂ ನೋಡು ಅಬ್ದುಲ್ಲಾ. "

" ಹುಜೂರ್. "

" ಒಂದು ಚಿಕ್ಕ ತಿರುಗಾಟ ಮಾಡಬೇಕೆಂದಿದೆ. "

" ಯಾವ ಕಡೆಗೆ ? ಯಾವಾಗ ಹೊರಡುವ ಹುಜೂರ್ ? "

" ದೂರವೆಲ್ಲಿಯೂ ಹೋಗುವುದು ಬೇಡ. ಇಲ್ಲಿಯೇ ನಮ್ಮ ಜಿಲ್ಲೆ ಯೊಳಗೇ. ಮುಖ್ಯವಾಗಿ ಶತಪುತ್ರಾ ಪರ್ವತಗಳಲ್ಲಿ ಸುತ್ತಬೇಕು. ಎಂಟು ಹತ್ತು ದಿನಗಳೊಳಗೇ ಹೊರಡುವ. ಆಗದೇ ? "

" ಒಳ್ಳೇದು ಹುಜೂರ್, ಎಷ್ಟು ದಿವಸಗಳ ಮೊಕ್ಕಾಂ ಆದೀತು ? "

" ಎರಡು ಮೂರು ತಿಂಗಳು ಅಲ್ಲಿರಬೇಕಾಗಬಹುದು. ಅದಕ್ಕೆ ಬೇಕಾದ ಸಾಮಾನುಗಳನ್ನು ತಯಾರಿಸಬೇಕು. ವಸಂತ ಋತುವನ್ನು ಕಾಡಿನಲ್ಲೇ ಕಳೆಯಬೇಕಾಗಿ ಬರಬಹುದು. ಅದೇ ಇಚ್ಛೆಯು ನನಗೆ ತುಂಬಾ ದಿನಗಳಿಂದ ಇದೆ. "

" ಹುಜೂರ್, ಹಾಗಾದರೆ ಬಣ್ಣಗಳ ಟ್ಯೂಬುಗಳನ್ನು ತೆಗೆದುಕೊಳ್ಳ ಬೇಕು. ನೀಲಿ, ಹಸರು ಮತ್ತು ಕೇಸರೀ ಬಣ್ಣದ ಡಬ್ಬಿಗಳು ಹೋದ ವಾರವೇ ಮುಗಿದಿವೆ. ಬಹುಶಃ ಮೇಘ ಮತ್ತು ಹಳದಿ ಬಣ್ಣಗಳಿರಬೇಕು. ಹುಜೂರ್, ಮತ್ತು ಸ್ವಲ್ಪ ಕೆನವಾಸೂ ಕೊಂಡುಕೊಳ್ಳಬೇಕು. ಕೆಲವು ಪಿನ್ನು ಗಳನ್ನೂ ಒಂದೆರಡು ಹಲಗೆಗಳನ್ನೂ ಇರಿಸಿಕೊಂಡರೆ ತುಂಬಾ ಉಪಯೋಗ ವಾದೀತು. "

" ಹೌದು, ಹೌದು. ಇದೆಲ್ಲವನ್ನು ಸರಿಪಡಿಸಿ, ಸಿದ್ಧತೆ ಮಾಡು. ಪರ್ವತ ಗಳ ಮೇಲೆ ತರತರದ ಬಣ್ಣಗಳಿಂದ ಹೆಚ್ಚು ಚಿತ್ರಗಳನ್ನು ಬರೆಯಬೇಕಾಗ ಬಹುದಲ್ಲವೇ ? ಬ್ಯಾಂಕಿನಿಂದ ರೂಪಾಯಿಗಳನ್ನು ತೆಗೆಯಬೇಕಲ್ಲವೇ ? "

“ಮೊನ್ನೆಯ ಸಾವಿರ ರೂಪಾಯಿಗಳನ್ನು ನಾನು ಚಾಲೂ ಲೆಕ್ಕದಲ್ಲಿಯೇ ಜಮಾ ಮಾಡಿಸಿದ್ದೇನೆ.”

“ಹಾಗಾದರೆ ಬಹಳ ಒಳ್ಳೆಯದೇ ಆಯಿತು. ನಾನು ನಿನಗೆ ಅದರ ವಿಷಯವಾಗಿ ಏನೂ ಹೇಳಲಿಲ್ಲ. ನಿನ್ನ ಹತ್ತಿರವೇ ಅಮಾನತ್ ಆಗಿ ಇಟ್ಟು ಕೊಂಡಿರಬಹುದೆಂದು ನೆನಸಿದ್ದೆ.”

“ಹುಜೂರ್” ಈ ಬಾರಿ ಇವನು ಬಹಳ ನಮ್ರತೆಯಿಂದ ಠಾಕೂರ ನನ್ನು ಕೂಗಿದ.

“ಏನು ಅಬ್ದುಲ್ಲಾ?”

“ಕೆಲವು ಬಟ್ಟೆಗಳನ್ನು ಹೊಲಿಸುತ್ತಿದ್ದರೆ ಚೆನ್ನಾಗುತ್ತಿತ್ತು. ಮೂರು ವರ್ಷಗಳಿಂದ ತಾವು ಯಾವ ತರದ ಹೊಸ ಬಟ್ಟೆಗಳನ್ನೂ ಮಾಡಿಸಲಿಲ್ಲ. ಒಂದೊ, ಎರಡೊ ಸಿಲ್ಕಿನ ಸೂಟುಗಳನ್ನು ಮಾಡಿಸಿದಿರಿ.”

“ಏನು? ಬಟ್ಟೆಗಳು ಸಾಲವೇ ಅಬ್ದುಲ್ಲ? ಇರುವುದರಲ್ಲಿಯೇ ನಿರ್ವಾಹ ಮಾಡಬಹುದು. ಮತ್ತೆ ನನಗೆ ಸಿಲ್ಕಿನಲ್ಲಿ ಅಷ್ಟು ಇಚ್ಛೆಯೂ ಇಲ್ಲ.”

“ಯಾವಾಗ ತಮಗೆ ಕೆಲವು ದೊಡ್ಡ ಜನರಲ್ಲಿ ಹೋಗಿ ಬರಬೇಕಾಗು ವುದೊ ಅಂತಹ ಸಮಯಗಳಲ್ಲಿ ಕೆಲವಾದರೂ ಒಳ್ಳೆಯ ಬಟ್ಟೆಗಳು ಅಗತ್ಯ ಬೇಕಾಗುತ್ತವೆ. ವಿದೇಶಿ ಸಿಲ್ಕ್ ಬೇಡವೆಂದರೆ ಬೇಡ. ಅದು ನಿಮಗೆ ಇಚ್ಛೆ ಇಲ್ಲ. ಖದ್ದರ್ ಸಿಲ್ಕ್ ತಮಗೆ ಹಿಡಿಸಿದರೆ ಅದನ್ನೇ ತೆಗೆದುಕೊಳ್ಳೋಣ. ಬಹಳ ಅಂದವಾದ ಬಟ್ಟೆಗಳು ಖದ್ದರ್ ಭಂಡಾರಕ್ಕೆ ಬಂದಿವೆ. ನಾನು ನಿನ್ನೆಯೇ ನೋಡಿ ಬಂದಿದ್ದೇನೆ.”

“ಒಳ್ಳೇದು.”

“ತಮಗೆ ನೋಡಲು ಕೆಲವು ಮಾದರಿಯ ತುಂಡುಗಳನ್ನು ತರಲೇ?”

“ಒಳ್ಳೇದು, ಬೇಕಾದರೆ ತೆಗೆದುಕೊಂಡು ಬಾ.”

“ಖಂಡಿತವಾಗಿಯೂ ಬೇಕು, ಹುಜೂರ್.”

ಅಬ್ದುಲ್ಲನು ಸಂತೋಷದಿಂದ ಸಲಾಮು ಮಾಡುತ್ತ ಅಲ್ಲಿಂದ ಹೊರಟು ಹೋದನು. ಠಾಕೂರನು ಅವನ ಹಿಂದಿನ ಆಕೃತಿಯು ಕಾಣದಾಗುವ ವರೆಗೆ ನೋಡಿದನು. ಅವನ ಕಣ್ಣುಗಳಲ್ಲಿ ಸ್ನೇಹ ಮತ್ತು ಸೌಜನ್ಯದ ಭಾವವು ಚೆನ್ನಾಗಿ ತೋರುತ್ತಿತ್ತು.

ಅಬ್ದುಲ್ಲನು ಅವನ ಏಕಾಕೀ ಜೀವನದಲ್ಲಿ ಎಷ್ಟು ಮಹತ್ವಪೂರ್ಣ ಸ್ಥಾನವನ್ನಿಟ್ಟುಕೊಂಡಿದ್ದಾನೆ........ ಅಶೋಕನು ಯೋಚಿಸಲಾರಂಭಿಸಿದನು. ಇಂದಿಗೆ ಏಳು ವರ್ಷಗಳಿಂದ ಅವನು ಇವನ ಆಳಾಗಿ ಕೆಲಸ ಮಾಡುತ್ತಾನೆ. ಆದರೆ ಒಂದು ದಿನವಾದರೂ ಅವನು ಅವನ ಧಣಿಯೊಂದಿಗೆ ಸಂಬಳದ ಆಳಿನಂತಹ ವರ್ತನೆಯನ್ನು ಮಾಡಿರಲಿಲ್ಲ. ಎಂದು ಅವನು ಅಶೋಕನ ಮನೆಯ ಮೆಟ್ಟುಕಲ್ಲನ್ನು ಮೆಟ್ಟಿದನೋ ಅಂದಿನಿಂದ ಅವನನ್ನೂ ಅವನ ಮನೆಯನ್ನೂ ತನ್ನದೆಂದೇ ಭಾವಿಸಿಕೊಂಡು ಅವೆರಡನ್ನೂ ಚೆನ್ನಾಗಿ ನೋಡಿಕೊಳ್ಳುತ್ತ ಉದ್ಧರಿಸುವುದೇ ತನ್ನ ಮೊದಲನೇ ಕರ್ತವ್ಯವೆಂದು ತಿಳಿದುಕೊಂಡಿದ್ದನು.

ಅಶೋಕನ ಹೃದಯ ಮತ್ತು ಅವನ ಸ್ವಭಾವವನ್ನು ಬಹಳ ಚೆನ್ನಾಗಿ ತಿಳಿದುಕೊಂಡು ಅದಕ್ಕೆ ಅನುವರ್ತಿಯಾಗಿ ನಡೆಯುತ್ತಿದ್ದನು. ಎಷ್ಟು ವಿಧೇಯ ಮತ್ತು ದಯಾಳುವಾಗಿದ್ದಾನೆ! ಹಣಕಾಸಿನ ವಿಚಾರವಾಗಿ ಎಷ್ಟು ನಂಬಿಗಸ್ಥನೆಂದರೂ ಸಾಲದು. ತನ್ನ ಯಜಮಾನನನ್ನು ಸುಖ ಸಂತೋಷದಿಂದಿರುವಂತೆ ಮಾಡಲು ಯಾವಾಗಲೂ ಪ್ರಯತ್ನಿಸುತ್ತಿದ್ದನು. ಅಶೋಕನ ಹೃದಯದ ಎಷ್ಟು ಚಿಕ್ಕದಾದ ವಿಷಯವಾದರೂ ಅದನ್ನು ಅಬ್ದುಲ್ಲನು ತಿಳಿದುಕೊಳ್ಳುತ್ತಿದ್ದನು. ಅದರ ವಿಷಯವಾಗಿ ಏನಾದರೂ ಹೇಳುವ ಮೊದಲೇ ಅವನ ಪೂರ್ಣ ಇಚ್ಛೆ ಮತ್ತು ಅವನ ಅವಶ್ಯಕತೆಗಳನ್ನು ತಿಳಿದು ಪೂರ್ಣ ಮಾಡುತ್ತಿದ್ದನು. ಊಟ, ತಿಂಡಿ, ಬಟ್ಟೆ ಬರೆಗಳಿಂದ ಹಿಡಿದು ಅವನ ಕಲೆಯ ಅಭಿರುಚಿಯನ್ನು ಸ್ವಲ್ಪ ಸ್ವಲ್ಪ ತಿಳಿದುಕೊಂಡು ಅವನ ಎಲ್ಲಾ ಕಾರ್ಯಕಲಾಪಗಳಲ್ಲಿಯೂ ಸಾವಧಾನದಿಂದ ಸಹಾಯಕನಾಗುತ್ತ ಮುಂದರಿಯುತ್ತಿದ್ದನು.

ಅಶೋಕ ಠಾಕೂರನಾದರೊ ತನ್ನ ಎಲ್ಲಾ ಭಾರವನ್ನು ಈ ನಂಬಿಗಸ್ಥನಾದ ಮುದುಕನ ಮೇಲೆ ಬಿಟ್ಟು ತಾನು ನಿಶ್ಚಿಂತನಾಗಿರುತ್ತಿದ್ದನು. ಅವನು ಠಾಕೂರನ ಆಳೂ, ನೌಕರನೂ ಆಗಿದ್ದುದಲ್ಲದೆ ಅವನ ಹಿತಚಿಂತಕನೂ ಆಗಿದ್ದನು. ಈ ತರದ ಹೊರೆಯನ್ನು ಹೊರುವುದರಲ್ಲಿ ಅಬ್ದುಲ್ಲನಿಗೂ ಒಂದು ತರದ ಅಭಿಮಾನವಿತ್ತೊ ಏನೊ!"

ಅಬ್ದುಲ್ಲನ ಪ್ರಾಯವು ಐವತ್ತರ ಹತ್ತಿರವಾಗಿರಬಹುದು. ಅವನೂ ಒಬ್ಬಂಟಿಗನೇ. ಅವನಿಗೆ ಈಗ ಇಂತಹ ಮರ್ಯಾದೆಯಿಂದ ನೋಡುವ ಧಣಿಯು ಸಿಕ್ಕಿದ್ದರಿಂದ ಅವನೂ ತನ್ನ ಜೀವಮಾನದಲ್ಲಿ ಉಳಿದ ದಿನಗಳನ್ನು

ಇವನ ಆಧಾರದಿಂದಲೇ ಕಳೆಯುವುದಾಗಿ ನಿಶ್ಚಯಿಸಿದ್ದನು. ತನ್ನ ಯಜಮಾನನು ಪ್ರಖ್ಯಾತ ಚಿತ್ರಕಾರನಾಗಿರುವುದೂ, ಆತನ ಚಿತ್ರಗಳನ್ನು ನೋಡಲು ಮತ್ತು ಕೊಂಡುಕೊಳ್ಳಲು ದೊಡ್ಡ ದೊಡ್ಡ ಆಫೀಸರರುಗಳು, ರಾಜರುಗಳು, ಮತ್ತು ದೊಡ್ಡ ಕುಲಶೀಲರು ಕೂಡ ಬರುತ್ತಿರುವಂತಹ ಧಣಿಯರೊಂದಿಗೆ ನೌಕರಿಯಲ್ಲಿದ್ದ ಬಗ್ಗೆ ಅಬ್ದುಲ್ಲನಿಗೆ ತುಂಬಾ ಹೆಮ್ಮೆ. ಅವನ ಧಣಿಯ ಹೆಸರು ದಿನದಿನಕ್ಕೆ ಹೆಚ್ಚುತ್ತಿರಲೆಂದು ಅಬ್ದುಲ್ಲನ ಹಾರೈಕೆ ವಿನಹ ಬೇರೆ ಯಾವ ಇಚ್ಛೆಯೂ ಅವನಿಗೆ ಇಲ್ಲ. ಅಲ್ಲದೆ ಅವನಲ್ಲಿ ಮತ್ತೊಂದು ಇಚ್ಛೆಯೂ ಇರಬಹುದು. ಅದೇನಂದರೆ ತನ್ನ ಯಜಮಾನರು ವಿವಾಹವಾಗಿ ಮನೆಗೊಂದು ಲಕ್ಷ್ಮಿಯನ್ನು ಕರೆತಂದರೆ ಆಗುತಿತ್ತೆಂಬುದು. ಆದರೆ ಅದು ಇದುವರೆಗೂ ನಡೆಯಲಾಗಲಿಲ್ಲ.

ಅಬ್ದುಲ್ಲನ ಶರೀರದ ಬಣ್ಣ ನಸುಕಪ್ಪು. ಮಧ್ಯತರದ ಬೆಳವಣಿಗೆ. ಯಾವಾಗಲೂ ಬಿಳೀ ಪೈಜಾಮುಗಳು, ಬಿಳೀ ಶರ್ಟುಗಳನ್ನು ಉಪಯೋಗಿಸುತ್ತಿದ್ದ. ಸೊಂಟಕ್ಕೊಂದು ಕೆಂಪು ರಂಗಿನ ಪಟ್ಟಿಯೂ, ಹೆಗಲ ಮೇಲೊಂದು ವಸ್ತ್ರವೂ ಇರುತ್ತಿತ್ತು. ಕೆಲವೇ ಕೂದಲುಗಳಿಂದ ಕೂಡಿದ ಚಿಕ್ಕ ದಾಡಿಯೂ ಇದೆ. ಕೆಲವೊಮ್ಮೆ ಇದಕ್ಕೆ ಕೇಸರೀ ಬಣ್ಣವನ್ನು ಹಾಕುವ ಅಭ್ಯಾಸವಿತ್ತು. ಈ ಬಣ್ಣ ಹಾಕಿದರೆ ಅವನ ದಾಡಿ ಚೆನ್ನಾಗಿ ಒಪ್ಪುತ್ತಿತ್ತು. ಭುಜಗಳೆರಡೂ ತುಸು ಮುಂದಕ್ಕೆ ಬಂದು ಸ್ವಲ್ಪ ಬಗ್ಗಿಯೇ ನಡೆಯುತ್ತಿದ್ದ. ಯಾವಾಗಲೂ ಬಹಳ ಮೆತ್ತಗೆ ನಡೆಯುವವನು. ಯಾಕೆಂದರೆ ತನ್ನ ನಡೆಯಿಂದ ತನ್ನ ಧಣಿಗೆ ಕೊಂಚವೂ ಧ್ಯಾನಭಂಗವಾಗಬಾರದೆಂಬ ಎಣಿಕೆ ಅವನದು.

ಅವನು 'ಆರ್‌ಟಿಸ್ಟ್' ಆಗಿದ್ದಾನೆ. ಅವನ ಕಲಾಮುದ್ರೆಯ ಭಾವಗಳ ಏಕಾಗ್ರತೆಯನ್ನು ಕಾಪಾಡುವುದು ಎಲ್ಲಕ್ಕಿಂತ ಹೆಚ್ಚಿನ ಕಷ್ಟವೆಂಬುದು ಈ ಅಬ್ದುಲ್ಲನಿಗೆ ಚೆನ್ನಾಗಿ ಗೊತ್ತು. ಅವನು ಕೋಣೆಯೊಳಗೆ ಬಂದು ಹೋಗುತ್ತಿದ್ದುದೆಂದರೆ ಛಾಯಾ ಪ್ರಕಾಶದಂತೆ ನಿಶ್ಶಬ್ದತೆಯಿಂದಲೂ, ನೀರವತೆಯಿಂದಲೂ. ಆದರೆ ಅಶೋಕನು ಧ್ಯಾನಮಗ್ನನಾಗಿರದಿದ್ದರೂ ಕೂಡ ಅವನೇಕೆ ಅಲ್ಲಿ ಕೂತಿದ್ದಾನೆಂದು ಆ ಶಾಂತವಾದ ವಾತಾವರಣದಲ್ಲಿ ಇವನು ಅಂತರ್ಮನದಿಂದಲೇ ತಿಳಿದುಕೊಳ್ಳುತ್ತಿದ್ದನು. ಮತ್ತು ಅಬ್ದುಲ್ಲನು ಅಶೋಕನ ಶ್ವಾಸೋಚ್ಛ್ವಾಸಗಳಲ್ಲಿಯ ಭಾವನೆಗಳನ್ನು ಕೂಡ ತಿಳಿದುಕೊಳ್ಳುವಷ್ಟು ಮುಂದುವರಿದಿ

ದ್ದನು. ನಾಲಿಗೆಯ ಉಪಯೋಗವಿಲ್ಲದೆಯೇ ಇವರಿಬ್ಬರಲ್ಲಿಯೂ ಮಂಡೆಗಳ ಲೆಕ್ಕದಲ್ಲಿ ಸಂಭಾಷಣಾ ವ್ಯವಹಾರವು ನಡೆಯುತಿತ್ತು. ಆದ್ದರಿಂದ ಆ ಕಲಾಕಾರನ ಬಂಗಲೆಯ ಶಾಂತ ಮತ್ತು ಸುಖಮಯ ವಾತಾವರಣಕ್ಕೆ ಎಂದಿಗೂ ಭಂಗ ಬರುತ್ತಿರಲಿಲ್ಲ.

ಅಶೋಕನು ಎಂದೂ ಅಬ್ದುಲ್ಲನನ್ನು ತನ್ನ ನೌಕರನೆಂದು ತಿಳಿಯುತ್ತಿರಲಿಲ್ಲ. ಅವನ ಆತ್ಮೀಯ ಮತ್ತು ಒಳ್ಳೇ ತಿಳುವಳಿಕೆಯುಳ್ಳ ತನ್ನ ಹಿತೈಷಿ ಹಾಗೂ ಪಾಲಕನೆಂದು ಎಣಿಸಿದ್ದನು. ಅಶೋಕನು ಅಬ್ದುಲ್ಲನ ಮೇಲೆ ಇಟ್ಟ ಇಂತಹ ತೀವ್ರ ವಿಶ್ವಾಸಕ್ಕಾಗಿ ಒಂದು ದಿನವಾದರೂ ಪಶ್ಚಾತ್ತಾಪ ಪಡುವ ಸಂದರ್ಭವು ಅವನಿಗೆ ಒದಗಿರಲಿಲ್ಲ. ತೀವ್ರ ವಿಶ್ವಾಸದಲ್ಲಿ ಅವನಿಗೆ ಒಂದು ತರದ ಸುಖವು ಯಾವಾಗಲೂ ಸಿಗುತ್ತಿತ್ತು.

ಅಶೋಕ ಠಾಕೂರನು ಜೀವನದಲ್ಲಿ ಒಂಟಿಯೇ. ಮಾತಾ-ಪಿತರುಗಳಿಂದ ಅವನು ಬಹಳ ಬೇಗನೆ ಬೇರೆಯಾಗಿದ್ದನು. ಆದರೆ ಅವರು ಇವನನ್ನು ಪ್ರಪಂಚದಲ್ಲಿ ಪೂರ್ಣ ನಿಸ್ಸಹಾಯನನ್ನಾಗಿ ಮಾಡಿ ಹೋಗಿರಲಿಲ್ಲ. ಇವನ ಕಾಲಕ್ಷೇಪಕ್ಕಾಗಿ ಇದ್ದ ಧನದಿಂದಲೇ ಇವನಿಗೆ ಅಭಿರುಚಿ ಇದ್ದ ಕಲೆಯನ್ನು ಕಲಿಯಲು ಮುಗಿಯದ ಪರಿಶ್ರಮಪಟ್ಟ ಫಲವು—ಉತ್ತಮೋತ್ತಮ ಚಿತ್ರವನ್ನು ಬರೆಯುವುದೇ ಅವನ ಏಕಮಾತ್ರ ಧ್ಯೇಯವಾಯಿತು. ಬೊಂಬಾಯಿಯ 'ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್' ನಲ್ಲಿ ಅವನು ಶಿಕ್ಷಣವನ್ನು ಹೊಂದಿದನು. ಏಕೆಂದರೆ ಈ ಕಡೆಗೆನೇ ಅವನ ಸ್ವಾಭಾವಿಕ ಪ್ರವೃತ್ತಿಯೂ ಚೆನ್ನಾಗಿ ಕೂಡಿಕೊಂಡಿತ್ತು. ಈಗ ಅವನು ಚಿತ್ರಕಲೆಗಳ ಪ್ರದರ್ಶನಗಳನ್ನು ನೋಡಿ ಅವುಗಳಲ್ಲಿ ಪ್ರದರ್ಶಿತವಾದ ಒಳ್ಳೆಒಳ್ಳೆಯ ಚಿತ್ರಗಳನ್ನು ಏಕಾಗ್ರತೆಯಿಂದ ಅಧ್ಯಯನ ಮಾಡಿಕೊಂಡನು. ಅಜಂತದ ಪ್ರಾಚೀನ ಕಲೆಯ ಅಭ್ಯಾಸಕ್ಕೋಸ್ಕರವಾಗಿ ಅವನು ಅಲ್ಲಿ ಒಂದು ತಿಂಗಳ ಕಾಲವನ್ನು ಕಳೆದಿದ್ದನು. ಎಲ್ಲಿ ಅವನಿಗೆ ಚಿತ್ರಕಲೆಯ ಸುಂದರವಾವ ನಮೂನೆಗಳು ನೋಡಲು ಸಿಗುತ್ತಿದ್ದವೊ ಅಲ್ಲಿಗೆ ಅವನು ಹೋಗಿಯೇ ಹೋಗುತ್ತಿದ್ದನು. ಇಷ್ಟೆಲ್ಲಾ ಸುತ್ತಿದ ನಂತರವೂ ಕೂಡ ಅವನ ಬಳಿ ನಾಲ್ಕೈದು ಸಾವಿರ ರೂಪಾಯಿಗಳು ಉಳಿದಿದ್ದವು. ಇದರ ಸಹಾಯದಿಂದ ಯುರೋಪಿನ ಪ್ರವಾಸವನ್ನು ಕೈಕೊಂಡು ಅಲ್ಲಿಯ ಚಿತ್ರಕಲೆಯ ಉತ್ಕೃಷ್ಟ ನಮೂನೆಗಳನ್ನು ನೋಡಿಕೊಂಡು ಬಂದಿದ್ದನು. ಮಧ್ಯ ಯುರೋಪಿ

ನಲ್ಲಿ ಟಸ್ಕನ್, ವೆನಿಶಿಯನ್ ಕಲಾಪ್ರವೀಣರುಗಳ ಚಿತ್ರಗಳನ್ನು ನೋಡಿದ್ದನು. ಅಲ್ಲದೆ ಯುರೋಪಿನ ಇತರ ಭಾಗಗಳ ಉತ್ತಮ ಕಲೆಗಾರರ ಉನ್ನತ ಚಿತ್ರಗಳನ್ನು ಕಂಡು ಅವನು ಭಾರತಕ್ಕೆ ಹಿಂದಿರುಗಿದ್ದನು.

ಈ ಪರ್ಯಟನೆಯು ಅವನಿಗೆ ಬಹಳ ಲಾಭದಾಯಕವಾಯಿತು. ಬೇರೆ ಬೇರೆ ದೇಶಗಳ ಕಲಾಕೃತಿಯ ಅಂತರಾತ್ಮದಲ್ಲಿ ವಾಸಿಸುತ್ತಿರುವ ಕಲೆಯ ಸಾರ್ವಭೌಮ ಆತ್ಮದ ಆಕಾರವನ್ನು ಅವನಿಗೆ ನೋಡಲು ಇದೇ ಒಂದು ಸಂದರ್ಭವಾಯಿತು. ಅವನು ಸ್ವದೇಶಕ್ಕೆ ಬಂದಾಗ ಅವನಿಗೇನೋ ತಾನು ಎಲ್ಲ ವಿಧಗಳಲ್ಲಿಯೂ ವೃದ್ಧಿ ಹೊಂದಿರುವೆನೆಂದು ತಿಳಿಯಿತು.

ಕಲೆಯ ತತ್ವವನ್ನು ಇಷ್ಟು ಉತ್ತಮ ರೀತಿಯಿಂದ ಅಭ್ಯಾಸಿಸಿದ ಮೇಲೆ ತನ್ನ ಕಲೆಯ ಸಂಪೂರ್ಣ ಜ್ಞಾನ, ಅನುಭವ, ನಿರೀಕ್ಷಣೆ ಇವುಗಳೆಲ್ಲವನ್ನು ಒಂದು ಸೇರಿಸಿ, ಕೊನೆಗೆ ತನ್ನ ಮಾತೃಭೂಮಿಯಾದ ನಾಗಪುರದಲ್ಲಿ ನೆಲೆಸಿದನು. ಕಲೆಗಾಗಿ ಏಕಾಗ್ರತೆಯ ಧ್ಯಾನವನ್ನು ಮತ್ತು ನಿರಂತರ ಸೇವೆಯನ್ನು ಮಾಡುತ್ತಿದ್ದವನಿಗೆ ಅದು ತಾನೆ ಹೇಗೆ ಫಲ ಕೊಡದೆ ಇರಲು ಸಾಧ್ಯ? ಅಶೋಕ ಠಾಕೂರನ ಚಿತ್ರಗಳಿಗೆ ಬೆಲೆ ಕೊಡುವ ಜನರು ಅವನ ಪ್ರಾಂತ್ಯದಲ್ಲಿಯೂ, ಹೊರ ಪ್ರಾಂತ್ಯದಲ್ಲಿಯೂ ಬೇಕಾದಷ್ಟು ಸಿಗಲಾರಂಭಿಸಿದರು. ನಾಗಪುರದ ಲೇಡೀ ದಿನೇಶ್ ಕಾಂಗಾ, ಸಾರಂಗಪುರದ ಮಹಾರಾಜ್‌ಸಾಹೇಬ ಮತ್ತು ಬೊಂಬಾಯಿನ ಮಿಲ್ ಮಾಲಿಕರಾದ ವಸನ್‌ಜೀ ಖಿಮ್‌ಜೀ ಇವರೂ ಅವನ ಕಾಯಂ ಗಿರಾಕಿಗಳಾಗಿದ್ದರು. ಇವರು ಇವನ ಚಿತ್ರಗಳಿಗೆ ಬೆಲೆ ಕೊಡುವುದರಲ್ಲಿ ಜಿಪುಣತನವನ್ನು ಎಂದಿಗೂ ತೋರಿಸುತ್ತಿರಲಿಲ್ಲ. ಇವುಗಳಲ್ಲದೆ ಎಷ್ಟೋ ಚಿತ್ರಗಳನ್ನು ತಾವಾಗಿಯೆ ಬಂದು ಕೊಂಡುಕೊಳ್ಳುವವರ ಸಂಖೆಯೂ ಕಡಿಮೆಯಾಗಿರಲಿಲ್ಲ. ಕೆಲವು ಚಿತ್ರಗಳನ್ನು ಬೊಂಬಾಯಿಯ ಸಿನಿಮಾ ಕಂಪೆನಿಯವರೂ ತೆಗೆದುಕೊಳ್ಳುತ್ತಿದ್ದರು. ಈ ರೀತಿ ಜೀವನದ ಮಟ್ಟಿಗೆ ಯಾವಾಗಲೂ ತೊಂದರೆಪಡಬೇಕಾಗಿ ಬರುತ್ತಿರಲಿಲ್ಲ.

ಹಣದ ಮೇಲಿನ ಆಸೆಗಾಗಿಯೋ ಅಥವಾ ಇತರರ ದೊಡ್ಡಸ್ಥಿಕೆಯ ಭಯಕ್ಕಾಗಿಯೇ ಆಗಲಿ ಅವನ ಆ ಬಣ್ಣ ಬಳಿಯುವ ಕುಂಚವು ಎಂದಿಗೂ ಒಂದೇ ಸಮನೆ ಕೆಲಸ ಮಾಡುತ್ತಲೇ ಇರಲಿಲ್ಲ. ಅವನಿಗೆ ಯಾವಾಗ ಚಿತ್ರ ಬರೆಯಬೇಕೆಂಬ ಬಯಕೆಯು ಹುಟ್ಟುತ್ತಿತ್ತೊ ಆಗ ಮಾತ್ರ ಕೆಲಸ ಮಾಡುತ್ತಿ

ದ್ದನು. ಇದರ ಮಧ್ಯೆ ಸಹಸ್ರ ರೂಪಾಯಿಗಳ ಆರ್ಡರು ಸಿಕ್ಕಿದರೂ ಕೂಡ ತೂಲಿಕೆಯನ್ನು ಸ್ಪರ್ಶಿಸುತ್ತಲೂ ಇರಲಿಲ್ಲ. ರೂಪಾಯಿಗಳನ್ನು ಹಿಂದಕ್ಕೆ ಕಳಿಸಿ, ಅವನು ಹೀಗೆ ಬರೆಯುತ್ತಿದ್ದನು "ಏನು ಮಾಡಲಿ, ಈಗ ಚಿತ್ರ ಬರೆಯುವ ಪ್ರೇರಣೆಯಾಗುತ್ತಿಲ್ಲ" ಎಂದು.

ನಿಜವಾದ ಕಲಾರಸಿಕರು ಅಶೋಕನ ಈ ತರದ ಜಾಡ್ಯವನ್ನು ತಿಳಿದುಕೊಂಡು, ಅವನನ್ನು ಎಂದೂ ಒತ್ತಾಯ ಮಾಡುತ್ತಿರಲಿಲ್ಲ. ಏಕೆಂದರೆ ಪುನಃ ಪ್ರೇರಣೆಯು ಉಂಟಾದಾಗ ಒಂದು ತಿಂಗಳೊಳಗೆ ಹತ್ತು-ಹನ್ನೆರಡು ಚಿತ್ರಗಳನ್ನು ಚಿತ್ರಿಸಬಹುದೆಂಬ ನಂಬಿಕೆ ಅವರಿಗಿತ್ತು.

ನ್ಯೂ ಕಾಲೊನಿ ಮೊಹಲ್ಲಾದಲ್ಲಿಯ ಒಂದು ದೊಡ್ಡ ಆವರಣವುಳ್ಳ ಮತ್ತು ಹೂದೋಟದಿಂದೊಡಗೂಡಿದ ವಿಶಾಲವಾದ ಭವನದ ಮೇಲ್ಮಹಡಿಯೇ ಅಶೋಕನ ಬಾಡಿಗೆಯ ಮನೆಯಾಗಿದ್ದಿತು. ಮನೆಯು ತುಂಬಾ ವಿಶಾಲವಾಗಿರಲಿಲ್ಲ. ಆದರೆ ಒಬ್ಬನಿಗೆ ಸಾಕಷ್ಟಿತ್ತು. ಎಡಗಡೆಯ ದೊಡ್ಡ ಕೋಣೆಯೇ ಇವನ ಚಿತ್ರ ಕೆಲಸದ ಸ್ಟೂಡಿಯೋ ಆಗಿತ್ತು. ಒಳ್ಳೆಯ ಬೆಳಕಿಗಾಗಿ ಮೇಲ್ಗಡೆ ಕೆಲವು ಕನ್ನಡಿಯ ಹಂಚುಗಳನ್ನು ಹಾಕಲಾಗಿತ್ತು. ಅವನ ಕೆಲಸಕ್ಕೆ ಗಾಳಿಯಿಂದ ಅಡ್ಡಿಯಾಗಬಾರದೆಂದು ಕಿಡಿಕಿಗಳಿಗೆಲ್ಲದಕ್ಕೂ ಕನ್ನಡಿಯ ಬಾಗಿಲುಗಳು. ಗೋಡೆಗಳಿಗೆ ಸುಂದರವಾದ ಅರಿಸಿನ ಬಣ್ಣ ಬಳಿದಿದೆ. ಬಾಗಿಲುಗಳಿಗೆ ನಸು ನೀಲ ಬಣ್ಣದ ಪರದೆಗಳು. ಒಂದು ಮೂಲೆಯಲ್ಲಿ ಎತ್ತರವಾದ ಸ್ಥಾನದಲ್ಲಿ ರವೀಂದ್ರನಾಥ ಠಾಕೂರರ ಅಮೃತಶಿಲೆಯ ಪ್ರತಿಮೆ ಇದೆ. ಮತ್ತೊಂದು ಕೊನೆಯಲ್ಲಿಯ ಉಚ್ಚ ಸ್ಥಾನದಲ್ಲಿ ಮಹಾತ್ಮಾ ಗಾಂಧಿಯವರ ಮೂರ್ತಿ. ಮಧ್ಯದಲ್ಲಿ ಒಂದು ಚಿಕ್ಕ ಮೇಜು. ಅದರ ಮೇಲೆ ಯಾವಾಗಲೂ ಹೂಗೊಂಚಲು ಶೋಭಿಸುತ್ತಲೇ ಇತ್ತು.

ಕೋಣೆಯ ಒಳಗಡೆ ಒಂದು ದಿಕ್ಕಿನಲ್ಲಿಯ ಗೋಡೆಯ ಮೇಲೆ ಕೆನ್‌ವಾಸಿನ ಪರದೆ. ಅದರಲ್ಲಿ ಚಿತ್ರಿಸಿರುವುದೇ ಅರುಣೋದಯದ ವಿಶಾಲವಾದ ಮತ್ತು ಸುಂದರವಾದ ಚಿತ್ರ. ಅದರೆದುರುಗಡೆ ಒಂದು ಎತ್ತರವಾದ ಸ್ಟೂಲು. ಇದರಲ್ಲೇ ಕೆಲವೊಮ್ಮೆ ಚಿತ್ರ ಇಳಿಸುವವರು ಮಂಡಿಸುತ್ತಿದ್ದರು. ಗೋಡೆಗಳ ಮೇಲೆ ಕೆಲವು ಅವನವೇ ಮತ್ತು ಕೆಲವು ಫ್ರೆಂಚ್, ಇಟೆಲಿಯ ಚಿತ್ರಕಾರರ ಅಪ್ರತಿಮ ಚಿತ್ರಗಳಿವೆ. ಅವುಗಳೇ ಇವನ ಮನಸಿಗೆ ಆಹ್ಲಾದ ಮತ್ತು ಸ್ಫೂರ್ತಿಯನ್ನು

ಕೊಡುತ್ತಿದ್ದವು.

ಸ್ಟುಡಿಯೋವಿನ ಒಂದು ಭಾಗದಲ್ಲಿ ಒಂದು ಕುರ್ಚಿ. ಅದರ ಬಲಗಡೆ ಆರಾಮು ಕುರ್ಚಿ. ಎಡಗಡೆ ಒಂದು ತಿರುಗುವ ಕುರ್ಚಿ. ಇದರಲ್ಲಿ ಕುಳಿತು ತಾನು ಚಿತ್ರಿಸಿದ ಚಿತ್ರಗಳನ್ನು ನೋಡುತ್ತ ಬಿದ್ದುಕೊಳ್ಳುವ ವಾಡಿಕೆ ಅಶೋಕ ನಿಗಿತ್ತು. ಇಲ್ಲದಿದ್ದರೆ ಸುಮ್ಮಗೆ ಕಣ್ಣುಮುಚ್ಚಿಕೊಂಡು ಹಾಯಾಗಿ ಕುಳಿತು ಕೊಳ್ಳುವನು. ಅಲ್ಲಿಯೇ ಮೇಲ್ಗಡೆ ವಿದ್ಯುತ್ ಬೀಸಣಿಗೆಯು ಇವನು ಕುಳಿ ತಾಗ ಭರ್‌ಭರ್ ಎಂದು ತಿರುಗುತ್ತಲೇ ಇರುವುದು. ಆ ಸ್ಟುಡಿಯೋ ಕಲೆಯ ಮತ್ತು ಸೌಂದರ್ಯದ ಉದ್ಯಾನವಾಗಿತ್ತೆಂದರೂ ಅತಿಶಯೋಕ್ತಿಯಾಗಲಾರದು. ಅಲ್ಲಿಗೆ ಬಂದೊಡನೆಯೇ ಅಶೋಕನು ತನ್ನ ಕಲ್ಪನೆ ಮತ್ತು ಸ್ಫೂರ್ತಿಗಳ ಭಾವ ನೆಗಳಿಂದ ಪೂರ್ಣರೂಪದಲ್ಲಿ ಲೀನನಾಗುತ್ತಿದ್ದನು.

ಆ ಕೋಣೆಯ ಬಾಗಿಲು ಮುಚ್ಚಲು ಅನುಕೂಲವಾಗುವಂತೆ ಇವನ ಆ ತಿರುಗುವ ಕುರ್ಚಿಯು ಬಾಗಿಲ ಪಕ್ಕದಲ್ಲಿಯೇ ಇತ್ತು. ಆ ಕೋಣೆಯ ಬಾಗಿ ಲನ್ನು ಮುಚ್ಚಿಕೊಂಡಿದ್ದರೆ ಸ್ಟುಡಿಯೊ ಸಂಪೂರ್ಣವಾಗಿ ಏಕಾಂತವಾಗುತ್ತಿತ್ತು. ಈ ಕೋಣೆಯು ಮುಚ್ಚಿಕೊಂಡಿದ್ದಾಗ ಅಬ್ದುಲ್ಲನಾಗಲಿ, ಅಥವಾ ಇತರ ನೌಕ ರರಾಗಲಿ, ಇಲ್ಲವೇ ಹೊರಗಿನವರೇ ಆಗಲಿ ಆ ಬಾಗಿಲಿನ ಸರಪಳಿಯನ್ನು ಆಡಿಸಿ ಸದ್ದು ಮಾಡಬಾರದೆಂಬ ಕಟ್ಟಪ್ಪಣೆ ಇದೆ. ಹಲವು ವೇಳೆ ಅವನ ಗಿರಾಕಿಗಳೂ ಅಂತೆಯೇ ಮಿತ್ರರೂ ಇದರ ಕಾರಣದಿಂದಲೇ ಹೊರಗಿಂದ ಹೊರಗೇ ಹೋಗ ಬೇಕಾಗಿತ್ತು. ಕೆಲವರು ಕೋಪಿಸಿಕೊಂಡು ಹೋಗಿರಲೂ ಬಹುದು. ಆದರೆ ಠಾಕೂರನು ಎಂದೂ ಈ ವಿಚಾರವಾಗಿ ಗಮನವನ್ನೇ ಕೊಟ್ಟಿರಲಿಲ್ಲ. ಏಕೆಂದರೆ ಅವನ ಮನಸ್ಸಿನಲ್ಲಿ ತನ್ನ ಕಲಾಸಾಧನೆಯೇ ಒಮ್ಮೆ ಭಂಗವಾಯಿತೆಂದರೆ ಮತ್ತೆ ತನ್ನಲ್ಲಿ ಉಳಿದದ್ದೆಂದರೆ ಯಾವುದು? ಮತ್ತು ತನ್ನ ಜೀವನದ ಅರ್ಥವಾದರೂ ಏನು! ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡು ಇಷ್ಟು ನಿಯಂತ್ರಿತನಾಗಿ ದ್ದನು.

ಅಶೋಕನು ಬಹಳ ದಯಾರ್ದ್ರ ಹೃದಯನು. ಕರುಣೆ, ಸ್ನೇಹ ಮತ್ತು ಸಹಾನುಭೂತಿಯುಳ್ಳವನಾಗಿ ಏಕಾಂತಪ್ರಿಯನಾಗಿದ್ದನು. ಬಹಳವಾಗಿ ಜನ ರಲ್ಲಿ ಸೇರಿಕೊಂಡಿರುವುದು ಅವನಿಗೆ ಹಿಡಿಸದು. ಅವನ ಸೌಂದರ್ಯದೃಷ್ಟಿಯು ಆಧುನಿಕ ರಮಣೀಯತೆಯನ್ನೋ ಅಥವಾ ವಿಶ್ವದ ಸುಖವಿಲಾಸಗಳನ್ನೋ

ಗಮನಿಸುತ್ತಿರಲಿಲ್ಲ. ಬದಲಾಗಿ ಲೋಕದ ದುಃಖ ಮತ್ತು ದಾರಿದ್ರ್ಯವನ್ನು ಬಹಳವಾದ ಉತ್ಕಂಠೆಯಿಂದ ನೋಡುತ್ತಿದ್ದಿತು. ಸುಖಕ್ಕಾಗಿ ದುಃಖವೂ, ಸತ್ಯಕ್ಕಾಗಿ ಅನಿತ್ಯವೂ, ನ್ಯಾಯಕ್ಕೋಸ್ಕರ ಅನ್ಯಾಯವೂ ಮತ್ತು ಪ್ರೇಮಕ್ಕಾಗಿ ಹೇಯಭಾವವೂ ಪ್ರಪಂಚದಲ್ಲಿ ತುಂಬಿಹೋಗಿದೆ ಎಂಬುದನ್ನು ಅವನು ಅನುಭವದಿಂದ ಕಂಡಿದ್ದನು. ಈ ಘೋರ ವೈಷಮ್ಯವನ್ನು ಹೋಗಲಾಡಿಸಲು ಸಮಾಜದಃಪುನರ್ರಚನೆಯು ಆಗುವುದು ಅವಶ್ಯವೆಂದೂ, ಇದಲ್ಲದೆ ಲೋಕದಲ್ಲಿ ಸುಖ ಶಾಂತಿಸಮೃದ್ಧಿಗಳು ಉಂಟಾಗಲಾರದೆಂಬ ಮತವೇ ಅವನ ಮತವಾಗಿತ್ತು.

ಪ್ರತಿಯೊಬ್ಬ ಕಲಾಕಾರನೂ—ಕವಿಯೇ, ಚಿತ್ರಕಾರನೇ ಅಥವಾ ಶಿಲ್ಪಿಯೇ ಯಾವನೇ ಆಗಿರಲಿ ಅವನು ಇದೇ ರೀತಿಯ ಸ್ವಪ್ನವನ್ನು ಕಾಣುತ್ತಿರುತ್ತಾನೆ. ಕಲಾಕಾರನು ತನ್ನ ಈ ತರದ ಭಾವನೆಯಲ್ಲಿ ಅತ್ಯಂತ ವಿಶ್ವಾಸಿಯೂ ಮತ್ತು ಶ್ರದ್ಧಾವಂತನೂ ಆಗಿರುತ್ತಾನೆ. ಆದ್ದರಿಂದ ಅದೇ ಸ್ವಪ್ನವು ಅವನ ಪ್ರೇರಣೆ ಮತ್ತು ಅನುಭೂತಿಯಾಗಿ ಪರಿಗಣಿತವಾಗಿತ್ತು.

ಶುಭ್ರವಾದ ದೀಪದ ಬೆಳಕಿನಲ್ಲಿ ಕನ್ನಡಿಯ ಮುಂದೆ ನಿಂತುಕೊಂಡು ತನ್ನ ಜುಬ್ಬದ ಗುಂಡಿಯನ್ನು ಹಾಕುತ್ತಿರುವಾಗ ಮಾಯಾದೇವೀ ನೀಲಕಂಠಳ ಮೋಟಾರುಕಾರು ಹೊರಗಿನಿಂದ ಹಾರ್ನ್ ಮಾಡುತ್ತ ಬಂಗಲೆಯ ಆವರಣದೊಳಗೆ ಹೊಕ್ಕಿತು. ಅಬ್ದುಲ್ಲನು ಈ ವಿಚಾರವನ್ನು ತನ್ನ ಧಣಿಗೆ ತಿಳಿಸಿದನು.

ಮೂರು

ಮಾಯಾದೇವಿಯು ಪೋರ್ಟಿಗೆಯ ಮೆಟ್ಟಲುಗಳ ಮೇಲೆ ಬಂದು ಆಶೋಕನನ್ನು ಸ್ವಾಗತಿಸಿದಳು. “ಬನ್ನಿರಿ, ಬನ್ನಿರಿ. ಈಗಲಾದರೂ ನನ್ನ ಮನಸ್ಸಿಗೆ ನೆಮ್ಮದಿಯುಂಟಾಯಿತು. ಇಲ್ಲಿಗೆ ಬರುವ ವರೆಗೆ ತುಂಬಾ ಸಂಶಯವೇ ಆಗುತ್ತಿತ್ತು. ಏಕೆಂದರೆ ಒಂದು ವೇಳೆ ಎಲ್ಲಿಯಾದರೂ ನನ್ನ ಮೋಟಾರು ವ್ಯರ್ಥವಾಗಿ ಹಿಂತಿರುಗಬೇಕಾದೀತೋ ಎಂದು.”

“ಏಕೆ? ಬರುತ್ತೇನೆಂದು ವಾಗ್ದಾನ ಮಾಡಿದ ಮೇಲೆ ಬಂದೇ ಬರು

ವೆನು. ಇಷ್ಟು ನಂಬಿಕೆಯಾದರೂ ಬೇಡವೇ ?"

"ನಂಬಿಕೆ! ನಿಮ್ಮಂತಹ ಕಲಾಕಾರರನ್ನು ನಂಬುವುದಾದರೂ ಹೇಗೆ ? ಒಮ್ಮೊಮ್ಮೆ ಹೇಳಿ ಕಳಿಸುತ್ತೀರಲ್ಲವೇ—'ಈಗ ಪ್ರೇರಣೆಯು ಬೇಡವೆನ್ನುತ್ತದೆ ಎಂದು. ಒಮ್ಮೊಮ್ಮೆ ನಿಮ್ಮ ಜವಾನನಿಂದ ನೀವು ಸ್ಟುಡಿಯೋದೊಳಗೆ ಮಾಯ ವಾಗಿದ್ದೀರೆಂದು ಉತ್ತರವೂ ಬರುತ್ತಿತ್ತು. ಇಂತಹ ಹಲಕೆಲವು ಕಾರಣ ಗಳಿಂದ ಹೇಗೆ ನಿಮ್ಮಲ್ಲಿ ಭರವಸೆಯನ್ನಿಡುವುದು ಸ್ವಲ್ಪ ಹೇಳಿರಿ ನೋಡೋಣ ?"

ಅಶೋಕನು ನಗುತ್ತ ಅಂದನು: "ಹೌದು, ಹೌದು. ಒಮ್ಮೊಮ್ಮೆ ಹಾಗೆ ಆಗಲೂ ಬಹುದು. ಆದರೆ ಅದು ನಟನೆಯಲ್ಲ. ಸತ್ಯವಾಗಿಯೂ ಹಾಗೆಯೇ ಆಗುತ್ತದೆ."

"ಹೇಗೆ ನಂಬುವುದು" ಮಾಯಾದೇವಿಯು ತುಂಟತನದ ಮುಗುಳ್ನಗೆ ಯೊಂದಿಗೆ ಹೇಳಿದಳು.

ಅಶೋಕನು ಮಾಯಾದೇವಿಯಲ್ಲಿ ತನ್ನ ಅತಿಥಿಗಳನ್ನು ಪ್ರಸನ್ನಮಾಡುವ ಕಲೆಯು ಪೂರ್ಣವಾಗಿ ಇದೆ ಎಂಬುದನ್ನು ನೋಡಿ ತಿಳಿದುಕೊಂಡನು. ಮಾಯಾದೇವಿಯೂ ಕೂಡ ಅಶೋಕನಿಗೆ ಅವಳಲ್ಲಿಗೆ ಬರುವುದಕ್ಕೆ ಸಂಕೋ ಚವು ಹಿಂಸಿಸುತ್ತಿರುವುದೆಂಬ ವಿಚಾರ ತಿಳಿದಿದೆ. ಆದಕ್ಕಾಗಿ ಅವನನ್ನು ಸಂಪೂರ್ಣ ಮನವೊಲಿಸಲು ಅವಳು ತುಂಬಾ ಪ್ರಯತ್ನಪಡುತ್ತಿದ್ದಳು.

ಪಟ್ಟಣದ ಸಾಮಾಜಿಕ ಜೀವನದಲ್ಲಿ ಮಾಯಾದೇವಿಯು ವಿಶೇಷವಾದ ಸ್ಥಾನವನ್ನೇ ಇಟ್ಟುಕೊಂಡಿದ್ದಳು. ಅವಳು ಧನಿಕನಾದ ತನ್ನ ತಂದೆಯ ಒಬ್ಬಳೇ ಮಗಳಾಗಿದ್ದಳು. ಅವಳ ವಿವಾಹವು ಅವಳಿಗಿಂತಲೂ ಹೆಚ್ಚಿನ ಧನಿಕ ನಾದ ಜಮೀನದಾರನೊಡನೆ ಆಗಿತ್ತು. ಆದರೆ ಎರಡೇ ವರ್ಷಗಳಲ್ಲಿ ಅವಳ ಪತಿಯು ಅವಳನ್ನು ನಿಸ್ಸಂತಾನಳನ್ನಾಗಿ ಬಿಟ್ಟು, ಲಕ್ಷ್ಮಿಯ ಸುಖಾಸನದಲ್ಲಿ ಅವಳೊಬ್ಬಳನ್ನೇ ಕೂರಿಸಿ ಹೊರಟು ಹೋದನು. ಅವಳಿಗೆ ಸಂಪತ್ತು ಎರಡೂ ಕಡೆಯಿಂದ ಸಿಕ್ಕಿತ್ತು. ಜಮೀನುಗಳಲ್ಲದೆ ನಾಗಪುರದಲ್ಲಿಯೇ ಅವಳ ಆರು ಬಂಗಲೆಗಳು ಮತ್ತು ಐದು ದೊಡ್ಡ ದೊಡ್ಡ ಕಟ್ಟಡಗಳೂ ಇದ್ದವು. ಇವುಗ ಳಿಂದ ಅವಳಿಗೆ ಹೇರಳ ಬಾಡಿಗೆಯೂ ಬರುತ್ತಿತ್ತು. ಬಟ್ಟೆಯ ಮಿಲ್ಲುಗಳಲ್ಲಿ ಕಲ್ಲಿದ್ದಲು ಗಣಿಗಳಲ್ಲಿ ಹಾಗೆಯೇ ರೈಲ್ವೆ ಕಂಪನಿಗಳಲ್ಲಿ ಇತ್ಯಾದಿಗಳೆಲ್ಲವುಗಳ ಲ್ಲಿಯೂ ಅವಳ ಶೇರ್ಸ್ (ಪಾಲು) ಗಳಿದ್ದವು. ಇದರಿಂದಾಗಿ ಅವಳಲ್ಲಿ ಯಾವಾ

ಗಲೂ ಧನಕ್ಕೆ ಯಾವ ಕೊರತೆಯೂ ಇರಲಿಲ್ಲ. ಇವುಗಳೆಲ್ಲವನ್ನು ಅವಳೊಬ್ಬಳೇ ಅನುಭವಿಸಬೇಕಾಗಿತ್ತು. ಜನರು ಒಳಗಿಂದೊಳಗೇ 'ಅವರಿಬ್ಬರಲ್ಲಿ ಜೊತೆಯಾಗಿರುವ ಭಾಗ್ಯವಿರಲಿಲ್ಲ' ಎಂದುಕೊಳ್ಳುತ್ತಿದ್ದರು.

ಅವಳ ರೂಪ ಮತ್ತು ಇದಕ್ಕಿಂತಲೂ ಅಧಿಕವಾಗಿ ಅವಳಲ್ಲಿರುವ ಧನವನ್ನು ನೋಡಿ ಕೆಲವು ಸಭ್ಯ ಯುವಕರು ಪರಂಪರೆಯಿಂದ ಬಂದ ರೂಢಿಗಳಿಗೆ ವಿರೋಧವಾದ ಪ್ರಸಂಗವೆಬ್ಬಿಸಿ ಸಮಾಜದ ಮುಂದೆ ವಿಧವಾ ವಿವಾಹವನ್ನು ಆದರ್ಶವಾಗಿಟ್ಟುಕೊಳ್ಳುವ ಪ್ರಸ್ತಾಪ ಮಾಡಿಕೊಂಡು, ತಮ್ಮ ಈ ಧ್ಯೇಯ ಪ್ರತಿಪಾದನೆಗೋಸ್ಕರ ಸಮಾಜದ ಅನ್ಯಾಯಗಳ ಯಾತನೆಯನ್ನು ಸಹಿಸುವದಕ್ಕೆ ಸಿದ್ಧರಾಗಿದ್ದೇವೆ ಎಂದೂ ತಿಳಿಸಿದರು. ಆದರೆ ಮಾಯಾದೇವಿಯು ಈ ಆದರ್ಶವಾದೀ ಯುವಕರ ಮಾತಿಗೆ ಬೆಲೆ ಕೊಡಲಿಲ್ಲ. ಅವಳ ಹಿತವು ಯಾವುದರಲ್ಲಿದೆ ಎಂಬುದು ಅವಳ ತೀಕ್ಷ್ಣ ಬುದ್ಧಿ, ವ್ಯವಹಾರಜ್ಞಾನ ಮತ್ತು ಅಂತರ್ಮಾನದ ಸಂಪೂರ್ಣ ತಿಳುವಳಿಕೆಗಳ ಕಾರಣದಿಂದ ಸ್ವತಃ ಚೆನ್ನಾಗಿ ತಿಳಿದುಕೊಂಡಿದ್ದಳು. ಹಿತಕ್ಕಿಂತಲೂ ಸುಖವು ಯಾವುದರಲ್ಲಿದೆ ಎಂಬುದನ್ನು ಅರಿತು ನಡೆಯುತ್ತಿದ್ದಳು.

ಮಾಯಾದೇವಿಯ ಜೀವನದಲ್ಲಿ ಭೋಗವಿಲಾಸ ಮತ್ತು ಆನಂದ ಇವುಗಳಲ್ಲದೆ ಬೇರೆ ಯಾವುದೋ ಒಂದು ಪ್ರೇರಣೆ ಇದ್ದಿತು ಎಂಬ ವಿಷಯವನ್ನು ಯಾರೂ ತಿಳಿಯಲಿಲ್ಲ. ಸಮಾಜದಲ್ಲಿ ಕೂಡ ಇವಳಿಗೆ ಘನವಾದ ಸ್ಥಾನವೇ ದೊರಕಿತ್ತು. ಇದಕ್ಕೆಂದೇ ಮಹಿಳಾ ಮಂಡಲ, ಸೇವಾ ಸಮಿತಿ, ವಿಮೆನ್ಸ್ ಕ್ಲಬ್, ಫ್ರೆಂಡ್ಸ್ ಲಾಡ್ಜ್, ಆಸ್ಪತ್ರೆ ಕಮಿಟಿ. ಇನ್ನೂ ಇಂತಹ ಅನೇಕ ಸಂಸ್ಥೆಗಳ ಸದಸ್ಯೆಯಾಗಿದ್ದಳು. ಆದರೆ ಇವೆಲ್ಲವುಗಳಿಗೂ ಚಂದಾ ಹಣವನ್ನು ಕೊಡುವ ಕೆಲಸ ಒಂದಲ್ಲದೆ ಬೇರೆ ಯಾವ ಕೆಲಸವೂ ಇರಲಿಲ್ಲ. ಕೊಡಲಿಕ್ಕೆ ಅವಳಲ್ಲಿ ಹಣಕ್ಕೇನೂ ಕೊರತೆಯಿರಲಿಲ್ಲ. ಚಂದಾ ಹಣದ ಆಸೆಗಾಗಿಯೂ ಅಲ್ಲದೆ ಇತರ ಸಹಾಯತೆಗಾಗಿಯೂ ಹಲಕೆಲವು ಸಂಸ್ಥೆಗಳು ಅವಳಿಗೆ ತಮ್ಮ ಸಭೆಗಳಲ್ಲಿ ಅಧ್ಯಕ್ಷ ಸ್ಥಾನವನ್ನೋ ಅಥವಾ ಇನ್ನಿತರ ಉಚ್ಚ ಸ್ಥಾನಗಳನ್ನೋ ಕೊಟ್ಟು ಆಮಂತ್ರಿಸುತ್ತಿದ್ದವು. ಮಾಯಾದೇವಿಗೆ ಒಳ್ಳೆಯ ಹೆಸರು ಮತ್ತು ಜನಾದರಣೆ ಬೇಕಾಗಿತ್ತು. ಅಂತೆಯೇ ಸಂಸ್ಥೆಗಳಿಗೆ ಅವಳಿಂದ ಧನಸಹಾಯ ದೊರೆಯುತ್ತಿತ್ತು. ಇದೇ ಕಾರಣದಿಂದ ಈ ವ್ಯವಹಾರವು ಒಳ್ಳೇ ರೀತಿಯಿಂದ

ನಡೆಯುತ್ತಿತ್ತು. ಅವಳು ಬೇರೆ ಬೇರೆ ಕ್ಲಬ್ಬುಗಳ ಸದಸ್ಯೆಯಾಗಿದ್ದಳು. ಅವುಗಳಲ್ಲಿಯ ಸಂದರ್ಶಕರಿಗೆ ಎಂದರೆ ಹೆಚ್ಚಾಗಿ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಅಥವಾ ಇನ್ನಿತರ ಮೇಲಧಿಕಾರಿಗಳಿಗೆ ತನ್ನಲ್ಲಿಯ ಭೋಜನಕ್ಕೂ, ಪಾರ್ಟಿಗೂ ಕರೆಯುತ್ತಿದ್ದಳು. ಈ ಎಲ್ಲಾ ಕಾರಭಾರುಗಳ ಕಾರಣದಿಂದ ಒಮ್ಮೊಮ್ಮೆ ಅವಳ ‘ ಫೋಟೊ ’ ಕೂಡ ದಿನದ ವರ್ತಮಾನ ಪತ್ರಿಕೆಗಳಲ್ಲಿ ಅಚ್ಚಾಗುತ್ತಿತ್ತು.

ಸಿವಿಲ್ ಲೈನಿನಲ್ಲಿ ವಿಶಾಲವೂ ಸುಂದರವೂ ಆದ ಬಂಗಲೆ. ಉತ್ತಮ ಮರದಿಂದ ಮಾಡಲ್ಪಟ್ಟ ಫರ್ನಿಚರುಗಳು, ಎಚ್. ಎಮ್. ವಿ. ರೇಡಿಯೊ, ಉತ್ತಮ ಚಿತ್ರಗಳು, ಉನ್ನತ ಶಿಲ್ಪ ಮೂರ್ತಿಗಳು, ಸುಂದರವಾದ ಪಾನೀಯದ ಪಾತ್ರೆಗಳ ಸಂಗ್ರಹ, ಎರಡು ಒಳ್ಳೆಯ ಹೊಸ ಮಾದರಿಯ ಕಾರುಗಳು, ಧನ ಸಂಪತ್ತಿನ ಪ್ರಚುರತೆ, ಸೌಂದರ್ಯ ಆಕರ್ಷಣೆಗಳಿಂದ ಕೂಡಿದ ಯೌವ್ವನದ ವಯ್ಯಾರ, ಸಮಾಜವನ್ನು ಹೊಕ್ಕು ಅಲ್ಲಿ ನಡೆಸುವ ವಾರ್ತಾಲಾಪದ ವೈಖರಿ, ಮನೆಗೆ ಮರ್ಯಾದೆವಂತರು ಬಂದರೆ ಅವರಲ್ಲಿ ಒಳ್ಳೇ ರೀತಿಯ ಆಚರಣೆ ಇಷ್ಟೆಲ್ಲ ಆ ಬಂಗಲೆಯಲ್ಲಿ ಒಂದಾಗಿ ಸೇರಿದ್ದವು. ಇವುಗಳ ವಿಷಯವಾಗಿ ಮನೆಯಲ್ಲಾಗಲೀ ಅಥವಾ ಹೊರಗಡೆಯಲ್ಲಾಗಲಿ ಯಾರೂ ವಿರೋಧವಾಗಿ ಮಾತೆತ್ತುತ್ತಿರಲಿಲ್ಲ. ಈ ನಡತೆಯು ಒಬ್ಬ ಬಡ ಹೆಂಗಸಿನ ಮೇಲೆ ಲೋಕಾಪವಾದದ ಕಟು ಶಬ್ದಗಳ ಮತ್ತು ಸಮಾಜದ ಕ್ರೂರ ದೃಷ್ಟಿಯು ಪರಿಣಾಮವನ್ನುಂಟು ಮಾಡುತ್ತದೆ. ಆಗ ಆಕೆಗೆ ಬಹುಶಃ ಆತ್ಮಹತ್ಯೆಯ ವಿನಾ ಬೇರೆ ಯಾವ ದಾರಿಯೂ ಹೊಳೆಯದೆ ಇರಬಹುದು. ಇದೇ ರೀತಿಯ ಆಚರಣೆಯು ಧನ ಮತ್ತು ವೈಭವಗಳ ಕಾರಣದಿಂದ ಮಾಯಾದೇವಿಯ ಜೀವನದಲ್ಲಿ ಸುರುಚಿ ಮತ್ತು ಸುಸಂಸ್ಕೃತಿಯ ಹೆಸರಲ್ಲಿ ಪ್ರಶಂಸೆಯನ್ನೂ ಮತ್ತು ಗುಣಗಾನವನ್ನೂ ಬಹಳವಾಗಿ ಕೇಳಿಕೊಳ್ಳುತ್ತಿತ್ತು.

ಅಶೋಕ ಠಾಕೂರನು ಮಾಯಾದೇವಿಯ ನಡೆನುಡಿಗಳನ್ನು ಕೇಳಿದ್ದಕ್ಕಿಂತ ಹೆಚ್ಚಿನ ಉಚ್ಚ ಸಂಗತಿಗಳು ಅವಳಲ್ಲಿರಲಿಲ್ಲವೆನ್ನಬಹುದು. ಅವನು ತನ್ನ ಕಲೆಯ ಚಿಕ್ಕದಾದ ಕ್ಷೇತ್ರದಲ್ಲಿಯೇ ಮಗ್ನನಾಗಿದ್ದನು. ಮತ್ತು ಸಾಮಾಜಿಕ ಆಚಾರ ವ್ಯವಹಾರಗಳಲ್ಲಿ ಅವನ ರುಚಿಯು ಇರಲಿಲ್ಲ. ಇದಕ್ಕೆ ಸರಿಯಾಗಿ ಅವನಲ್ಲಿ ಸಮಯವೂ ಇರಲಿಲ್ಲ. ಇದೇ ಕಾರಣದಿಂದಲೇ ಮಾಯಾದೇವಿಯೊಡನೆ ಇವನಿಗೆ ಸಂಭಾಷಣಾ ಸಮ್ಮಂಧ ಬೆಳೆಸಲು ವೇಳೆ ದೊರಕಲಿಲ್ಲ.

ಈಗ ಇದ್ದುದನ್ನು ಇನ್ನೂ ಹೆಚ್ಚಿಸಲಿಕ್ಕೆ ಕೂಡ ಅವನ ಇಚ್ಛೆ ಇರಲಿಲ್ಲ. ಅಶಿಷ್ಟ ಮತ್ತು ಅಸಭ್ಯತೆಯ ಬಲೆಯಿಂದ ತನ್ನನ್ನು ತಾನು ಉಳಿಸಿಕೊಂಡು ಅವನು ಈ ನವೀನ ಪರಿಚಯದ ಜಾಲದೊಳಗಿಂದ ಓಡಿ ಹೊರಗೆ ಹೋಗಲು ಹವಣಿಸುತ್ತಿದ್ದನು. ಅವನ ಮತ್ತು ಈ ಆಮೋದಪ್ರಿಯ ನಾರಿಯ ಜೀವನದಲ್ಲಿ ಯಾವ ತರದ ಸಮನ್ವಯವೂ ಇಲ್ಲವೆಂದು ಯಾವುದೋ ಒಂದು ಅಜ್ಞಾತ ಅಂತಃಕರಣ ಶಕ್ತಿಯು ಇವನಿಗೆ ತಿಳಿಸುತ್ತಿತ್ತು. ಇದಕ್ಕಾಗಿ ಇವಳೊಂದಿಗೆ ಸಖ್ಯ ಬೆಳೆಸುವದಕ್ಕಾಗಿ ಯಾವ ಹೊಸ ಪ್ರಯತ್ನವನ್ನೂ ಅವನು ಮಾಡಿರಲಿಲ್ಲ. ತಾನು ಚಿತ್ರಕಾರನೆಂದೂ, ತನ್ನ ಚಿತ್ರಗಳನ್ನು ಕೊಂಡುಕೊಳ್ಳುವ ನಿಶ್ಚಿತ ಸ್ತ್ರೀ ಅವಳೆಂದೂ ಮಾತ್ರವೇ ಅವನು ನೆನೆಸಿಕೊಂಡಿದ್ದನು. ಅಶೋಕನು ವ್ಯಾಪಾರಿ ಮತ್ತು ಮಾಯಾದೇವಿಯು ಗ್ರಾಹಕಳು—ಎಂದಿಷ್ಟೇ ಅಶೋಕನ ಎಣಿಕೆ.

ಮಾಯಾದೇವಿಯ ಮನಸ್ಸಿನಲ್ಲಿ ಇದಕ್ಕೆ ತೀರ ವ್ಯತಿರಿಕ್ತ ವಿಚಾರಗಳು ಎದ್ದೇಳುತ್ತಲಿದ್ದವು. ಅವಳ ಕಣ್ಣುಗಳಲ್ಲಿ ಅಶೋಕ ಠಾಕೂರನು ತುಂಬಿಕೊಂಡಿದ್ದನು. ಅಲ್ಲದೆ ಯಾವ ವಿಧದಲ್ಲಾದರೂ ಇವನನ್ನು ತನ್ನವನನ್ನಾಗಿ ಮಾಡಿಕೊಳ್ಳಬೇಕೆಂಬ ಹೆಬ್ಬಯಕೆಯು ಇವಳಲ್ಲಿ ತುಂಬಿತ್ತು. ಅವಳ ಮನಸ್ಸೂ ಇಂತಹ ಆಗ್ರಹ ಸ್ವಭಾವದ್ದಿಂದರೆ—ಯಾವ ವಸ್ತುವನ್ನು ಬಯಸುತ್ತಿದ್ದಳೊ—ಅದು ಸುಂದರ ಚಿತ್ರವಾಗಿರಲಿ, ಮೋಟಾರು ಅಥವಾ ಒಳ್ಳೆಯ ಸೀರೆಯಾಗಿರಲಿ, ಅಲ್ಲಿ ಯಾವನಾದನೊಬ್ಬ ಪ್ರಿಯಪುರುಷನ ಪ್ರೇಮವಾಗಿರಲಿ—ಅದನ್ನು ಪ್ರಾಪ್ತ ಮಾಡಿಕೊಳ್ಳಲು ಶಕ್ತಿಪೂರ್ಣವಾಗಿ ಪ್ರಯತ್ನಿಸಿ ಅದನ್ನು ಹೊಂದದೆ ಎಂದಿಗೂ ಬಿಡುತ್ತಿರಲಿಲ್ಲ. ಇಷ್ಟರ ವರೆಗೆ ಎಂದೂ ಅವಳು ಯಾವುದರಲ್ಲಿಯೂ ವಿಫಲವಾಗಿರಲಿಲ್ಲ. ಈಗ ಅಶೋಕನನ್ನು ಹೊಂದಲು ಅವಳಿಗೆ ತನ್ನ ಕಾರ್ಯಕಲಾಪಗಳ ಬದಲಾವಣೆಯನ್ನು ಮಾಡಬೇಕಾಗಿದೆ. ಯಾಕೆಂದರೆ ಅವನು ಇತರರಿಗಿಂತ ಭಿನ್ನವಾಗಿ ಕಾಣುತ್ತಾನೆ. ಪತಂಗಗಳಂತೆ ಅವನು ಅವಳ ರೂಪಜ್ವಾಲೆಯ ಕಡೆಗೆ ಹಾರಿಬೀಳಲು ಆಶಿಸುತ್ತಿರಲಿಲ್ಲ. ಬದಲಾಗಿ ಬಹುಶಃ ಅವಳ ಮೇಲೆ ಸ್ವಲ್ಪ ಹೇಯಭಾವನೆಯನ್ನೇ ತೋರುತ್ತಿದ್ದನು. ಆದ್ದರಿಂದ ಅವನೊಡನೆ ವ್ಯವಹರಿಸುವಾಗ ತುಸು ಸಮಾಧಾನವಿರಬೇಕಾಗಬಹುದು. ಅದಕ್ಕೆ ಕಾರಣ ವಿಷ್ಟೆ! ಅಂತವರು ಸಿಗುವುದೇ ವಿರಳ. ಆದ್ದರಿಂದ ಅಶೋಕನು ಇವಳಿಗೆ ಅಷ್ಟೇ ಬೇಕಾದವನೂ ಆಗಿದ್ದಾನೆ.

ಇಬ್ಬರೂ ಡ್ರಾಯಿಂಗ್ ರೂಮಿನ ಒರಗುವ ಬೆಂಚಿನ ಮೇಲೆ ಹೋಗಿ ಕುಳಿತುಕೊಂಡರು. ಆಗ ಅಶೋಕನು ಹೀಗೆಂದು ಪ್ರಶ್ನಿಸಿದನು— "ಇತರ ಆಮಂತ್ರಿತರೆಲ್ಲ ಇನ್ನೂ ಬರಲಿಲ್ಲವೇನು?"

"ಇಲ್ಲ ಬರುವುದಿಲ್ಲ. ಅವರೆಲ್ಲರೂ ಬಂದರೆ ನಾನು ನಿಮ್ಮ ಕಡೆಗೆ ಗಮನ ವನ್ನು ಕೊಡುವುದು ಹೇಗೆ ಸಾಧ್ಯವಾದೀತು? ನಿಮ್ಮ ಕಾರಣದಿಂದಲೇ ನಾನು ಈ ದಿನದ ಸಂಜೆಗೆ ಬೇರೆ ಯಾವ ಕಾರ್ಯಕ್ರಮವನ್ನೂ ಇಟ್ಟು ಕೊಂಡಿಲ್ಲ."

"ಧನ್ಯವಾದಗಳು. ಆದರೆ ಕೇವಲ ನನಗಾಗಿ ನೀವು ಹೀಗೆಲ್ಲ ವ್ಯವಸ್ಥೆ ಮಾಡಿದುದಕ್ಕೆ ಖೇದವೆನಿಸುತ್ತದೆ."

"ನನಗೇನೂ ಖೇದವೂ, ವ್ಯಥೆಯೂ ಇಲ್ಲ. ಬದಲಾಗಿ ತುಂಬಾ ಸಂತೋಷವೇ ಆಗಿದೆ. ಇದೆಲ್ಲವನ್ನೂ ನಾನು ತಮಗಾಗಿಯೇ ಮಾಡಲಿಲ್ಲ. ನನಗಾಗಿಯೇ ಮಾಡಿದ್ದೇನೆ."

ಅಶೋಕನಿಗೆ ಇದನ್ನು ಕೇಳಿ ಸಂತೋಷವೇ ಆಯಿತು. ಆದರೆ ಈ ಶಬ್ದಗಳ ಒಳಗಡೆ ಯಾವ ಸೂಕ್ಷ್ಮ ಅರ್ಥವು ಧ್ವನಿತವಾಗುತ್ತಿತ್ತೊ ಅದು ಅವ ನಿಗೆ ಹಿಡಿಸಲಿಲ್ಲ. ಇವುಗಳೆಲ್ಲವುಗಳ ಹಿಂದೆ ಮಾಯಾದೇವಿಯ ಅತ್ಯಂತ ಕೃತ್ರಿಮ ಸಿಂಗಾರವೂ ತುಂಬಿಕೊಂಡಿತ್ತು. ಅದನ್ನು ಈ ದಿನ ಅವನು ಅಳೆ ದನು. ಅಮೂಲ್ಯ ಭೂಷಣಗಳಿಂದಲೂ ಮತ್ತು ಒಳ್ಳೇ ತರದ ಉಡಿಗೆಗಳಿಂ ದಲೂ ಅವಳು ಶೋಭಿಸುತ್ತಿದ್ದುದಲ್ಲದೆ ಅವಳ ಲಿಪ್‌ಸ್ಟಿಕ್ಕಿನ ದಪ್ಪವಾದ ಬಣ್ಣ, ಕಣ್ಣಿಗೆ ಹಚ್ಚಿದ ಕಪ್ಪಗಿನ ಕಾಡಿಗೆಯ ಬಣ್ಣ, ಮುಖದ ಮೇಲಿನ ಪೌಡರಿನ ವರ್ಣ, ಕೇಶ ಕಲಾಪದ ಅಭಿನಯ ಯೋಜನೆ, ಸುಗಂಧಿತ ಎಣ್ಣೆ ಮತ್ತು ಆ ಮೋಹಕ ಪರಿಮಳ ಈ ಎಲ್ಲಾ ಉಪಕರಣಗಳಿಂದ ಮಾಯಾದೇವಿಯು ತನ್ನ ಕೋಮಲವಾದ ಶರೀರಕ್ಕೆ ಅತ್ಯಧಿಕ ಉನ್ಮಾದಕ ವಾತಾವರಣವನ್ನುಂಟು ಮಾಡಲು ಸರ್ವ ರೀತಿಯಿಂದಲೂ ಪ್ರಯತ್ನಿಸುತ್ತಿದ್ದಳು. ಆದರೆ ಈ ಎಲ್ಲ ಅವತಾರಗಳು ಇತರರನ್ನು ಮೋಹಗೊಳಿಸುತ್ತಿದ್ದರೂ ಅಶೋಕನಿಗೆ ಇವುಗಳೆಲ್ಲ ರುಚಿಸುತ್ತಿರಲಿಲ್ಲ. ಅವನ ಮನಸ್ಸಿನಲ್ಲಿ ಉಂಟಾದ ಪರಿಣಾಮವು ಅವನಿಗೇ ತಿಳಿಯುತ್ತಿರಲಿಲ್ಲ.

ಅವನೇನೂ ಮನಸ್ಸನ್ನು ಗೆದ್ದ ಪುರುಷೋತ್ತಮನಲ್ಲವೆಂಬುದು ನಿಜವೇ.

ಈ ಕೃತಿಮತೆಗಳಲ್ಲಿ ಅವನಿಗೆ ಇಚ್ಛೆ ಇರಲಿಲ್ಲ. ಆದರೂ ಅವನು ತನ್ನ ಹೃದಯದ ಭಾವನೆಯನ್ನು ಸ್ವಲ್ಪವೂ ತೋರಗೊಡದೆ ತನ್ನ ಮನಸ್ಸನ್ನು ಪ್ರಫುಲ್ಲವಾಗಿಯೇ ಇರಿಸಿಕೊಂಡಿದ್ದನು.

ಹೊಳಪಿನಿಂದ ಹೊಳೆಯುವ ಗುಂಡಿಗಳುಳ್ಳ ಬಿಳೇ ವಸ್ತ್ರಗಳನ್ನು ಧರಿಸಿದ್ದ ಆಡಿಗೆಯವನು ಅಲ್ಲಿಯ ಪರದೆಯನ್ನು ಸರಿಸುತ್ತ ಬಹಳ ಅವಸರದೊಂದಿಗೆ ಸೂಚಿಸಿದನು "ಊಟ ತಯಾರಾಗಿದೆ" ಎಂದು.

ನಾಲ್ಕು

ಡಿನ್ನರ್ ಟೇಬಲಿನಲ್ಲಿ ಕುಳಿತುಕೊಳ್ಳುವ ಮೊದಲು ಮಾಯಾದೇವಿಯು ಎದುರಿನ ಗೋಡೆಯ ಮೇಲೆ ತನ್ನ ಕೋಮಲವಾದ ಬೆರಳುಗಳನ್ನು ತೋರಿಸುತ್ತ ಹೇಳಿದಳು "ಅದನ್ನು ನೋಡಿದ್ದೀರಾ, ಏನದು ?"

ಅಶೋಕನು ಅತ್ತಕಡೆ ನೋಡುವಾಗ—ಅದು ತಾನೇ ಬರೆದ ಚಿತ್ರ—ಯುಗ್ಮಪ್ರಣಯೀ ಎಂಬುದು ತಿಳಿಯಿತು. ಅದನ್ನು ಮಾಯಾದೇವಿಯು ಕೊಂಡು ತಂದಿದ್ದಳು.

ಅಶೋಕನು ಕೇವಲ ಮುಗುಳ್ನಗೆಯನ್ನಷ್ಟೇ ನಕ್ಕನು. ಬೇರೇನೂ ಮಾತೆತ್ತಲಿಲ್ಲ.

"ಈ ಸ್ಥಳದಲ್ಲಿ ಮೊದಲು ಯಾವ ಚಿತ್ರವಿತ್ತೆಂದು ತಮಗೆ ಗೊತ್ತಿದೆಯೇ? ರಾಫಏಲನ ಹೆಸರಾಂತ ಚಿತ್ರ 'ಟ್ರಾನ್ಸ್‌ಫಿರ್ ರೇಷನ್'. ಅದನ್ನು ಅಲ್ಲಿಂದ ತೆಗೆದು ತಮ್ಮ ಚಿತ್ರವನ್ನು ಅಲ್ಲಿ ತೂಗುಹಾಕಿದ್ದೇನೆ" ಎಂದು ಮಾಯಾದೇವಿಯು ಒಳ್ಳೆಯ ಅಭಿಮಾನದೊಂದಿಗೆ ಹೇಳಿದಳು.

"ಈ ರೀತಿಯಾಗಿ ತಾವು ಜಗತ್ಪ್ರಸಿದ್ಧ ಕಲಾಕಾರರುಗಳ ಅಪಮಾನ ಏಕೆ ಮಾಡುತ್ತೀರಿ ?" ಅಶೋಕನು ಕೊಂಚ ಕೋಪದೊಂದಿಗೆ ಕೇಳಿದನು.

"ಇಲ್ಲ, ಅಪಮಾನವಲ್ಲ. ನಾನು ತತ್ಕಾಲೀನ ಕಲಾಕಾರರಿಗೆ ಆದರವನ್ನೀಯುತ್ತೇನೆ." ಮಾಯಾದೇವಿಯು ಅವಿಚಲಿತಳಾಗಿ ತನ್ನ ಮೋಹಕ ಕಟಾಕ್ಷ

ವನ್ನು ಅಶೋಕನೆಡೆಗೆ ಬೀರುತ್ತ ಉತ್ತರವಿತ್ತಳು.

ಊಟದ ಟೇಬಲಿನ ಮುಂದೆ ಕುಳಿತ ನಿಮಿಷ ಮಾತ್ರದಲ್ಲಿ ಅಶೋಕನು ಟೇಬಲಿನ ಮಧ್ಯದಲ್ಲಿದ್ದ ಗ್ರೀಸಿನ ದೇವೀ ವೀನಸಳ ಒಂದು ನಗ್ನ ಮೂರ್ತಿಯನ್ನು ಕಂಡನು. ಈ ಮೂರ್ತಿಯ ಕೈಯಲ್ಲಿಯೇ ಊದುಬತ್ತಿ ಇಡಲು ತಕ್ಕ ವ್ಯವಸ್ಥೆ ಇತ್ತು. ಮೂರ್ತಿಯು ಮೃದುವಾದ ಅಮೃತಶಿಲೆಯಿಂದ ಕೆತ್ತಲ್ಪಟ್ಟಿತ್ತು. ಅದರ ನಾಲ್ಕು ದಿಕ್ಕುಗಳಲ್ಲಿಯೂ ಚಿಕ್ಕ ಚಿಕ್ಕ ಹೂಗೊಂಚಲುಗಳನ್ನು ಇಟ್ಟಿರುವುದರಿಂದ ಆ ದೃಶ್ಯವು ದೇವಿಯು ನಂದನವನದಲ್ಲಿ ತನ್ನ ವಿಹಾರಕ್ಕಾಗಿ ಬಂದು ಅಲ್ಲಿ ಕುಳಿತು ಹಾಯಾಗಿ ವಾಯುಸೇವನೆ ಮಾಡುತ್ತಿರುವಂತೆ ಭಾಸವಾಗುತ್ತಿತ್ತು. ಅಶೋಕನ ಮನಸ್ಸು ಇದರಿಂದ ಆಕರ್ಷಿತವಾಗಿದೆ ಎಂಬುದು ಮಾಯಾದೇವಿಗೆ ತಿಳಿಯಿತು. ಅವಳಿಗೆ ಮನಸ್ಸಿನಲ್ಲೇ ಸಮಾಧಾನವೂ ಉಂಟಾಯಿತು.

ಊಟವು ಆರಂಭವಾಗುತ್ತಲೇ ಮಾಯಾದೇವಿಯು ಹೇಳಿದಳು: "ನಿಮ್ಮಲ್ಲಿರುವಂತಹ ಅನುಪಮ ಕಲೆಯನ್ನು ಈ ದೇಶದಲ್ಲಿ ಎಲ್ಲಿಯೂ ನೋಡಲಿಲ್ಲ. ನಾನು ಬೇಕಷ್ಟು ಊರುಗಳನ್ನು ಸುತ್ತಿದ್ದೇನೆ. ಅಲ್ಲದೆ ಹಲಕೆಲವು ಚಿತ್ರಕಾರರ ಚಿತ್ರಗಳನ್ನೂ ನೋಡಿದ್ದೇನೆ. ಆದರೆ ನಿಮ್ಮ ಸರಿಸಮತ್ವ ನಿಲ್ಲುವವರು ಯಾರೂ ಇಲ್ಲ. ತಮ್ಮ ಕಲೆಯು ನನಗೆ ತುಂಬಾ ಪ್ರಿಯವಾಗಿದೆ."

ಈ ಕೊನೆಯ ವಾಕ್ಯವನ್ನು ಅವಳು ಒಂದು ತರದ ಮೋಹಕವಾದ ಆವಿರ್ಭಾವದೊಂದಿಗೆ ಹೇಳಿದ್ದಳು. ಅದು ಅಶೋಕನಿಗೆ ಉಭಯ ಸಂಕಟವನ್ನುಂಟು ಮಾಡದೆ ಇರಲಿಲ್ಲ. ಏಕೆಂದರೆ ಅವಳಿಗೆ ಕಲೆಯು ಪ್ರಿಯವಾಗಿದೆಯೊ ಅಥವಾ ಕಲಾಕಾರನೊ ಎಂಬ ವಿಷಯವಾಗಿ ಹೊಗಳುವಿಕೆಗಳನ್ನೆಲ್ಲಾ ಕೇಳುತ್ತಿದ್ದನೇ ಹೊರತು ಅವಳ ಯಾವ ತರದ ಮಾತುಗಳನ್ನು ಕೇಳುತ್ತ ತುಂಬಾ ಹಿಗ್ಗುವುದಾಗಲಿ, ಅಥವಾ ಇತರ ಮಾತುಗಳಿಂದ ವ್ಯಥಿತನಾಗುವಂತಹ ಸಂದರ್ಭವು ಅವನಿಗೆ ಒದಗಲಿಲ್ಲ. ಇಂತಹ ಪ್ರಶಂಸೆಗಳು ಈಗಿನ ಕಾಲದ ಸಮಾಜದಲ್ಲಿ ಒಂದು ಆದರದ ಮಾತೇ ಆಗಿಹೋಗಿದೆ. ಅಲ್ಲದೆ ಇದಕ್ಕೆ ನಿಜವಾದ ಬೆಲೆಯೇ ಇರಲಿಲ್ಲ. ಅವನು ಯಾವ ಮಾತನ್ನೂ ಆಡದೆ ತಲೆತಗ್ಗಿಸಿ ಕೇವಲ ಅವಳ ಹೊಗಳುವಿಕೆಯನ್ನೇ ಕೇಳುತ್ತಿದ್ದನು.

ಮೇಜಿನ ಮೇಲಿರುವ ಉಣ್ಣುವ ಉಪಕರಣಗಳೆಲ್ಲಾ ಬೆಳ್ಳಿಯವಾಗಿದ್ದವು.

ಕೆಲವು ಕಾಜಿನ ಗ್ಲಾಸುಗಳು, ಕೆಲವು ಪಿಂಗಾಣಿಯ ಪಾತ್ರೆಗಳೂ ಇದ್ದವು. ಅವುಗಳ ಮೇಲೆ ಇರುವ ಡಿಸೈನ್‌ಗಳು ಬಹಳ ಆಕರ್ಷಕ ರೀತಿಯಲ್ಲಿದ್ದವು. ಇದರಿಂದ ಮಾಯಾದೇವಿಯಲ್ಲಿ ಸೌಂದರ್ಯದ ವಿಷಯವಾಗಿ ಅಗತ್ಯ ಅಭಿರುಚಿ ಇದೆ ಎಂಬುದು ತಿಳಿಯುತ್ತಿತ್ತು. ಇಷ್ಟೆಲ್ಲಾ ವೈಭವಗಳು ಅಶೋಕನ ಸುತ್ತಲೂ ರಮಿಸುತ್ತಿದ್ದರೂ ಅವು ಯಾವುವೂ ಅವನ ಮೇಲೆ ಯಾವ ತರದ ಪರಿಣಾಮವನ್ನೂ ಉಂಟು ಮಾಡಲಿಲ್ಲ. ಕಾರಣವಿಷ್ಟೆ—ಅವನು ಇಂತಹ ವಾತಾವರಣಗಳನ್ನು ಸಾರಂಗಪುರದ ಮಹಾರಾಜರ ಮಹಲಿನಲ್ಲಿಯೂ ಮತ್ತು ಬೊಂಬಾಯಿಯ ದೊಡ್ಡ ಧನಿಕರ ಬಂಗಲೆಗಳಲ್ಲಿಯೂ ತುಂಬಾ ಕಂಡಿದ್ದನು. ಅಲ್ಲದೆ ಅವನ ದೃಷ್ಟಿಯ ರೀತಿಯೇ ಬೇರೆ ತರದ್ದಾಗಿದ್ದಿತು. ಆದ್ದರಿಂದ ಇವುಗಳೆಲ್ಲ ಅವನ ಮನಸ್ಸನ್ನು ಆಕರ್ಷಿಸಲಿಲ್ಲ. ವಿದ್ಯುತ್ತಿನ ಬಣ್ಣಬಣ್ಣದ ಬಲ್ಬ್‌ಗಳೂ ಅಲ್ಲದೆ ಬಾಗಿಲಿಗೆ ಹಾಕಲ್ಪಟ್ಟ ವೆಲ್‌ವೇಟಿನ ಬದಲಾಗಿ ಅವನಿಗೆ ನಿರ್ಮಲವಾದ ಆಕಾಶದಲ್ಲಿ ಮಿನುಗುವ ತಾರಾಗಣಗಳೂ ಮತ್ತು ಹಚ್ಚ ಹಸರು ಮುಚ್ಚಿದ ನೈಸರ್ಗಿಕ ಧರೆಯೇ ಅವನಿಗೆ ಮನಸ್ಸನ್ನು ಅಧಿಕವಾಗಿ ಮೋಹಿಸುವಂತಹ ವಸ್ತುಗಳಾಗಿದ್ದವು.

ಅಶೋಕನು ಇಷ್ಟರ ತನಕ ಹೆಚ್ಚಾಗಿ ಮಾತಾಡುತ್ತಿರಲಿಲ್ಲ. ಅವನನ್ನು ಮಾತನಾಡಿಸುವ ಸಲುವಾಗಿಯೇ ಮಾಯಾದೇವಿಯು ಪ್ರಶ್ನಿಸಿದಳು. "ಇಷ್ಟು ಸುಂದರವಾದ ವಿದ್ಯೆಯನ್ನು ತಾವು ಎಲ್ಲಿ ಕಲಿತಿರಿ? ಬೊಂಬಾಯಿಯ ಆರ್ಟ್ಸ್ ಸ್ಕೂಲಿನಲ್ಲಿಯೇ? ನಿಮ್ಮ ಚಿತ್ರಗಳು ಮಾತನಾಡುವಷ್ಟು ಸಜೀವತೆಯನ್ನು ಹೊಂದಿವೆ ಎಂಬಂತೆ ಭಾಸವಾಗುತ್ತಿದೆ."

"ಬೊಂಬಾಯಿಯ ಆರ್ಟ್ಸ್ ಸ್ಕೂಲಲ್ಲೇನೊ ನಾನು ಕಾಲ ಕಳೆದಿದ್ದೆ. ಆದರೆ ಈ ವಿದ್ಯೆಯು ಕಲಿಸಿದೊಡನೆ ಕಲಿತುಕೊಳ್ಳುವ ವಸ್ತುವಲ್ಲ. ಅಲ್ಲಿ ಕಲಿಸುವುದು ಕಲೆಯ ತಂತ್ರವನ್ನು ಮಾತ್ರ. ಕಲೆಯ ಆತ್ಮವನ್ನು ತಿಳಿಯಲು ಮತ್ತು ಅದರ ದರ್ಶನಕ್ಕೆ ಇನ್ನೊಂದು ಶಾಲೆಗೆ ಹೋಗಬೇಕಾಗುತ್ತದೆ. ಅದೇ ಜೀವನಶಾಲೆ. ಪ್ರಕೃತಿಯ ರಮಣೀಯ ವಿದ್ಯಾಮಂದಿರ. ಪ್ರಕೃತಿಯ ಅನುಪಮ ಸೌಂದರ್ಯದ ಸಂಪರ್ಕದಿಂದ ಯಾವ ಭಾವವು ಉದ್ಭವಿಸುವುದೊ ಅದೇ ಕಲೆಯ ಪ್ರೇರಣೆ. ಇಂತಹ ಸಂದರ್ಭಗಳಲ್ಲಿಯೇ ಇದರ ಆತ್ಮೋತ್ಪತ್ತಿಯೂ ಆಗುವುದು."

"ನಾನು ಕೂಡ ಸೃಷ್ಟಿಸೌಂದರ್ಯದ ವೈಭವ ಸ್ಥಳ ಪರ್ಯಟನ ಮಾಡಿದ್ದೇನೆ. ಒಳ್ಳೆ ಒಳ್ಳೆಯ ಸುಂದರವಾದ ಸ್ಥಳಗಳನ್ನು ಸಂದರ್ಶಿಸಿದ್ದೇನೆ. ಪರ್ವತ ಜಲಪಾತ, ನದಿ, ವನಶ್ರೀ ಇತ್ಯಾದಿ ಪ್ರಾಕೃತಿಕ ಸೌಂದರ್ಯದ ನೆಲೆಗಳನ್ನು ಕಂಡಿದ್ದೇನೆ. ಆದರೆ ತಮ್ಮ ಅಭಿಪ್ರಾಯದ ಆ ಅನುಭವವಾಗಲೀ ಪ್ರೇರಣೆಯಾಗಲೀ ನನಗೆ ಎಂದೂ ಉಂಟಾಗಲಿಲ್ಲ. ಒಬ್ಬ ಒಳ್ಳೆಯ ಚಿತ್ರಕಾರನು ಈ ಸ್ಥಳಗಳ ಚಿತ್ರವನ್ನು ಚಿತ್ರಿಸಿಕೊಟ್ಟರೆ ಅವುಗಳು ನನ್ನ ರೂಮಿನಲ್ಲಿಡಲು ಯೋಗ್ಯವಾದವುಗಳೆಂದೂ, ಅಲ್ಲದೆ ಶೋಭಾಯಮಾನವಾಗಿರಬಹುದೆಂದೂ ನಾನು ಭಾವಿಸುತ್ತಿದ್ದೆ."

"ತಾವು ಕಾಶ್ಮೀರ ಅಥವಾ ಡಾರ್ಜಿಲಿಂಗ್ ಪ್ರದೇಶಗಳಿಗೆ ಏತಕ್ಕಾಗಿ ಹೋಗಿದ್ದಿರಿ? ಅಲ್ಲಿ ನಿಸರ್ಗದ ಅನುಪಮ ಸೌಂದರ್ಯವಿದೆ ಎಂದಾಗಲೀ ಅಥವಾ ನಿಮ್ಮನ್ನು ಆ ವಿಶೇಷ ಸೌಂದರ್ಯವು ಕೂಗುತ್ತಿದ್ದಿತೆಂದಾಗಲೀ ನೀವು ಹೋಗಿರಲಿಕ್ಕಿಲ್ಲ. ನಿಮ್ಮ ಯಾರೋ ಮಿತ್ರರು ಆ ಸ್ಥಳಗಳನ್ನು ಹೊಗಳಿದ್ದಿರಬಹುದು. ಮತ್ತು ಕಾಶ್ಮೀರದ ವಿಚಾರವಾಗಿ ಚರ್ಚಿಸುವುದು ಸದ್ಯದ ಪರಿಸ್ಥಿತಿಗೆ ಒಂದು ಸಭ್ಯತೆ ಮತ್ತು ಸಂಸ್ಕೃತಿಯ ಗುರುತೆಂದೂ ಕೆಲವರು ತಿಳಿಯುತ್ತಾರೆ. ಅಲ್ಲಿಯ ಕಲಾಪೂರ್ಣ ಚಿತ್ರಗಳನ್ನು ಕೊಂಡು, ಅದನ್ನು ತಮ್ಮ ಸ್ವಂತ ಬಂಗಲೆಗಳಲ್ಲಿ ತೂಗಿಸುವುದೇ ಒಂದು ಘನತೆಯೆಂದು ತಿಳಿದುಕೊಂಡು ಬಹುಶಃ ತಾವು ಅಲ್ಲಿಯವರೆಗೆ ದಯಮಾಡಿಸಿದ್ದಿರೆಂದು ತೋರುವುದು. ವಿಶೇಷವೇನಾದರೂ ಮಾತನಾಡಿದೆ ಎನಿಸಿದರೆ ಕ್ಷಮಿಸಬೇಕು. ಯಾವ ಸೌಂದರ್ಯ, ಮತ್ತು ಆನಂದವು ನಮ್ಮ ಹೃದಯದಲ್ಲಿಲ್ಲವೋ, ಸತ್ಯವು ನಮ್ಮ ಮನಸ್ಸಿಗೆ ಇನ್ನೂ ಹೊಳೆಯುತ್ತಿಲ್ಲವೋ ಅವುಗಳನ್ನು ನಾವು ಹಿಮಾಲಯ ಗಿರಿಕಂದರಗಳಲ್ಲಿ ಸಾವಿರಾರು ವರ್ಷ ಹುಡುಕಿದರೂ ಸಿಗಲಿಕ್ಕಿಲ್ಲ. ಎಂದಿಗೂ ಸಿಗದು. ಮತ್ತು ನೀವು ಇಲ್ಲಿ ಇರಿಸಿದ ಮೂರ್ತಿಗಳು, ಅಲ್ಲದೆ ಗೋಡೆಯಲ್ಲಿ ತೂಗು ಹಾಕಿದ ಚಿತ್ರಗಳು—ನಿರರ್ಥಕವಾದವುಗಳೇ ಸರಿ. ಅವುಗಳಲ್ಲಿ ನಿಜವಾದ ಕಲಾದೃಷ್ಟಿಯೇ ಇಲ್ಲ. ಕೇವಲ ಮನುಷ್ಯನ ಯಾವುದೊ ಒಂದು ಸುಂದರ ವಸ್ತುವಿನ ಮೇಲೆ ಅಧಿಕಾರವನ್ನು ಹೊಂದುವ ಕ್ಷುಧೆಯ ಪರಿತೃಪ್ತಿ ಮಾತ್ರ ಅದು. ಅದೇ ಸುಂದರ ಚಿತ್ರವು ಬೇರೊಬ್ಬರ ಹತ್ತಿರವಿದ್ದರೆ ನಮಗೆ ಹೊಟ್ಟೆಕಿಚ್ಚು, ಅದು ನಮ್ಮೆಡೆಯಲ್ಲಿಯೇ ಇದ್ದರೆ ಅಭಿಮಾನವೂ ಉಂಟಾಗುತ್ತದೆ. ಇದಾ

ದರೋ ಕಲೆಯಲ್ಲಿಯ ನಿಜವಾದ ಅನುರಾಗವೆಂದು ಎಂದಿಗೂ ಹೇಳಲ್ಪಡುವುದಿಲ್ಲ."

ಮಾತೇನೋ ಸರಳವೂ ಸ್ವಚ್ಛವೂ ಆಗಿತ್ತು. ಇದೆಲ್ಲವನ್ನು ಕೇಳಿದ ಮಾಯಾದೇವಿಯು ಮೇಲಿನ ವಿಚಾರಗಳನ್ನು ತನ್ನಂತಹ ವ್ಯಕ್ತಿಗಳಿಗೇ ಹೇಳಿದ್ದೆಂದು ತಿಳಿದಳು. ಆದ್ದರಿಂದ ಅವಳು ಸ್ವಲ್ಪ ಕೋಪಿಸಿಕೊಂಡಳು, ತುಸು ಖೇದಗೊಂಡಳು. ಆದರೆ ಇಂದಿನ ವರೆಗೂ ಹೀಗೆ ಇದ್ದಕ್ಕಿದ್ದಂತೇ ಹೇಳುವವರು ಅವಳಿಗೆ ಯಾರೂ ಸಿಕ್ಕಿರಲಿಲ್ಲ. ಎಲ್ಲರೂ ಅವಳನ್ನು ಅರ್ಥವಿದ್ದೋ, ನಿರರ್ಥಕವಾಗಿಯೋ ಹೊಗಳುವವರೇ ಸಿಕ್ಕಿದ್ದರು. ಇವುಗಳಿಂದ ಅವಳೇನೊ ಸಂತೋಷಪಡುತ್ತಿದ್ದಳು. ಮತ್ತು ಪ್ರಶಂಸತೆಯ ಕಾರಣದಿಂದ ಸ್ವಲ್ಪ ಹಿಗ್ಗುತ್ತಲೂ ಇದ್ದಳು. ಹಾಗೆಯೇ ಅಶೋಕನ ವಿರೋಧ ಪ್ರದರ್ಶನದಿಂದಲೂ ಒಂದು ವಿಚಿತ್ರವಾದ ಸುಖವೇ ಸಿಕ್ಕಿತು. ಆದರೆ ಮರುಕ್ಷಣದಲ್ಲೇ ಅವಳ ಅಹಂಭಾವವೂ ಜಾಗ್ರತವಾಯಿತು.

ಸ್ವಲ್ಪ ಆವೇಶದೊಂದಿಗೆ ನುಡಿದಳು "ಅದು ತಮಗೆ ಹೇಗೆ ಗೊತ್ತು? ನಮ್ಮಂಥವರಿಗೆ ಕಲೆಯ ಮೇಲೆ ಅಭಿರುಚಿ ಅಥವಾ ಅನುರಾಗವಿಲ್ಲವೆಂದು? ನಾವಾದರೊ ಅರಿಸುಂದರ ವಸ್ತುಗಳನ್ನೇ ಕೊಂಡುಕೊಳ್ಳುತ್ತಿದ್ದೇವೆ. ನಮ್ಮ ಬಂಗಲೆಯ ಗೋಡೆಗಳಲ್ಲಿ ಸಿನಿಮಾ ಕಂಪೆನಿಯ ಪೋಸ್ಟರುಗಳಾಗಲೀ, ಅಥವಾ ರೈಲ್ವೆ ಸ್ಟೇಶನುಗಳಲ್ಲಿ ಹಾಕುವ ಜಾಹೀರಾತುಗಳಾಗಲೀ ತೂಗುಹಾಕಿಲ್ಲ.

"ಅದೇ! ಏತಕ್ಕೆಂದರೆ ತಾವು ತಮ್ಮ ಬಂಗಲೆಯನ್ನು ಹೊಟೇಲು ಅಥವಾ ಧರ್ಮಶಾಲೆಯಾಗಿ ಪರಿವರ್ತಿಸಲು ಇಚ್ಛಿಸುವುದಿಲ್ಲ. ಅದಕ್ಕಾಗಿಯೇ ನೀವು ಹೇಳುವಂತೆ ಮಾಡಿಲ್ಲ. ಆದರೆ ನಿಜವಾದ ಪ್ರಶ್ನೆಯೇ ಇದಲ್ಲ........ ಅದು ಕಲಾದೃಷ್ಟಿಯ ಮೇಲಿನ ಪ್ರಶ್ನೆ. ಅದನ್ನು ಹೊರಗಿನ ಉಪಕರಣಗಳಿಂದಲೊ ಅಥವಾ ವಾತಾವರಣಗಳಿಂದಲೊ ಹೊಂದಲು ಸಾಧ್ಯವಿಲ್ಲ. ಅದರ ಸಮ್ಮಂಧವು ತಮ್ಮ ತಮ್ಮ ಹೃದಯದೊಂದಿಗೆ ಇದೆ. ನಮ್ಮ ಹೃದಯದಲ್ಲಿ ಈ ಈಶ್ವರ ನಿರ್ಮಿತ ಪರಮ ಸುಂದರ ವಿಶ್ವದ ವಿಷಯವಾಗಿಯೇ ಅನುರಾಗವಿಲ್ಲದಿದ್ದರೆ ನಾವು ಕಲೆಯ ಆತ್ಮವನ್ನು ಎಂದಿಗೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಮತ್ತು ಅದರ ಪವಿತ್ರ ಆನಂದವನ್ನು ಪಡೆಯಲೂ ಅಸಾಧ್ಯವೇ. ಈ ಮಾತು ಕಲಾಕಾರ ಮತ್ತು ಕಲಾಗ್ರಾಹಕ ಇಬ್ಬರಿಗೂ ಒಂದೇ ತೆರನಾಗಿದೆ."

"ಹಾಗಾದರೆ ಕಲಾದೃಷ್ಟಿಯನ್ನು ಪಡೆಯಲು ಏನು ಮಾಡಬೇಕೆಂದು ತಮ್ಮ ಅಭಿಪ್ರಾಯ ?"

"ಅದಕ್ಕೆ ನಾವು ಜೀವನವನ್ನು ಪ್ರೀತಿಸಲು ಕಲಿಯಬೇಕಾದೀತು. ನಮ್ಮ ಸ್ವಾರ್ಥಯುಕ್ತ ವೈಯಕ್ತಿಕ ಜೀವನವನ್ನಲ್ಲ—! ಸಮಾಜ ಜೀವನವನ್ನು, ವಿಶ್ವಜೀವನವನ್ನು. ಪ್ರಾಣದಂತೆ ಎಲ್ಲೆಲ್ಲಿಯೂ ಹರಡಿರುವ ಜೀವನವನ್ನು ಪ್ರೀತಿಸಬೇಕು. ನಾವು ಪ್ರಕೃತಿಯ ಸ್ವಾಭಾವಿಕ ಸೌಂದರ್ಯದಿಂದ ಎಲ್ಲೆಲ್ಲಿಯೂ ಹರಡಿಕೊಂಡಿದ್ದ, ವನಶ್ರೀಯ ಬಳಿಯಿಂದ ದೂರ ಓಡಿಹೋಗಿ, ಕೃತ್ರಿಮ ಬಳ್ಳಿಗಳ ಶರಣುಪಡೆಯಲು ಆಶಿಸುತ್ತೇವೆ. ಮಾನವ ರೂಪದ ಸಜೀವ ಮೂರ್ತಿಗಳನ್ನು ಬಿಟ್ಟು, ಕಲ್ಲಿನ ಪ್ರತಿಮೆಗಳ ಹಿಂದೆ ತಿರುಗುತ್ತೇವೆ. ಕೋಗಿಲೆಯ ಗೀತೆಗಳಿಂದಲೂ, ಅಥವಾ ಜಲಪಾತಗಳ ಕಲಕಲ ನಾದದಿಂದಲೂ ವಿಮುಖರಾಗಿ, ವಾದ್ಯ ವಾದನಗಳನ್ನು ಹುಡುಕುತ್ತ ಆನಂದಪಡಲು ಯತ್ನಿಸುತ್ತೇವೆ."

"ಹಾಗಾದರೇನು? ಈ ಶಿಲ್ಪ ಮೂರ್ತಿಗಳಿಗೂ ಅಥವಾ ಸಂಗೀತ ಲಹರಿಗಳಿಗೂ ಯಾವ ಅರ್ಥವೂ ಇಲ್ಲವೇ ? ಇದೇ ನಿಜವಾಗಿದ್ದರೆ ತಮ್ಮಂತಹ ಕಲಾಕಾರದಿಂದ ಏನು ಪ್ರಯೋಜನ ? ಮತ್ತು ಅವರಿಗೆಲ್ಲ ಪ್ರೋತ್ಸಾಹಕೊಡುವುದರಿಂದ ಯಾವ ಲಾಭ ? "

"ಹೌದು ಈ ಚಿತ್ರಗಳು, ಮೂರ್ತಿಗಳು, ಮತ್ತು ಗೀತೆಗಳು ಇವುಗಳೆಲ್ಲವುಗಳಿಗೆ ಅರ್ಥವೂ ಇದೆ. ಪ್ರಯೋಜನವೂ ಇದೆ. ಆದರೆ ಒಂದು ಅಳಲೆಯ ಪ್ರಮಾಣದಲ್ಲಿ. ಅದರಿಂದ ಪ್ರಯೋಜನವೆಂದರೆ ನಿಮ್ಮ ಕಣ್ಣುಗಳನ್ನು ವಿಶ್ವದ ಅನುಪಮ ಸೌಂದರ್ಯದ ಅವಗಾಹನೆಗಾಗಿ ತೆರೆಯುವದು. ಎಂದು ಆ ಸೌಂದರ್ಯ ದೃಷ್ಟಿ ಮತ್ತು ಕಲೆಯ ಅಭಿಜ್ಞತೆ ನಿಮಗೆ ಸಿಕ್ಕಿತೋ ಆಗಲೇ ಅದರ ಕೆಲಸ ಮುಗಿದಂತಾಯಿತು. ಅನಂತರ ನಿಮ್ಮ ಕಣ್ಣುಗಳು ಈ ನವೀನ ಶಕ್ತಿಯನ್ನು ಪಡೆದುಕೊಂಡು ತಾವೇ ಸ್ವತಃ ಸೃಷ್ಟಿಯ ಸೌಂದರ್ಯ ರಾಶಿಯಲ್ಲಿ ತಮ್ಮ ಆನಂದವನ್ನು ಹುಡುಕಿಕೊಳ್ಳಲು ಆರಂಭಿಸುತ್ತವೆ. ಆಗ ಆ ನೇತ್ರಗಳಿಗೆ ಅದು ನಿರಂತರವಾಗಿ ಸಿಕ್ಕಿಯೇ ಸಿಕ್ಕುತ್ತದೆ. ಆಮೇಲೆ ಆ ಶುದ್ಧ ಮತ್ತು ನಿತ್ಯಾನಂದದಿಂದ ತುಂಬಿದ ಕೋಶಗೃಹದ ಬಾಗಿಲು ನಿಮಗಾಗಿ ತೆರೆಯುವುದು. "

ಈ ಸರಳವೂ ಸತ್ಯವೂ ಆದ ಭಾಷಣದ ಮೇಲೆ ಮಾಯಾದೇವಿಯ

ಪ್ರಭಾವವು ಹರಿಯಿತು. ಅವಳು ತನ್ನ ಎಲ್ಲಾ ಕೃತಿಯ ಅಭಿನಯಗಳನ್ನು ಮರೆತು ಸಂಪೂರ್ಣ ಏಕಾಗ್ರತೆಯಿಂದ ಅಶೋಕನ ಕಥನವನ್ನು ಕೇಳುತ್ತಿದ್ದಳು.

" ಕ್ಷಮಿಸಿರಿ. ನಾನೊಬ್ಬ ದೊಡ್ಡ ಭಾಷಣಕಾರನಂತೆ ಬಂದು ಇಲ್ಲಿ ಕೂಗಾಡುತ್ತೇನೆ. "

ಅವನ ಆ ಸ್ವಾಭಾವಿಕವಾದ ಮುಗುಳ್ನಗೆಯ ಮಾತುಗಳು ಮಾಯಾ ದೇವಿಗೆ ಒಂದು ತರದ ಲಾಭವನ್ನೇ ಉಂಟು ಮಾಡಿದವು. ಅವಳು ಕೂಡಲೇ ಹೇಳಿದಳು " ಇಲ್ಲ, ಇಲ್ಲ. ತಮ್ಮ ಮಾತುಗಳನ್ನು ನಾನು ಒಮ್ಮನಸ್ಸಿನಿಂದ ಕೇಳುತ್ತಿದ್ದೇನೆ. ಆದರೆ ಇದೆಲ್ಲ ಏನು ? ತಾವು ಮಾತನಾಡುತ್ತಲೇ ಇದ್ದೀರಿ ಯಾವುದನ್ನೂ ತಿನ್ನಲೂ ಇಲ್ಲ. ಕುಡಿಯಲೂ ಇಲ್ಲ. ಈಗಲಾದರೂ ಆರಂಭಿಸಿರಿ. "

ಮಾಯಾದೇವಿಯ ಈ ಮಾತುಗಳಲ್ಲಿ ನಿಜವಿತ್ತು ಎಂಬುದನ್ನು ಅಶೋಕನು ಮನಗಂಡನು. ಆದರೆ ಹೊರಗಣ್ಣಿಗೆ ಅದು ಕಾಣಿಸುತ್ತಿರಲಿಲ್ಲ.

ಅಶೋಕನ ಮಾತಿನ ಪ್ರವಾಹವು ನಿಂತುಹೋಗಿತ್ತು. ಅವನು ಮೌನನಾಗಿದ್ದು ತಿನ್ನುತ್ತಲೇ ಇದ್ದನು. ಈ ನಿಶ್ಶಬ್ದತೆಯನ್ನು ಭಂಗಪಡಿಸಲು ಮಾಯಾದೇವಿಯೇ ಮಾತನಾಡತೊಡಗಿದಳು.

" ನಾನು ಕೂಡ ಕಲೆಯ ವಿಷಯ ಬಹಳವಾಗಿ ಓದಿದ್ದೇನೆ. ಕೆಲವು ಕಲಾಕಾರರು ಈ ಕಲೆಯ ಆನಂದವು ಚಿರಂತನವಾಗಿರುವುದು—ಅಲ್ಲದೆ ಅವಿನಾಶಿಯೂ ಆಗಿರುವುದೆಂದು ಹೇಳಿರುವರು. ಆದರೆ ನಿಜವಾಗಿಯೂ ಕಷ್ಟಪಟ್ಟು ಕಲೆಯ ಅನುಭವ ಮಾಡಿದರೂ ಕೂಡ ಆ ಆನಂದವು ನಮಗೆ ಸಿಕ್ಕಲೇ ಇಲ್ಲ. ನನಗೆ ಚಿತ್ರಕಲೆಯಲ್ಲಿ ಪ್ರೇಮವಿದೆ. ವಿಶ್ವವಿಖ್ಯಾತ ಚಿತ್ರಕಾರರ ಚಿತ್ರಗಳೂ ನನ್ನಲ್ಲಿವೆ. ಶಿಲ್ಪ ಕಲೆಗೂ ನನಗೂ ನಿಕಟ ಸಮ್ಮಂಧವಿದೆ. ಅತಿ ಸುಂದರ ಶಿಲ್ಪ ಮೂರ್ತಿಗಳೂ ನನ್ನಲ್ಲಿವೆ. ಸಂಗೀತವೆಂದರೆ ನಾನು ಹುಚ್ಚಳಾಗುತ್ತೇನೆ. ದೊಡ್ಡ ದೊಡ್ಡ ಸಂಗೀತ ವಿದ್ವಾಂಸರುಗಳ ಸಭೆಯು ಆಗಾಗ ನನ್ನಲ್ಲಿ ನಡೆಯುತ್ತಲೇ ಇರುತ್ತವೆ. ಆದರೆ ಇವುಗಳಿಂದೆಲ್ಲಾ ನನಗೆ ಆ ವಿಶುದ್ಧಾನಂದವು ಸಿಕ್ಕಲಿಲ್ಲ. ಅದೇಕೆ ಹಾಗೆ ? "

" ನಾನು ನಿಮಗೆ ಮೊದಲೇ ಹೇಳಿಲ್ಲವೇ ? ಕಲೆಯ ಜೀವಕ್ಕೆ ಚೈತನ್ಯದೊಡನೆ ಸಮ್ಮಂಧವಿದೆ ಎಂದು. ಮಾನವ ಜೀವನದಲ್ಲಿ ತಾನು ಎಂಬುದು

ಅತ್ಯಂತ ತೀವ್ರವೂ, ವ್ಯಾಪಕವೂ ಆಗಿರುತ್ತದೆ. ನಮ್ಮಿಂದ ಯಾವುದಾದ ರೊಂದು ಒಳ್ಳೆಯ ಕೆಲಸವು ಆಗಿಹೋಯಿತೆಂದರೆ ನಮ್ಮ ಮನಸ್ಸು ಸಂತೋಷ ಗೊಳ್ಳುತ್ತದೆ. ಈ ಸಂತೋಷವು ಇತರ ಎಲ್ಲ ಪ್ರಕಾರದ ಸಂತೋಷಗಳಿಂದ ಭಿನ್ನವಾಗಿದೆ. ವಿದ್ವಾಂಸರೆಂದಿದ್ದಾರೆ: "ನಾರೀ ಜೀವನದಲ್ಲಿ ಮಾತೃತ್ವವೇ ಆನಂದದ ಸೀಮೆಯನ್ನು ಮುಟ್ಟುವುದು" ಎಂದು. ಇದರ ಕಾರಣವೂ ಇಷ್ಟೇ. ಮಾತೆಯು ತನ್ನ ಸಂತಾನಕ್ಕೆ ಜನ್ಮವಿತ್ತಾಗ ಪಡುವ ಆ ವೇದನೆಯು ಒಬ್ಬ ನಿಜ ವಾದ ಕಲಾಕಾರನ ವೇದನೆಯಂತೆಯೇ ಇರುತ್ತದೆ. ಮಾತೆಯ ಅನುಭವದಲ್ಲಿ ಈ ಮಗುವನ್ನು ನಾನು ನನ್ನ ರಕ್ತಮಾಂಸಗಳಿಂದ ತಿಂಗಳುಗಟ್ಟಲೆ ಕಷ್ಟಪಟ್ಟು ಪ್ರೀತಿಸಿ, ಅದರ ಸೇವೆ ಮಾಡಿ ನಿರ್ಮಿಸಿದ್ದೇನೆ ಎಂಬ ಅನೇಕ ವಿಚಾರಗಳಿರು ತ್ತವೆ. ಆದಕಾರಣ ಈ ಮಗುವು ನನ್ನದೆಂಬ ಭಾವನೆಯೇ ಅವಳ ಸುಖದ ಕೊನೆಯನ್ನು ಮುಟ್ಟುವುದು.

"ಸುಂದರ ಚಿತ್ರಗಳನ್ನು ನೋಡುವುದರ ಜೊತೆಗೆ ನೀವೂ ನಿಮ್ಮ ಕೈ ಗಳಲ್ಲಿ ತೂಲಿಕೆಯನ್ನು ಹಿಡಿದು ರಂಗವಿಲಾಸದ ಕೆಲಸಗಳಲ್ಲಿ ಕೈ ಹಾಕಿರಿ. ಮಣ್ಣನ್ನು ತೆಗೆದುಕೊಂಡು ಚಿಕ್ಕ ಚಿಕ್ಕ ವಸ್ತುಗಳನ್ನು ಮಾಡಲು ಆರಂಭಿಸಿರಿ. ಪ್ರಾರಂಭದಲ್ಲಿ ನಿಮ್ಮ ಬಣ್ಣದ ಮತ್ತು ಮಣ್ಣಿನ ವಸ್ತುಗಳ ಆಕಾರವು ವಿಕಾರ ವಾಗಿರಲೂ ಬಹುದು. ನಿಮ್ಮ ಗಾಯನದಲ್ಲಿ ನಿಮಗೇ ಬೇಸರವೂ ಹುಟ್ಟ ಬಹುದು. ಆದರೂ ಅವುಗಳೆಲ್ಲವೂ ನಿಮ್ಮಿಂದಲೇ ನಿರ್ಮಿತವಾದವುಗಳಲ್ಲವೇ ? ಹೌದು ಅವುಗಳೆಲ್ಲವೂ ನಿಮ್ಮವುಗಳೇ. ಇವುಗಳ ನಿರ್ಮಾಣದಲ್ಲಿ ನೀವು ನಿಮ್ಮ ಹೃದಯವನ್ನೂ, ಮನಸ್ಸನ್ನೂ ಇಟ್ಟು ಏಕಾಗ್ರಚಿಂತನೆಯನ್ನು ಮಾಡಿರುತ್ತೀರಿ. ಅಭ್ಯಾಸ ಮಾಡುತ್ತ ಮಾಡುತ್ತ ಆ ಚಿತ್ರಗಳೂ ಮೂರ್ತಿಗಳೂ ಅಥವಾ ಗಾಯನ ಸುಂದರ, ಸುಂದರತರ, ಸುಂದರತಮವನ್ನು ಹೊಂದುವವು. ಆಗ ನಿಮಗೆ ಕೂಡ ಒಂದು ಹೊಸ ರೀತಿಯ ಆನಂದದ ಅನುಭವವೂ ಆಗುವುದು. ನಿಮ್ಮ ಆನಂದದ ಉಬ್ಬರವು ಉದ್ವೇಗ ಹೊಂದುತ್ತಲೇ ಇರುವುದು."

ಮಾಯಾದೇವಿಗೆ ವಿಷಯಗಳು ವಿಶೇಷವಾಗಿಯೂ, ನವೀನವಾಗಿಯೂ ಕಂಡವು. ಇದರೊಂದಿಗೆ ಒಂದು ಉಚ್ಚ ತರಗತಿಯ ಸತ್ಯತೆಯನ್ನು ಕಂಡಳು. ಕಲೆಯ ಬಗ್ಗೆ ಇಷ್ಟು ಸುಂದರವಾದ ವಿವೇಚನೆಯನ್ನು ಅವಳು ಎಲ್ಲಿಯೂ ಓದಿ ರಲೂ ಇಲ್ಲ. ಕೇಳಿರಲೂ ಇಲ್ಲ. ಎಲ್ಲಿಯಾದರೂ ಓದಿದ್ದರೂ ಕೂಡ ಅದನ್ನು

ಬಹುಶಃ ಚೆನ್ನಾಗಿ ಅರ್ಥಮಾಡಿಕೊಂಡಿರಲಿಲ್ಲ. ಆದ್ದರಿಂದ ಈ ವಿಚಾರವನ್ನು ಅವಳು ತುಂಬಾ ಆಸಕ್ತಿಯಿಂದ ಕೇಳುತ್ತಿದ್ದಳು. ಭೋಜನದ ಕಡೆಗೆ ಅವಳ ಧ್ಯಾನವು ಹೆಚ್ಚಾಗಿ ಇರಲಿಲ್ಲ. ಹಾಗೆಯೇ ಅವರಿಬ್ಬರೂ ತಮ್ಮ ತಮ್ಮ ಊಟಗಳನ್ನು ತೀರಿಸಿಕೊಂಡರು. ಕಡೆಗೆ ಅವಳು ಪ್ರಶ್ನಿಸಿದಳು— "ಚಿತ್ರಕಲೆಯನ್ನು ನಾನೂ ಕಲಿಯಲು ಇಚ್ಛಿಸುತ್ತೇನೆ. ತಾವುನನ್ನ ಗುರುಗಳಾದರೆ........"

ಈ ಪ್ರಶ್ನೆಯ ಹಿನ್ನೆಲೆಯಾಗಿ ಅವಳಲ್ಲಿ ಶಿಕ್ಷಕನಾಗಿ ಅಶೋಕನೊಡನೆ ಸಂಪರ್ಕವನ್ನು ಪಡೆದು ಹಾಗೆಯೇ ಅವನನ್ನೂ ತನ್ನವನನ್ನಾಗಿ ಮಾಡಿಕೊಳ್ಳಬಹುದೆಂಬ ಭಾವನೆಯೂ ಅಡಕವಾಗಿತ್ತು. ಅಶೋಕನಾದರೋ ಅದನ್ನು ತಡೆಗಟ್ಟುವವನಾಗಿದ್ದನು. ಅವನು ಇಂತಹ ಯಾವ ಜವಾಬ್ದಾರಿಯನ್ನೂ ತನ್ನ ಮೇಲೆ ಹೇರಿಕೊಳ್ಳಲು ಇಚ್ಛಿಸುತ್ತಿರಲಿಲ್ಲ. ಪ್ರಣಯದ ಉದಾರ ಮತ್ತು ಪಾವನ ಸ್ವರೂಪದ ವಿಷಯವಾಗಿ ಮಾಯಾದೇವಿಯು ಎಂದೂ ಯೋಚಿಸಿಯೂ ಇರಲಿಲ್ಲ. ಮತ್ತು ಯೋಚಿಸಲು ಆಶಿಸುತ್ತಲೂ ಇರಲಿಲ್ಲ. ಅವಳ ಸ್ವತಂತ್ರವಾದ ಮನಸ್ಸು ಎಂದೂ ಒಬ್ಬ ವಿಶೇಷ ವ್ಯಕ್ತಿಯೊಂದಿಗೆ ಪ್ರೇಮಬಂಧನದಲ್ಲಿ ಬೀಳುವ ಅನುಕೂಲವನ್ನು ಮಾಡಿಕೊಡಲಿಲ್ಲ. ಇದೇ ಕಾರಣದಿಂದಲೇ ತನ್ನ ವೈಧವ್ಯದಶೆಯನ್ನು ಕೂಡ ಅವಳು ದುರ್ಭಾಗ್ಯವೆಂದು ಎಣಿಸಲೂ ಇಲ್ಲ. ಅದು ಹಿತಕರವೆಂದೇ ಯೋಚಿಸಿದ್ದಳು. ಏಕೆಂದರೆ ಈಗ ಅವಳ ದಾರಿ ನಿಷ್ಕಂಟಕವಾಗಿದೆ. ಸುಖಭೋಗಗಳ ಆನಂದವೇ ಅವಳ ಅಭೀಷ್ಟವೂ ಆಗಿತ್ತು.

ಆದರೂ ಕೂಡ ಜೀವನದಲ್ಲಿ ಅವಳಿಗೆ ಪ್ರೇಮವಿತ್ತು. ಜೀವನದ ಆನಂದ ಮತ್ತು ಒಳ್ಳೆಯ ಉತ್ತೇಜನ ಇವುಗಳನ್ನು ಹುಡುಕಲು ಆಶಿಸುತ್ತಿದ್ದಳು. ಜೀವನವೆಂಬ ಸಾಗರದಲ್ಲಿ ಮುಳುಗಿ ಎದ್ದು ಅದರ ರಹಸ್ಯವನ್ನು ತಿಳಿದುಕೊಳ್ಳಲು ಆಶಿಸುತ್ತಿದ್ದಳು.

"ಆ ಕಲಿಸುವದು ಬಿಲಿಸುವದೆಂದರೆ ಅದು ನನ್ನಿಂದಾಗದು" ಅಶೋಕನು ಮಾಯಾದೇವಿಯೊಡನೆ ತನ್ನ ಜವಾಬದಾರಿಯನ್ನು ಕೆಳಕ್ಕಿಳಿಸುತ್ತ ಹೇಳಿದನು. ಎಂದೂ ಯಾರಿಗೂ ಈ ಕಲೆಯು ಕಲಿಸಲ್ಪಡಲಿಲ್ಲ. ಮತ್ತು ಕಲಿಸಲು ಸಾಧ್ಯವೂ ಇಲ್ಲ. ನಾನು ಇದ್ದ ಎಡೆಯಲ್ಲಿಯೇ ನಿಶ್ಚಯವಾಗಿರುವುದಿಲ್ಲ. ನಾನಾದರೊ ಸುತ್ತಾಡಿಕೊಂಡಿರುತ್ತೇನೆ. ಕಲೆಯ ವಿಷಯದಲ್ಲಿ ನಾನು ಒಮ್ಮೊಮ್ಮೆ ಉನ್ಮತ್ತ ಸ್ವಭಾವದವನಾಗಿರುತ್ತೇನೆ."

ಮಾಯಾದೇವಿಗೆ ತುಸು ನಿರಾಶೆಯಾಯಿತು. ಅದನ್ನು ಅಡಗಿಸಲು ಅವಳು ಮಾತು ಬದಲಿಸುತ್ತ ಅಂದಳು "ತಮಗೆ ಈ ಯುಗ್ಮಪ್ರಣಯೀ ಚಿತ್ರದ ಕಲ್ಪನೆಯು ಎಲ್ಲಿ ಉಂಟಾಯಿತು? ಅದನ್ನು ನೋಡಿದೊಡನೆ ಹೃದಯದಲ್ಲಿ ವೇದನೆಯಾಗುವದೆಂದು ಹೇಳಬರುವದಿಲ್ಲ."

"ಕಲ್ಪನೆಯಾದರೊ ನಾನು ಮೇವಾಡದ ಒಂದು ಗ್ರಾಮ್ಯಗೀತೆಯಿಂದ ತೆಗೆದುಕೊಂಡಿದ್ದೇನೆ. ಅದು ನನ್ನ ಒಬ್ಬ ಗೆಳೆಯನ ಬಾಯಿಂದ ಕೇಳಿದುದು. ಆ ಕಲ್ಪನೆಯು ಹೃದಯದ ಅಂತರಾತ್ಮನನ್ನು ಮುಟ್ಟಿತು. ಅದರ ಕಲ್ಪನೆಯಿಂದ ಉಂಟಾದ ವ್ಯಾಕುಲತೆಯು ನನ್ನನ್ನು ಇಡಿ ರಾತ್ರೆ ಮಲಗಗೊಡಲಿಲ್ಲ. ಹೃದಯದ ಅದೇ ವೇದನೆಯ ಪ್ರತಿಬಿಂಬವೇ ಈ ಚಿತ್ರ. ಕಲೆಯು ಕಲಾಕಾರನ ವ್ಯಕ್ತಿತ್ವದ ಪ್ರತಿಮೆಯಾಗಿರುತ್ತದೆ."

"ಹಾಗಾದರೇನು ಪ್ರತಿಯೊಬ್ಬ ದರ್ಶಕನ ಮೇಲೂ ಈ ಚಿತ್ರವು ಇದೇ ಪ್ರಕಾರದ ದೃಷ್ಟಿಯನ್ನು ಬೀರೀತೋ? ಮತ್ತು ಅದು ಇದೇ ತರವಾಗಿ ಹೃದಯದ ಅಂತರಾಳವನ್ನು ಮುಟ್ಟಬಹುದೋ?"

"ಚಿತ್ರದ ಯಾವ ಮೂಲ ಸಂದೇಶವಿದೆಯೋ ಅದು ವಿಶ್ವವ್ಯಾಪಿ ಮತ್ತು ಸಮಸ್ತ ಮಾನವ ಹೃದಯದ ಪ್ರೇಮಭಾವನೆಯನ್ನು ಗುರುತಿಸುವುದಾಗಿರುತ್ತದೆ. ಆದ್ದರಿಂದ ಈ ನಿರಕ್ಷರ ರೈತನಿಂದ ಹಿಡಿದು ಸುಸಂಸ್ಕೃತ ವಿದ್ವಾಂಸರವರೆಗೆ ಎಲ್ಲರ ಹೃದಯದಲ್ಲೂ ಚಿತ್ರವು ತನ್ನ ಪ್ರಭಾವವನ್ನು ಬೀರಬಹುದು. ನಿಜವಾದ ಕಲೆಯ ತೀರ್ಪು ಎಂದರೆ ಸರ್ವವ್ಯಾಪಿಯಾದ ಸಾರ್ವಭೌಮನ ತೀರ್ಪೇ."

ಅದೇ ಸಮಯದಲ್ಲಿ ಹೊರಗೆ ರಾತ್ರೆ ಬೀಟ್ ಮಾಡುತ್ತಿದ್ದ ಪೋಲೀಸ್ ಜವಾನನ ಸೀಟಿಯ ಕರ್ಕಶ ಧ್ವನಿಯು ರಾತ್ರಿಯ ಅಂಧಕಾರವನ್ನು ಸೀಳುತ್ತ ಆ ಕೋಣೆಯೊಳಗೆ ಪ್ರವೇಶಿಸಿತು. ಅದನ್ನು ಕೇಳಿ ಅಶೋಕನು ತನ್ನ ಕೈಗಡಿಯಾರದ ಕಡೆಗೆ ನೋಡುತ್ತ ವಿಸ್ಮಯದೊಂದಿಗೆ ಎಂದನು: "ಓ, ಹನ್ನೊಂದೂವರೆ ಘಂಟೆಯಾಗಿ ಹೋಯಿತು. ಬಹಳ ರಾತ್ರಿಯಾಯಿತಲ್ಲವೇ? ಈಗ ಹೊರಡಬೇಕು. ಅನಾವಶ್ಯಕವಾದ ಇಷ್ಟು ಉದ್ದದ ಚರ್ಚೆಯಲ್ಲಿ ನಿಮ್ಮನ್ನು ಸೆಳೆದುದಕ್ಕೆ ಕ್ಷಮಿಸಬೇಕು."

"ಇಬ್ಬರಿಗೂ ತಿಳಿಯದೆ ಇಷ್ಟು ಹೊತ್ತಾಯಿತೇ. ನಿಮ್ಮ ಗಡಿಯಾರವು

ಮುಂದಕ್ಕೆ ಓಡುತ್ತ ಇರಬಹುದು." ಅದೇ ಸಮಯದಲ್ಲಿ ಎದುರಿನ ಗೋಡೆಯ ಮೇಲೆ ಇದ್ದ ತೂಗು-ಗಡಿಯಾರವೂ 'ಡನ್' ಎಂದು ಹೊಡೆದು ಅಶೋಕನ ಗಡಿಯಾರವು ಮುಂದೆ ಇಲ್ಲವೆಂದು ಸೂಚಿಸಿತು.

ಅಶೋಕನು ಎದ್ದು ನಿಂತನು. ಮಾಯಾದೇವಿಯು ಒಮ್ಮೆ ಮೈಮುರಿಯುತ್ತ ಎದ್ದು ನಿಂತು ಸ್ನೇಹದಿಂದ ಹೇಳಿದಳು: "ಇನ್ನು ಮುಂದೆ ಯಾವಾಗ ತಮ್ಮ ಆಗಮನವಾಗಬಹುದು. ಈ ಸಲ ತಾವು ಬಂದುದರಿಂದ ನನಗೆ ಬಹಳ ಸುಖವು ಉಂಟಾಗಿದೆ."

"ಧನ್ಯವಾದ. ಆದರೆ ಯಾವಾಗ ಬರಲು ಸಾಧ್ಯವಾಗುವುದೆಂದು ಹೇಳಲಾರೆ. ಮತ್ತೆ ನಾನು ಆದಷ್ಟು ಬೇಗನೆ ಹೊರ ಊರಿಗೆ ಹೊರಡಬೇಕೆಂದಿದ್ದೇನೆ. ವಸಂತ ಋತುವನ್ನು ಕಾಡುಗಳಲ್ಲಿ ಕಳೆಯಲು ಇಚ್ಛಿಸುತ್ತೇನೆ."

"ಎತ್ತ ಕಡೆಗೆ ಹೊರಡುವವರಿದ್ದೀರಿ?"

"ಈ ಬಾರಿಯಾದರೊ ಬಹಳ ದೂರವೆಲ್ಲಿಯೂ ಹೋಗುವುದಿಲ್ಲ. ಇಲ್ಲಿಯೇ ನಮ್ಮ ಪ್ರಾಂತದೊಳಗೆಯೇ ಶತಪುತ್ರಾ ಪರ್ವತಗಳಲ್ಲಿ ಸುತ್ತಾಡಬೇಕೆಂದಿದ್ದೇನೆ."

"ಶತಪುತ್ರಾ ಪರ್ವತವು ಬಹಳ ಉದ್ದವಾಗಿದೆಯಲ್ಲವೇ? ಶತಪುತ್ರದಲ್ಲಿ ಯಾವ ನಿರ್ದಿಷ್ಟ ಸ್ಥಳದಲ್ಲಿರುತ್ತೀರಿ?"

ಅಶೋಕನಿಗೆ ಮಾಯಾದೇವಿಯ ಈ ತರದ ಹೆಕ್ಕಿ ಹೆಕ್ಕಿ ಕೇಳುವ ಪ್ರಶ್ನೆಗಳು ಸರಿದೋರಲಿಲ್ಲ. "ಯಾವ ಸ್ಥಳವೆಂದು ಇನ್ನೂ ನಿಶ್ಚಯವಾಗಿಲ್ಲ."

"ಓಹೊ ಹೇಳಲು ಮನಸ್ಸಿಲ್ಲವೇ?"

"ನಿಶ್ಚಯವೇ ಆಗದಿರುವಾಗ ಏನೆಂದು ಹೇಳಲಿ—?"

"ಆದರೆ ಹೋಗುವುದಕ್ಕೆ ಮುಂಚಿತವಾಗಿ ಒಂದು ಸಲ ಅವಶ್ಯ ಬರುವಿರಲ್ಲವೇ?"

"ಪ್ರಯತ್ನಿಸುತ್ತೇನೆ. ಒಳ್ಳೇದು ನಮಸ್ಕಾರ. ನನಗಾಗಿ ಇಷ್ಟೆಲ್ಲ ತೊಂದರೆಗಳನ್ನು ವಹಿಸಿಕೊಂಡದ್ದಕ್ಕೆ ಧನ್ಯವಾದಗಳು."

ಪೋರ್ಟಿಗೆಯಿಂದ ಇಳಿದು ಮೋಟರಿನ ಬಳಿ ಬಂದಾಗ ಡ್ರೈವರನು ನಿದ್ರೆಯಲ್ಲಿ ಗೊರಕೆ ಹೊಡೆಯುತ್ತಿದ್ದನು.

ಐದು

ಶತಪುತ್ರಾ ಪರ್ವತದ ವನಶ್ರೀಯ ಪರಮ ಸೌಂದರ್ಯದ ಸಾಮ್ರಾಜ್ಯದಲ್ಲಿ ಪರ್ವತದ ಮೇಲೆ ಸಂಚರಿಸುತ್ತಿದ್ದ ಮಂದಮಾರುತನು ತನ್ನ ಬಗಲಿನೊಳಗೆ ಅಡಗಿರುವ ಹೂಗಿಡಗಳ ಪರಿಮಳವನ್ನು ಹೊತ್ತುಕೊಂಡು, ಯೌವನಸ್ಥರಾದ ಸುಂದರಿಯರ ಹಾವಭಾವಗಳನ್ನೊಳಗೊಂಡು ಆ ರಮ್ಯ ಪ್ರದೇಶದಲ್ಲಿ ಥೈ ಥೈ ಎಂದು ನರ್ತಿಸುತ್ತಾ ಇರುವ ಸಮಯ. ಅದೇ ಪ್ರಭಾತ ವೇಳೆಯಲ್ಲಿ ಬೈಕೂಲ್ ಮತ್ತು ಇಟಾರಸೀಗಳ ಮಧ್ಯದ ಆ ದೊಡ್ಡ ರಸ್ತೆಯ ಉತ್ತರ ಭಾಗದಲ್ಲಿ ಒಂದು ಮೋಟಾರುಕಾರು ಮಂದಗತಿಯಿಂದ ಹೋಗುತ್ತಾ ಇತ್ತು. ಅದರ ವೇಗವು ಕಷ್ಟದಿಂದ ಹದಿನೈದು ಮೈಲುಗಳಷ್ಟಿರಬಹುದು. ಅದರೊಳಗೆ ಕುಳಿತಿರುವ ವ್ಯಕ್ತಿಯು ಈ ಅಪಾರ ಸೌಂದರ್ಯದ ಔತಣದ ಆನಂದವನ್ನು ತನ್ನ ಕಣ್ಣುಗಳಿಂದ ಪೂರ್ಣವಾಗಿ ಭೋಗಿಸಲು ಆಶಿಸುತ್ತಿದ್ದನು. ಗಾಡಿಯು ತುಂಬಾ ವೇಗವಾಗಿ ಹೋಗುತ್ತಿದ್ದರೆ ಯಾವ ದೃಶ್ಯವಾದರೂ ತಪ್ಪಿ ಹೋಗಬಹುದೆಂಬ ಸಂದೇಹವೊ ಏನೊ! ಕಾರಿನ ಹಿಂದಿನ ' ಕೇರಿಯರ್ ' ನಲ್ಲಿ ಸಾಮಾನುಗಳನ್ನು ಕಟ್ಟಿ, ಅದನ್ನು ಮಯಣದ ಬಟ್ಟೆಯಿಂದ ಮುಚ್ಚಿಬಿಗಿದಿದೆ.

"ನಿಲ್ಲು ಅಬ್ದುಲ್ಲ."

"ಸರಿ ಹುಜೂರ್."

"ಆ ದೃಶ್ಯವು ಬಹಳ ಸುಂದರವಾಗಿದೆ. ಸ್ವಲ್ಪ ಹತ್ತಿರ ನಡೆದು ಹೋಗಿ ನೋಡೋಣವೇ ?"

"ಆಗಲಿ ಹುಜೂರ್."

ಮೋಟಾರು ಅಲ್ಲಿಯೇ ಹತ್ತಿರವಿದ್ದ ಒಂದು ಮಾವಿನ ಮರದಡಿಯಲ್ಲಿ ನಿಂತಿತು. ಅಶೋಕನು ಒಂದು ಎತ್ತರದ ಪ್ರದೇಶದ ಮೇಲೆ ಹೋಗಿನಿಂತನು. ಎದುರಿನ ಎರಡು ಪರ್ವತಗಳ ಮಧ್ಯದಲ್ಲಿ ಒಂದು ಚಿಕ್ಕ ಜಲಪಾತವು ತನ್ನ ಶುಭ್ರವಾದ ಬಣ್ಣವಿಲ್ಲದ ಬಣ್ಣದ ಜಲದೊಂದಿಗೆ ಕೆಳಗಡೆ ಹರಿದು ಬೀಳುತ್ತಿತ್ತು. ಎರಡೂ ಮಗ್ಗುಲಲ್ಲಿ ಹಚ್ಚೆಹಸುರಾದ ಮರಗಳಿವೆ- ಅವುಗಳನ್ನು ಅಪ್ಪಿಹಿಡಿದ ಬಣ್ಣಬಣ್ಣದ ಹೂಗಳಿಂದೊಡಗೂಡಿದ ಲತೆಗಳು. ನೀರಿನ ಮಧ್ಯಮಧ್ಯದಲ್ಲಿ ಅಲ್ಲಲ್ಲಿ ಕೆಲವು ಕಪ್ರುಗಾಗಿರುವ ಕಲ್ಲುಗಳು. ಮೇಲೆ ನೀಲ ಮತ್ತು ಬೆಳ್ಳಗಿನ

ಮೋಡಗಳಿಂದ ತೂಗಾಡುತ್ತಿದ್ದ ವಿಶಾಲವಾದ ಆಕಾಶ. ಅಶೋಕನು
ನಂತೆ ಆ ಜಲರಾಶಿಯ ಕಡೆಗೆ ನೋಡುತ್ತಾ ಇದ್ದಾನೆ. ಸ್ತಬ್ಧ, ಏಕಾಗ್ರ,
ಚಲ ಕಣ್ಣುಗಳಲ್ಲಿ ಈಗಲೂ ಅದೇ ದೃಷ್ಟಿ. ಮತ್ತೆ ಈಗ ಇನ್ನೂ
ಹೆಚ್ಚಾಗಿ. ಮುಖದ ಮೇಲೆ ಪರಮ ಆಸಕ್ತಿಯ ಭಾವ. ಪುನಃ ದಿಗ್ಭಾ
ನಂತೆ ಉಲ್ಲಾಸದೊಂದಿಗೆ ಚೀರ್ರೆಂದು ಚೀರುತ್ತಿದ್ದನು. ಇದೆಲ್ಲ ಅವನಿಗೆ ಸ
ರಣ ಮನುಷ್ಯನಿಗೆ ಹಣದ ಕೊಪ್ಪರಿಗೆಯು ಸಿಕ್ಕಿದಷ್ಟು ಸಂತೋಷವನ್ನು
ಮಾಡುತ್ತಿತ್ತು.

"ಅಬ್ದುಲ್ಲ! ತರುವುದು ತಾನೇ ಕೆನ್‌ವಾಸು, ಬ್ರಶ್ಶುಗಳನ್ನು?"

ಅಬ್ದುಲ್ಲನು ಕೆನ್‌ವಾಸು, ಬ್ರಶ್, ಬಣ್ಣದ ಪೆಟ್ಟಿಗೆ, ಮರದ ಹಲ
ಸೂಜಿಗಳು ಇತ್ಯಾದಿಗಳನ್ನೆಲ್ಲ ತಂದು ತಯಾರು ಮಾಡಿದ. ಅಲ್ಲಿಗೆ ಬೇಕ
ಎಲ್ಲಾ ವ್ಯವಸ್ಥೆಗಳು ಒಂದೇ ಕ್ಷಣದಲ್ಲಿ ಆಗಿ ಹೋದವು. ಅಶೋಕ ಠಾಕೂ
ಕೈಯಲ್ಲಿ ಕುಂಚವು ಶೋಭಿಸುವ ಮೊದಲು ಥರ್‌ಮಾಸ್‌ಫ್ಲಾಸ್ಕನಿಂದ ಒಂ
ಕಪ್ ಚಾ ಮತ್ತು ಎರಡು ಬಿಸ್ಕತ್ತುಗಳು ಕೊಡಲಾದುವು. ಇವುಗಳನ
ಕೊಡುತ್ತಿರುವಾಗ ಅಬ್ದುಲ್ಲನ ಕಣ್ಣುಗಳಲ್ಲಿ ವಾತ್ಸಲ್ಯದ ಸೌಮ್ಯ ಪ್ರಭಾವ
ಹೊಳೆಯುತ್ತಿತ್ತು. ತಾಯಿಯು ತನ್ನ ಒಬ್ಬನೇ ಮಗನಿಗೆ ಮಹತ್ಕಾರ್ಯ
ಪ್ರಾರಂಭದಲ್ಲಿ ಪ್ರೋತ್ಸಾಹ ಮತ್ತು ಪ್ರೇರಣೆಯ ಹಾಲನ್ನು ಕುಡಿಸುತ್ತಿದ್ದಂ
ಅಬ್ದುಲ್ಲನೂ ಅಶೋಕನಿಗೆ ಈಗ ಚಾ ಬಿಸ್ಕತ್ತುಗಳನ್ನು ನೀಡುತ್ತಿದ್ದಾನೆ.

ಇದೇ ರೀತಿ ಆಡುತ್ತ ಕುಣಿಯುತ್ತಲೇ ಅಶೋಕನ ಪ್ರವಾಸವು ಸಾಗ
ತ್ತಿತ್ತು. ಶತಪುತ್ರಾ ಪರ್ವತಗಳ ಯಾವ ವರ್ಣನೆಯನ್ನು ಕೇಳಿದ್ದನೋ, ಅ
ಕ್ಕಿಂತಲೂ ಇದು ಹೆಚ್ಚು ಸುಂದರವಾಗಿತ್ತು. ನಿಜವಾದ ಮಾತೆಂದರೆ ಸೌಂದ
ರ್ಯವು ಅಶೋಕನ ದೃಷ್ಟಿಯ ಒಂದೊಂದು ಬಿಂದುಗಳಲ್ಲಿಯೂ ತುಂಬಿಕೊಂ
ಡಿತ್ತು. ಆದ್ದರಿಂದ ಇದು ಅವನಿಗೆ ಎಲ್ಲೆಡೆಗಳಲ್ಲಿಯೂ ಕಾಣಸಿಗುತ್ತಿತ್ತು.
ಈ ಪ್ರದೇಶದ ಯಾವುದೇ ಗ್ರಾಮದಲ್ಲಾದರೂ ಒಳ್ಳೆಯ ಜಾಗೆ ಮತ್ತು ವ್ಯವಸ್ಥೆ
ಯಾದರೆ ಒಂದೆರಡು ತಿಂಗಳು ಇಲ್ಲಿಯೇ ಇದ್ದು, ಸುತ್ತುಮುತ್ತಲೂ ಇದ್ದ ರಮ
ಣೀಯ ಸ್ಥಳಗಳಲ್ಲಿ ಭ್ರಮಣ ಮಾಡುವುದೆಂದು ಅವನು ನಿಶ್ಚಯಿಸಿಕೊಂಡನು.

ಒಂದು ದಿನ ಬೆಳಿಗ್ಗೆ ಸುಮಾರು ಹತ್ತು ಘಂಟೆಯ ಸಮಯಕ್ಕೆ ಅಶೋಕನ
ಮೋಟಾರುಕಾರು ಫಾಡರ್ ಎಂಬ ಊರನ್ನು ಸೇರಿತು, ಪರ್ವತಗಳ ಸಮೀಪ

ದಲ್ಲಿಯ ಒಂದು ಸುಂದರ ಪ್ರದೇಶದಲ್ಲಿಯೇ ಈ ಚಿಕ್ಕ ಊರು ಕಂಗೊಳಿಸುತ್ತಿತ್ತು. ಈ ಸ್ಥಳವು ಕ್ರೈಸ್ತರ ಒಂದು ದೊಡ್ಡ ಕೇಂದ್ರವಾಗಿದ್ದಿತು. ಕಾರಣ ಇಲ್ಲಿ ಯಾವಾಗಲೂ ಪಾದರಿಗಳು ವಾಸಿಸುತ್ತಿದ್ದು, ಇವರನ್ನು ಪ್ರಾಯಶಃ 'ಫಾದರ್' ಎಂದು ಕರೆಯುತ್ತಾರೆನ್ನಬಹುದು. ಅದೇ ಬರಬರುತ್ತ ಫಾಡರ್ ಆಗಿದ್ದಿರಲೂ ಸಾಧ್ಯವಿದೆ. ಕೆಲವು ವಿದ್ಯಾವಂತರು ಇದನ್ನು ಫಾದರೀಪುರವೆಂದೂ ಕರೆಯುತ್ತಿದ್ದರು. ಈ ಪ್ರದೇಶದಲ್ಲಿ ಗೊಂಡರುಗಳ ನಿವಾಸವಿದೆ. ಈ ಜನರ ಮಧ್ಯದಲ್ಲೇ ಕೆಲವು ವರ್ಷಗಳಿಂದ ಬೇರೆ ಬೇರೆ ಮಿಶನರಿ ಸಂಸ್ಥೆಗಳು ತಮ್ಮ ಪ್ರಚಾರ ಕಾರ್ಯಗಳನ್ನು ಮಾಡುತ್ತ ಬಂದಿದ್ದವು. ಇದೇ ಕಾರಣದಿಂದ ಫಾದರೀಪುರದ ಜನಸಂಖ್ಯೆಯಲ್ಲಿ ಕೆಲವು ಗೊಂಡರ ಕುಟುಂಬ ಮತ್ತು ಭೀಲ ಜಾತಿ; ಅಲ್ಲದೆ ಇನ್ನು ಒಂದೆರಡು ಜಾತಿಗಳನ್ನು ಉಳಿದು ಇತರರೆಲ್ಲರೂ ಕ್ರೈಸ್ತರೇ ಆಗಿದ್ದರು.

ಮಾರ್ಗದ ಬಲಭಾಗದಲ್ಲಿ ಇಂಗ್ಲಿಷ್ ಪಾದರಿಗಳ ಎರಡು ದೊಡ್ಡ ಬಂಗಲೆಗಳು ಮತ್ತು ಒಂದು ದೊಡ್ಡ ಇಗರ್ಜಿಯೂ, ಎಡಭಾಗದಲ್ಲಿ ಫಾಡರೀಪುರವೆಂಬ ಊರೂ ಕಂಗೊಳಿಸುತ್ತಿತ್ತು. ಇದರಲ್ಲಿ ಹೆಚ್ಚಾಗಿ ಹುಲ್ಲಿನ ಗುಡಿಸಲುಗಳೇ ಇದ್ದವು. ಅದೇ ದೊಡ್ಡ ರಸ್ತೆಯಲ್ಲಿ ಒಂದು ಪ್ರಾಥಮಿಕ ಶಾಲೆಯೂ, ಒಂದು ಚಿಕ್ಕ ಆಸ್ಪತ್ರೆಯೂ ಕಾಣುತ್ತಿರುವುದು. ಹತ್ತಿರವೇ ಒಂದು ಔದ್ಯೋಗಿಕ ಕೇಂದ್ರವಿದೆ. ಇಲ್ಲಿಯೇ ಖದ್ದರಿನಂತಹ ದಪ್ಪ ಬಟ್ಟೆಯನ್ನು ನೇಯಲು ಯಂತ್ರದ ಗಿರಣಿಗಳನ್ನು ಹಾಕಿದ್ದರು. ಒಂದು ದೊಡ್ಡ ಗೋಳೀಮರದ ಅಡಿಯಲ್ಲಿ ಪಾದರಿಗಳ ಬಂಗಲೆಯ ಎದುರಲ್ಲಿಯೇ ಮೋಟಾರು ಸ್ಟೇಂಡೂ ಇದೆ. ಇಲ್ಲೇ ಆ ಮಾರ್ಗಗಳಲ್ಲಿ ಓಡಾಡುವ ಬಸ್ಸುಗಳು ನಿಲ್ಲುತ್ತಿದ್ದವು. ಅದೇ ಸ್ಥಳದಲ್ಲಿ ಒಂದು ಅಂಗಡಿಯೂ ಇದ್ದಿತ್ತು. ಇದರಲ್ಲಿ ಎಲೆ, ಅಡಿಕೆ, ಬೀಡಿ, ಕಾಫಿ, ಚಾ ಮತ್ತು ಕೆಲವು ತಿನ್ನುವ ವಸ್ತುಗಳು, ಚಿಮ್ಣಿಎಣ್ಣೆಯಿಂದ ಹಿಡಿದು ಕಾಳು, ಹಿಟ್ಟು, ಬೇಳೆಗಳ ವರೆಗೆ ಹಾಗೆಯೇ ಗುಂಡು, ಆಟದ ಸಾಮಾನುಗಳನ್ನು ಮೊದಲ್ಗೊಂಡು ಸಾಬೂನು, ಲಾಟಾನು, ಕಬ್ಬಿಣದ ಸಾಮಾನುಗಳ ವರೆಗಿನ ಎಲ್ಲಾ ತರದ ಅವಶ್ಯ ವಸ್ತುಗಳೂ ಸಿಗುತ್ತಿದ್ದವು. ಆ ಊರಿನ ರಾಜನೀತಿ, ಸಾಮಾಜಿಕ ಚರ್ಚೆ, ಅಂತೆಯೇ ಅನಾವಶ್ಯಕ ಸಂಭಾಷಣೆಗಳು ನಡೆಯುವ ಕೇಂದ್ರ ಸ್ಥಳವೆಂದರೆ ಅದೇ ಸರಿ.

ಆ ಅಂಗಡಿಯ ಮಾಲಿಕನಾದರೂ ಒಬ್ಬ ಮುದುಕ ಕ್ರೈಸ್ತನೇ ಆಗಿದ್ದನು.

ಅವನನ್ನು ಆ ಊರಿನ ಜನರು ಜೊಸೆಫ್ ತಾತನೆಂದು ಕೂಗುತ್ತಿದ್ದರು. ಅ
ಎಷ್ಟು ವರ್ಷಗಳಿಂದ ಅಲ್ಲಿ ವಾಸಿಸುತ್ತಿದ್ದನೆಂಬುದು ಗೊತ್ತಿಲ್ಲದ ವಿಷಯ.
ನಿಗೆ ಬಹಳ ಹಿಂದಿನ ಮಾತುಗಳೂ ನೆನಪಿವೆ. ಮೆಮ್ ಸಾಹೇಬರಲ್ಲಿ
ಆಂಗ್ಲ ವರ್ತಮಾನಪತ್ರಿಕೆಗಳನ್ನು ತಂದು ಅವನು ಅಲ್ಪ ಸ್ವಲ್ಪ ಇಂಗ್ಲೀಷ
ಕಲಿತಿದ್ದನು. ಜೊಸೆಫ್ ತಾತನ ಅಷ್ಟು ಚಿಕ್ಕದಾದ ತಲೆಯೊಳಗೆ ದೊ
ದೊಡ್ಡ ಮಾತುಗಳನ್ನು ಹೇಗೆ ಅವನು ತುಂಬಿಟ್ಟುಕೊಳ್ಳುತ್ತಿದ್ದಾನೆಂದು ಪಾ
ಪುರದ ನಿವಾಸಿಗಳು ಆಶ್ಚರ್ಯಪಡುತ್ತಿದ್ದರು. ಇದೇ ಕಾರಣದಿಂದ ಅವರ
ಳೆಲ್ಲ ಅವನಿಗೆ ಯಾವಾಗಲೂ ಮನ್ನಣೆ ಕೊಡುತ್ತಿದ್ದರು. ತಮ್ಮ ಎಲ್ಲ ತರ
ಕಷ್ಟ ನಿಷ್ಠುರಗಳಲ್ಲಿಯೂ ಅವನಿಂದ ಸಹಾಯವನ್ನೂ ಸಲಹೆಯನ್ನೂ ಪಡೆಯ
ತ್ತಿದ್ದರು.

ಅಶೋಕನ ಮೋಟಾರುಕಾರು ಜೋಸೆಫ್ ತಾತನ ಅಂಗಡಿಯ ಮುಂ
ಆ ಮರದಡಿಯಲ್ಲಿ ಬಂದು ನಿಂತಿತು. ಸುತ್ತುಮುತ್ತಲಿನ ಸುಂದರ ದೃಶ್ಯ
ಗಳನ್ನು ನೋಡಿದ ಅಶೋಕನ ಮನಸ್ಸು ಬಹಳ ಉಲ್ಲಾಸದೊಂದಿಗೆ ಉಬ್ಬಿ
ಕೊಂಡಿತು. ಇಲ್ಲಿಯೇ ತನ್ನ ಡೇರೆಯನ್ನು ಹಾಕಲು ಸ್ಥಳ ಸಿಕ್ಕಿದರೆ ಬಹಳ
ಉತ್ತಮವಾದೀತೆಂದು ಯೋಚಿಸಿದನು. ಅಬ್ದುಲ್ಲನು ಕಾರಿನ ಬಾಗಿಲು ತೆಗೆ
ದೊಡನೆ ಅಶೋಕನು ಅದರಿಂದ ಇಳಿದನು. ಚಿಕ್ಕದಾದ ಆ ಮೋಟಾರನ್ನು
ನೋಡಲು ಶಾಲೆಗೆ ಹೋಗುತ್ತಿದ್ದ ಮಕ್ಕಳ ಒಂದು ಗುಂಪೇ ಬಂದು ಸೇರಿತು.
ಜೋಸೆಫ್ ತಾತನ ವಯಸ್ಸಿನವರೂ ಕೂಡ ಇದನ್ನು ನೋಡಲಾರಂಭಿಸಿದಾಗ
ಮಕ್ಕಳು ನೋಡಲು ಕುತೂಹಲ ಪಡುವುದರಲ್ಲೇನು ಆಶ್ಚರ್ಯ ! ಅವರಿಗೆಲ್ಲ
ಇಂತಹ ಸಂದರ್ಭಗಳು ಸಿಗುವುದೇ ದುರ್ಲಭವಾಗಿದ್ದವು.

ಜೋಸೆಫ್‌ನೊಡನೆ ಸಾಧಾರಣವಾದ ಮಾತುಕತೆಗಳಾದ ಮೇಲೆ ಅವನು
ಅಲ್ಲಿಯ ವಿಚಾರಗಳನ್ನೂ ಬೇಕಾದ ಅವಶ್ಯಕ ಮಾತುಗಳನ್ನೂ ತಿಳಿಸಿ, ಅಶೋ
ಕನನ್ನು ತನ್ನ ನೌಕರನೊಂದಿಗೆ ಮೆಮ್ ಸಾಹೇಬರ ಬಂಗಲೆಯ ಕಡೆಗೆ ಕಳು
ಹಿಸಿದನು. ಅಬ್ದುಲ್ಲನೂ ಅವನೊಂದಿಗೇ ಇದ್ದನು.

ಮೆಮ್‌ಸಾಹೇಬರು ಅಶೋಕನನ್ನು ಬಹಳ ಸ್ನೇಹದಿಂದ ಸ್ವಾಗತಿಸಿದರು.
ಅವರು ರೋಮನ್ ಕೆಥೊಲಿಕ್ ಸಂಪ್ರದಾಯದವರಾಗಿದ್ದರು. ಅಲ್ಲದೆ ಅವರು
ಇಲ್ಲಿ ವಾಸಿಸಲಾರಂಭಿಸಿ ಹನ್ನೆರಡು ವರ್ಷಗಳು ಆಗಿದ್ದವು. ಅಶೋಕನ

ಯುರೋಪಿಯನರ ಪೋಷಾಕು ಮತ್ತು ಸಭ್ಯ ವ್ಯಕ್ತಿತ್ವದ ಪ್ರಭಾವವು ಅವರಲ್ಲಿ ಒಳ್ಳೆಯ ಅಭಿಪ್ರಾಯವನ್ನುಂಟು ಮಾಡಿತು.

ಪ್ರಾರಂಭದ ಔಪಚಾರಿಕ ಮಾತುಕತೆಗಳ ನಂತರ ಮೆಮ್ ಸಾಹೇಬ್ ಅಂದರೆ ಮಿಸ್. ಥಾಮಸ್ ಅವರು ಕೇಳಿದರು:

"ತಾವು ದೇಶಸಂಚಾರಿಗಳೇ ?"

"ಅಲ್ಲ, ಅಂತಹ ದೇಶಭ್ರಮಣ ಸಂಪ್ರದಾಯದವನಲ್ಲ ನಾನು. ಒಳ್ಳೆಯ ದೃಶ್ಯಗಳನ್ನು ಬಣ್ಣಿಸಲು ಎಂದರೆ ಚಿತ್ರಿಸುವುದಕ್ಕೋಸ್ಕರ ಹಲವು ಬಾರಿ ಕಾಡು ಪ್ರದೇಶಗಳಲ್ಲಿ ಸುತ್ತಾಡುತ್ತೇನೆ."

"ಓಹೋ! ತಾವು ಆರ್‌ಟಿಸ್ಟ್ ಅಲ್ಲವೇ? ತಮ್ಮಲ್ಲಿ ಚಿತ್ರಗಳ ನಮೂನೆಗಳಾವುವಾದರೂ ಇವೆಯೇ?"

"ಬಹು ಸಂಖ್ಯೆಯಲ್ಲಿಲ್ಲ. ಆದರೆ ಕೇವಲ ಮೂರೋ ನಾಲ್ಕೋ ಇವೆ. ನಿಮಗೆ ಅವುಗಳು ಚೆನ್ನಾಗಿ ಕಾಣುವುವೋ ಇಲ್ಲವೋ ಎಂಬುದನ್ನು ನಾನರಿಯೆ."

ಐದು ಮಿನಿಟುಗಳೊಳಗೆ ಅಬ್ದುಲ್ಲನು ಚಿತ್ರಗಳನ್ನು ತಂದನು. ಅಶೋಕನು ಅವುಗಳನ್ನು ಸಂಪೂರ್ಣವಾಗಿ ಏಕಾಗ್ರತೆಯೊಂದಿಗೆ ಒಂದೊಂದಾಗಿ ಅವರಿಗೆ ತೋರಿಸಲಾರಂಭಿಸಿದನು.

ಜಲಪಾತದ ಮೊದಲನೆ ಚಿತ್ರವನ್ನು ನೋಡುತ್ತಲೇ ಮಿಸ್ ಥಾಮಸ್‌ಳು ಪ್ರಸನ್ನಚಿತ್ತಳಾದಳು. ಕಲಾಪ್ರವೀಣನ ಒಂದೇ ಒಂದು ಪ್ರದರ್ಶನವೇ ಅವನ ಕಲಾಕೌಶಲ್ಯವನ್ನು ತೂಕ ಮಾಡಲು ಸಾಕಾಗಿತ್ತು. ಆದರೂ ಅವನ ಕೊನೆಯ ಚಿತ್ರ ಕ್ರೈಸ್ತನು ಕ್ರಾಸಿನ ಮೇಲೆ ತೂಗಾಡುತ್ತಿರುವ ಚಿತ್ರ. ಇದನ್ನು ನೋಡುತ್ತಲೇ ಆ ಧರ್ಮನಿಷ್ಠೆಯಾದ ಮಹಿಳೆಯು ಆನಂದ ಮತ್ತುಆಶ್ಚರ್ಯಗಳೊಂದಿಗೆ ಭ್ರಮೆಗೊಂಡು ಅದನ್ನೇ ಎವೆ ಇಕ್ಕದೆ ನೋಡುತ್ತಾ ಇದ್ದಳು. ಅವಳ ಬಾಯಿಯಿಂದ ತನ್ನಿಂದ ತಾನೆ ಹೊಗಳುವಿಕೆಯ ಅಸ್ಪಷ್ಟ ವಾಣಿಯೊಂದಿಗೆ ಉದ್ಗಾರ ಒಂದು ಹೊರಬಿದ್ದಿತು.

ಜಗತ್ತಿನ ಸಮಸ್ತ ದೇಶಭಕ್ತರುಗಳ ಮರಣ ಮತ್ತು ಅರ್ಪಣೆಯ ಆನಂದ ಜ್ಯೋತಿಯು ಆ ಒಂದೇ ಮುಖದ ಮೇಲೆ ಒಟ್ಟುಗೂಡಿಕೊಂಡು ಹೊಳೆಯುತ್ತಿತ್ತು. ತನ್ನ ಆ ಅಸಹನೀಯ ವ್ಯಥೆಯೊಂದಿಗೆ ಅವಳು ಮೇಲಕ್ಕೆ ನೋಡುತ್ತ ವ್ಯಸನದೊಂದಿಗೆ ಹೇಳಲಾರಂಭಿಸಿದಳು:

"ಓ ನನ್ನ ಗಗನದಲ್ಲಿರುವ ಪಿತನೇ, ನೀನು ನನ್ನನ್ನು ಈ ತೆ
ಸಂಸಾರದಲ್ಲಿ ಏತಕ್ಕಾಗಿ ಸೃಷ್ಟಿಸಿದೆ?"

ಮಿಸ್ ಥಾಮಸ್‌ಳ ಮುಖದ ಮೇಲೆ ಚಿತ್ರದ ವಿಷಯವಾಗಿ ಅ
ಅನುರಾಗವು ಉಂಟಾಗಿರುವುದೆಂಬುದನ್ನು ಅಶೋಕನು ಮನಗಂಡನು. ಅ
ಕಣ್ಣುಗಳೂ ಕೂಡ ಇದನ್ನು ಕಂಡು ಸಹವೇದನೆಯಿಂದ ನರಳಲಾರಂಭಿಸಿದ
ಮಿಸ್ ಥಾಮಸಳು ಆ ಚಿತ್ರದ ದಿವ್ಯ ಸಂದೇಶದ ಅವಗಾಹನೆಗಾಗಿ ಸಮಾಧಿ
ಳಾದಂತೆಯೇ ಆದಳು. ಸ್ವಲ್ಪ ಸಮಯದ ನಂತರ ಒಮ್ಮಿಂದೊಮ್ಮೆಗೆ ತ
ಈ ನಿದ್ರಾವಸ್ಥೆಯಿಂದ ಜಾಗೃತಳಾಗಿ ಅವಳು ಕೇಳಿದಳು:

"ಏನು ತಾವು ಕ್ರೈಸ್ತರೇ?"

"ಅಲ್ಲ"

"ಆಶ್ಚರ್ಯ! ಹಾಗಾದರೆ ತಾವು ಕ್ರೈಸ್ತನ ಈ ತರದ ವೇದನೆಯೊಂದಿ
ಕೂಡಿದ ಇಷ್ಟು ಸುಂದರವಾದ ಮತ್ತು ಸಜೀವವೆಂದು ತೋರುವಂಥ ಚಿತ್ರ
ವನ್ನು ಹೇಗೆ ಬರೆದಿರಿ? ಇಂತಹದಾದರೊ ಅಚಲವಾದ ಶ್ರದ್ಧೆ ಇಲ್ಲದೆ ಚಿತ್ರಿ
ಸಲು ಸಾಧ್ಯವೇ ಇಲ್ಲ.

"ಸರಿಯೇ, ಆದರೆ ಇಂತಹ ಶ್ರದ್ಧೆ ಉಂಟಾಗಬೇಕಾದರೆ ಕ್ರೈಸ್ತರ ರೂಢಿ
ಸಂಸ್ಕಾರಗಳನ್ನು ಹೊಂದಿಕೊಳ್ಳಬೇಕೆಂಬ ಅವಶ್ಯಕತೆ ಇರುವದಿಲ್ಲ. ಯಾವನು
ಕ್ರೈಸ್ತನ ಭಾವನೆಯನ್ನು ಹೃದಯದಲ್ಲಿ ತಂದುಕೊಳ್ಳಬಲ್ಲನೋ ಅವನು ತನ್ನ ಕಲೆ
ಯಲ್ಲಿ ಅವನನ್ನು ಚಿತ್ರಿಸಲೂ ಬಲ್ಲನು."

ಮಿಸ್ ಥಾಮಸಳ ಹೃದಯದಲ್ಲಿ ಕಲೆಯಿಂದುಂಟಾದ ಭಾವನೆಯಿಂದಾಗಿ
ಅಶೋಕನ ಬಗ್ಗೆ ಸ್ನೇಹ,: ಆದರ ಮತ್ತು ಆತ್ಮೀಯತೆಯ ಭಾವಗಳ ಜಾಗೃತಿ
ಯುಂಟಾಯಿತು. ಆದ್ದರಿಂದ ಅವಳಲ್ಲಿ ಅವನು ಬೇರೆ ತಾನು ಬೇರೆ ಎಂಬ
ಭಾವವೂ ಅಲ್ಲದೆ ಔಪಚಾರಿಕ ವ್ಯವಸ್ಥೆಗಳೂ ಒಮ್ಮಿಂದೊಮ್ಮೆ ನಷ್ಟವಾಯಿತು.
ಅವಳು ತನ್ನೆದುರಿಗೆ ಕುಳಿತಿರುವ ಆ ಸಭ್ಯ ವ್ಯಕ್ತಿಯು ಒಳ್ಳೆ ಉಚ್ಚ ಶ್ರೇಣಿಯ
ಕಲಾಕಾರನೆಂಬುದನ್ನು ಕೂಡಲೆ ತಿಳಿದುಕೊಂಡಳು.

"ತಾವು ಇದಕ್ಕಾಗಿ ಹೀಗೆಯೇ ತಿರುಗಾಡುತ್ತಲೇ ಇರುವಿರಾ?"

"ಯಾವಾಗಲೂ ತಿರುಗಾಡುತ್ತಾ ಇರಲು ಸಾಧ್ಯವಾಗುವುದಿಲ್ಲ. ಆದರೆ
ಇಲ್ಲಿಯೇ ಎಲ್ಲಿಯಾದರೂ ನನ್ನ ಡೇರೆ ಹಾಕಲು ವ್ಯವಸ್ಥೆಯಾದರೆ ಅದನ್ನೇ

ನನ್ನ ಕೇಂದ್ರವಾಗಿಟ್ಟುಕೊಂಡು ಕಾಡುಗುಡ್ಡಗಳಲ್ಲಿ ಕೆಲವು ಕಾಲ ಸುತ್ತಾಡುತ್ತ ಇರಬಹುದು ಎಂಬುದು ನನ್ನ ಅಭಿಪ್ರಾಯ."

"ತಾವು ಇದೇ ಗ್ರಾಮದಲ್ಲಿ ಉಳಿದುಕೊಳ್ಳಲು ಇಷ್ಟಪಡುವಿರೇನು ?"

"ಈ ಗ್ರಾಮದ ಸೌಂದರ್ಯದ ಆಕರ್ಷಣೆಯಿಂದಲೇ ನಾನಿಲ್ಲಿ ಉಳಿದುಕೊಂಡೆನು. ಮತ್ತು ಇಲ್ಲಿಯೇ ಉಳಿದುಕೊಳ್ಳುವ ವಿಚಾರವನ್ನು ಕೇಳಲು ನಿಮ್ಮಲ್ಲಿಗೆ ಬಂದಿದ್ದೇನೆ."

"ತಾವಿಲ್ಲಿ ಎಷ್ಟು ದಿನ ತಂಗಿರುವ ಯೋಚನೆ ?"

"ಎರಡು, ಎರಡೂವರೆ ತಿಂಗಳುಗಳ ವರೆಗೆ ಇರಬೇಕೆಂದಿದ್ದೇನೆ."

"ಹಾಗಾದರೆ ಪ್ರಾಯಶಃ ನಾನು ನಿಮಗೆ ಸಹಾಯ ಮಾಡಲು ಸಾಧ್ಯವಾದೀತು. ನೋಡಿ ಈ ಪಕ್ಕದ ಮನೆ ನಿಮಗೆ ಹೇಗೆ ? ಚೆನ್ನಾಗಿ ಕಾಣುತ್ತಿದೆಯೇ ? ಫಾದರ್ ವಿಲಿಯಮ್ಸ್ ಅದರಲ್ಲಿ ವಾಸಿಸುತ್ತಾರೆ. ಆದರೆ ಅವರೀಗ ಇಂಗ್ಲಂಡ್‌ನಲ್ಲಿದ್ದಾರೆ. ಆರು ತಿಂಗಳ ನಂತರ ಬರುತ್ತಾರೆ. ಮನೆ ಸಾಧಾರಣ ಒಳ್ಳೆಯದಾಗಿಯೇ ಇದೆ. ಫರ್ನೀಚರ್ ಮತ್ತಿತರ ಸಾಮಾನುಗಳೆಲ್ಲಾ ಅದರಲ್ಲಿಯೇ ಇವೆ. ನಿಮಗೆ ಇದು ಉಪಯೋಗವಾಗಿದ್ದು, ಉಳಕೊಳ್ಳಲು ಸೌಕರ್ಯವಾಗಿರಬಹುದು. ಮಾತ್ರವಲ್ಲದೆ ನಿಮ್ಮ ಕಾರ್ಯಕಲಾಪಗಳೂ ಇದರಲ್ಲಿ ಸಾಗಬಹುದು."

"ಬಹಳ ಒಳ್ಳೇದಾಯಿತು" ಅಶೋಕನು ತುಂಬಾ ಸಂತೋಷಗೊಂಡನು. "ಇದಕ್ಕಿಂತಲೂ ಹೆಚ್ಚಾಗಿ ನಮಗಿನ್ನೇನು ಬೇಕಾಗಿದೆ ? ನಾನು ನಿಮಗೆ ತುಂಬಾ ಕೃತಜ್ಞನಾಗಿದ್ದೇನೆ. ಬಾಡಿಗೆ ಎಷ್ಟು ಕೊಡಬೇಕಾದೀತು?"

"ಬಾಡಿಗೆಯನ್ನು ನಂತರ ನಿಶ್ಚಯಿಸಬಹುದು. ಮೊದಲು ಮನೆಯು ನಿಮ್ಮ ಕೆಲಸಗಳಿಗೆ ಅನುಕೂಲವಾಗಿದೆಯೋ ನೋಡಿಕೊಳ್ಳಿರಿ. ಈಗಲೇ ಅದನ್ನು ತೋರಿಸುವ ಏರ್ಪಾಡು ಮಾಡುತ್ತೇನೆ. " ಮರಿಯಮ್ " ಎನ್ನುತ್ತ ಒಳಗಿನ ಕೋಣೆಯನ್ನು ಇಣಿಕಿ ನೋಡಿ ಯಾರನ್ನೋ ಕೂಗಲಾರಂಭಿಸಿದಳು.

"ಏನು ಮೆಮ್ ಸಾಹೇಬ್" ಒಳಗಿನಿಂದ ಒಂದು ಮಧುರವಾದ ಧ್ವನಿ ಬಂದಿತು. ಮರುಕ್ಷಣದಲ್ಲೇ ಒಬ್ಬ ಆಹ್ಲಾದಪೂರ್ಣಳಾದ ಗೌರವರ್ಣದ ಸುಂದರ ಯುವತಿಯು ಅವರ ಕೋಣೆಯೊಳಗಿಂದ ಬಂದಳು. ಒಬ್ಬ ಸಭ್ಯ ಆಗಂತುಕನನ್ನು ನೋಡಿ, ಅವಳು ಸ್ವಲ್ಪ ಸಂಕೋಚಗೊಂಡಳು. ಆದರೆ ಆತ

ನನ್ನು ಒಂದೇ ಸಮನೆ ನೋಡುತ್ತಿದ್ದಳು. ಅವಳ ದೃಷ್ಟಿಯು ಕುತೂಹಲದಿ
ದಲೂ ವಿಸ್ಮಯದಿಂದಲೂ ಕೂಡಿಕೊಂಡಿತ್ತು.

ಇಬ್ಬರ ದೃಷ್ಟಿಯೂ ಒಂದನ್ನೊಂದು ಕೂಡಿಕೊಂಡಿತು. ಒಂದು ಕ್ಷ
ಅವಳು ಅಲ್ಲಿಯೇ ಕಾರಣ ತಿಳಿಯದೆ ಸ್ಥಿರವಾಗಿ ನಿಂತುಬಿಟ್ಟಳು. ಅಶೋಕನ
ಆ ರಮಣಿಯ ವಿಶಾಲವಾದ ಭಾವುಕ ನೇತ್ರಗಳ ಕಡೆಗೆ ಏಕಾಗ್ರತೆಯಿಂ
ನೋಡುತ್ತಲೇ ಇದ್ದನು. ಮರಿಯಮಳು ಕೊನೆಗೆ ತನ್ನ ದೃಷ್ಟಿಯನ್ನು ಲಜ್ಜ
ಯಿಂದ ಕೂಡಲೆ ಬೇರೆಡೆಗೆ ತಿರುಗಿಸಿದಳು. ಆಗ ಅವಳ ದೃಷ್ಟಿಯು ತಾನಾ
ಗಿಯೇ ಕೆಳಗಿಳಿಯಿತು.

ಆ ಯುವತಿಯನ್ನು ನೋಡಿ ಅವಳಿಗೆ ಇಪ್ಪತ್ತು ಇಪ್ಪತ್ತೊಂದು ವಯಸ್ಸಿ
ಬಹುದೆಂದು ಅಶೋಕನು ತಿಳಿದುಕೊಂಡನು. ಅವಳ ತಲೆಯ ಮೋಹಕ
ಕೂದಲು ಆಂಗ್ಲ ರೀತಿಯಲ್ಲಿ ಕತ್ತರಿಸಲ್ಪಟ್ಟಿದ್ದವು. ಸಾಧಾರಣ ಉದ್ದವಾದ
ಮುಖವೂ, ಮೂಗೂ, ತೆಳ್ಳನೆಯ ತುಟಿ, ಮನೋಹರವಾದ ರೂಪು, ಹದವಾದ
ಮೈಕಟ್ಟು, ಹದವಾದ ಎತ್ತರದ ಶರೀರದೊಂದಿಗೆ ತುಂಬಿದ ಹರೆಯ ಇತ್ಯಾದಿ
ಗಳು ಅವಳ ಸೌಂದರ್ಯಕ್ಕೆ ಒಪ್ಪವನ್ನೀಯುವಂತಿದ್ದುವು, ಗುಲಾಬಿ ಬಣ್ಣದ
ಚೀಟಿನ ಮೇಲೆ ಹಸರು, ನೀಲ ಹೂಗಳಿಂದ ಛಾಪಿಸಲ್ಪಟ್ಟ ಬಟ್ಟೆಯ ಗವನಿನಂ
ತಹ ಪೋಷಾಕನ್ನು ಧರಿಸಿಕೊಂಡಿದ್ದಳು. ಅವಳ ಕಾಲುಗಳು ಬರಿದಾಗಿದ್ದವು.
ಕಾಲಲ್ಲಿ ಸರಪಣಿಯಾಗಲೀ ಅಥವಾ ಪಾದರಕ್ಷೆಗಳಾಗಲೀ ಯಾವುದೂ ಇರಲಿಲ್ಲ.
ಆ ತರುಣಿಯು ಸ್ವಭಾವತಃ ಸುಂದರಿಯೇ ಆಗಿದ್ದಳು. ಅವಳನ್ನು ಕಂಡರೆ
ಅವಳು ತನ್ನ ವೇಷಭೂಷಣಗಳ ಕಡೆಗೆ ಹೆಚ್ಚಾಗಿ ಗಮನವೀಯುತ್ತಿರುವಂತೆ
ಕಾಣಲಿಲ್ಲ.

"ಮರಿಯಮ್, ಫಾದರ ಇದ್ದ ಆ ಪಕ್ಕದ ಮನೆಯ ಬೀಗದ ಕೈಗಳು
ನಿನ್ನಲ್ಲಿವೆಯಲ್ಲವೇ? ಇವರಿಗೆ ಆ ಮನೆಯನ್ನು ತೋರಿಸು. ಇವರು ನಾಗ
ಪುರದ ಚಿತ್ರಕಾರರಾದ ಮಿಸ್ಟರ್ ಠಾಕೂರ್ ಎಂಬವರು."

"ಚಿತ್ರಕಾರರೇ!" ಮರಿಯಮಳು ಉಲ್ಲಾಸದೊಂದಿಗೆ ಎಂದಳು. ಅವ
ಳಲ್ಲಿ ಉಂಟಾದ ಆನಂದವನ್ನು ಅವಳಿಂದ ಅಡಗಿಸಲಾಗಲಿಲ್ಲ.

"ನೋಡಿದೆಯಾ ಅವರ ಈ ಚಿತ್ರವನ್ನು" ಮೆಮ್‌ಸಾಹೇಬ್ ಮರಿಯಮ
ಳಿಗೆನ್ನುತ್ತ ಕ್ರಿಸ್ತನ ಆ ಶೂಲೆಯ ಮೇಲೆ ತೂಗುವ ಚಿತ್ರವನ್ನು ತೆಗೆದು ತೋರಿಸಿ

ದಳು. ಮರಿಯಮಳು ಮೊಣಕಾಲುಗಳನ್ನೂರಿ ಬಗ್ಗಿಕೊಂಡು ಏಕಚಿತ್ತದಿಂದ ಆ ಚಿತ್ರವನ್ನು ನೋಡಲಾರಂಭಿಸಿದಳು.

"ಮಿಸ್ಟರ್ ಠಾಕೂರರೇ, ಮರಿಯಮ್ ಒಳ್ಳೆಯ ಗುಣವಂತೆ. ಹತ್ತು ವರ್ಷಗಳಿಂದಲೂ ನನ್ನೊಡನೆ ಇದ್ದಾಳೆ. ಇವಳಿಗೂ 'ಆರ್ಟ್' ಎಂದರೆ ತುಂಬಾ ಅಭಿರುಚಿ ಇದೆ. ಅಲ್ಲದೆ ಅದರಲ್ಲಿ ಸ್ವಲ್ಪಮಟ್ಟಿಗೆ ತಿಳಿದುಕೊಂಡೂ ಇದ್ದಾಳೆ."

ಮರಿಯಮಳು ಆ ಶಬ್ದಗಳನ್ನು ಕೇಳದವಳಂತೆ ನಟಿಸಿದಳು. ಆದರೆ ಅಶೋಕನ ಮನಸ್ಸಿನಲ್ಲಿ ಒಂದು ಬಗೆಯ ವಿಚಾರವು ತುಂಬಿಕೊಂಡಿತು. ಅವಳ ಅನಾಥ ದೆಸೆಯನ್ನು ತಿಳಿದ ಅವನ ಹೃದಯದಲ್ಲಿ ಕರುಣೆಯು ಉತ್ಪನ್ನವಾಯಿತು. ಅವಳಲ್ಲಿರುವ ಕಲಾಭಿರುಚಿಯ ವಿಚಾರಕ್ಕಾಗಿ ಆನಂದವೂ ಆಯಿತು. ಅವಳ ದೊಡ್ಡದಾದ ಭಾವುಕ ಕಣ್ಣುಗಳನ್ನು ಕಂಡ ಅಶೋಕನು ಹಾಗೆಯೇ ಏನನ್ನೋ ಯೋಚಿಸಿದನು.

ಮರಿಯಮಳು ಬಹಳ ಉತ್ಸಾಹದೊಂದಿಗೆ ಆ ಬಂಗಲೆಯ ಒಂದೊಂದು ಭಾಗವನ್ನು ಅಶೋಕನಿಗೆ ತೋರಿಸಲಾರಂಭಿಸಿದಳು. "ಇದು ಡ್ರಾಯಿಂಗ್ ರೂಮ್, ಇದು ಸ್ಟಡಿಯಿಂಗ್ ರೂಮು................ಇದನ್ನು ತಾವು ತಮ್ಮ ಸ್ಟುಡಿಯೊವನ್ನಾಗಿ ಮಾಡಿಕೊಳ್ಳಬಹುದು. ಇದು ಮಲಗುವ ಕೋಣೆ, ಇದೊಂದು ಚಿಕ್ಕ ರೂಮು, ಇದು ಬಚ್ಚಲು, ಇದೇ ಹಿತ್ತಲಿನ ಬಾಗಿಲು, ನೋಡಿ ಮುಂಭಾಗದಲ್ಲಿ ಎಷ್ಟು ಸುಂದರವಾದ ದೃಶ್ಯವಿದೆ! ಬಹುಶಃ ಈ ಎರಡು ಕೋಣೆಗಳು ಸಿಗಲಾರವು. ಕಾರಣವೇನೆಂದರೆ ಇವುಗಳಲ್ಲಿ ಫಾದರ್ ವಿಲಿಯಮ್ಮರು ಮನೆ ಸಾಮಾನುಗಳನ್ನಿಟ್ಟಿದ್ದಾರೆ. ಆದರೂ ನಿಮಗೆ ಈ ಮನೆಯನ್ನು ಕೊಡಲು ಮೆಮ್‌ಸಾಹೇಬರು ಒಪ್ಪಬಹುದು."

"ಚಿಂತೆ ಇಲ್ಲ ಬಿಡಿ. ಈ ಕೋಣೆಗಳ ಅವಶ್ಯಕತೆಯೂ ನನಗಿಲ್ಲ. ಉಳಿದ ಕೋಣೆಗಳಿಂದಲೇ ಬೇಕಾದಷ್ಟು ಕೆಲಸಗಳನ್ನು ಮಾಡಿಕೊಳ್ಳಬಹುದು."

ಮನೆಯ ಎಲ್ಲಾ ಭಾಗಗಳನ್ನು ನೋಡಿದ ನಂತರ ಅವರು ಪುನಃ ಅಶೋಕನು ಸ್ಟುಡಿಯೋ ಮಾಡಿಕೊಳ್ಳಬೇಕೆಂದು ಹವಣಿಸಿದ್ದ ಆ ಕೋಣೆಯ ಹತ್ತಿರಕ್ಕೆ ಬಂದರು. ಎಲ್ಲಾ ಬಾಗಿಲು ಮತ್ತು ಕಿಡಿಕಿಗಳನ್ನು ತೆರೆದು ಆಶೋಕನು ಹೆಚ್ಚೆಂದರೆ ಎಷ್ಟು ಪ್ರಕಾಶವಿರಬಹುದೆಂದು ನೋಡಿಕೊಂಡನು.

"ಇಲ್ಲಿ ಎಷ್ಟು ದಿನಗಳ ವರೆಗೆ ನಿಲ್ಲುವ ಅಭಿಪ್ರಾಯವಿದೆ?" ಮರಿಯ

ಮಳು ಪ್ರಶ್ನಿಸಿದಳು.

"ಒಂದೆರಡು ತಿಂಗಳು" ಅಶೋಕನು ಉತ್ತರಿಸಿದನು.

"ಇಷ್ಟೇನೆ? ಹೆಚ್ಚಿಗೆ ಇರಲಾರಿರೇ ?"

"ಹೆಚ್ಚು ದಿನ ಇಲ್ಲಿ ಇರುವುದಾದರೂ ಹೇಗೆ? ಫಾದರ್ ವಿಲಿಯನ್ಸ ರಿಗೆ ಮನೆಯನ್ನು ಖಾಲಿ ಮಾಡಿಕೊಡಬೇಕಾಗುವುದಲ್ಲವೇ ?" ಹೆಚ್ಚು ದಿನ ತಂಗದಿರಲು ಅಶೋಕನಿಗೆ ಬೇರಾವ ಕಾರಣಗಳೂ ತೋರಲಿಲ್ಲ. ಅದಕ್ಕಾಗಿಯೆ ಈ ಕೃತಕ ಮಾತೆಂದ.

"ಅವರು ಆರು ತಿಂಗಳ ನಂತರ ಬರುವವರು. ನೀವು ನಿಮ್ಮ ಸಮಯ ವನ್ನು ಹೆಚ್ಚು ದಿನಗಳ ವರೆಗೆ ಇಲ್ಲಿಯೇ ಕಳೆಯಲು ಸೌಕರ್ಯವಿದೆ. ಯಾರಾ ದರೂ ಸ್ವದೇಶಕ್ಕೆ ತೆರಳಿದರೆ ಹಿಂದೆ ಬೇಗನೆ ಬರುತ್ತಾರೆಯೇ ? ಅವರು ಬರುವ ವರೆಗೆ ಇರಬಹುದಲ್ಲವೇ ?"

"ಅಲ್ಲಿಯ ವರೆಗೆ ಇರಲು ಎಂದಿಗೂ ಸಾಧ್ಯವಿಲ್ಲ. ಎರಡು ತಿಂಗಳು ಗಳೇ ನಾನು ಎಲ್ಲಿಯೂ ತಂಗಿದುದಿಲ್ಲ."

"ಎಲ್ಲಾ ಸರಿಯೇ. ತಾವಾದರೊ ದೊಡ್ಡ ಆರ್ಟಿಸ್ಟ್ ಆಗಿದ್ದೀರಿ. ಈ ಚಿಕ್ಕದಾದ ಕಾಡುಮೇಡುಗಳ ಊರಲ್ಲಿದ್ದುಕೊಂಡು ತಮ್ಮ ಕೆಲಸವನ್ನು ಹೇಗೆ ಸಾಧಿಸಲಾಗುವುದು ಅಲ್ಲವೇ ?"

ಮರಿಯಮಳು ಮೇಲಿನ ವಾಕ್ಯವನ್ನು ಸರಳ ಭಾವದೊಂದಿಗೆ ಅಂದಳು. ಆದರೆ ಇದರಲ್ಲಿ ಎಲ್ಲಾದರೂ ವ್ಯಂಗವಿದೆಯೇ ಎಂದು ಅಶೋಕನು ಯೋಚಿಸ ಲಾರಂಭಿಸಿದನು.

ಮರಿಯಮಳು ಶುದ್ಧ ಹಿಂದುಸ್ಥಾನಿಯಲ್ಲಿ ಮಾತನಾಡುವುದನ್ನು ಅಶೋ ಕನು ಕಂಡನು. ಮಧ್ಯಮಧ್ಯದಲ್ಲಿ ಅವಳು ಉಪಯೋಗಿಸುತ್ತಿದ್ದ ಇಂಗ್ಲೀಷ್ ಶಬ್ದಗಳ ಉಚ್ಚಾರವೂ ಶುದ್ಧ ಮತ್ತು ಸುಶ್ರಾವ್ಯವಾಗಿತ್ತು. ಅವಳ ಮಾತುಗ ಳಿಂದಲೇ ಅವಳು ತೀಕ್ಷ್ಣ ಬುದ್ಧಿಯವಳೆಂದು ತಿಳಿದುಕೊಳ್ಳಬಹುದು. ಹಾವ ಭಾವ ಮತ್ತು ವ್ಯವಹಾರಗಳಲ್ಲಿ ಚಪಲಳೂ, ನಿಪುಣಳೂ ಆಗಿದ್ದಳು. ಮಾನ ಮರ್ಯಾದೆಗಳನ್ನು ಸಂಪೂರ್ಣ ಪಾಲಿಸುವವಳಾಗಿದ್ದಳು. ಪ್ರಾಯಃ ಅವಳ ವನಜೀವನವೇ ಈ ಸದ್ಗುಣಗಳಿಗೆ ಕಾರಣವೆನ್ನಬಹುದು.

"ಮನೆಯು ನಿಮ್ಮ ಮನಸ್ಸಿಗೆ ಒಪ್ಪಿತೇ? ಮರಿಯಮಳು ಅಶೋಕನನ್ನು

ನನ್ನು ಕೇಳಿದಳು.

"ಹೌದು, ಚೆನ್ನಾಗಿ........"

"ಹಾಗಾದರೆ ಈಗ ನಿಮ್ಮ ಸಾಮಾನುಗಳನ್ನು ಮನೆಯೊಳಗೆ ಸಾಗಿಸಿರಲ್ಲ. ಬೇರೆ ಯಾವ ಅವಶ್ಯಕತೆಯಾದರೂ ಇದ್ದರೆ ನಿಸ್ಸಂಕೋಚವಾಗಿ ನನಗೆ ತಿಳಿಸಿರಿ. ಕೊನೆಯದಾಗಿ ಒಂದು ಪ್ರಾರ್ಥನೆ— ಯಾವುದಾದರೂ ಹೊಸ ಚಿತ್ರವನ್ನು ಚಿತ್ರಿಸಿದರೆ ಅದನ್ನು ಅಗತ್ಯವಾಗಿ ನನಗೆ ತೋರಿಸಬೇಕು."

"ಸರಿ, ಸರಿ. ಖಂಡಿತ ತೋರಿಸುತ್ತೇನೆ. ನಿಮಗೂ ಚಿತ್ರಕಲೆಯಲ್ಲಿ ತುಂಬಾ ಅಭಿರುಚಿ ಇದೆ ಎಂದು ಮಿಸ್ ಥಾಮಸರು ಮೊದಲೇ ಅಂದಿದ್ದಾರೆ. ನಿಮ್ಮ ಸಹಾಯವನ್ನು ನಾನು ಅವಶ್ಯವಾಗಿ ಪಡೆದುಕೊಳ್ಳುತ್ತೇನೆ."

"ನಿಮ್ಮಂತಹ ಚಿತ್ರಕಾರರಿಗೆ ನಾನೇನು ಸಹಾಯವನ್ನು ಮಾಡಬಲ್ಲೆ ! ಆದರೂ ತಾವು ಹೇಳಿದರೆ ಬಣ್ಣದ ಪೆಟ್ಟಿಗೆ, ಬ್ರಶ್ಯುಗಳನ್ನು ನಿಮ್ಮ ಮುಂದೆ ತಂದಿಡಬಲ್ಲೆ. ಇದಕ್ಕೂ ಹೆಚ್ಚಿನ ಸಹಾಯವನ್ನು ಮಾಡಿದೆನೆಂದರೆ ನಿಮ್ಮ ಚಿತ್ರವು ಗೋಡೆಗಳಿಗೆ ಹಚ್ಚುವ ಬಣ್ಣದ ಕಾಗದವಾಗಲೂ ಬಹುದು." ಅವಳು ನಗಲಾರಂಭಿಸಿದಳು. ಅವಳ ನಿರ್ಮಲ ನಗೆಯ ಕಾರಣದಿಂದ ಅವಳ ಶುಭ್ರವೂ ಸುಂದರವೂ ಆದ ದಂತಪಂಕ್ತಿಗಳು ಅಶೋಕನಿಗೆ ಕಂಡವು. ಅವುಗಳನ್ನೇ ಅಶೋಕನು ನೋಡುತ್ತಿದ್ದನು.

ಎರಡು ತಾಸುಗಳೊಳಗೆ ಅಬ್ದುಲ್ಲ ಮತ್ತು ಮರಿಯಮ್ ಸೇರಿ ಅಶೋಕನ ಎಲ್ಲಾ ಸಾಮಾನುಗಳನ್ನೂ ಆ ಬಂಗಲೆಯ ಮನೆಯಲ್ಲಿ ಸ್ಥಾನಕ್ಕೆ ಸರಿಯಾಗಿ ವ್ಯವಸ್ಥೆಯಿಂದ ಇಟ್ಟು ಸರಿಪಡಿಸಿದರು.

ಆರು

ಅಶೋಕನಿಗೆ ತನ್ನ ಹೊಸ ನಿವಾಸಸ್ಥಾನವು ಮನಸ್ಸಿಗೆ ಬಹಳ ಚೆನ್ನಾಗಿ ಒಪ್ಪಿತು. ಸುತ್ತುಮುತ್ತಿನ ರಮಣೀಯ ದೃಶ್ಯ, ಒಳ್ಳೇ ಗಾಳಿಯಿಂದ ತುಂಬಿದ ಹವಾಗುಣ, ಪಟ್ಟಣದಂತಹ ಕೋಲಾಹಲದಿಂದ ವಿಮುಕ್ತತೆ ಇತ್ಯಾದಿ ಕಾರಣಗಳಿಂದ ಅವನ ಮನಸ್ಸು ಪ್ರಫುಲ್ಲಿತವಾಯಿತು. ಆಗ ಅವನ ಕಲಾವೃತ್ತಿಯೂ

ಕೂಡ ಉನ್ಮತ್ತವಾಯಿತು. ಕಲಾಕೃತಿಗಳಿಂದ ಸಿಗುವ ಆನಂದವು ಅವನಿಗೆ ಇಲ್ಲಿಯೇ ಸಿಗಲಾರಂಭಿಸಿತು.

ಮಿಸ್ ಥಾಮಸಳಿಗಾದರೋ ಅಶೋಕನಲ್ಲಿ ತುಂಬಾ ಒಳ್ಳೆಯ ಅಭಿಪ್ರಾಯ ಮತ್ತು ಆದರ. ಒಬ್ಬ ನಿಜವಾದ ಕಲಾಕಾರ ಮನೆಗೆ ಬಂದಾಗ ಅವನಿಗೆ ಬೇಕಾದ ಸುವ್ಯವಸ್ಥೆ ಮತ್ತು ಎಲ್ಲಾ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂಬುದೇ ಅವಳ ವಿಚಾರ. ಇದೇ ಅಭಿಪ್ರಾಯದಿಂದ ಅವಳು ಅಶೋಕ ಠಾಕೂರನಿಗೆ ಪೂರ್ಣ ಬೆಂಬಲ ನೀಡಲಿಕ್ಕೂ, ಅವನಿಗೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ತಪ್ಪದೆ ಮಾಡಿಕೊಡಲಿಕ್ಕೂ ಮರಿಯಮಳಿಗೆ ವಿಶೇಷ ಸೂಚನೆ ಇತ್ತಿದ್ದಳು. ಅಶೋಕನು ಕೂಡ ಉತ್ತಮರೊಡನೆ ಸಹವಾಸವನ್ನು ಬೆಳೆಸುವುದರಲ್ಲಿ ಪ್ರವೀಣನಾಗಿದ್ದನು. ಕ್ರಮೇಣ ಅವನಿಗೂ ಮೆಮ್ ಸಾಹೇಬರಿಗೂ ತೀವ್ರವಾದ ಸ್ನೇಹಭಾವವು ಬೆಳೆದುಹೋಯಿತು. ಅವನು ಕ್ರಿಸ್ತನ ಆ ಚಿತ್ರವನ್ನು ಮಿಸ್. ಥಾಮಸ್‌ರಿಗೆ ಪ್ರೀತಿಯ ಬಹುಮಾನವಾಗಿ ಕೊಟ್ಟನು. ಇದರಿಂದ ಅವಳ ಸಂತೋಷವೂ ಆದರ ಬುದ್ಧಿಯೂ ಇನ್ನೂ ಹೆಚ್ಚಿತು. ಅವನೂ ಭಾನುವಾರದ ದಿನ ಒಮ್ಮೊಮ್ಮೆ ಅವರ ಜೊತೆಗೆ ಪ್ರವಚನ-ಪ್ರಾರ್ಥನೆಗಳನ್ನು ಕೇಳಲು ಇಗರ್ಜಿಗೆ ಹೋಗುತ್ತಿದ್ದನು. ಅವರಲ್ಲಿಂದ ಓದುವುದಕ್ಕೆ ಪುಸ್ತಕಗಳನ್ನು ತರುತ್ತಿದ್ದು, ತನಗೆ ಬಂದ ಪುಸ್ತಕದ ಪಾರ್ಸೆಲುಗಳನ್ನು ಹಾಗೆಯೇ ಮೆಮ್ ಸಾಹೇಬರಿಗೆ ಕಳುಹಿಸುತ್ತಿದ್ದನು. ಹಲವು ಬಾರಿ ಅಬ್ದುಲ್ಲಾ ತಯಾರಿಸಿದ ಕೇಕ್ ಬಿಸ್ಕತ್ತುಗಳನ್ನು ಮರಿಯಮ್ ಮತ್ತು ಮೆಮ್ ಸಾಹೇಬರಿಗಾಗಿ ಕಳುಹಿಸುತ್ತಿದ್ದನು. ಅಶೋಕನು ಯಾವ ರೀತಿಯ ಆದರ ವಿಶ್ವಾಸಗಳನ್ನು ಮೆಮ್ ಸಾಹೇಬರಲ್ಲಿ ಇರಿಸಿದ್ದನೊ ಅದೇ ರೀತಿಯ ಆದರ ವಿಶ್ವಾಸಗಳು ಮೆಮ್ ಸಾಹೇಬರಿಗೂ ಅಶೋಕನಲ್ಲಿತ್ತೆಂಬುದಕ್ಕೆ ಸಂದೇಹವಿಲ್ಲ.

ಫಾಡರೀಪುರದ ಊರಲ್ಲಿ ಅಶೋಕನ ಕೀರ್ತಿ ಹರಡಿ ಹೋಯಿತು. ಅವನು ಆ ಊರಿನ ಪಾಠಶಾಲೆಯನ್ನು ನೋಡಲು ಹೋದಾಗ ಹುಡುಗರಿಗೆ ಮಿಠಾಯಿ ಹಂಚಲು ಐದು ರೂಪಾಯಿಗಳನ್ನು ಕೊಟ್ಟು ಬಂದಿದ್ದನು. ಇದರ ದೆಸೆಯಿಂದ ಜೋಸೆಫ್ ತಾತನ ಅಂಗಡಿಯ ಮಿಠಾಯಿಯೆಲ್ಲಾ ಮುಗಿದು ಹೋಯಿತು. ಇದರಿಂದ ಆ ಚಿಕ್ಕ ಹುಡುಗರಿಗೂ ಅಶೋಕನ ಹೆಸರು ನೆನಪಿನಲ್ಲಿ ಉಳಿಯುವಂತಾಯಿತು. ಆಸ್ಪತ್ರೆಗೆ ಹೋದರೆ ರೋಗಿಗಳಿಗೆ ಹಣ್ಣು

ಗಳನ್ನು ಹಂಚಲು ಏರ್ಪಾಡು ಮಾಡುತ್ತಿದ್ದ. ಊರಲ್ಲಿ ಎಲ್ಲಾದರೂ ಮದುವೆ ಸಮಾರಂಭಗಳಾದರೆ ನವದಂಪತಿಗಳಿಗೆ ಇವನ ಉಡುಗರೆ ಇದ್ದೇ ಇರುತ್ತಿತ್ತು. ಈ ರೀತಿಯಾಗಿ ಆ ಊರಿನ ದೈನಿಕ ಜೀವನದಲ್ಲಿ ತನಗೂ ಸಮರಸತೆಯನ್ನು ಅಶೋಕನು ಉಂಟು ಮಾಡಿಕೊಂಡನು. ಅಲ್ಲಿಯ ಜನರು ಕೂಡ ಇವನನ್ನು ತಮ್ಮವನೆಂದೇ ನೋಡಿಕೊಳ್ಳುತ್ತಿದ್ದರು. ಅಬ್ದುಲ್ಲಾ ಮತ್ತು ಜೋಸೆಫ್ ತಾತನ ಸ್ನೇಹ ತುಂಬಾ ಬೆಳೆದು ಹೋಯಿತು.

ಒಮ್ಮೊಮ್ಮೆ ಅಶೋಕನೊಂದಿಗೆ ಮರಿಯಮಳೂ ಅಡ್ಡಾಡಲು ಹೋಗುತ್ತಿದ್ದಳು. ಆ ಊರಿನ ಕ್ರೈಸ್ತರಿಂದ ಕೂಡಿದ ಪ್ರಗತಿಶೀಲ ವಾತಾವರಣದಲ್ಲಿ ಇಂತಹ ಸಂದರ್ಭಗಳು ಸ್ವಾಭಾವಿಕವೆಂದೇ ಎಣಿಸಲಾಗುತ್ತಿತ್ತು. ಅಶೋಕನು ಕೂಡ ಮರಿಯಮಳ ಸಂಗೀತವನ್ನು ಕೇಳಲು ಬಹಳವಾಗಿ ಇಚ್ಛಿಸುತ್ತಿದ್ದನು. ಅವರಿಬ್ಬರಲ್ಲಿ ಹಲವು ಮಾತುಗಳ ವಿಚಾರವಾಗಿ ಏಕಾಭಿಪ್ರಾಯವೇ ಇರುತ್ತಿತ್ತು.

ಒಂದು ದಿನದ ಸಂಜೆಯ ಸಮಯದಲ್ಲಿ ಅವರಿಬ್ಬರೂ ಒಂದು ಚಿಕ್ಕ ಜಲಪಾತದ ಪಾರ್ಶ್ವದಲ್ಲಿ ಕುಳಿತಿದ್ದರು. ಆಗ ಮರಿಯಮಳು ಹೀಗೆಂದಳು: " ಎಂದು ತಾವು ಇಲ್ಲಿ ಬಂದಿಳಿದಿರೊ ಅಂದಿನಿಂದ ಈ ಊರೇ ಒಂದು ಬಗೆಯ ಉತ್ಸಾಹದಿಂದ ಕೂಡಿಕೊಂಡಿರುವಂತೆ ತೋರುತ್ತದೆ. ಇಲ್ಲಿಯ ಚಿಕ್ಕ ಚಿಕ್ಕ ಮಕ್ಕಳೂ ಕೂಡ ತಮ್ಮನ್ನು ಸಂಪೂರ್ಣವಾಗಿ ತಿಳಿದಿದ್ದಾರೆ. ಮುಖ್ಯವಾದ ವಿಷಯವೆಂದರೆ ಎಲ್ಲರೂ ತಮ್ಮನ್ನು ಬಹಳವಾಗಿ ಪ್ರೀತಿಸುತ್ತಾರೆ. "

"ಇದೆಲ್ಲಾ ಅವರೆಲ್ಲರ ಕೃಪೆಯೇ ಸರಿ. ನನ್ನ ಮನವೂ ಇಲ್ಲಿ ತುಂಬಾ ಆನಂದವನ್ನು ಪಡೆಯುತ್ತಿದೆ. ಇಲ್ಲಿಯೇ ಕೆಲವು ವರ್ಷಗಳನ್ನು ಕಳೆಯಲೊ ಎಂಬ ವಿಚಾರವೂ ಒಮ್ಮೊಮ್ಮೆ ಯೋಚನೆಗೆ ಬರುವುದುಂಟು. ಇಲ್ಲಿಯ ಅಕೃತ್ರಿಮ ವಾತಾವರಣ, ಪ್ರಾಕೃತಿಕ ಸೌಂದರ್ಯ, ಜನಗಳ ನಿರಾಡಂಬರತೆ, ಸ್ನೇಹಶೀಲತೆ, ಸರಲತೆ ಇವೆಲ್ಲ ಸೇರಿ ನನ್ನ ಮನಸ್ಸನ್ನು ಮೋಹಗೊಳಿಸಿವೆ. ಪಟ್ಟಣದ ಕೃತ್ರಿಮ ಮತ್ತು ದೂಷಿತ ವಾತಾವರಣದಿಂದ ಈ ಊರೆಷ್ಟು ಭಿನ್ನವಾಗಿದೆ! "

"ನಿಮಗೇಕೆ ಪಟ್ಟಣಗಳೆಂದರೆ ಈ ಹೇಯಭಾವ?"

"ಹೇಯಭಾವವೇ ಎಂಬುದಲ್ಲ. ಆದರೂ ಅಲ್ಲಿಯ ಹಲಕೆಲವು ಕಾರ್ಯಕಲಾಪಗಳು ಮತ್ತು ಜನರ ಮಾತುಗಳನ್ನು ಕೇಳಿದ ನನಗೆ ತುಂಬಾ ವ್ಯಸನ

ವಾಗುತ್ತದೆ. ಅಲ್ಲಿಯ ಆರ್ಥಿಕ ವಿಷಮತೆ— ಒಂದು ಕಡೆ ದೊಡ್ಡ ದೊಡ್ಡ ಮಿಲ್ಲುಗಳು, ದೊಡ್ಡ ಬಂಗಲೆಗಳು, ಇನ್ನೊಂದೆಡೆಗೆ ಹುಲ್ಲಿನ ಗುಡಿಸಲುಗಳು, ಓಲೆಗರಿಯ ಮನೆಗಳು. ಕೆಲವರು ಬಹು ಭೋಜನದಿಂದ ಅಜೀರ್ಣರಾಗಿದ್ದು ಸುವಾಸನೆಯ ದ್ರವ್ಯಗಳಿಂದ ಅಲಂಕೃತರಾಗಿದ್ದರೆ ಹಾಗೆಯೆ ಅದಕ್ಕೆ ವಿರುದ್ಧ ವಾಗಿ ಕೆಲವರು ಹಸಿವು ತೃಷೆಗಳಿಂದ ಪೀಡಿತರಾಗಿದ್ದು ಚಿಂದಿ ಬಟ್ಟೆಗಳಿಂದ ತಮ್ಮನ್ನು ಮುಚ್ಚಿಕೊಳ್ಳುವಂತಹ ಧನಹೀನರು. ಇದೂ ಅಲ್ಲದೆ ಪಟ್ಟಣದ ಪೂರ್ಣ ಸಂಸ್ಕೃತಿ ಮತ್ತು ಸಭ್ಯತೆಗಳು ಒಂದು ಸಿದ್ಧಾಂತದ ಮೇಲೆ ಹೊಂದಿ ಕೊಂಡಿರುತ್ತವೆ. ಅದೇ ಅರ್ಥಪೂಜೆ. ಇದಕ್ಕಾಗಿ ಆತ್ಮವು ಮಿಥ್ಯಾಚಾರ, ಕೃತ್ರಿಮತೆ, ಸ್ವಾರ್ಥಪರಾಯಣತೆ, ಅಸಹಿಷ್ಣುತೆ ಇತ್ಯಾದಿ ಅವಗುಣಗಳಿಂದ ತುಂಬಿಕೊಂಡಿರಬೇಕಾಗುತ್ತದೆ. ಇವುಗಳನ್ನೆಲ್ಲ ನೋಡುತ್ತಲೇ ಹೃದಯವು ಕಂಪನಗೊಂಡು ತುಂಬಾ ಭಯದೊಂದಿಗೆ ಅಲ್ಲಿಂದ ಓಡಿಹೋಗಬೇಕೆಂದು ಅನ್ನಿಸುತ್ತದೆ. ಮನುಷ್ಯನು ತಾನು ಸ್ವತಃ ಅಧಃಪತನ ಹೊಂದಿ ಉದ್ವಿಗ್ನ ಗೊಂಡ ನಂತರ ಪ್ರಕೃತಿಯ ಸತ್ಯವೂ ನಿತ್ಯವೂ, ಸಂತೋಷ ಮತ್ತು ಸುಂದರ ವಾದ ವಾತಾವರಣದಲ್ಲಿ ಲೀನನಾಗಲು ಆಶಿಸುತ್ತಾನೆ. ನಿಸರ್ಗದ ಭವ್ಯವೂ, ಪ್ರಶಾಂತವೂ ಆದ ರೂಪದಲ್ಲಿ ಸೌಂದರ್ಯವೂ ಪ್ರೇಮವೂ ಇದ್ದೇ ಇವೆ. ಅಲ್ಲಿ ಶಾಂತಿಯೂ ಆನಂದವೂ ಸಿಕ್ಕಿಯೇ ಸಿಕ್ಕುವುದು. ” ಅಶೋಕನು ಹೀಗನ್ನುತ್ತ ತನ್ನ ಆಲಸ್ಯದಿಂದೊಡಗೂಡಿದ ಕಣ್ಣುಗಳನ್ನು ಎದುರಿನ ರಮ್ಯವಾದ ಪರ್ವತಗ ಳೆಡೆಗೆ ಓಡಿಸಿದನು. ಆ ಕ್ಷಣದಲ್ಲಿಯೇ ಅಲ್ಲಿಯ ಅನುಪಮ ಸೌಂದರ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವವನಂತೆ ಎವೆ ಇಕ್ಕದೆ ನೋಡುತ್ತಿದ್ದನು.

“ಮಾನವ ಸಮಾಜದಲ್ಲಿ ಸುಖಕ್ಕಿಂತ ದುಃಖವೇ ಅಧಿಕವಾಗಿ ತೋರುವು ದೇನೋ ನಿಜ. ಆದರೆ ಇದರ ಮೂಲ ಕಾರಣವಾದರೂ ಯಾವುದು ? ”

“ಮನುಷ್ಯನ ಈ ಅಸ್ಸೀಮ ದುಃಖದ ಕಾರಣನಾದರೂ ಅವನೇ ಆಗಿರು ತ್ತಾನೆ. ನಮಗೆ ನಮ್ಮ ದೋಷ ಮತ್ತು ತಪ್ಪುಗಳಿಗೆ ಭಗವಂತನನ್ನು ಅಥವಾ ಅದೃಷ್ಟವನ್ನು ದೂಷಿಸುವ ಅಭ್ಯಾಸವಾಗಿ ಹೋಗಿದೆ. ಆದರೆ ಅದು ಕೇವಲ ತಪ್ಪು ತಿಳುವಳಿಕೆ. ನಾವು ನಮ್ಮ ಸುಖಭೋಗಗಳಿಗಾಗಿ ಒಂದು ವಿಧಾನ ವನ್ನು ಕಂಡುಹಿಡಿದಿದ್ದೇವೆ. ಅದರಲ್ಲಿ ಅವನ ಸಂಪತ್ತಿಗೆ ಬೆಲೆ ಕಟ್ಟುವುದೇ ಪ್ರಧಾನವಾಗಿದೆ. ಸಂಪತ್ತಿನ ಮೇಲಿನ ಪ್ರೇಮಕ್ಕಾಗಿ ಸ್ವಾರ್ಥವು ಹೆಚ್ಚಾಗಿದೆ.

ವ್ಯಾಪಾರವು ಹೆಚ್ಚಿದಂತೆಲ್ಲ ಸಾಮ್ರಾಜ್ಯವೂ ಹಬ್ಬಿಕೊಂಡಿದೆ. ಜೊತೆಗೆ ಸಾಲದು ದಕ್ಕೆ ಯುದ್ಧ ಬೇರೆ. ಇದೆಲ್ಲ ಏಕೆ? ಬರೇ ಅರ್ಥ ಸಂಚಯನಕ್ಕಲ್ಲದೆ ಇನ್ನೇಕೆ? ನಮ್ಮ ಸಮಾಜದ ವ್ಯವಸ್ಥೆಯ ಸಂಪೂರ್ಣ ವಿಧಾನವು ಕೂಡ ಅರ್ಥಸಂಚಯನದ ತತ್ವದಲ್ಲಿಯೇ ಅಡಗಿದೆ. ಯಾರಲ್ಲಿ ಬೆಳ್ಳಿ ಬಂಗಾರದ ಗಟ್ಟಿ ಗಳಿವೆಯೋ ಅವನಿಗೇ ಮರ್ಯಾದೆ. ಅವನೇ ಪಟ್ಟಣದ ಹೆಸರುವಾಸಿ ಪುರುಷ. ಅವನೇ ಜ್ಞಾನಿ, ಅಲ್ಲದೆ ಎಲ್ಲಕ್ಕೂ ಮಿಗಿಲಾಗಿ ಅವನೇ ಮನುಷ್ಯನು ಕೂಡ. (ಅವನೆಣಿಕೆಯಲ್ಲಿ) ಉಳಿದವರೆಲ್ಲರೂ ಮನುಷ್ಯರೂಪದಲ್ಲಿರುವ ಭಾವನಾಹೀನ ಪಶುಗಳು. ಕಾಂಚನದ ಮೋಹ ಮತ್ತು ಮಾಯೆಗಳಿಂದ ನಾವು ಧರ್ಮ ಕರ್ಮಗಳನ್ನು ಬಿಟ್ಟದ್ದೇವೆ. ಅಲ್ಲದೆ ಮಾನವತೆಯನ್ನು ಕಳೆದುಕೊಂಡಿದ್ದೇವೆ. ಪಟ್ಟಣದಲ್ಲಿ ಎಂದಿನಿಂದ ಔದ್ಯೋಗಿಕ ಕ್ರಾಂತಿಯು ಆರಂಭವಾಯಿತೋ ಅಂದಿ ನಿಂದ ಸಂಪೂರ್ಣ ಮಾನವ ಜಾತಿಯು ಕೆಳಮಟ್ಟಕ್ಕಿಳಿಯುತ್ತಾ ಬಂದಿತು. ಅಂದಿನಿಂದಲೇ ವಿಶೇಷವಾಗಿ ಈ ವಿಶ್ವದ ಸುಖ ಸೂರ್ಯನಿಗೆ ಗ್ರಹಣ ಹಿಡಿ ಯಿತು. ದೈವತ್ವಕ್ಕೆ ಅಪಮಾನಗಳುಂಟಾಗಲು ಆರಂಭವಾಯಿತು. ಈ ಭಯಂಕರ ಪಾಪಕ್ಕೆ ತಕ್ಕುದಾದ ಫಲವನ್ನು ನಾವು ಒಂದಿಲ್ಲ ಒಂದು ದಿನ ಭೋಗಿಸಬೇಕಾಗಿಯೇ ಬರಬಹುದು."

"ಆದರೆ ಇದೆಲ್ಲಾ ಪಾಶ್ಚಿಮಾತ್ಯರ ಸಂಸ್ಕೃತಿಯಾಗಿದೆ. ನಮ್ಮ ದೇಶಕ್ಕೆ ಇದು ಹಡಗದಲ್ಲಿ ಕುಳಿತು ಬಂದಿದೆ. ಹಿಂದುಸ್ತಾನದಲ್ಲಾದರೊ ಇಂತಹ ಸಂದ ರ್ಭವು ಹುಟ್ಟಲೇ ಇಲ್ಲ." ಮರಿಯಮಳೆಂದಳು.

ಅಶೋಕನಿಗೆ ಈ ಮಾತುಗಳನ್ನು ಕೇಳಿ ಬಹಳ ಆಶ್ಚರ್ಯವಾಯಿತು. ಅವಳು ಗಂಭೀರತೆಯಿಂದ ಮಾತನಾಡಿದಳೆಂದು ಅಚ್ಚರಿಪಡಲಿಲ್ಲ. ಆದರೆ ಸಂಪೂರ್ಣವಾಗಿ ಆಂಗ್ಲೀಯ ವಾತಾವರಣದಲ್ಲಿ ಕೂಡ ಮರಿಯಮ್ಮಳ ವಿಚಾರ ಸರಣಿಯು ಹೇಗೆ ಭಾರತೀಯವಾಯಿತೆಂಬುದಕ್ಕೆ ಆಶ್ಚರ್ಯಗೊಂಡನು. ಅವಳ ಮತ್ತು ಅಶೋಕನ ವಿಚಾರಗಳು ಒಂದನ್ನೊಂದು ಹೋಲುತ್ತಿದ್ದವು.

"ಹೌದು. ಈ ಅಭ್ಯಾಸಗಳು ಬಂದುದೇನೊ ವಿದೇಶಗಳಿಂದಲೇ. ಆದರೆ ನಮ್ಮ ದೇಶವಾಸಿಗಳೇ ಆ ಮರಕ್ಕೆ ನೀರೆರೆದು ಸ್ಥಿರಪಡಿಸುವುದರಲ್ಲಿ ಸಹಾಯ ಮಾಡಿದ್ದಾರೆ. ಇದರಿಂದ ಈಗ ನಮ್ಮ ದೇಶದಲ್ಲಿ ಒಂದು ಶ್ರೇಣಿಯು ನಿರ್ಮಾ ಣವಾಗಿದೆ ಎಂದರೆ ಅದರ ಹೃದಯ, ಮನಸ್ಸು ಮತ್ತು ದೃಷ್ಟಿಕೋನ ಇತ್ಯಾದಿ

ಗಳು ಇದೇ ಸಂಸ್ಕೃತಿಯ ಬಣ್ಣದಲ್ಲಿಯೇ ಬೆಳೆದುಹೋಗಿವೆ. ಆದ್ದರಿಂದ ಒಮ್ಮೊಮ್ಮೆ ಯೋಚಿಸುವಾಗ ತುಂಬಾ ಭಯವಾಗುತ್ತಿದೆ. ಈ ವಿಷಬೀಜವು ತುಂಬಾ ಹರಡಿ ಹೋದರೆ ಕೊನೆಗೆ ಇದನ್ನು ಇಲ್ಲಿಂದ ಕಿತ್ತೊಗೆಯಲು ಕಷ್ಟವಾಗಿ, ಈರಾನ್, ರೋಮ್‌ಗಳಂತೆಯೇ ಎಲ್ಲಿಯಾದರೂ ನಮ್ಮ ಈ ಸಹಸ್ರಾರು ಸಂವತ್ಸರಗಳಿಂದ ಬಂದ ದೇಶದ ಚಿರಂತರ ಸಂಸ್ಕೃತಿಯ ಹೆಸರು ಗುರುತುಗಳೂ ಕಾಣದಾಗಬಹುದೊ ಎಂಬ ಸಂಶಯವೇ ನನ್ನ ಭಯದ ಕಾರಣ." ಅಶೋಕನೆಂದನು.

"ಇಲ್ಲ. ಇಷ್ಟು ಬೇಗ ಅಂಥ ಕೆಟ್ಟ ಪರಿಸ್ಥಿತಿಯೇನೂ ಬರಲಿಕ್ಕಿಲ್ಲ. ನಾನು ಅಷ್ಟು ನಿರಾಶಾವಾದಿಯಲ್ಲ. ಭಾರತದ ಭವಿಷ್ಯವನ್ನು ಈ ತೆರನಾದ ಅಂಧಕಾರ ಪೂರ್ಣ ರೂಪದಲ್ಲಿ ನೋಡುವ ಸಂದರ್ಭವು ಬರಬಹುದೆಂಬ ನಂಬಿಕೆಯೂ ನನಗಿಲ್ಲ."

" ನಾನೂ ನಿರಾಶಾವಾದಿಯಲ್ಲ. ಆದರೆ ವಿಷವು ಇನ್ನೂ ಶರೀರದ ಒಳವೈಯನ್ನು ಹೊಕ್ಕಲಿಲ್ಲವೆಂದು ಹೇಳುತ್ತೇನೆ ತುಸು ಆ ಸಮಾಜದ ಕಡೆಗೆ ನೋಡಬಾರದೇ ? ಮೊಟ್ಟಮೊದಲು ಆರ್ಥಿಕ ವಿಷಮತೆಯು ಬಂದಿತು. ಕಪ್ಪು ಬಿಳಿಗಳ ಭೇದವು ಆರಂಭವಾಯಿತು. ಆಮೇಲೆ ವಿದೇಶಗಳಿಂದ ಬಂದ ಹೇಯತೆಗಳನ್ನು ನಾವು ಸಹಿಸಿಕೊಂಡರೂ ಅದನ್ನೇ ನಮ್ಮ ಹರಿಜನಸಹೋದರರ ಮೇಲೆ ಚೆಲ್ಲಿದೆವು. ಯಾವ ಬಂಧುಗಳಿಂದ ನಮ್ಮನ್ನು ವಿಮುಕ್ತಗೊಳಿಸಿದರೋ ಅದೇ ಬಂಧುಗಳನ್ನು ನಾವು ನಮ್ಮ ಸ್ತ್ರೀಯರ ಮೇಲೆ ಹೊರಿಸಿದೆವು. ಇಷ್ಟರಿಂದಲೂ ಸಂತೋಷಗೊಳ್ಳದೆ ನಾವು ನಮ್ಮಲ್ಲಿಯೇ ದ್ವೇಷ ಅಸೂಯೆಗಳನ್ನು ಪಡಲಾರಂಭಿಸಿದೆವು. ಜಾತೀಯ ಜಗಳಗಳನ್ನು ಹುಟ್ಟಿಸಿದೆವು. ಬಡತನ ಮತ್ತು ಪರಾವಲಂಬತನ ಹೇಗೆ ಹೆಚ್ಚುತ್ತಾ ಹೋಯಿತೋ ಹಾಗೆಯೇ ನಮ್ಮ ದೇಶದ ಆತ್ಮವೂ ಕೆಡುತ್ತಾ ಹೋಯಿತು. ಸಮಾಜದಲ್ಲಿ ಸ್ವಾರ್ಥ, ಅಸಹಿಷ್ಣುತೆ ಹೆಚ್ಚುತ್ತಾ ಹೋಯಿತು. ಧರ್ಮದ ಸ್ಥಾನವನ್ನು ಶಿಲಾಮೂರ್ತಿಗಳು ಮತ್ತು ಹಣೆಯ ತಿಲಕಗಳು ಆಕ್ರಮಿಸಿಕೊಂಡವು. ಎಲ್ಲಿ ನೋಡಿದರಲ್ಲಿ ಬಾಹ್ಯಾಡಂಬರಗಳು ಶೋಭಿಸಲಾರಂಭಿಸಿದವು. ಸಭ್ಯತೆ ಮತ್ತು ಸತ್ಯತೆಯ ಸ್ಥಾನವನ್ನು ಅಸತ್ಯ ಮತ್ತು ಕೃತ್ರಿಮತೆಗಳು ಪಡೆದುಕೊಂಡವು. ಸದಾಚಾರದ ಸ್ಥಳವನ್ನು ತೆರೆ ಮತ್ತು ಅಂಧಕಾರದಲ್ಲಿ ಮಾಡಿದ ಪಾಪಗಳು ಮುತ್ತಿಕೊಂಡವು. ವಿಜ್ಞಾ

ನವ ವಿಷವಸ್ತುಗಳ ಆವಿಷ್ಕಾರವನ್ನು ಮಾಡುವುದರಲ್ಲಿ ತನ್ನ ಧ್ಯೇಯದ ಕೊನೆಯನ್ನು ಮುಟ್ಟಿತು. ತರ್ಕಶಾಸ್ತ್ರಜ್ಞರು ತಮ್ಮ ಕೌಶಲ್ಯವನ್ನು ಪರಮಾತ್ಮನ ಆಸ್ತಿಕತ್ವದ ಶಂಕೆಯನ್ನು ಹುಟ್ಟಿಸುವುದರಲ್ಲಿ ತೋರಿದರು. ಅರ್ಥಶಾಸ್ತ್ರಕಾರರು ಬಡ ಮತ್ತು ಅಜ್ಞಾನಿಗಳಾದ ಪ್ರಜೆಗಳಿಂದ ಲೂಟಿ ಮಾಡುವ ಪ್ರಾವೀಣ್ಯವನ್ನು ತೋರಿಸಿಕೊಟ್ಟರು. ಕೊನೆಗೆ ಕೃಷಿಶಾಸ್ತ್ರಜ್ಞರಾದರೂ ತಮ್ಮ ನೈಪುಣ್ಯವನ್ನು ಅಫೀಮು, ತಂಬಾಕುಗಳ ಬೆಳೆಗಳ ಮೇಲೆ ತೋರಿಸಿಕೊಟ್ಟರು. ಇದರಿಂದಲೇ ತಮ್ಮ ಜನ್ಮ ಸಾರ್ಥಕವಾಯಿತೆಂದು ಭಾವಿಸಿದವರಿದ್ದಾರೆ. ಈ ರೀತಿ ನಾವೆಲ್ಲ ಸೇರಿಕೊಂಡು ಮಾನವತೆಯನ್ನು ಆದಷ್ಟು ಬೇಗನೆ ಅವನತಿಗೆ ತಂದು ಹೇಗೆ ಹುಗಿದುಬಿಡೋಣವೆಂದು ಒಂದು ಕಪಟವನ್ನು ರಚಿಸಿದ್ದೇವೆ ಎಂಬಂತಾಯಿತಲ್ಲವೇ ?"

"ಹಾಗಾದರೇನು ? ನಮ್ಮ ಹಣೆಯಲ್ಲಿ ಮಂಗಲ ಕಾಮನೆಗಳ ಯಾವ ರೀತಿಯ ಬರಹವೂ ಇಲ್ಲವೇ ? ನಮ್ಮ ಪ್ರಾರಬ್ಧದಲ್ಲಿ ಘೋರ ದುಃಖ ಮತ್ತು ಅಪಮಾನಗಳ ವಿನಾ ಬೇರಾವುದನ್ನೂ ನೆನೆಸಿಕೊಳ್ಳಲು ಸಾಧ್ಯವಿಲ್ಲವೇ ?"

"ಇಲ್ಲ. ಹಾಗೆಂದು ನಾನು ಭಾವಿಸುವುದಿಲ್ಲ. ಮನುಷ್ಯನು ತನ್ನ ಮಾನವತೆಯನ್ನೇನೊ ಕಳೆದುಕೊಂಡಿದ್ದಾನೆ. ಆದರೆ ಭಗವಂತನು ತನ್ನ ದೈವತ್ವವನ್ನು ಕಳೆದುಕೊಂಡಿಲ್ಲ. ಮನುಷ್ಯನಿಗೆ ಅನುಭವವ ಏಟು ಬೀಳದೆ ಅವನು ಸರಿಯಾದ ದಾರಿಗೆ ಬರಲಾರನೆಂದು ಆ ಪ್ರಕೃತಿ ಸ್ವರೂಪನಾದ ಪರಮಾತ್ಮನಿಗೆ ಗೊತ್ತು. ಅದಕ್ಕಾಗಿಯೇ ಅವನು ಲೋಕದಲ್ಲಿ ಯುದ್ಧ, ಅಕಾಲ ಮೃತ್ಯು, ಸಾಂಕ್ರಾಮಿಕ ರೋಗ ಇತ್ಯಾದಿಗಳನ್ನು ಹರಡುತ್ತಾನೆ. ಇದರಿಂದ ಮನುಷ್ಯನು ತನ್ನ ಅಸ್ವಾಭಾವಿಕ ಸಮಾಜದ ವ್ಯವಸ್ಥೆಯ ಪಾಪದ ಪರಿಣಾಮಗಳನ್ನು ಸ್ವಯಂ ಕಣ್ಣುಗಳಿಂದಲೇ ನೋಡಲೆಂದು ಅವನ ಹಾರೈಕೆಯಾಗಿರಬಹುದು. ಅವನು ಅಸಹ್ಯ ಕಷ್ಟಗಳನ್ನೊಳಗೊಂಡು ತ್ರಾಹಿ, ದೇಹಿ ಎಂದು ಕೂಗಲಾರಂಭಿಸುವ ಸಮಯದಲ್ಲಿ ಅವನಿಗೇ ಒಂದು ಸಹನೆ ಮತ್ತು ಆನಂದವನ್ನು ಕೊಡುವಂತಹ ಶಕ್ತಿಯು ಕಾಣಬರುವುದು. ಇಂತಹ ಶಕ್ತಿಯು ಲೋಕದಲ್ಲಿ ಕಾಲಕಾಲಕ್ಕೆ ಕಾಣಿಸಿಕೊಂಡು ತನ್ನ ದಿವ್ಯ ಪ್ರಭಾವಗಳನ್ನು ತೋರಿಸಿ ಹೊರಟು ಹೋಗಿದೆ. ಆ ಪ್ರಕಾಶದ ಪವಿತ್ರವಾದ ಪ್ರಭೆಯು ಶತಮಾನಗಳಿಂದಲೂ ಮಾನವ ಜಾತಿಯ ಪಥವನ್ನು ನಿರ್ದೇಶಿಸಿ ಕೊಡುತ್ತ ಬಂದಿದೆ."

"ತಾವು ಈ ಅಂಧಕಾರ ಯುಗದಲ್ಲಿ ಇಂತಹ ಯಾವ ಶಕ್ತಿಗಳನ್ನಾದರೂ ಕಂಡಿದ್ದಿರಾ ?"

"ಹೌದು, ಹೌದು. ಏಕೆ ನೋಡಿಲ್ಲ! ಕಣ್ಣಿದ್ದವರೆಲ್ಲ ಅದನ್ನು ನೋಡುತ್ತಾರೆ. ಆ ಒಂದೇ ಶಕ್ತಿಯು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರೂಪಗಳ ಧಾರಣೆಯನ್ನು ಮಾಡಿಕೊಂಡು ತನ್ನ ಕಾರ್ಯವನ್ನು ಮುಗಿಸಿ ಹೋಗುವುದು. ಅದೇ ಒಂದು ಸಲ ಭಗವಾನ್ ಬುದ್ಧನಾಗಿ, ಮತ್ತೊಮ್ಮೆ ಮಹಮ್ಮದ ಪೈಗಂಬರನಾಗಿ ಅವತಾರ ತಾಳಿದೆ. ಈಗ ಗಾಂಧೀಜಿಯ ರೂಪ ಧಾರಣೆ ಮಾಡಿಕೊಂಡು ಇಳಿದಿದೆ. ಸಮೀಪತೆ ಮತ್ತು ಅಶ್ರದ್ಧೆಯ ಕಾರಣದಿಂದ ನಾವು ಅವರ ದಿವ್ಯತೆಯನ್ನು ಕಾಣಲಾರೆವು. ಇತಿಹಾಸ ಮತ್ತು ದೀರ್ಘವಾದ ಸಮಯವೇ ಅದರ ಜ್ಯೋತಿಯ ಪ್ರಭೆಯನ್ನು ಕಾಣಿಸೀತು. ಆದ್ದರಿಂದ ಇಂತಹ ಒಂದೇ ಒಂದು ಶಕ್ತಿಯು ಅದೇ ಪ್ರಕಾಶಮಾನ ನಕ್ಷತ್ರವಾಗಿದ್ದರೂ ಇರಬಹುದು, ಅಥವಾ ಬೇರಾವುದಾದರೂ ಇರಬಹುದು. ಅದು ನಮ್ಮ ಈ ದುಃಖದಿಂದ ಕೂಡಿದ ಕಗ್ಗತ್ತಲೆಯ ಭೂಮಿಯಲ್ಲಿ ಸುತ್ತಾಡುತ್ತಾ ಇದೆ. ಗಾಂಧೀಜೀಯ ಸತ್ಯ ಮತ್ತು ವಿಶ್ವಬಂಧುತ್ವಗಳೇ ನಮ್ಮ ಈ ಘೋರ ದುರ್ದೆಶೆಯ ಏಕಮಾತ್ರ ಪರಿಹಾರವಾಗಿವೆ. ಅದೇ ನಮ್ಮ ನವಯುಗದ ಸರ್ವೋದಯದ ಸಂದೇಶವಾಹಕವಾಗಿದೆ. ಇಂದಲ್ಲದಿದ್ದರೆ ನಾಳೆಯಾದರೂ ಅವಶ್ಯವಾಗಿ ನಮಗೆ ಈ ಸತ್ಯದ ಅನುಭವವಾದೀತು. ಆದ್ದರಿಂದ ಈ ಒಂದೇ ಒಂದು ಕಾರಣದಿಂದ ನನಗೆ ಕೇವಲ ನಮ್ಮ ದೇಶದ ಮಾತ್ರವೇ ಅಲ್ಲ, ಬದಲಾಗಿ ಪೂರ್ಣ ವಿಶ್ವದ ನೀತಿ, ದಯೆ ಇತ್ಯಾದಿಗಳಲ್ಲಿ ದುರ್ದಮ್ಯ ಮತ್ತು ಅಪಾರವಾದ ಶ್ರದ್ಧೆ ಮತ್ತು ವಿಶ್ವಾಸವಿದೆ. ಅದೇ ಒಂದು ಸುಸ್ವಪ್ನದಂತಿರುವ ಆಸೆಯು ನನ್ನ ಜೀವಕ್ಕೆ ಬಲವಾದ ಪ್ರೇರಣೆ ಮತ್ತು ಉತ್ಸಾಹವನ್ನು ಕೊಡುವ ಒಂದು ದಿವ್ಯೌಷಧವಾಗಿದೆ. ಇದಿಲ್ಲದಿದ್ದರೆ ಎಂದೋ ನನ್ನ ಭಾವುಕ ಹೃದಯವು ಛಿನ್ನ ಭಿನ್ನವಾಗುತ್ತಿತ್ತು.

ಮರಿಯಮಳು ಅಶೋಕ ಠಾಕೂರನ ಈ ಅದ್ಭುತ ವಾಣಿಯನ್ನು ಮನಸ್ಸಿಟ್ಟು ಕೇಳುತ್ತಿದ್ದಳು. ಈ ವಿಚಾರಗಳು ಮತ್ತು ಅವಳ ವಿಚಾರಗಳು ಎಷ್ಟು ಹೊಂದಿಕೊಂಡಿದ್ದವು ಎಂಬುದನ್ನು ಹೇಳಬೇಕಾಗಿಲ್ಲ. ಅದನ್ನು ಯೋಚಿಸಿದ ಅವಳಿಗೆ ತುಂಬಾ ಸಂತೋಷವೂ ಆಶ್ಚರ್ಯವೂ ಆಯಿತು. ಆಗ ಅವಳೆಂದಳು

"ಅಶೋಕ್ ಬಾಬೂ, ತಾವು ನನ್ನ ಮನೋಭಾವವನ್ನೇ ತಮ್ಮ ಸುಂದರ ಶಬ್ದ ಗಳಿಂದ ವ್ಯಕ್ತಗೊಳಿಸುತ್ತಿದ್ದೀರಿ. ಲೋಕದಲ್ಲಿ ದುಃಖ ಅನ್ಯಾಯ, ವಿಷಮತೆ, ಇತ್ಯಾದಿಗಳು ಹೆಚ್ಚಾಗಿ ಕಾಣಬರುತ್ತಿವೆ. ಆದರೆ ಇವು ಶಾಶ್ವತವಾಗಿ ಇರತಕ್ಕ ವುಗಳೆಂದು ಹೇಳಲಾಗುವುದಿಲ್ಲ. ಪ್ರಪಂಚದಲ್ಲಿ ಸಹೋದರತ್ವ, ಸಹಾನು ಭೂತಿ ಮತ್ತು ಸೇವಾದೃಷ್ಟಿ ಇವುಗಳ ಅರ್ಥವಾದರೂ ಏನು? ಜೀವನದಲ್ಲಿ ವೇದನೆಗಳಿವೆ. ಅವುಗಳಿದ್ದರೆ ಪಕ್ಕದಲ್ಲಿಯೇ ಆನಂದವೂ ಇದ್ದೇ ಇದೆ. ರಾತ್ರಿ ಯಾದ ಮೇಲೆ ಹಗಲೂ ಆಗುವುದು. ರೋದನದ ಜೊತೆಯಲ್ಲೇ ಸಂಗೀತವೂ ಇದ್ದೇ ಇದೆ. ಶಿಶಿರ ಋತುವಿನ ನಂತರ ವಸಂತವು ಬಂದೇ ಬರುವುದು. ಲೋಕ ದಲ್ಲಿ ದುಃಖದ ವಿನಹ ಬೇರಾವುದೂ ಇಲ್ಲವೇ ಇಲ್ಲವೆಂದಿದ್ದರೆ ಅದೇಕೆ ಕೋಗಿ ಲೆಯು ಹಾಡುತ್ತಿತ್ತು? ಮಯೂರವು ನಲಿಯುತ್ತಿತ್ತು? ಕಾಮನ ಬಿಲ್ಲು ಏತಕ್ಕಾಗಿ ಮಂದಹಾಸವನ್ನು ಬೀರುತ್ತಿತ್ತು" ಪುಷ್ಪಗಳೇಕೆ ಅರಳಿ ಆನಂದ ವನ್ನು ಕೊಡುತ್ತಿದ್ದವು? ಇವುಗಳೆಲ್ಲಾ ಜೀವನದಲ್ಲಿ ಆಸೆ, ಆಕಾಂಕ್ಷೆಗಳು ಮತ್ತು ಸುಖವಿದೆ ಎಂಬುದಕ್ಕೆ ದ್ಯೋತಕಗಳಲ್ಲವೇ? ಮನುಷ್ಯನು ಯಾವು ದಕ್ಕಾಗಿ ತನ್ನ ಕಷ್ಟಗಳನ್ನು ಈ ತರದ ಅರೆದೂಷಿತ ದೃಷ್ಟಿಯಿಂದ ನೋಡುತ್ತಾ, ತನಗಾಗಿ ವೇದನೆಗಳ ಪರ್ವತಗಳನ್ನೇ ತನ್ನೆದುರು ನಿಲ್ಲಿಸಿಕೊಳ್ಳುತ್ತಾನೆ?"

"ಸರಿ. ಈ ಮಾತು ನಿಜ." ಅಶೋಕನೂ ಏಕಾಭಿಪ್ರಾಯದೊಡನೆ ಹೇಳಿ ದನು, "ಈ ಕಲಿಯುಗದಲ್ಲಿ ಎಲ್ಲದಕ್ಕಿಂತ ದೊಡ್ಡ ಅಭಿಷಾಪವೆಂದರೆ ಅದು ಅಶ್ರದ್ಧೆ, ಅವಿಶ್ವಾಸ. ನಮಗೆ ಯಾವುದೇ ವಿಚಾರಗಳಲ್ಲಿ ಶ್ರದ್ಧೆಯೇ ಇರುವು ದಿಲ್ಲ. ದೈವತ್ವದ ಮೇಲಿಲ್ಲ, ಅಥವಾ ಧರ್ಮಕರ್ಮಗಳ ಮೇಲೂ ಇಲ್ಲ. ಕಟ್ಟಕಡೆಗೆ ತನ್ನ ಸ್ವಂತ ಆತ್ಮದ ಮೇಲೂ ಇರುವುದು ವಿರಳ. ತರ್ಕದ ಆಧಾ ರದ ಮೇಲೆ ನಾವು ನಮ್ಮ ಜೀವನದ ಮೂಲಭೂತವಾದ ಪ್ರಾಚೀನ ಮೂಲ್ಯ ಗಳನ್ನು ಹಾಳು ಮಾಡಿದ್ದೇವೆ. ಆದರೆ ಅದರ ಸ್ಥಾನದಲ್ಲಿ ನಮಗೆ ಹೊಸದಾದ ಮೂಲ್ಯವನ್ನು ಗೊತ್ತು ಮಾಡಬೇಕೆಂಬ ಉದ್ದೇಶವು ಹುಟ್ಟಲಿಲ್ಲ. ಇದರಿಂದ ನಾವಿಕನಿಲ್ಲದ ದೋಣಿಯಂತೆ ನಮ್ಮ ಅವಸ್ಥೆಯಾಯಿತು. ಶ್ರದ್ಧೆ ಎಂಬ ಸಂಜೀ ವಿನಿಯನ್ನು ಕಳೆದುಕೊಂಡು ನಾವು ಈ ಪ್ರಾಣಹೀನ ಮಾನವ ಸಮಾಜದಲ್ಲಿ ಚೈತನ್ಯ ಮತ್ತು ಆನಂದವನ್ನು ತುರುಕುವ ಪ್ರಯತ್ನವನ್ನು ಮಾಡುತ್ತಾ ಇದ್ದೇವೆ. ಇದೇ ಮಾರ್ಗದಲ್ಲಿ ನಮಗೆ ಸುಖವು ಸಿಗುವುದೆಂದು ಯೋಚಿಸುತ್ತಿರುತ್ತೇವೆ."

ಮರಿಯಮಳು ಕೇವಲ ತಲೆಯಾಡಿಸಿ ತನ್ನ ಸಮ್ಮತಿಯನ್ನು ತೋರ್ಪಡಿಸಿದಳು. ಬಾಯಿಂದ ಒಂದನ್ನೂ ಹೇಳಲಿಲ್ಲ. ಅವಳ ಮನಸ್ಸು ಎದುರಿನಲ್ಲಿರುವ ಒಂದು ಬಂಡೆಯ ಮೇಲೆ ಸ್ಥಿರಗೊಂಡಿತ್ತು. ಆ ಬಂಡೆಯ ಮೇಲೆ ಒಂದು ಪಕ್ಷಿಯು ಇನ್ನೊಂದಕ್ಕೆ ತನ್ನ ಕೊಕ್ಕಿನಿಂದ ತಿನಿಸನ್ನು ಕೊಡುತ್ತಿತ್ತು. ನಿದ್ರಾ ದೇವಿಯು ತನ್ನ ಕೊನೆಯ ರೂಪವನ್ನು ತಾಳುವುದರಲ್ಲಿದ್ದಳು. ಪೂರ್ಣ ದಿನದ ಸಂಪಾದನೆಯನ್ನು ಆ ಹಕ್ಕಿಯು ಪರಸೇವೆಗಾಗಿ ಸಲ್ಲಿಸುತ್ತಿತ್ತು. ಅವುಗಳ ಉಪಾಹಾರದ ಕಾರ್ಯವು ಮುಗಿಯುತ್ತಲೇ ಅಲ್ಲಿಂದ ಭುರ್ರೆಂದು ಹಾರಿ ಹೋಗಿ ಎದುರುಗಡೆ ಇರುವ ಮರದಲ್ಲಿ ಮಾಯವಾದವು. ಅಲ್ಲೇ ಅವುಗಳ ಗೂಡೂ ಇದ್ದಿರಬಹುದೆಂದು ತೋರುತ್ತೆ.

ಅಶೋಕನು ಕೂಡ ಆ ದೃಶ್ಯವನ್ನು ಕಂಡನು. ಆ ಪ್ರೇಮ ಮತ್ತು ಆತ್ಮೀಯತೆಯ ಭಾವವನ್ನು ನೋಡಿದ ಅವನಿಗೆ ತುಂಬಾ ಕೌತುಕವು ಉಂಟಾಯಿತು. ಮರುಕ್ಷಣದಲ್ಲೇ ಅವನು ಮರಿಯಮಳ ಕಡೆಗೆ ನೋಡಿದನು. ಆ ಸಮಯ ಅವಳೂ ತನ್ನ ಕಡೆಗೇ ಧ್ಯಾನದೊಂದಿಗೆ ನೋಡುತ್ತಿರುವದು. ಅವನಿಗೆ ತಿಳಿಯಿತು. ಇಬ್ಬರ ದೃಷ್ಟಿಗಳೂ ಸಮ್ಮಿಲಿತವಾದವು. ಮರಿಯಮಳ ಕಣ್ಣುಗಳಲ್ಲಿ ಸ್ನೇಹಶೀಲತೆಯ ಸೂಕ್ಷ್ಮ ಭಾವವು ಪ್ರತಿಬಿಂಬಿತವಾಗಿತ್ತು. ಅದೇ ಕೌತುಕ ಭಾವವೂ ಈಗಲೂ ಹಾಗೆಯೇ ಸ್ಥಿರವಾಗಿ ಉಳಿಯಿತು. ಮರಿಯಮಳು ಎದ್ದು ನಿಂತು ಹೇಳಿದಳು "ನಡೆಯಿರಿ ಮನೆಗೆ ಹೋಗೋಣ. ರಾತ್ರಿ ಹೆಚ್ಚುತ್ತಾ ಇದೆ."

ಏಳು

ಅದೊಂದು ದಿನ ಅಶೋಕನು ತನ್ನ ಹಾಸಿಗೆಯಲ್ಲಿಯೇ ಬಿದ್ದುಕೊಂಡು ಏನನ್ನೋ ನೋಡುತ್ತಿದ್ದನು. ದೃಷ್ಟಿಯು ಒಂದೆಡೆ ಇದ್ದರೆ, ಮನಸ್ಸು ಇನ್ನೊಂದರಲ್ಲಿ ನೆಲೆಗೊಂಡಿತ್ತು. ಮನಸ್ಸಿನಲ್ಲಿ ಮರಿಯಮಳ ವಿಚಾರಗಳೇ ಎದ್ದೇಳುತ್ತಿದ್ದವು. ಆ ಹುಡುಗಿಯು ಬುದ್ಧಿಯುತಳೇನೋ ಹೌದು. ಇದರಲ್ಲಿ ಸಂದೇಹವಿಲ್ಲ. ಆದರೆ ಅವಳು ಕೂಡ ತನ್ನ ವಿಚಾರಗಳನ್ನು ನಿಶ್ಚಯ ಮಾಡಿಟ್ಟು

ಕೊಂಡಂತೆ ಕಾಣುವದು. ಜೀವನದ ಪ್ರಶ್ನೆಗಳ ಸಂಬಂಧವಾಗಿ ಅವಳು ಕೆಲ ವನ್ನು ತಿಳಿದುಕೊಂಡಿದ್ದಾಳೆ. ಅವಳಿಗೆ ಜೀವನದಲ್ಲಿ ತಾತ್ಸಾರವಿಲ್ಲ. ಬದಲಾಗಿ ಪ್ರೇಮವೇ ಇದೆ. ಹುಡುಗಿಯು ಅನಾಥೆಯಾಗಿದ್ದರೂ ಕೂಡ ಈ ತರದ ನಿಶ್ಚ ಯವಾದ ಆಶಾವಾದವನ್ನೆಂತು ಮಾಡುತ್ತಾಳೆಂಬುದು ಆಶ್ಚರ್ಯದ ಸಂಗತಿ! ಅವಳು ಬಾಲ್ಯವನ್ನು ಹೇಗೆ ಕಳೆದಿದ್ದಳೆಂಬುದು ತಿಳಿಯದು. ಏನೆಲ್ಲ ಕಷ್ಟ ಗಳನ್ನು ಸಹಿಸಬೇಕಾಗಿ ಬಂದಿತ್ತೋ, ಎಂತೆಂತಹ ಅಪಮಾನಗಳನ್ನು ಹೊಂದಿ ದ್ದಳೋ! ಯಾವ ರೀತಿಯ ಚಿಂತೆಗೊಳಗಾಗಿದ್ದಳೋ ಯಾರು ಬಲ್ಲರು. ಅವಳು ಮಿಸ್ ಥಾಮಸರೊಂದಿಗೆ ಈ ವನಗ್ರಾಮದಲ್ಲಿ ಹಲವು ವರ್ಷಗಳನ್ನು ಕಳೆದುಕೊಂಡು ಬರುತ್ತಾ ಇದ್ದಾಳೆ. ಅವಳು ಜೀವನದಲ್ಲಿ ಒಬ್ಬಂಟಿಗಳೇ ಅಲ್ಲವೇ? ಈಗಿನ ಯೌವನದ ಮೊದಲ್ಗೊಂಡು ಜೀವನದ ಅಂತ್ಯದ ವರೆಗೂ ಅವಳು ಕಾಲವನ್ನು ಹೀಗೆಯೇ ಕಳೆಯುತ್ತಾಳೆಯೇ? ಇಷ್ಟೆಲ್ಲ ಕಷ್ಟ ಪರಿಸ್ಥಿತಿ ಗಳು ಅವಳ ಕಣ್ಮುಂದಿನಿಂದ ಹಾದು ಹೋಗುತ್ತಿದ್ದರೂ ಕೂಡ ಅವಳು ಎಷ್ಟು ಪ್ರಸನ್ನಚಿತ್ತಳೂ ಮಂದಹಾಸಳೂ ಮತ್ತು ಆಶಾಯುಕ್ತಳೂ ಆಗಿದ್ದಾಳೆ! ಸಮಸ್ತ ಸುಖಗಳಿಂದ ಕೂಡಿದ ಮಹಾಸುಖಿಯಂತೆಯೇ ಅವಳೂ ಇದ್ದಾಳೆ. ವಿಚಿತ್ರ ತರದ ಕನ್ನೆಯಪ್ಪ!

ಭಾರತ ವರ್ಷದ ಪುರಾತನ ಸಂಸ್ಕೃತಿ ಮತ್ತು ಭವಿಷ್ಯದ ವಿಷಯವಾಗಿ ಅವಳಿಗೆಂತಹ ಅಗಾಧ ಶ್ರದ್ಧೆ. ರೂಪದಲ್ಲಾದರೂ ಅವಳು ಆಂಗ್ಲೋ ಇಂಡಿ ಯನ್‌ಳಂತೆ ಕಾಣುತ್ತಿದ್ದಾಳೆ. ಆದರೆ ಅವಳ ವಿಚಾರ ಮತ್ತು ಶ್ರದ್ಧೆಗಳೆಲ್ಲ ಸಂಪೂರ್ಣ ಭಾರತೀಯರವೇ ಆಗಿವೆ. ಅವಳೇನೋ ಅನಾಥಳು ನಿಜ. ಆದರೆ ಅವಳ ಶರೀರದಲ್ಲಿ ಎಂತಹ ರಕ್ತವು ಹರಿಯುತ್ತಿದೆ? ಅವಳ ಈ ವರೆಗಿನ ಜೀವನದಲ್ಲಿ ಎಂತೆಂತಹ ಘಟನೆಗಳು ನಡೆದಿವೆಯೋ! ಅವಳ ಪೂರ್ವ ಜೀವನ ವನ್ನು ತಿಳಿಯಲು ಅಶೋಕನು ತುಂಬಾ ಕುತೂಹಲನಾದನು. ಆದರೆ ಕೇಳು ವುದಾದರೂ ಯಾರಲ್ಲಿ? ಆದರೂ ಅವನ ವಿಚಾರಶೀಲ ಮನಸ್ಸು ಅವಳ ವಿಷ ಯವಾಗಿ ಏನನ್ನೂ ಯೋಚಿಸದೆ ಇರಲು ಒಪ್ಪುತ್ತಿರಲಿಲ್ಲ. ಏನಿದ್ದರೂ ಅವಳ ತತ್ಕಾಲದ ಅಭಿಪ್ರಾಯ ಹಿತಕರವೇ ಆಗಿದೆ. ಸುಸಂಸ್ಕೃತಳೇ ಆಗಿದ್ದಾಳೆ. ಅವಳಲ್ಲಿ ಗಾಂಭೀರ್ಯವಿದೆ. ಅಲ್ಲದೆ ಅವಳ ಸಮೀಪತೆಯು ತನಗೆ ಸುಖವನ್ನು ಕೊಡುತ್ತಿದೆ--ಎಂಬುದನ್ನು ಅಶೋಕನು ತಿಳಿದಿದ್ದನು.

ಎರಡು ದಿನಗಳ ನಂತರ ಅಶೋಕನು ಒಂದು ಪಿಕ್‌ನಿಕ್ ಪಾರ್ಟಿಯನ್ನಿಟ್ಟಿದ್ದನು. ಇದರಲ್ಲಿಯ ಮುಖ್ಯ ಕಾರಣಗಳಲ್ಲಿ ಮರಿಯಮಳ ಸಾನ್ನಿಧ್ಯವನ್ನು ಪಡೆಯುವುದೂ ಒಂದಾಗಿದ್ದಿತು. ಅವನು ಮಿಸ್ ಥಾಮಸರನ್ನು ಜೊತೆಗೆ ಬರಲು ಹೇಳಿದ್ದನು. ಅವರು ನಿಮಂತ್ರಣವನ್ನು ಸ್ವೀಕರಿಸದೆ ಈರೀತಿ ಹೇಳಿಕಳಿಸಿದರು: 'ವೃದ್ಧಾಪ್ಯ ಮತ್ತು ಅಶಕ್ತತೆಯ ಕಾರಣದಿಂದ ಬೆಟ್ಟ-ಕಾಡುಗಳಲ್ಲಿ ಸಂಚರಿಸಲು ಅಸಮರ್ಥಳಿದ್ದು ತನ್ನ ಪಿಕ್‌ನಿಕ್ ಅಥವಾ ಪಾರ್ಟಿಗಳ ದಿನವು ಕಳೆದು ಹೋಯಿತು' ಎಂದು. ಆದ್ದರಿಂದ ಮರಿಯಮಳನ್ನು ಕರೆದುಕೊಂಡು ಹೋಗುವುದರಲ್ಲಿ ತಮ್ಮ ಆತಂಕವಿಲ್ಲವೆಂದೂ ತಿಳಿಸಿದ್ದರು. ಅಶೋಕನಿಗೆ ಈ ಉತ್ತರವು ತುಂಬಾ ರುಚಿಸಿತು. ಏಕೆಂದರೆ ಮಿಸ್ ಥಾಮಸರ ಮುಂದೆ ಅಶೋಕನು ಅಷ್ಟು ನಿರ್ಭೀತನಾಗಿರಲು ಆಗುತ್ತಿರಲಿಲ್ಲ.

ಮೋಟಾರುಕಾರಿನ ಸಿದ್ಧತೆಯೂ ಆಯಿತು. ಅಬ್ದುಲ್ಲನು ಅವರೊಂದಿಗೆ ಇರಲೇ ಬೇಕಷ್ಟೇ. ಪೂರ್ಣ ಒಂದು ದಿನದ ಕಾರ್ಯಕ್ರಮವಿದ್ದುದರಿಂದ ಊಟ ತಿಂಡಿ, ಪಾನೀಯಗಳೆಲ್ಲವುಗಳ ಅವಶ್ಯಕತೆ ಇತ್ತು. ಕೆನ್‌ವಾಸ್, ಬಣ್ಣ, ಬ್ರಶ್ಶು ಇತ್ಯಾದಿ ಉಪಕರಣಗಳನ್ನೆಲ್ಲ ಕೊಂಡೊಯ್ಯಲಾಯಿತು. ಮರಿಯಮಳೂ ಒಂದು ದಿನದ ಮಟ್ಟಿಗೆ ಮನೆಗೆಲಸಗಳಿಂದ ವಿಮುಕ್ತಳಾಗಿ ರಜೆ ಪಡೆದುಕೊಂಡಿದ್ದಳು.

ಅವರು ಹೋಗುವ ಸ್ಥಳಕ್ಕೆ ಬಾರಾಲಿಂಗ್ ಎಂದು ಹೇಳುತ್ತಿದ್ದರು. ಆ ರಮಣೀಯ ಸ್ಥಾನವು ಬೈಕೂಲದಿಂದ ಸುಮಾರು ಹತ್ತು ಮೈಲಿಗಳಷ್ಟು ದೂರದಲ್ಲಿ ತಪತೀ ನದಿಯ ದಂಡೆಯಲ್ಲಿದೆ. ಆ ಸ್ಥಳದಲ್ಲಿ ಈ ನದಿಯು ಎತ್ತರವಾದ ಪರ್ವತಗಳನ್ನೂ ಹಸುರಿನಿಂದ ತುಂಬಿದ ವನಗಳನ್ನೂ ಬಳಸುತ್ತ, ಪ್ರವಹಿಸುತ್ತಿತ್ತು. ಅಲ್ಲಿ ಒಂದೆಡೆಯಲ್ಲಿ ನಿಂತು ನೋಡಿದರೆ ಮೂರು ದಿಕ್ಕುಗಳಲ್ಲಿಯೂ ಪರ್ವತ ಮತ್ತು ನಾಲ್ಕನೆಯ ದಿಶೆಯಲ್ಲಿ ತಪತಿಯು ಹರಿಯುತ್ತಿದ್ದಂತೆ ಕಾಣುತ್ತಿತ್ತು. ಅದರ ದಂಡೆಯಲ್ಲೊಂದು ಈಶ್ವರನ ದೇವಾಲಯವಿದೆ. ಮೋಟಾರು ಗಾಡಿಯು ಸಾಂವಲೀಘಟ್ಟದ ಊರಿನ ವರೆಗೆ ಮಾತ್ರ ಹೋಗಲು ಸಾಧ್ಯ. ಅಲ್ಲಿಂದ ಮುಂದಕ್ಕೆ ಸುಮಾರು ಎರಡು ಮೈಲುಗಳಷ್ಟು ದೂರ ಕಾಲ್ನಡೆಯಿಂದಲೇ ಹೋಗಬೇಕಾಗುವುದು.

ಆ ಊರಲ್ಲಿ ಮೋಟಾರನ್ನು ನಿಲ್ಲಿಸಿ, ಅಶೋಕ, ಅಬ್ದುಲ್ಲಾ ಮತ್ತು ಮರಿ

ಯಮ್ ಈ ಮೂವರೂ ಬಾರಾಲಿಂಗ್ ಪ್ರದೇಶಕ್ಕೆ ಹೊರಟರು. ದಾರಿ ತೋರಿಸುವುದಕ್ಕೆ ಮತ್ತು ಅವರ ಸಾಮಾನುಗಳನ್ನು ಹೊರಲು ಒಬ್ಬ ಗೊಂಡರ ಹುಡುಗನನ್ನು ಜತೆಗೆ ಕರೆದುಕೊಂಡು ಹೋದರು. ಆ ಹುಡುಗನೂ ಅಬ್ದುಲ್ಲನೂ ಮುಂದೆ ಮುಂದೆ ನಡೆಯುತ್ತಿದ್ದರು. ಹಾಗೆಯೇ ಹಿಂದಿನಿಂದ ಅಶೋಕನೂ ಮರಿಯಮಳೂ ನಡೆದು ಬರುತ್ತಿದ್ದರು.

ವಸಂತ ಋತುವಿನ ಆಗಮನದ ಚಿಹ್ನೆಯು ದಶದಿಶೆಗಳಲ್ಲಿಯೂ ಎದ್ದು ಕಾಣುತ್ತಿತ್ತು. ಇಡೀ ಸೃಷ್ಟಿಯು ಆನಂದ ಮತ್ತು ಉಲ್ಲಾಸದೊಂದಿಗೆ ಕ್ರೀಡೆಯಲ್ಲಿದ್ದಂತೆ ಕಾಣುತ್ತಿತ್ತು. ಎಲ್ಲ ಮಹಾ ವೃಕ್ಷಗಳೂ ಹೊಸ ಎಲೆಗಳಿಂದ ಕೂಡಿದುವಾಗಿದ್ದು, ಹಸುರಾಗಿ ಕಾಣುತ್ತಿದ್ದವು. ಆ ವನದಲ್ಲಿಯ ವಾಯು ತನ್ನ ವಿಚಿತ್ರವಾದ ಸುಗಂಧವನ್ನು ಹೊತ್ತುಕೊಂಡು ಮಂದವಾಗಿ ಸಂಚರಿಸುತ್ತಿತ್ತು. ಪ್ರಕೃತಿಯ ಸಾಮ್ರಾಜ್ಯದಲ್ಲಿ ಎಲ್ಲೆಲ್ಲಿಯೂ ಆನಂದವೇ ಆನಂದವು ಕಂಡುಬರುತ್ತಿರುವ ಕಾಲ.

ಅಶೋಕನಿಗೆ ಆಗ ಮಾತನಾಡುವ ಮನಸ್ಸಿರಲಿಲ್ಲ. ಅವನ ಜಾಗೃತವಾದ ಸೌಂದರ್ಯಾಸಕ್ತ ಕಣ್ಣುಗಳು ಪ್ರಕೃತಿಯ ರಮಣೀಯತೆಯನ್ನು ಕಾಣಲು ಕಾತುರವಾಗಿದ್ದವು. ಪ್ರಕೃತಿಯ ಸಂಸರ್ಗದ ಶುದ್ಧ, ಸಾತ್ವಿಕ ಆನಂದವು ಅವನ ಹೃದಯದಲ್ಲಿ ತುಂಬಿಕೊಂಡಿತ್ತು. ಆಗ ಅವನ ಕಲಾಸಕ್ತಿಯು ಉಕ್ಕಿ ಬರುವಂತಿತ್ತು. ಹಾಗೆಯೇ ಮುಂದರಿದು ಹೋಗುತ್ತಾ ಒಂದು ಮನೋಹರವಾದ ಸ್ಥಳದಲ್ಲಿ ತಟಕ್ಕೆಂದು ನಿಂತನು. ಅಲ್ಲಿಂದಲೇ ಅವನು ಅಬ್ದುಲ್ಲನನ್ನು ಕೂಗಲಾರಂಭಿಸಿದನು.

ಸಹಜವಾದ ಕುಶಲತೆಯಿಂದ ಅವನ ತೂಲಿಕೆಯು ಐದು ಗಳಿಗೆಯೊಳಗಾಗಿ ಕೆನವಾಸಿನ ಮೇಲೆ ಓಡಲಾರಂಭಿಸಿತು. ಮರಿಯಮಳಿಗೆ ಅವನ ಗಮನವೆಲ್ಲ ಆತನ ಕಣ್ಣುಗಳಲ್ಲಿ ಇಳಿದು ಬಂದಂತೆ ಕಂಡಿತು. ಅವನ ಕೈಬೆರಳುಗಳು ಯಾವ ರೀತಿಯ ಪ್ರಯಾಸವೂ ಇಲ್ಲದಂತೆ ಸಹಜ ಚತುರತೆಯಿಂದ ತಮ್ಮ ಕೆಲಸವನ್ನು ಸಾಗಿಸುತ್ತಿದ್ದವು. ಆಗ ಅಶೋಕನು ಪ್ರಪಂಚವನ್ನೇ ಮರೆತುಬಿಟ್ಟಿದ್ದನು. ತನ್ನ ಚಿತ್ರಕಲೆಯೊಂದೇ ಸತ್ಯವೆಂದು ತಿಳಿದುಕೊಂಡಿದ್ದನೆಂದರೂ ತಪ್ಪಾಗದು.

ಅಶೋಕನು ತನ್ನ ಸಾಧನೆಯಲ್ಲಿ ಮಗ್ನನಾಗಿದ್ದಾಗ ಮರಿಯಮಳು ಅವನ

ಅಗಾಧವಾದ ತನ್ಮಯತೆಯನ್ನು ನೋಡುತ್ತಿದ್ದಳು. ಈಗ ಅಶೋಕನ ಸೌಂದರ್ಯವು ಹೆಚ್ಚಿ, ಒಂದು ಬಗೆಯ ಪಾವನ ಪ್ರಭೆಯು ಅವನ ಮುಖದಲ್ಲಿ ಉದಯಿಸಿದಂತೆ ಮರಿಯಮಳಿಗೆ ಕಂಡಿತು. ಇದರ ರಸವನ್ನು ಒಂದು ಹನಿಯೂ ಬಿಡದಂತೆ ಅವಳು ಹೀರುತ್ತಿದ್ದಳು. ಒಬ್ಬ ಕಲಾಕಾರನು ತನ್ನ ಕಲಾಸಾಧನೆಯ ಕಾಲದಲ್ಲಿ ಇಷ್ಟು ತಲ್ಲೀನತೆ ಹೊಂದುವುದನ್ನು ಅವಳು ಇದುವರೆಗೆ ಕಂಡಿರಲಿಲ್ಲ. ನಿಜವಾಗಿಯೂ ಅಶೋಕನು ಶ್ರೇಷ್ಠ ಕಲಾಕಾರನೆಂಬುದನ್ನು ಮರಿಯಮಳೀಗ ತಿಳಿದುಕೊಂಡಳು. ಸಾಧಾರಣ ವ್ಯಕ್ತಿಗಳಿಗಿಂತ ಅವನು ಉತ್ಕೃಷ್ಟನೂ, ಭಿನ್ನನೂ ಆಗಿದ್ದನೆಂಬುವದಕ್ಕೆ ಇದೇ ನಿದರ್ಶನ. ಆ ದೃಶ್ಯವು ಅವಳಿಗೆ ಒಂದು ಅನಿರ್ವಚನೀಯ ಸುಖವನ್ನೀಯುತ್ತಿತ್ತು. ಆ ಸೌಭಾಗ್ಯವನ್ನು ತಾನು ಪಡೆದೆನೆಂಬುವದಕ್ಕೆ ಅವಳು ಸ್ವಲ್ಪ ಹೆಮ್ಮೆಗೊಂಡಳು. ಹೊಸ ಬಗೆಯ ಒಂದು ಅನುಭವವನ್ನು ಪಡೆದ ಮರಿಯಮಳಿಗೆ ತುಂಬಾ ಸಂತೋಷವಾಯಿತು.

ಎರಡು ಘಂಟೆಗಳ ಕಾಲ ಈ ಕ್ರಮವು ಸಾಂಗವಾಗಿ ನಡೆಯಿತು. ಕೊನೆಗೆ ಅಶೋಕನು ಒಂದು ದೀರ್ಘಶ್ವಾಸವನ್ನು ಬಿಡುತ್ತ ತನ್ನ ತೂಲಿಕೆಯನ್ನು ಕೆಳಗಿಳಿಸಿ, ಹತ್ತಿರದ ಹುಲ್ಲಿನ ಹಾಸಿಗೆಯಲ್ಲಿ ಒರಗಿ, ಮೇಲಿನ ನಿರ್ಮಲ ನೀಲಾಕಾಶದ ಕಡೆಗೆ ನೋಡುತ್ತ ಶಾಂತವಾಗಿ ಬಿದ್ದುಕೊಂಡನು. ಎದುರಿಗೆ ಪ್ರಾಕೃತಿಕ ದೃಶ್ಯವು ಆ ಕೆನವಾಸಿನ ಮೇಲೆ ಅತಿ ಸುಂದರ ರೂಪದಿಂದ ಪ್ರತಿಬಿಂಬಿತವಾಗಿತ್ತು. ನೂರಿಪ್ಪತ್ತು ನಿಮಿಷಗಳ ಅಲ್ಪಾವಕಾಶದೊಳಗೆ ಈ ಅಪ್ರತಿಮ ಸೌಂದರ್ಯ ಚಿತ್ರವನ್ನು ಕಂಡ ಮರಿಯಮಳು ಅಪ್ರತಿಭಳಾಗಿದ್ದಳು.

ಅಶೋಕ ಠಾಕೂರನ ಕಲಾಯೋಗಾವಸ್ಥೆಯು ಇಳಿಯಲು ಸಾಧಾರಣ ಒಂದು ಘಂಟೆ ಹಿಡಿಯಿತು. ಅಶೋಕ ಮತ್ತು ಮರಿಯಮ್ ಬಾರ್‌ಲಿಂಗ್ ಪರ್ವತದ ಮೇಲೆ ಒಂದು ಮಾವಿನ ಮರದಡಿಯಲ್ಲಿ ಉಪಹಾರಕ್ಕೆ ಕೂತಾಗ ಅಶೋಕನ ಮನಸ್ಸು ಒಂದು ಸ್ಥಿತಿಗೆ ಬಂದಿತ್ತು. ಅವನ ಆ ಮನಸ್ಸು ಪೂರ್ಣ ಆನಂದವನ್ನು ಪಡೆದು ವಿಶ್ರಾಂತಿ ಹೊಂದಿತ್ತು. ದೂರದ ಪ್ರವಾಸ ಮತ್ತು ಎರಡು ಗಂಟೆಗಳ ಕಾಲ ಒಂದೇಸಮನೆ ಮಾಡಿದ ಚಿತ್ರದ ಕೆಲಸದಿಂದ ಈಗ ಅಶೋಕನಿಗೆ ತುಂಬಾ ಹಸಿವು ಆಗಿತ್ತು. ಆದ್ದರಿಂದ ಅವನಲ್ಲಿದ್ದ ಕೇಕ್ ಬಿಸ್ಕತ್ತುಗಳನ್ನು ಕೆನೆ ಮಿಠಾಯಿಗಳನ್ನು ಒಂದು ಕೈ ನೋಡಿಯೇ ಬಿಟ್ಟನು. ಕೆಳಗೆ ಶಿವದೇವಾಲಯದ ಬಳಿ ಅಬ್ದುಲ್ಲನು ಅಡಿಗೆಯನ್ನು ತಯಾರಿಸುತ್ತಿದ್ದನು.

ತನ್ನ ಹಸಿವನ್ನು ಅಡಗಿಸಿಕೊಳ್ಳಲು ಅಶೋಕನು ಮರಿಯಮಳೊಡನೆ "ನಿನಗೆ ಹಸಿವೆ ಇಲ್ಲವೇ?" ಎಂದನು.

ಇಷ್ಟು ದಿನಗಳ ಅನಂತರ ಸ್ವೇಚ್ಛೆಯಿಂದ ಅಶೋಕನು ಮರಿಯಮಳನ್ನು ಏಕವಚನದಲ್ಲಿ ಕೂಗಿದನು. ಈಗಲಾದರೂ ಅವನಿಗೆ ತನಗಿಂತ ಚಿಕ್ಕವಳಾದ ಮರಿಯಮಳಲ್ಲಿ ತಾನು ಹಿರಿಯವನೆಂಬ ಅಧಿಕಾರದ ಹೆಮ್ಮೆಯನ್ನು ತೋರಿಸಬೇಕೆಂದು ಆಸೆ ತೋರಿತೊ ಏನೊ! ಮರಿಯಮಳಿಗೂ ಈ ಸಂಬೋಧನೆಯು ಸಂತೋಷವನ್ನು ಉಂಟು ಮಾಡಿತು.

"ನನಗೆ ಹಸಿವಾಗಿದೆಯೋ ಇಲ್ಲವೋ ಆ ಮಾತಂತಿರಲಿ· ತಾವು ನಿಸ್ಸಂಕೋಚವಾಗಿ ತಿನ್ನಿರಿ. ನಾನೇನು ಚಿತ್ರದ ಕೆಲಸವನ್ನು ಮಾಡಿಲ್ಲ." ಮರಿಯಮಳು ನಗೆಯೊಂದಿಗೆಂದಳು.

ಅಶೋಕನು ಸಂಕೋಚಗೊಂಡು ಮಾತು ಬದಲಾಯಿಸುವುದಕ್ಕೋಸ್ಕರ ಹೇಳಿದನು "ಈ ಮೊದಲು ನೀನಿಲ್ಲಿಗೆ ಬರಲೇ ಇಲ್ಲ. ಅಲ್ಲವೇ? ಎಷ್ಟು ಸುಂದರವಾದ ಸ್ಥಳವಿದು?"

"ಇಲ್ಲ, ಒಮ್ಮೆ ಬಂದಿದ್ದೆ. ಆಗ ನಾನಿನ್ನೂ ಚಿಕ್ಕವಳು. ಆ ಕಾಲದಲ್ಲಿ ನಾನು ಈ ಪ್ರದೇಶಕ್ಕೇನೇ ಹೊಸಬಳಾಗಿದ್ದೆ. ಆಗಿನ ಸ್ಪಷ್ಟವಾದ ನೆನಪು ಈಗ ಆಗುವುದೂ ಇಲ್ಲ. ಆದರೆ ಈಗ ಪುನಃ ಇಲ್ಲಿಗೆ ಬಂದಿರುವುದರಿಂದ ಈ ನದಿ ಪರ್ವತ, ಎದುರಿನ ಉನ್ನತ ಶಿಖರ ಇತ್ಯಾದಿಗಳನ್ನೆಲ್ಲ ನೋಡಿದ ನೆನಪಾಗುತ್ತದೆ."

ಸಮಯವನ್ನು ಸಾಧಿಸಿ ಅಶೋಕನು "ನೀನು ಮಿಸ್ ಥಾಮಸ್‌ರೊಂದಿಗೆ ಇರಲಾರಂಭಿಸಿ ಎಷ್ಟು ವರ್ಷಗಳಾದವು?" ಎಂದು ಕೇಳಿದನು.

"ಸಾಧಾರಣ ಹತ್ತು-ಹನ್ನೆರಡು ವರ್ಷಗಳಿಗೆ ಹತ್ತಿರವಾಯಿತು."

"ಅದಕ್ಕೆ ಮೊದಲು ಎಲ್ಲಿದ್ದೆ?"

"ಲಖ್ನೋದಲ್ಲಿಯ ಮಿಶನ್ ಅನಾಥಾಲಯದಲ್ಲಿದ್ದೆ. ಒಮ್ಮೆ ಮಿಸ್ ಥಾಮಸರು ಅಲ್ಲಿಗೆ ಬಂದರು. ನನ್ನನ್ನು ಅವರು ಕಂಡರು, ನನ್ನ ಈ ರೂಪ ರೇಖೆಗಳನ್ನು ಕಂಡು ಸಂತೋಷಪಟ್ಟರೆಂದು ತೋರುತ್ತೆ. ಅನಾಥಾಲಯದ ಮೆನೇಜರರೂ ನಾನೊಬ್ಬ ಬುದ್ಧಿವಂತ ಹುಡಿಗೆಯೆಂದೆಣಿಸಿದ್ದರೆಂದು ತೋರುವುದು. ಮಿಸ್ ಥಾಮಸರು ಅವರಿಂದ ನನ್ನ ಹೊಗಳಿಕೆಯನ್ನು ಕೇಳಿದನಂತರ

ನನ್ನನ್ನು ತಮ್ಮೊಂದಿಗೆ ಕರೆತಂದರು. ಅಂದಿನಿಂದ ನಾನು ಅವರ ಜೊತೆಯಲ್ಲಿಯೇ ಇದ್ದೇನೆ. ಅವರೇ ನನಗೆ ಇಂಗ್ಲೀಷನ್ನು ಕಲಿಸಿದವರು. ಇದನ್ನು ಕಲಿತ ನಂತರ ಅವರು ನನಗೆ ಧರ್ಮೋಪದೇಶವನ್ನಿತ್ತರು. ಪ್ರಾರ್ಥನೆಯ ಕ್ರಮವನ್ನು ಕಲಿತ ನಾನು ರೋಮನ್ ಕೆಥೊಲಿಕರ ಸಂಪ್ರದಾಯದ ದೀಕ್ಷೆಯನ್ನು ತೆಗೆದುಕೊಂಡೆ. ನಾನು ಆಮರಣ ಬ್ರಹ್ಮಚಾರಿಣಿಯಾಗಿದ್ದು ಕ್ರಿಸ್ತ ಭಿಕ್ಷುಣಿಯಾಗಿರಬೇಕೆಂದು ಮಿಸ್ ಥಾಮಸರ ಆಸೆ. ಆದರೆ ಅದು ನನಗೆ ಒಪ್ಪುತ್ತಿರಲಿಲ್ಲ. ಈಗಲೂ ಅವರಿಗೆ ಅದೇ ಅಭಿಪ್ರಾಯ. ನಾನಾದರೊ ಅದರಿಂದ ದೂರವಾಗಿರಲು ಸದಾ ಪ್ರಯತ್ನಿಸುತ್ತೇನೆ."

"ಮನೆಯಲ್ಲಿ ನಿನಗಾಗಿ ನಿಯಮಿತವಾದ ಕೆಲಸಗಳಿವೆಯೇ ?"

"ಅಂತಹ ಕಾದಿಟ್ಟ ಕೆಲಸಗಳೇನೂ ಇಲ್ಲ. ಆದರೂ ಅವರ ಊಟ, ತಿಂಡಿ, ಉಡಿಗೆ, ತೊಡಿಗೆ ಇತ್ಯಾದಿಗಳನ್ನೆಲ್ಲ ನಾನೇ ನೋಡಿಕೊಳ್ಳಬೇಕಾಗುತ್ತದೆ. ಅವರ ಆರೋಗ್ಯವು ಅಷ್ಟು ಚೆನ್ನಾಗಿರುವುದಿಲ್ಲ. ಆದ್ದರಿಂದ ಔಷಧಿಯ ಗಮನವೂ ನನಗೇ ವಹಿಸಿದ್ದು. ಅವರ ಜೀವನವೂ ಏರಿಕೆಯದಾಗಿದೆ. ಅವರಿಗೂ ಒಬ್ಬ ಜೊತೆಗಾರಳು ಬೇಕಷ್ಟೆ. ಆ ಸ್ಥಾನವನ್ನು ನಾನೇ ಪೂರ್ಣಗೊಳಿಸಿದ್ದೇನೆ. ಹಳ್ಳಿಯವರ ಶಿಶ್ರೂಷೆ ಮಾಡುವುದು, ಒಮ್ಮೊಮ್ಮೆ ಪಾಠಶಾಲೆಗಳಿಗೆ ಹೋಗಿ ಮಕ್ಕಳಿಗೆ ಬೈಬಲ್ ಓದಿಸುವುದು, ಇಗರ್ಜಿ ಮತ್ತು ಬಂಗಲೆಗಳ ಮೇಲ್ವಿಚಾರಗಳನ್ನು ತೆಗೆದುಕೊಳ್ಳುವುದು ಇವೇ ಮೊದಲಾದ ಕೆಲಸಗಳ ಜವಾಬ್ದಾರಿಯೂ ನನ್ನದೇ. ಇವುಗಳಿಗೆಲ್ಲಾ ಬದಲಾಗಿ ನನಗೆ ಸಿಗುವುದೆಂದರೆ ಊಟ, ಉಡಿಗೆ ಮತ್ತು ತಿಂಗಳಿಗೆ ಮೂರು ರೂಪಾಯಿಗಳ ಸಂಬಳ. ಮಿಸ್ ಥಾಮಸರು ಬಡವರು. ಹೋದ ವರ್ಷ ನಮ್ಮ ಮಿಶನರಿ ಆಸ್ಪತ್ರೆಯ ಕೇಂದ್ರ ಆಫೀಸಿನಿಂದ ಖರ್ಚನ್ನು ಬಹಳ ಕಡಿಮೆ ಮಾಡಬೇಕೆಂಬ ಒಂದು ಖಡ್ಡಾಯದ ಉತ್ತರವು ಬಂದಿತ್ತು. ಏಕೆಂದರೆ ಅವರಿಗೆ ಆಫ್ರಿಕಾದಲ್ಲಿ ತಮ್ಮ ಕಾರ್ಯವನ್ನು ನಡೆಸಲು ತುಂಬಾ ಧನವು ಬೇಕಂತೆ. ಅದಕ್ಕಾಗಿ ಅಂದಿನಿಂದ ಇವರು ಬಡತನದ ವ್ರತವನ್ನು ಸ್ವೀಕರಿಸಿದ್ದಾರೆ. ಫಾಡರಿಪುರದ ಎಲ್ಲಾ ಅನಾವಶ್ಯಕ ಖರ್ಚುಗಳನ್ನು ನಿಲ್ಲಿಸಿದರು. ನನಗೂ ಮೂರು ರೂಪಾಯಿಗಳು ಅಗತ್ಯಕ್ಕಿಂತಲೂ ಹೆಚ್ಚೇ ಆಗಿವೆ. ಆದ್ದರಿಂದ ನಾನು ಬಹಳ ಕಡಿಮೆ ಖರ್ಚು ಮಾಡಿ ಉಳಿದುದನ್ನು ಹಾಗೆಯೇ ಮಿಗಿಸಿಟ್ಟಿರುತ್ತೇನೆ. ಪ್ರಪಂಚದಲ್ಲಿ ನನಗೆ ನನ್ನವರಾರೂ ಇಲ್ಲ.

ಮತ್ತೇಕೆ ನಾನು ಅಧಿಕವಾದ ಧನದಾಸೆಯನ್ನು ಇಟ್ಟುಕೊಳ್ಳಲಿ?"

ಮರಿಯಮಳ ಕೊನೆಯ ಶಬ್ದಗಳನ್ನು ಕೇಳಿದ ಅಶೋಕನ ಹೃದಯವು ಕರುಣರಸದಿಂದ ದ್ರವಿತವಾಯಿತು. ಆದರೆ ಆತನು ಆದನ್ನು ತನ್ನಲ್ಲಿ ತಾನೇ ಸಹಿಸಿಕೊಂಡು ಪ್ರಶ್ನಿಸಿದನು: "!ಲಖ್ನೋದಲ್ಲಿರುವುದಕ್ಕೆ ಹಿಂದೆ ಎಲ್ಲಿದ್ದೆ ?—ಎಂಬುದೇನಾದರೂ ನೆನಪಿದೆಯೇ ?"

"ಹೌದು. ಸ್ವಲ್ಪ, ಸ್ವಲ್ಪ ನೆನಪಿದೆ. ಇನ್ನು ಕೆಲವನ್ನು ಇತರರಿಂದ ಕೇಳಿದ್ದೇನೆ."

"ನೀನು ಅನ್ಯಥಾ ಭಾವಿಸಿಕೊಳ್ಳದಂತಿದ್ದರೆ ಅದನ್ನು ತಿಳಿಸಬಹುದು." ಅವಳ ಜೀವನಕತೆಯನ್ನು ಕೇಳಿದ ಅಶೋಕನಿಗೆ ತುಂಬಾ ಪರಿತಾಪವು ಉಂಟಾಯಿತು.

"ನಿಮ್ಮ ಅಭಿಪ್ರಾಯ ನನಗೆ ತಿಳಿಯಿತು. ಎಲ್ಲವನ್ನು ತಿಳಿಸಿ ಮನಸ್ಸಿನ ಭಾರವನ್ನು ತುಸು ಕಡಿಮೆ ಮಾಡಲು ನನ್ನ ಹೃದಯವೂ ಹೇಳುತ್ತಿದೆ. ಅಲ್ಲದೆ ನಿಮ್ಮಲ್ಲಿ ಯಾವುದನ್ನು ಅಡಗಿಸುವ ಕಾರಣವೂ ತೋರುವುದಿಲ್ಲ. ಏಕೆಂದರೆ ತಾವು ಯಾರಲ್ಲಿಯೂ ನಿಕೃಷ್ಟ ಭಾವನೆಯನ್ನಿಡಲಿಲ್ಲ. ಕ್ರೈಸ್ತರಲ್ಲದಿದ್ದರೂ ನೀವು ಕ್ರಿಸ್ತನ ತತ್ವದ ಅದ್ಭುತ ರೀತಿಯನ್ನು ಹೃದಯಂಗಮ ಮಾಡಿಕೊಂಡಿದ್ದೀರಿ. "

"ಸರಿ. ಅದೆಲ್ಲವನ್ನೂ ತೆಗೆದುಕೊಂಡು ಮಾಡುವುದೇನು? ನನ್ನನ್ನು ನಿನ್ನ ಮಿತ್ರನೆಂದು ತಿಳಿದು, ನನ್ನಲ್ಲಿ ವಿಶ್ವಾಸವಿಟ್ಟು ತಿಳಿಸುವುದಾದರೆ ತಿಳಿಸು. ನಾನು ಎಂದಿಗೂ ನಿನ್ನನ್ನು ಒತ್ತಾಯಪಡಿಸುವುದಿಲ್ಲ."

"ಕೊನೆಗೆ ನೀವು ಹೀಗೆನ್ನುವಿರೆಂದು ನನಗೆ ಮೊದಲೇ ತಿಳಿದಿತ್ತು."

ಎಂಟು

ಪುನಃ ಮರಿಯಮಳು ಹೇಳಲಾರಂಭಿಸಿದಳು:

"ನನಗೆ ಬುದ್ಧಿ ತಿಳಿದಾಗಿನಿಂದ ನಾನು ಲಖ್ನೋದಲ್ಲಿರಲಾರಂಭಿಸಿದ್ದೆ ಎನ್ನಬಹುದು. ಅಲ್ಲಿಯೂ ನನ್ನನ್ನು ಒಬ್ಬ ಮೆಮ್‌ಸಾಹೇಬರೇ ಕೊಂಡು

ಹೋಗಿ ಸೇರಿಸಿದ್ದರು. ಅಲ್ಲದೆ ನನ್ನ ಇತಿಹಾಸವನ್ನು ತಿಳಿಸಿದ್ದರು. ನನ್ನ ಜನ್ಮವು ಕಾಶ್ಮೀರದ ವನಪ್ರದೇಶದಲ್ಲಾಗಿತ್ತು. ಆದ್ದರಿಂದಲೇ ಪ್ರಾಯಶಃ ನಾನು ಹೂ, ಗಿಡ, ಮರ, ಪರ್ವತ, ಜಲಪಾತ, ಸರೋವರ ಇತ್ಯಾದಿಗಳನ್ನು ಕಂಡರೆ ಇಷ್ಟು ಸಂತೋಷಪಡಲು ಕಾರಣವೊ ಏನೊ! ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ಅಭ್ಯಾಸವು ನನಗಿನ್ನೂ ಇಲ್ಲ. ಅಂತಹ ದೊಡ್ಡ ಪಟ್ಟಣಗಳನ್ನು ನಾನು ಕಂಡದ್ದೂ ಬಹಳ ಕಡಿಮೆ. ಆದ್ದರಿಂದ ಫಾಡರೀಪುರದ ಈ ಕಾಡು ಪ್ರದೇಶದಲ್ಲಿ ನನ್ನ ಮನಸ್ಸು ಬಹಳ ಆನಂದಗೊಳ್ಳುತ್ತದೆ. ನನ್ನ ತಂದೆಯು 'ಸ್ವೀಡಿಶ್ ಟೂರಿಸ್ಟ್' (ಸ್ವೀಡನಿನ ದೇಶಪರ್ಯಟನಸ್ಥ) ಆಗಿದ್ದರು. ಅವರು ಭಾರತದ ಸಭ್ಯತೆ ಮತ್ತು ಸೌಂದರ್ಯಗಳ ಖ್ಯಾತಿಯನ್ನು ಕೇಳಿ ಇಲ್ಲಿಗೆ ಬಂದಿದ್ದರು. ಈ ದೇಶದಲ್ಲಿ ಅವರು ಎರಡು ವರ್ಷ ಕಾಲ ತಂಗಬೇಕೆಂದೆಣಿಸಿದ್ದರು. ಇಲ್ಲಿ ಎಲ್ಲಿಯಾದರೂ ಒಳ್ಳೆಯ ಸ್ಥಳಗಳನ್ನು ಕಂಡರೆ ಅಲ್ಲಿ ತಿಂಗಳುಗಟ್ಟಲೆ ಕಾಲ ಕಳೆದು ಅಲ್ಲಿಂದ ಮುಂದುವರಿಯುತ್ತಿದ್ದರು. ಹೀಗೆಯೇ ಅವರು ಕಾಶ್ಮೀರದಲ್ಲಿದ್ದಾಗ ಒಂದು ದಿನ ಅಲ್ಲಿಯ ಒಬ್ಬ ಮಲೆವಾಸಿಯಾದ ಹಿಂದೂ ಸುಂದರಿಯಲ್ಲಿ ಇವರ ಸಮ್ಮಂಧವು ಮೊಳೆಯಿತು. ಅದೇ ಅಲ್ಪ ಜೀವನ ಪ್ರಣಯದ, ವಿಲಾಸದ ಅಂಗಜಳೆಂದರೆ ನಾನೇ. ಈ ಇಬ್ಬರು ವ್ಯಕ್ತಿಗಳ ಆಕರ್ಷಣೆಗೆ ಮೂಲಕಾರಣ ಯಾವುದೆಂದು ನನಗೆ ಸರಿಯಾಗಿ ಗೊತ್ತಿಲ್ಲ. ಆದರೂ ಶಾರೀರಿಕ ಸೌಂದರ್ಯ ವಿಷಯವಾಸನೆ ಅಥವಾ ನನ್ನ ತಾಯಿಯ ಬಡತನ ಇವುಗಳಲ್ಲಿ ಯಾವುದಾದರೊಂದಾಗಿರಬಹುದೆಂದು ನನ್ನ ನಂಬಿಕೆ."

"ನನ್ನ ತಂದೆಯು ಈಗ ಜೀವಿಸಿರುವನೋ ಇಲ್ಲವೋ ತಿಳಿಯದು. ಒಂದು ಪಕ್ಷ ಅವನು ಜೀವಂತನಾಗಿದ್ದರೆ, ಅವನಿಗೆ ನಾನೊಬ್ಬ ಮಗಳಿರುವೆನೆಂಬುದು ಗೊತ್ತಿದೆಯೊ ಇಲ್ಲವೊ ನಾ ಕಾಣೆ! ಕಾಶ್ಮೀರದ ಯಾತ್ರೆ ಮುಗಿದು ಹಿಂದಕ್ಕೆ ಹೋಗುವಾಗ ಅವನು ನನ್ನ ತಾಯಿಗೆ ತುಂಬಾ ಹಣ ಮತ್ತು ಬಟ್ಟೆಗಳನ್ನು ಕೊಟ್ಟು ಹೋಗಿದ್ದನಂತೆ. ನನ್ನ ತಾಯಿಯನ್ನು ಜಾತಿಯಿಂದ ಹೊರಗಿಟ್ಟದ್ದರೆಂದೂ, ಅನಂತರ ಅವಳು ಕ್ರೈಸ್ತಳಾದಳೆಂದೂ ಜನರು ಅಂದುಕೊಳ್ಳುತ್ತಿದ್ದರು. ನನ್ನ ಜನ್ಮದ ಎರಡನೆಯ ವರ್ಷದಲ್ಲಿ ಅವಳೂ ಮೃತಳಾದಳು. ಮರಣ ಕಾಲದಲ್ಲಿ ಅವಳಲ್ಲಿ ಕೆಲವು ಉತ್ತಮ ತರದ ಬಟ್ಟೆಗಳೂ ಮತ್ತು ಎರಡು ಚಿನ್ನದ ಬಳೆಗಳೂ ಒಂದು ಉಂಗುರವೂ ಇತ್ತು. ಇವುಗಳಲ್ಲದೆ ಒಬ್ಬ ದೃಢಕಾಯ

ನಾದ ವ್ಯಕ್ತಿಯ ಚಿತ್ರವೂ ಅವಳಲ್ಲಿ ಸಿಕ್ಕಿತ್ತು. ಆ ಚಿತ್ರವು ಇನ್ನೂ ನನ್ನಲ್ಲಿದೆ. ಆದರೆ ಈಗ ಅದರ ಬಣ್ಣವು ಮಾಸಿಹೋಗಿರಬೇಕು. ಅದೇ ನನ್ನ ಜನ್ಮದಾತನ ಚಿತ್ರವೆಂದು ನನ್ನ ನಂಬಿಕೆ. ಅದನ್ನು ನಾನು ಸತತ ಶ್ರದ್ಧಾದೃಷ್ಟಿಯಿಂದಲೇ ಕಾಣುತ್ತಿದ್ದೇನೆ. ಇದಕ್ಕಾಗಿ ನಾನು ಎಂದೂ ನಾಚಿಕೆಯನ್ನಾಗಲೀ,ಜಿಗುಪ್ಸೆಯನ್ನಾಗಲೀ ಪಡುವುದಿಲ್ಲ.

"ಅನಾಥಾಲಯದಲ್ಲಿಯೂ ನನ್ನ ದಿನಗಳು ಒಳ್ಳೆಯ ರೀತಿಯಲ್ಲಿ ಕಳೆಯುಲಿಲ್ಲ. ಒಮ್ಮೊಮ್ಮೆ ನನ್ನ ಮನಸ್ಸಿನಲ್ಲಿ 'ಈ ಲೋಕದಲ್ಲಿ ನನ್ನನ್ನು ಪ್ರೀತಿಯಿಂದ ಕೂಗಿ ಮಾತನಾಡಿಸುವವರಾರೂ ಇಲ್ಲವೇ' ಎಂಬ ಯೋಚನೆಯೊಂದು ಬಂದು ಆಗಾಗ ಪೀಡಿಸುತ್ತಿತ್ತು. ಆ ಸಮಯದಲ್ಲಿ ನಾನು ತುಂಬಾ ದುಃಖಿತಳಾಗುತ್ತಿದ್ದೆ. ಆದರೆ ಅಲ್ಲಿಯ ಜೀವನದ ದೆಸೆಯಿಂದಲೇ ಪ್ರಪಂಚದಲ್ಲಿಯ ಏರು ಇಳಿತಗಳ ಸ್ವಲ್ಪ ಮಟ್ಟಿನ ಜ್ಞಾನ ಉಂಟಾಯಿತು. ಅದರಿಂದಲೇ ನನ್ನ ಆತ್ಮದಲ್ಲಿ ವಿಶ್ವಾಸವಿಡಬೇಕೆಂಬುದು ತಿಳಿಯಿತು. ಸ್ನೇಹದ ಬೆಲೆಯೂ ಅಲ್ಲೇ ಗೊತ್ತಾಯಿತು. ಅಸುಖದಲ್ಲಿಯೂ ಸುಖದ ಸೌಂದರ್ಯವನ್ನು ಕಾಣಲಾರಂಭಿಸಿದೆನು. ಇವೆಲ್ಲವುಗಳ ಕಾರಣದಿಂದಲೇ ಥಳಥಳಿಸುಸುತ್ತಿರುವ ಸೂರ್ಯನನ್ನು ಕಂಡರೆ ಹಿಗ್ಗುವುದು, ಹಾಡುತ್ತಿರುವ ಕೋಗಿಲೆಯ ಗಾನವನ್ನು ಕೇಳಿದರೆ ಕುಣಿಯುವುದು. ಅರಳಿದ ಪುಷ್ಪವನ್ನು ಕಂಡರೆ ಆನಂದಪಡುವುದು ಇತ್ಯಾದಿ ಅಭ್ಯಾಸಗಳು ನನ್ನಲ್ಲಿ ಸೇರಿಕೊಂಡವು.

"ಹೂಂ" ಎಂದು ಅಶೋಕನೊಂದು ನಿಟ್ಟುಸಿರನ್ನು ಬಿಟ್ಟನು. ಅವನ ಹೃದಯದಲ್ಲಿ ಅವಳ ವಿಷಯವಾಗಿ ಕರುಣಾಸಾಗರದ ಅಲೆಗಳು ಬಡಿಯುತ್ತಿರುವುವೆಂಬ ಮರ್ಮವು ಮರಿಯಮಳಿಗೆ ತಿಳಿಯಿತು. ಶಾಂತಚಿತ್ತನಾಗಿ ಆತನು ಮರಿಯಮಳ ಕರುಣ ಕಥೆಯನ್ನು ಕೇಳುತ್ತಿದ್ದನು. ಆಗ ಅವನು ಪುನಃ ಪ್ರಶ್ನಿಸಿದ: "ನಿನಗೆ ನಿನ್ನ ವರ್ತಮಾನ ಜೀವನವು ಹೇಗೆನಿಸುತ್ತದೆ? ಭಿಕ್ಷುಣಿಯ ದೀಕ್ಷೆಯಿಂದ ನಿನ್ನನ್ನು ನೀನು ಕಾಪಾಡಿಕೊಳ್ಳಲು ಸಾಧ್ಯವೇ?"

"ಅದೇ ಭಯವು ಒಮ್ಮೊಮ್ಮೆ ನನ್ನನ್ನು ಕಾಡುತ್ತಿದೆ. ಒಮ್ಮೊಮ್ಮೆ ವಿನಾ ಕಾರಣ ಉದಾಸೀನಳಾಗುತ್ತೇನೆ. ಆದರೆ ಪುನಃ ಒಂದೆರಡು ದಿನಗಳಲ್ಲಿ ಹಿಂದಿನ ಸ್ಥಿತಿಗೆ ಬರುತ್ತೇನೆ. ಭಿಕ್ಷುಣಿಯಾಗದಿದ್ದರೂ ಜೀವನವು ಸುಗಮವಾಗಿಯೇ ಸಾಗಬಹುದೆಂದು ನನ್ನ ಎಣಿಕೆ."

ಈಗ ಅವಳ ಸೌಂದರ್ಯವು ಇನ್ನೂ ಹೆಚ್ಚಿದಂತೆ ಅಶೋಕನಿಗೆ ಕಂಡಿತು. ಲಾವಣ್ಯವತಿಯಾದ ಈ ಯುವತಿಯು ಯಾವುದೋ ಒಂದು ನಶ್ವರ ತತ್ವಕ್ಕಾಗಿ ಜನ್ಮಪೂರ್ಣ ವ್ರತವನ್ನು ಕಟ್ಟಿಕೊಂಡು ಕಠೋರ ಜೀವನವನ್ನು ಸಾಗಿಸುವುದು ಇವನಿಗೆ ಎಳ್ಳಷ್ಟೂ ರುಚಿಸಲಿಲ್ಲ. ಮನುಷ್ಯನ ಆಯುಷ್ಯ ಪ್ರಮಾಣವು ಇವನ ಮನಸ್ಸಿಗೆ ಬರಲು ಇವನ ಹೃದಯದಲ್ಲಿ ಕಂಪನಗೊಂಡಿತು. ತನ್ನ ಮನೋಭಾವವನ್ನಡಗಿಸುತ್ತ ಮತ್ತೂ ಪ್ರಶ್ನಿಸಿದನು:

"ಹಾಗಾದರೆ ಭಿಕ್ಷುಣಿಯ ಜೀವನವು ನಿನಗೆ ಇಷ್ಟವಿಲ್ಲವೇ ?"

"ನಾನದನ್ನು ಏಕೆ ಇಚ್ಛಿಸುವುದಿಲ್ಲವೆಂದು ನಾನೇ ತಿಳಿಯಲಾರೆ. ಅಂತಹ ಜೀವನದಿಂದ ಉಪಯೋಗವಾದರೂ ಏನು ? ಅದರಿಂದ ಯಾವ ವಿಚಾರವನ್ನು ಸ್ಪಷ್ಟಪಡಿಸಬಹುದೆಂಬುದೂ ನನ್ನ ಚಿತ್ತಕ್ಕೆ ಹೊಳೆಯುವುದಿಲ್ಲ. ಮಿಸ್ ಥಾಮಸರು ನನ್ನನ್ನು ತುಂಬಾ ಪ್ರೀತಿಸುತ್ತಾರೆ. ನನ್ನ ಮೇಲೆ ಅವರ ಅಸ್ಸೀಮ ಕೃಪೆ ಇದೆ. ಆದರೂ ಹಲವು ಸಂದರ್ಭಗಳಲ್ಲಿ ಅವರಲ್ಲಿಯೂ ನನ್ನಲ್ಲಿಯೂ ಭಿನ್ನಾಭಿಪ್ರಾಯಗಳು ಬರುವುದಿದೆ. ಅವರು ಶುದ್ಧ ಧಾರ್ಮಿಕರು. ಆದರೆ ಅವರ ಧಾರ್ಮಿಕ ತತ್ವವು ಈಗ ಧರ್ಮಾಂಧತೆಯ ರೂಪವನ್ನು ಹೊಂದಿಕೊಂಡಿದೆ. ಧರ್ಮದ ಏಕಮಾತ್ರ ಧ್ಯೇಯ ಮತ್ತು ಉದ್ದೇಶವು ಅವರ ಮತದ ಜನಸಂಖ್ಯೆಯನ್ನು ಹೆಚ್ಚುವಂತೆ ಪ್ರಚಾರ ಮಾಡುವುದು. ಆ ವಿಷಯದಲ್ಲಿ ನನ್ನ ನಂಬಿಕೆಯು ಈ ರೀತಿ ಇದೆ—ಎಂದಿನ ತನಕ ಧರ್ಮ ಪರಿವರ್ತನೆಯ ಜೊತೆಗೇ ಹೃದಯ ಪರಿವರ್ತನೆಯೂ ಆಗುವುದಿಲ್ಲವೋ ಅಂದಿನ ತನಕ ಅದು ಮಿಥ್ಯಾ ಸ್ವರೂಪವನ್ನೇ ಹೊಂದಿಕೊಂಡಿರುವುದೆಂದು ನನ್ನೆಣಿಕೆ. ಹಾಡುವುದು, ಆಡುವುದು, ಪ್ರಸನ್ನ ಚಿತ್ತಳಾಗಿರುವುದು ಇವುಗಳನ್ನೆಲ್ಲ ನಾನು ಇಚ್ಛಿಸುತ್ತೇನೆ. ಇದೆಲ್ಲವನ್ನು ಕಂಡು ಅವರು ದೀಕ್ಷೆಯನ್ನು ತೆಗೆದುಕೊಳ್ಳುವವರಿಗೆ ಇವುಗಳೆಲ್ಲ ಶೋಭಿಸುವುದಿಲ್ಲವೆನ್ನುತ್ತಾರೆ. ಅವರಿಗೆ ನಾನು ಗಂಭೀರವಾಗಿರುವುದೂ, ಅರ್ಧಮೂಕಳಾಗಿರುವುದೂ ಸಂತೋಷವನ್ನುಂಟು ಮಾಡುತ್ತದೆ. ಪ್ರಕೃತಿ ಸ್ವರೂಪನಾದ ಪರಮಾತ್ಮನ ಅಸ್ತಿತ್ವದ ವಿಚಾರದಲ್ಲಿ ನಮುಗಿಬ್ಬರಿಗೂ ವಿಶ್ವಾಸವಿದೆ. ಆದರೆ ಹಿಬ್ರೂ ಶಾಸ್ತ್ರದಲ್ಲಿ ಬರೆದದ್ದೇ ಪರಮಾತ್ಮನ ವಾಣಿ ಎಂದು ಅವರ ವಾದ. ಬದಲಾಗಿ ನನ್ನ ವಿಚಾರವು ದೀನ ದರಿದ್ರರ ವಾಣಿಯಲ್ಲಿಯೂ ದೇವರ ಸ್ವರೂಪವನ್ನು ಕಾಣಬಹುದೆಂದು."

“ ವಿವಾಹವನ್ನು ಅವರು ಒಂದು ಮಹಾ ಪಾಪವೆಂದೆಣಿಸುತ್ತಾರೆ. ಹೆಂಗಸರು ಪ್ರಸವಿಸುವುದೂ ಒಂದು ರೀತಿಯಲ್ಲಿ ಪಾಪವೆಂದೇ ಅವರೆಣಿಕೆ. ಆದರೆ ನನಗೆ ದಾಂಪತ್ಯ ಜೀವನದಲ್ಲಿಯ ಶುದ್ಧ ಪ್ರೇಮದಲ್ಲಿ ದೇವರ ದಯೆ ಮತ್ತು ಆಶೀರ್ವಾದವಿದೆಯೆಂದು ಕಾಣುತ್ತೆ. ಹಾಗೆಯೇ ಮಾತೃತ್ವದಲ್ಲೇ, ನಾರೀ ಜೀವನದ ಪೂರ್ಣತ್ವವೂ ಕಂಡುಬರುವುದು. ಇದೇ ರೀತಿಯ ಹಲಕೆಲವು ಮಾತುಗಳಲ್ಲಿ ನನಗೂ ಅವರಿಗೂ ಭಿನ್ನಾಭಿಪ್ರಾಯಗಳು ಉಂಟಾಗುತ್ತಲಿರುತ್ತವೆ. ಫಾದರ್ ವಿಲಿಯಮ್ ಇವರಿಗಿಂತ ಉದಾರರು. ಈ ಮಿಶನರಿ ಸಂಸ್ಥೆಗೆ ಸೇರುವ ಮೊದಲು ಅವರು ಗ್ಲಾಸ್ಗೋದಲ್ಲಿ ಪ್ರೊಫೆಸರರಾಗಿದ್ದರು. ಆದರೆ ಈ ಧರ್ಮದ ಕೆಲಸಕ್ಕೆಂದು ಅವರು ತಮ್ಮ ಹುದ್ದೆಗೆ ರಾಜೀನಾಮೆ ಇತ್ತರು. ಅವರಲ್ಲಿ ಹಲವು ಪುಸ್ತಕಗಳಿವೆ. ಅವರು ನನಗೆ ತುಂಬಾ ವಿಷಯಗಳನ್ನು ಹೇಳಿ ತಿಳಿಸಿದ್ದಾರೆ. ನಾನು ಅವರ ಪುತ್ರಿ ಎಂದೇ ಅವರ ಮನೋಭಾವನೆ. ಅವರೂ ನನ್ನನ್ನು ಭಿಕ್ಷುಣಿಯ ದೀಕ್ಷೆಯಿಂದ ಕಾಪಾಡಲು ಸಹಾಯಕರಾಗಬಹುದು. ಮಿಸ್ ಥಾಮಸರ ಕೈಕೆಳಗೇನೇ ನಾನಿರುವುದಾದರೆ ಅವರೆಂದೂ ನನ್ನನ್ನು ಭಿಕ್ಷುಣಿಯಾಗದೆ ಇರಲು ಬಿಡರು. ”

“ ಹೌದೌದು, ಹಾಗೆಯೇ ನಡೆಯಬಹುದು. ” ಅಶೋಕನೆಂದನು.

ಮರಿಯಮ್‌ಳ ವಿಚಿತ್ರ ಕಥೆಯನ್ನು ಕೇಳಿ ಅಶೋಕನು ಚಕಿತನಾದನು. ಇದಕ್ಕೂ ಹೆಚ್ಚಿನ ಆಶ್ಚರ್ಯವೆಂದರೆ ಅವಳ ನಿರಾಡಂಬರದೊಂದಿಗೆ ಕೂಡಿದ ಉಚ್ಚ ವಿಚಾರಗಳು. ಪ್ರಪಂಚವೆಂಬ ಪೊದೆಯೊಳಗೆ ಅಡಗಿರುವ ಹಲವು ಮಹಾತತ್ವಗಳನ್ನು ಅವಳು ಎಂತಹ ಸರಳ ರೀತಿಯಲ್ಲಿ ಅರೆಸಹಜತೆಯಿಂದ ವಿವರಿಸಿದಳು.

“ ಹಾಗಾದರೆ ನಿನಗೆ ವಿವಾಹ ಸಂಪ್ರದಾಯದಲ್ಲಿ ದೃಢವಾದ ಶ್ರದ್ಧೆ ಇದೆಯಲ್ಲವೇ ? ” ಅಶೋಕನು ಪ್ರಶ್ನಿಸಿದನು.

“ ನಿಜವಾಗಿಯೂ ಇದೆ. ಸಾವಿರಾರು ವರ್ಷಗಳಿಂದ ಈ ರೀತಿಯ ವಿವಾಹ ಸಂಪ್ರದಾಯವು ನಡೆದು ಬಂದಿದೆ. ಇದರಿಂದ ಹಲವು ಸ್ತ್ರೀ-ಪುರುಷರ ಜೀವನವು ಸುಖ ಸಂತೃಪ್ತಿಗೊಂಡದ್ದು ಇದೆ. ಹಾಗೆಯೇ ಹಲವು ಸಂಸಾರಗಳ ಸರ್ವನಾಶವೂ ಆಗಿರಬಹುದು. ಆದರೂ ಯೋಚಿಸಿ ನೋಡಿದರೆ ಇದರಿಂದ ಮಾನವ ಜಾತಿಯ ಕಲ್ಯಾಣವೇ ಹೆಚ್ಚಾಗಿ ಉಂಟಾಗಿದೆ ಎನ್ನಬೇಕಾ

ಗುತ್ತೆ. ಅದೇ ಸಂಪ್ರದಾಯವು ಈಗಲೂ ತನ್ನ ಒಂದೊಂದು ಹೆಜ್ಜೆಯನ್ನು ಮುಂದಕ್ಕೆ ಇಡುತ್ತಲೇ ಇದೆ. ಏಕೆ ನೀವೂ ಇದೆಲ್ಲವನ್ನು ತಿಳಿದುಕೊಳ್ಳು ವುದಿಲ್ಲ ? ”

ಮರಿಯಮಳ ಪ್ರಶ್ನೆಯನ್ನು ಕೇಳಿದ ಅಶೋಕನು ಒಂದು ಘಳಿಗೆ ದಂಗು ಬಡೆದವನಂತಾದನು. ಅಲ್ಲಿಯೂ ಆಗಲೂ ಅವನು ತನ್ನ ವಿಚಾರಗಳ ಬಗ್ಗೆ ಕಠೋರನಾಗಿಯೇ ಇದ್ದನು. ಅದು ಇತರರಿಗೆ ಎಷ್ಟೆ ಅಹಿತವಾಗಿರಲಿ ಅವನು ತನ್ನ ವಿಚಾರವನ್ನು ಹೊರಗೆಡವುತ್ತಿರಲಿಲ್ಲ. ಈ ಸಂದರ್ಭಗಳಲ್ಲಿ ಅವನಿಗೆ ಸಂಕೋಚವೆಂಬುದೇ ಇರುತ್ತಿರಲಿಲ್ಲ. ಆಗ ಅವನು ಹೇಳಲಾರಂಭಿಸಿದನು.

“ ನಾನು ನಿನ್ನ ವಿಚಾರಗಳನ್ನು ಒಪ್ಪುತ್ತೇನೆ. ಆದರೆ ವಿವಾಹ ವಿಚಾರ ದಲ್ಲಿ ಮಾತ್ರ ನನ್ನ ನಿನ್ನ ತರ್ಕಗಳು ಒಂದುಗೂಡುವುದಿಲ್ಲ. ಇದರಲ್ಲಿ ನನ ಗೆಷ್ಟು ಪ್ರೇಮ-ವಿಶ್ವಾಸಗಳಿವೆಯೋ ಅಷ್ಟು ನಿನಗಿಲ್ಲ. ಇದರ ಕಾರಣವಾದರೂ ಏನೆಂಬುದನ್ನು ನಾನರಿಯೆ. ”

“ ಏಕೆ ? ತಾವು ಹೆಂಗಸರನ್ನು ನಿಕೃಷ್ಟ ಭಾವದಿಂದ ಕಾಣುವುದಿಲ್ಲ ವಷ್ಟೆ ? ”

“ ಇಲ್ಲ, ನಿಕೃಷ್ಟತೆಯು ನನಗೆ ಯಾರಲ್ಲಿಯೂ ಇಲ್ಲ. ಅದರಲ್ಲೂ ಸ್ತ್ರೀಯರಲ್ಲಿ ಎಳ್ಳಷ್ಟು ಇಲ್ಲ. ಸ್ತ್ರೀಯರನ್ನು ಕೀಳುದೃಷ್ಟಿಯಿಂದ ನೋಡು ವುದು ಪಾಪವಲ್ಲವೇ ? ನನ್ನ ಅಭಿಪ್ರಾಯವಂತೂ ಹಾಗಿದೆ. ಸ್ತ್ರೀ-ಪುರುಷರ ಸಮ್ಮಂಧದ ಕಲ್ಪನೆಯನ್ನು ಮರಣ ಪರ್ಯಂತರ ನಾನು ಮಾಡಲಾರೆನೇನೋ ! ಹಲವು ಸುಖದಂಪತಿಗಳ ಮಧ್ಯೆ ಯಾವ ಕಾರಣದಿಂದಾದರೂ ಕಷ್ಟ ಮತ್ತು ನಿರಾಶೆಯ ಬುಗ್ಗೆಗಳೇಳುಳುತ್ತಿರುವ ಕಥೆಗಳು ಬರೆಯಲ್ಪಟ್ಟವೆ. ಕೆಲವು ವರ್ಷ ಗಳಿಗೊಮ್ಮೆ ಮನುಷ್ಯನ ಶರೀರ ಮತ್ತು ಆಚಾರ-ವಿಚಾರಗಳಲ್ಲಿ ಪರಿವರ್ತನೆ ಯುಂಟಾಗುತ್ತಿರುವುದನ್ನು ನಾನೂ ಕಂಡಿರಬಹುದು. ಪತ್ನಿಯ ವಿಚಾರವು ಪತಿಗೆ ಒಪ್ಪದೆ ಒಂದೊಂದು ಸನ್ನಿವೇಶಗಳಲ್ಲಿ ಅವರಲ್ಲಿ ಭಿನ್ನ ಭಾವವು ಮೂಡುವುದು. ಆಗ ಕಲಹ, ದುಃಖಗಳ ಅತಿರೇಕದಿಂದಾಗಿ ಪರಸ್ಪರರಲ್ಲಿ ಖಂಡಿತವಾಗಿಯೂ ನಿಕೃಷ್ಟಭಾವವು ಹುಟ್ಟುವುದು. ಅವರ ಸುಖಜೀವನದಲ್ಲಿ ಭಯಂಕರ ಜ್ವಾಲೆಯು ಏಳಲಾರಂಭಿಸುವುದು. ಆಗಲೂ ಬಾಹ್ಯಪ್ರಪಂಚಕ್ಕೆ ಅವರು ಪ್ರೇಮನಾಟಕವನ್ನೇ ಆಡಿ ತೋರಿಸುತ್ತಾರೆ. ಇದು ಅನ್ಯಾಯವಲ್ಲವೇ?

ಏಕೆ ಹೀಗೆ? ಅವರಲ್ಲಿ ಉಂಟಾದ ಪರಿವರ್ತನೆಯನ್ನು ಹೊರಗೆಡವಲು ಆಗಲೂ ಅವರಿಗೆ ಧೈರ್ಯವಿರುವದಿಲ್ಲವೇ?

ನನ್ನ ವಿಚಾರಸರಣಿಯು ನಿನಗೆ ಸರಿದೋರದೆಂದು ನನಗೆ ತಿಳಿದಿದೆ. ಆದರೆ ನಾನು ನನ್ನ ವ್ಯಕ್ತಿಗತವಾಗಿ ಇಷ್ಟು ಮಾತ್ರ ಹೇಳಬಲ್ಲೆ. 'ಯಾವಳೇ ಸ್ತ್ರೀಯನ್ನು ಜೀವನಪರ್ಯಂತರ ಯಾವನೊಬ್ಬ ಪುರುಷನು ತನ್ನ ಬಂಧನದಲ್ಲಿ ರಿಸಿಕೊಳ್ಳುವದು ನನಗೆ ಸರಿಕಾಣುವದಿಲ್ಲ. ಹಾಗೆ ಮಾಡಲು ನನ್ನಿಂದ ಎಂದೂ ಸಾಧ್ಯವಾಗದು. ಮತ್ತು ಅವಳಿಂದ ನಾನು ನನ್ನ ಜೀವನ ವಿಮರ್ಶೆಯನ್ನು ಕೇಳಲೂ ಸಿದ್ಧನಿಲ್ಲ. ಇದೆಲ್ಲ ಸಮಾಜ ವ್ಯವಸ್ಥೆಯ ದೋಷವಲ್ಲದೆ ಇನ್ನೇನು? ಈಗಿನ ಸಮಾಜವು ಎಂದಿನತನಕ ತನ್ನ ಧೋರಣೆಯನ್ನು ಆಮೂಲಾಗ್ರವಾಗಿ ಬದಲಿಸುವುದಿಲ್ಲವೊ ಅದುವರೆಗೆ ಮನುಷ್ಯಮಾತ್ರನು ಸುಖಮಯವಾಗಿರಲಾರ."

"ವಿವಾಹ ಜೀವನದ ಚಿತ್ರವನ್ನೇನೋ ನೀವು ಚಿತ್ರಿಸಿದಿರಿ. ಅದೇನೋ ನಿಜ. ಆದರೆ ಕ್ಷಮಿಸಿ, ನಾನು ಏಕಾಂಗಿಯಾಗಿದ್ದೇನೆ. ಇದಕ್ಕೂ ನನಗೂ ತತ್ಕಾಲ ಹೆಚ್ಚಿನ ಸಮ್ಮಂಧವಿಲ್ಲ. ಅದಲ್ಲದೆ ಈ ವಿವಾಹ ವಿಷಯವಾಗಿ ಹೆಚ್ಚಿನ ಚಿಂತೆಯನ್ನು ಹಚ್ಚಿಕೊಂಡಿರಲು ನನಗೆ ಅಂತಹ ಯಾವ ಸಂದರ್ಭಗಳೂ ಬಂದಿಲ್ಲ. ಆದರೂ ನನ್ನ ಅಭಿಪ್ರಾಯವು ಹೀಗೆ— ವಿವಾಹವು ಭಗವಂತನ ಸೃಷ್ಟಿನಿಯಮದ ಒಂದು ಅತ್ಯಗತ್ಯ ಅವಶ್ಯಕತೆಯಂತಿದೆ. ಇದರ ವಿನಹ ಲೋಕದ ಯಾವದೇ ವ್ಯಾಪಾರವು ನಡೆಯದು. ಫ್ರಾನ್ಸ್, ಅಮೆರಿಕಾ ಮತ್ತು ರೂಸ್ ದೇಶಗಳಲ್ಲಿ ವಿವಾಹಕ್ರಮವನ್ನು ಭಂಗಪಡಿಸುವದಕ್ಕೂ ಅಲ್ಲದೆ ಆ ವಿಚಾರದಲ್ಲಿ ಕ್ರಾಂತಿ ಎಬ್ಬಿಸುವದಕ್ಕೂ ಹಲವು ತರದ ಪ್ರಯೋಗಗಳನ್ನು ನಡೆಸಿದರು. ಆದರೆ ಅದರ ಅನುಭವದಿಂದ ಅವರು ಪುನಃ ತಮ್ಮ ಹಳೆಯ ಸ್ಥಾನಕ್ಕೇ ಬಂದು ನಿಲ್ಲುವಂತೆ ಆಯಿತಲ್ಲದೆ ಬೇರಾವ ಲಾಭವೂ ಆಗಲಿಲ್ಲ. ಬೇಡ ಈ ಪ್ರಶ್ನೆಯು ದೊಡ್ಡ ವಿವಾದಾಸ್ಪದವಾದುದು. ಸದ್ಯಕ್ಕೆ ಇದನ್ನು ಇಲ್ಲಿಗೇ ಮುಗಿಸೋಣ. ನೀವಾದರೂ ಇಷ್ಟೆಲ್ಲ ಹೇಳಿದಿರಿ— ಕಟ್ಟಕಡೆಗೆ ನಿಮ್ಮ ಜೀವನದ ಧ್ಯೇಯವಾದರೂ ಏನು? ವಿವಾಹಿತನಾದರೆ ಬಾಧೆಯುಂಟಾಗುವದು ಎಂಬುದು ಖಚಿತವಾಗುವದಾದರೂ ಹೇಗೆ?"

ಪುನಃ ಅದೇ ಸರಳ ಪ್ರಶ್ನೆ. ಇದಕ್ಕೆ ಉತ್ತರಿಸುವದೇ ಕಷ್ಟದ ಕೆಲಸ. ಅಶೋಕನು ಒಂದು ನಿಮಿಷ ತಡೆದು ಹೇಳಲಾರಂಭಿಸಿದನು:

“ನನ್ನ ಜೀವನವೇನು ! ಯಾವುದು ನನ್ನ ಧ್ಯೇಯ ಇದೆ ಅಲ್ಲವೇ ?— ನಾನೊಬ್ಬ ಸಾಧಾರಣ ಸ್ವಪ್ನಲೋಕದಲ್ಲಿ ಸಂಚರಿಸುವ ಮಾನವ. ನಾನು ಕಾಣುವ ಪ್ರಪಂಚದಲ್ಲಿ ದಾರುಣವಾದ ದುಃಖದಿಂದ ಅಸತ್ಯ, ಅನ್ಯಾಯ ಮತ್ತು ಹಿಂಸೆಗಳೇ ಕಾಣುವವು. ಇದೇ ನನ್ನ ಹೃದಯವನ್ನು ಕರಗಿಸುವದು. ಅದೇ ಪ್ರಪಂಚದಲ್ಲಿ ಈ ರೀತಿಯ ದುರ್ವ್ಯಸನಗಳು ಲೇಶಮಾತ್ರವೂ ಇರದೆ ಇರುವಂತಹ ಸ್ಥಿತಿಯನ್ನು ಕಾಣಬೇಕೆಂದು ಒಮ್ಮೊಮ್ಮೆ ನನ್ನಲ್ಲಿ ಒಂದು ರೀತಿಯ ಕಲ್ಪನಾ ಸಾಮ್ರಾಜ್ಯವೂ ಉಂಟಾಗುತ್ತದೆ. ಒಂದುವೇಳೆ ಕಲ್ಪನೆಯು ಕಾರ್ಯರೂಪದಲ್ಲಾಗಿ ಹೋದರೆ ಆಗ ಅಲ್ಲಿ ಸುಖ, ಶಾಂತಿ, ಸತ್ಯ, ನ್ಯಾಯ ಮತ್ತು ವಿಶ್ವಬಂಧುತ್ವ ಇವುಗಳೆಲ್ಲವೂ ಕಾಣಸಿಗುವವು. ಇದೇ ಜಗತ್ತಿನ ಛಾಯೆಯು. ಆಗಾಗ ನನ್ನ ಕಣ್ಣೆದುರು ಕೈಕಟ್ಟಿ ನಿಲ್ಲುವುದೂ ಇದೆ. ಅದನ್ನೇ ನಾನು ನನ್ನ ಕುಂಚದಿಂದ ಬರೆದು ಮಾನವ ಸಮೂಹದ ಮುಂದಿಡಲು ಪ್ರಯತ್ನಿಸುತ್ತೇನೆ.

“ನನ್ನಂತಹ ಆದರ್ಶವಾದಿಗಳಿಂದ ಈಗಿನ ವ್ಯಾವಹಾರಿಕ ಪ್ರಪಂಚಕ್ಕೇನು ಲಾಭ ? ನಾನು ಮಾಡುವ ಸಾಮಾಜಿಕ ತರ್ಕದ ಆವರಣದೊಳಗೆ ನಾನೊಬ್ಬ ಸಿಪಾಯಿಯಾಗಿ ಪ್ರವೇಶಿಸಲುಕೂಡ ನನ್ನಂತಹನಲ್ಲಿ ಧೈರ್ಯವಾಗಲೀ ಅಥವಾ ನನ್ನ ಮನಸ್ಸಿನಲ್ಲಿ ಆ ಪ್ರವೃತ್ತಿಯಾಗಲೀ ಉಂಟಾಗುವುದಿಲ್ಲ. ಸ್ವಾರ್ಥಿ ಮತ್ತು ಬಲಹೀನನಾದ ನಾನು ಈ ಪ್ರಪಂಚದಲ್ಲಿ ಎಂತಹ ಸೇವೆಯನ್ನು ತಾನೆ ಮಾಡಬಲ್ಲೆನು ? ಆದರೆ ಒಂದು ವಿಚಾರ ಮರಿಯಮ್ ! ಪೂರ್ಣ ವಿಶ್ವ, ಜಡಚೇತನ ಸೃಷ್ಟಿ, ಪ್ರಕೃತಿಸ್ವರೂಪನಾದ ಪರಮಾತ್ಮನಿಂದ ನಿರ್ಮಿಸಲ್ಪಟ್ಟ ಅಥವಾ ಸೃಷ್ಟಿಸಲ್ಪಟ್ಟ ಅಣುಅಣುಗಳಲ್ಲಿಯೂ ನನ್ನ ನಿಶ್ಚಲ ಪ್ರೇಮವು ಇದ್ದೇ ಇದೆ. ಅದ್ವೈತದ ಮಹತ್ವವನ್ನು ಮನುಷ್ಯನು ತಿಳಿದರೆ, ತಾನೂ ಪರಮಾತ್ಮನ ಒಂದು ಅಂಶವೆಂದು ಗೊತ್ತಾದಾಗ ಅವನು ತನ್ನಲ್ಲಿ ತಾನು ತಿರಸ್ಕಾರ ಭಾವನೆಯನ್ನಿಟ್ಟುಕೊಳ್ಳಲಾರನೆಂಬುದನ್ನು ನಾನು ನಿಶ್ಚಯವಾಗಿ ತಿಳಿದಿದ್ದೇನೆ. ಇದೇ ಮಹಾತತ್ವವನ್ನು ಸಕಲರಿಗೂ ತಿಳಿಯುವಂತೆ ನನ್ನ ಚಿತ್ರಗಳ ಮೂಲಕ ಪ್ರಚಾರಿಸಿದರೆ ಆಗ ನಾನು ಧನ್ಯನೆನ್ನುತ್ತೇನೆ. ಇದರಿಂದ ಜನರಿಗೆ ಪರಮಾತ್ಮನನ್ನು ಅಶ್ರದ್ಧೆಯಿಂದ ಕಂಡರೆ ತನ್ನನ್ನು ತಾನು ಅಶ್ರದ್ಧೆಯಿಂದ ಕಂಡಂತೆ ಎಂಬುದು ತಿಳಿಯುವುದು. ಹಲವು ರೀತಿಯ ಕಷ್ಟದಿಂದ ಹಲಬುತ್ತಿರುವವರಿಗೆ ಅವರು ಮಾತ್ರ ಆ ರೀತಿಯಲ್ಲಿರುವುದಿಲ್ಲವೆಂದು ಅವರ ಮನಸ್ಸಿನ ಪೀಡಿತ ಭಾವನೆ

ಯನ್ನು ತೋರಿಸಿ, ಅವರಿಗೆ ಸಹಾನುಭೂತಿಯನ್ನು ತೋರಿಸುವವನು ಒಬ್ಬನಾದರೂ ಇರಬಹುದೆಂದು ಅವರಿಗೆನಿಸುವಂತೆ ಮಾಡಿದೆನಾದರೆ ಆಗ ನನ್ನ ಜೀವನವು ಸಾರ್ಥಕವಾಯಿತೆಂದು ನನ್ನ ನಂಬಿಕೆ.

"ಬಡಜೀವನ, ದೈನ್ಯ ಮತ್ತು ದಾರಿದ್ರ್ಯಗಳ ಚಿತ್ರವನ್ನೂ ಅಂಥ ಮಾನವತೆಯನ್ನೂ ನನ್ನ ಚಿತ್ರಗಳಮೂಲಕ ನಿದರ್ಶನ ರೂಪವಾಗಿ ತೋರಿಸಿದೆನೆಂದಾದರೆ ಆಗ ನನ್ನ ಚಿತ್ರಗಳಿಗೆ ಬೆಲೆ ಇದೆ ಎಂದು ನನ್ನ ಅಭಿಪ್ರಾಯ. ನನ್ನ ಚಿತ್ರಗಳಿಂದ ನಾನು ದಯೆ, ಕರುಣೆ, ಪ್ರೇಮ, ಸೇವೆ ಇತ್ಯಾದಿಗಳ ಏಳಿಗೆಗೆ ಕಾರಣವಾದ ಭಾವನೆಯನ್ನು ಹೊರಹೊಮ್ಮಿಸಿ, ಅದೇ ಪ್ರಕಾರ ಮನುಷ್ಯನಿಗೆ ಸ್ವಾರ್ಥ, ಕಲಹ ಮತ್ತು ನೀಚತೆ ಇವುಗಳಿಂದ ಯಾವ ಲಾಭವೂ ಇಲ್ಲವೆಂದೆಣಿಸುವಂತೆ ಮಾಡಿದೆನೆಂದರೆ ಆಗ ನಾನು ನನ್ನ ಕೊನೆಯ ಘಳಿಗೆಯಲ್ಲಿ ಸ್ವಲ್ಪಮಟ್ಟಿಗಾದರೂ ಭಗವಂತನು ನನ್ನನ್ನು ಮಾನವನನ್ನಾಗಿ ಸೃಷ್ಟಿಸಿದ್ದಕ್ಕೆ ಅವನ ಅಪಮಾನವನ್ನು ಮಾಡಿಲ್ಲವೆಂದೆಣಿಸಿ, ಸಂತೋಷದಿಂದ ಪ್ರಾಣ ಬಿಡುವಂತಾಗಬಹುದು. ನನ್ನಲ್ಲಿ ನನ್ನ ಚಿತ್ರಕಲೆಯಲ್ಲದೆ ಬೇರೆ ಇರುವುದಾದರೂ ಏನು? ಅದೇ ನನ್ನ ವ್ಯಕ್ತಿತ್ವವನ್ನು ಪ್ರಕಟಿಸುವ ಏಕಮಾತ್ರ ಸಾಧನ. ಅಂತಃಕರಣದಲ್ಲಿ ಅಡಗಿರುವ ಆತ್ಮನನ್ನು ಹೃದಯದಲ್ಲಿ ಅಡಗಿರುವ ವೇದನೆಯನ್ನು ಅದರ ಮೂಲಕವೇ ವ್ಯಕ್ತಪಡಿಸುತ್ತೇನೆ. ಇದೇ ನನ್ನ ಗುರಿ. ಇದೇ ನನ್ನ ಸರ್ವಸ್ವ. ಇದರಿಂದ ಪ್ರಪಂಚಕ್ಕೆ ಒಳಿತಾಗಲೀ ಅಥವಾ ಕೆಡಕಾಗಲೀ ಇದರ ಪರೀಕ್ಷೆಯನ್ನು ಪ್ರಪಂಚಕ್ಕೇನೆ ಬಿಟ್ಟಿದ್ದೇನೆ. ನನ್ನ ಕಡೆಯ ದಿನಗಳ ವರೆಗೂ ಇದೇ ನನ್ನ ಅಭಿಪ್ರಾಯವಾಗಿರಬಹುದೆಂದು ನನ್ನ ವಿಚಾರ.

ಅಶೋಕನ ಬಾಯಿಂದ ಹೊರಟ ಶಬ್ದಗಳು ಮರಿಯಮಳ ಹೃದಯಾಂತರಾಳವನ್ನು ಮುಟ್ಟಿದವು.

"ಈ ತರದ ಜೀವನದಲ್ಲಿ ಸಾರ್ಥಕತೆ ಇದೆ ಎಂಬುದರಲ್ಲಿ ನನಗೂ ವಿಶ್ವಾಸವಿದೆ ಅಶೋಕಬಾಬೂ" ಎಂದು ಅವಳು ಸ್ನೇಹದಿಂದ ಅಂದಳು. "ಆದರೆ ವಿವಾಹವು ಈ ಧ್ಯೇಯದ ಸಾಧನೆಯಲ್ಲಿ ಹೇಗೆ ವಿಘ್ನ ತಂದೊಡ್ಡುವುದೆಂಬ ವಿಷಯವನ್ನು ಹೇಳದೆ ಹಾಗೆಯೇ ಉಳಿದಿದೆ. ಅದು ಹೇಗೆಂದು ಕೇಳುವಿರಾ?"

"ಏಕೆ ವಿಘ್ನವನ್ನೊಡ್ಡದು? ಕಲೆ ಮತ್ತು ಸ್ತ್ರೀ........ ಈ ಇಬ್ಬರ ಸೇವೆ

ಯನ್ನು ನಾನು ಹೇಗೆ ಮಾಡಬಲ್ಲೆ ? ಕಲೆಗಾಗಿಯೇ ನಾನು ಹುಚ್ಚನಾಗಿದ್ದೇನೆ. ಸ್ತ್ರೀಯು ತನ್ನ ಮಾತಾಪಿತರನ್ನು ಬಿಟ್ಟು ನನ್ನ ಮನೆಯನ್ನು ಉದ್ಧರಿಸಲು ಬರುತ್ತಾಳೆ. ಅವಳಿಗೂ ಸ್ವಾಭಾವಿಕವಾಗಿ ಇಚ್ಛೆ, ಆಕಾಂಕ್ಷೆಗಳು ಅವಶ್ಯವಾಗಿ ಇದ್ದೇ ಇರಬಹುದು. ನನ್ನ ಕಲೆಯ ಏಕಮಾತ್ರ ಮಂತ್ರದಿಂದ ಅವಳ ತಿರಸ್ಕರವಾಗಬಹುದು. ಆಗ ಅವಳ ಸುಖಕ್ಕ ಕೊರತೆಯಲ್ಲವೇ ? ಅಥವಾ ಅವಳನ್ನೇ ಸುಖಿಯಾಗಿರಿಸಲು ಹವಣಿಸಿದರೆ ನನ್ನ ಕಲೆಯ ಗತಿಯು ಅಧೋಗತಿಯಾಗಲೂ ಸಾಧ್ಯವಿದೆ. ನನ್ನ ಕಲೆಯ ಅಧೋಗತಿಯನ್ನೊ ಅಥವಾ ಅವಹೇಳನವನ್ನೊ ನಾನೆಂದಿಗೂ ಸಹಿಸಲಾರೆ ಮರಿಯಮ್. ಈ ರೀತಿ ಆಗಿ ಹೋದರೆ ನನ್ನ ಜೀವನವೇ ಕುಸಿದೀತು. ಏಕಕಾಲದಲ್ಲಿ ಎರಡು ದೇವತೆಗಳ ಉಪಾಸನೆಯನ್ನು ನಾನೆಂದೂ ಮಾಡಲು ಸಾಧ್ಯವಿಲ್ಲ ಮರಿಯಮ್."

ಇದನ್ನು ಕೇಳಿದ ಮರಿಯಮಳ ಮನಸ್ಸೇಕೆ ಅಸ್ವಸ್ಥವಾಯಿತೆಂದು ತಿಳಿಯದು. ಅಶೋಕನ ಹೇಳಿಕೆಯಾದರೊ ಅವನ ಮಟ್ಟಿಗೆ ಅದು ನಿಜವಾಗಿಯೇ ಇದೆ. ಅದನ್ನು ಅವಳು ಕೇವಲ ಎರಡೇ ಘಂಟೆಗಳ ಹಿಂದೆ ಕಂಡಿದ್ದಳು. ಅವನು ಚಿತ್ರಿಸುತ್ತಿದ್ದ ಸಮಯದಲ್ಲಿ ಕಲಾಮುದ್ರೆಯ ಯೋಗಾವಸ್ಥೆಯನ್ನು ಹೊಂದಿ, ಬಾಹ್ಯ ಜಗತ್ತನ್ನು ಸಂಪೂರ್ಣ ಮರೆತು, ಚಿತ್ರದೊಂದಿಗೇ ತನ್ಮಯನಾಗಿದ್ದನು. ಅಶೋಕನನ್ನು ಚನ್ನಾಗಿ ತಿಳಿದುಕೊಳ್ಳಲು ಅದೇ ಅವಳಿಗೆ ಉಚಿತವಾದ ಸಮಯವಾಗಿತ್ತು. ಅವಳು ಅವನ ಅಭಿಪ್ರಾಯವನ್ನು ವಿರೋಧಿಸಲಾರದಾದಳು. ಅಂತೆಯೇ ತನ್ನ ಅಭಿಪ್ರಾಯಕ್ಕೆ ಪ್ರತಿಯಾಗಿ ನಡೆದುಕೊಳ್ಳಲೂ ಅಸಮರ್ಥಳಾದಳು.

"ಇವೆರಡರ ಸಮನ್ವಯವು ಎಂದೂ ಆಗದೇ ಅಶೋಕ್ ಬಾಬೂ ? ಎಂದಾದರೂ ಈ ಸಮನ್ವಯವಾಗಿ ಹೋದರೆ ನೀವಿಬ್ಬರೂ ದನ್ಯರಾಗುತ್ತೀರಿ. ಹಾಗಾಗದೆ ಭವಿಷ್ಯಕ್ಕಂಜಿ ನೀವು ಅವಿವಾಹಿತರಾಗಿಯೇ ಇರುವಿರಾದರೆ ಆಗ ನೀವಿನ್ನೂ ಜೀವನ ಕಲೆಯ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಲಿಲ್ಲವೆಂದೇ ಹೇಳಬೇಕಾಗುವುದು. ನಾನು ಹೀಗನ್ನುವುದರಿಂದ ನೀವು ಕೋಪಿಸಲೂ ಬಹುದು. ಆದರೆ ಹೀಗೆ ಹೇಳದೆ ಗತ್ಯಂತರವಿಲ್ಲ."

ಮರಿಯಮಳ ಈ ವಿಚಾರವು ಮಿಂಚಿನಂತೆ ಅಶೋಕನ ಹೃದಯವನ್ನು ಮುಟ್ಟಿತು. ಅವನ ಅಂತರ್ಯದಲ್ಲಿ ಘೋರವಾದ ತಳಮಳವು ಉಂಟಾಯಿತು.

ಇದುವರೆಗೆ ಅವನೆದುರು ನಿಲ್ಲದ ಪ್ರಶ್ನೆಯೊಂದು ಈಗ ಅವನನ್ನು ಅಡ್ಡಗಟ್ಟಿದಂತಾಯಿತು. ಚಿತ್ರಕಲೆ ಅಥವಾ ಇನ್ನಾವ ಕಲೆಯಾದರೂ ಸರಿ ಜೀವನಕಲೆಯೊಂದಿಗೆ ಸಮ್ಮಂಧವನ್ನಿಟ್ಟುಕೊಂಡಿಲ್ಲ. ದೌರ್ಭಾಗ್ಯದಿಂದ ಸಮ್ಮಂಧವು ಜೊತೆಯಾಗಿ ಬೆಳೆಯಿತೆಂದರೆ ಖಂಡಿತವಾಗಿಯೂ ಕಲೆಯು ಕೆಳಮಟ್ಟಕ್ಕೆ ಇಳಿಯಲೇ ಬೇಕು. ಆದರೆ ಮರಿಯಮಳ ಪ್ರಶ್ನೆಗೆ ಉತ್ತರವಾದರೂ ಯಾವುದು? ತುಸು ಹೊತ್ತು ಮೌನದಿಂದಿದ್ದು ಅಶೋಕನೆಂದನು:

"ನನಗೆ ಜೀವನ ದರ್ಶನವಾಗಿಲ್ಲವೆಂದು ಒಪ್ಪುತ್ತೇನೆ. ಜೀವನಕಲೆಯಲ್ಲಿ ಪಾರಂಗತನಾಗಬೇಕೆಂದೂ ನಾನು ಬಯಸುವುದಿಲ್ಲ. ನೀನು ಯಾವ ಸಮಸ್ಯೆಯನ್ನು ಹಿಡಿದು ತರ್ಕಿಸುತ್ತಿರುವಿಯೋ ಅದು ಅಸಾಧ್ಯವೆಂಮ ನಾನೇಕೆ ಹೇಳಲಿ. ಆದರೂ ಬಹು ಕಠಿಣವಾದ ಕೆಲಸ. ನನಗಾದರೊ ಅದು ಎಂದೂ ಆಗದ ಕಾರ್ಯ. ಅದನ್ನೆದುರಿಸಿ ಹೋಗಲು ನನ್ನಲ್ಲಿ ಶಕ್ತಿಯಿಲ್ಲ ಮರಿಯಮ್. ಕಣ್ಣೆದುರಿಗೆ ಸುಲಭವಾಗಿ ಸಿಗುವುದನ್ನು ಬಿಟ್ಟು, ಕತ್ತಲೆಯಲ್ಲಿರುವುದನ್ನು ಹುಡುಕಿ ತೆಗೆಯುವ ಕೆಲಸವೇನೋ ಸಾಹಸ ಹೌದು. ಆದರೆ ಅದು ಜಾಣ್ಮೆ ಎಂದು ಹೇಗೆ ಹೇಳಲು ಸಾಧ್ಯ? ಇದೆಲ್ಲವನ್ನೂ ನಾನು ಸಾಧಾರಣ ಸಿದ್ಧಾಂತ ರೂಪವಾಗಿ ಎಲ್ಲರಿಗೂ ಅನ್ವಯಿಸುವುದೆಂದು ಹೇಳಲಾರೆ. ಕೇವಲ ನನ್ನೊಬ್ಬನಿಗೆ ಅನ್ವಯಿಸಿಕೊಂಡು ಇದನ್ನು ಉದಾಹರಿಸುತ್ತಿದ್ದೇನೆ.

ಮರಿಯಮಳು ಅಶೋಕನ ಅಭಿಪ್ರಾಯವನ್ನು ಪರಿವರ್ತಿಸುವುದು ಕಠಿಣವೆಂದೆಣಿಸಿದಳು, ಅವನ ಮಾತಿನಲ್ಲೇನೋ ನಿಜಾಂಶವಿದೆ, ಆದರೆ ಅದನ್ನು ಒಪ್ಪಲು ಅವಳ ಮನಸ್ಸು ಒಪ್ಪದಾಯಿತು. ಆದರೂ ಹೇಳದೆ ಮೌನವಾಗಿದ್ದಳು. ಅಶೋಕನೂ ಪ್ರಶ್ನೆಗೆ ಉತ್ತರವನ್ನೇನೋ ಇತ್ತನು. ಆದರೆ ಅದೇ ಪ್ರಶ್ನೆಯ ವಿಚಾರವಾಗಿ ಅವನ ಮನಸ್ಸು ಇನ್ನೂ ಯೋಚಿಸತೊಡಗಿತ್ತು.

ತರ್ಕ ವಿತರ್ಕಗಳ ಆನಂತರ ಆ ದಿನವನ್ನು ಅವರಿಬ್ಬರೂ ತುಂಬಾ ಆನಂದವಾಗಿ ಕಳೆದರು. ಸಂಜೆ ಮನೆಗೆ ಹಿಂತಿರುಗಿದೊಡನೆ ಮಿಸ್ ಥಾಮಸರು ಅಶೋಕನ ಕೈಗೆ ಒಂದು 'ವಿಸಿಟಿಂಗ್ ಕಾರ್ಡ'ನ್ನಿತ್ತರು. ಅದರಲ್ಲಿ 'ಮಾಯಾ ದೇವೀ ನೀಲಕಂಠ್.'

'ಸಿವಿಲ್ ಲೈನ್ಸ್, ಬೈತೂಲ್' ಎಂದು ಬರೆದಿತ್ತು. 'ಮಹಿಳೆಯೋರ್ವಳು ಈ ಕಾರ್ಡನ್ನು ನಿಮಗೆ ಕೊಡಲು ನನ್ನ ಕೈಗೆ ಕೊಟ್ಟಳು. ನಿಮ್ಮಲ್ಲಿ

ಅವಳು ಮಾರನೆ ದಿನ ಪ್ರಾತಃಕಾಲ ಒಂಬತ್ತು ಘಂಟೆಗೆ ಬರುವುದಾಗಿ ಮತ್ತು ಆ ಸಮಯಕ್ಕೆ ನಿಮ್ಮ ಭೇಟಿಯಾಗಬಹುದೆಂದು ನಂಬಿದ್ದಾಳೆಂದೂ ಹೇಳಲು ನನಗೆ ಅಪ್ಪಣೆ ಕೊಟ್ಟು ಹೋಗಿದ್ದಾಳೆ' ಎಂದು ಮಿಸ್ ಥಾಮಸರೆಂದರು.

ಅಶೋಕನ ಮುಖವು ನಿರ್ವಿಕಾರವಾದುದನ್ನು ಮರಿಯಮಳು ಕಂಡಳು. ಈ ವರ್ತಮಾನವನ್ನು ತಿಳಿದ ಅವನ ಮುಖವು ಅಪ್ರಸನ್ನವಾಗಿತ್ತು. ಕೊನೆಗೆ ಅವನ ದೃಷ್ಟಿಯು ಮರಿಯಮಳತ್ತ ಸಾಗಿತು. ಆಗ ಅವಳ ಕಣ್ಣುಗಳು 'ಆ ಮಾಯಾದೇವಿಯು ಯಾರು?' ಎಂಬ ಪ್ರಶ್ನೆಯನ್ನು ಕೇಳುವಂತಿದ್ದವು.

ಒಂಬತ್ತು

ಮರಿಯಮಳು ಬಾರಾಲಿಂಗ್‌ನಿಂದ ಬಂದ ಆ ರಾತ್ರಿ ನಿದ್ರಿಸಿರಲಿಲ್ಲ. ಆ ದಿನದ ಅನುಭವವು ಅವಳಿಗೆ ಹಿಂದೆಂದೂ ಆಗಿರಲಿಲ್ಲ. ಮುಂದೆ ಆಗುವಂತೆಯೂ ಇರಲಿಲ್ಲ. ಕೇವಲ ಹನ್ನೆರಡು ಘಂಟೆಗಳ ಕಾಲದಲ್ಲಿ ಅಷ್ಟು ಸುಖವನ್ನೆಂದೂ ಅವಳು ಪಡೆದಿಲ್ಲ. ಅಂತಹ ರಮಣೀಯ ಪ್ರದೇಶವನ್ನು ಅವಳು ಕಣ್ಣಾರೆ ಕಂಡಳೆಂದು ಮಾತ್ರ ಹಿಗ್ಗದೆ, ಅದಕ್ಕೂ ಹೆಚ್ಚಾಗಿ ಒಬ್ಬ ಸಾಧಕ ಕಲಾಕಾರನನ್ನು ಸಂಪೂರ್ಣ ಅರಿತುಕೊಂಡುದಕ್ಕಾಗಿ ಹಿಗ್ಗಿದಳು. ಆ ಸಾಧಕನ ಹೃದಯದಲ್ಲಿ ಉಂಟಾಗುವ ಸಮೃದ್ಧವಾದ ಮಾನವತೆಯನ್ನು ಕಂಡ ಅವಳು ಇನ್ನೂ ಹೆಚ್ಚಾಗಿ ಸಂತೋಷಪಡುತ್ತಿದ್ದಳು. ಆತನಲ್ಲಿ ಕರುಣಾರಸದ ದ್ರವವು ಯಾವ ರೀತಿ ನಿರ್ಮಲವಾಗಿ ಹರಿಯುತ್ತಿರುವುದೆಂಬುದನ್ನು ಅರಿತಳು. ಆದರೆ ಆ ರಸವು ರಕ್ತಮಿಶ್ರಿತ! ಅದರಲ್ಲಿ ಮಾನವನ ವಿಹ್ವಲ ಹೃದಯದಲ್ಲಿ ಉಂಟಾದ ದುಃಖದ ಗಾಯಗಳ ರಕ್ತವೂ ಸೇರಿದೆ. ವೇದನೆ ಮತ್ತು ಕರುಣೆ, ದಯೆ ಇತ್ಯಾದಿಗಳ ಭಾರವನ್ನು ಹೊತ್ತುಕೊಂಡು ಈ ಒಬ್ಬಂಟಿಗನಾದ ಭಾವನಾ ಪ್ರಪಂಚದಲ್ಲಿ ಅಲೆಯುತ್ತಿರುವ ಯಾತ್ರಿಕನು ಎಂದಿನತನಕ ಪರ್ಯಟನ ಮಾಡುತ್ತಿರುವನೋ? ಆತನ ವ್ಯಕ್ತಿಗತ ಜೀವನದಲ್ಲಿ ಅವನ ಉರಿಯುತ್ತಿರುವ ಹೃದಯಕ್ಕೆ ತನ್ನ ಪ್ರೇಮಾಶ್ರುಗಳಿಂದ ತಂಪನ್ನು ಕೊಡುವಂತಹ ಯಾವಳೊಬ್ಬ ನಾರಿಯೂ ಸಿಗಲಾರಳೇ?

ಅವನಾದರೊ ಒಬ್ಬ ವಿಚಿತ್ರ ಮನುಷ್ಯ. ಅವನೂ ತನ್ನ ಹೃದಯವನ್ನು ಯಾವ ರಮಣಿಗೂ ತೆರೆದು ಕೊಟ್ಟಂತಿಲ್ಲ! ಇದು ಅವನ ಅಪರಾಧವೇ ಅಲ್ಲವೇ? ಅವನ ಭಾವುಕ ಹೃದಯವು ಪವಿತ್ರ ಪ್ರಣಯಾನುಭವದ ದೆಸೆಯಿಂದ ಹೆಚ್ಚಿನ ಸಂತೃಪ್ತಿಯನ್ನೂ ಪಡೆಯಬಹುದು. ಅವನ ಜೀವನದೊಳಗೆ ಅಡಗಿಕೊಂಡಿರುವ ಆ ಶೂನ್ಯಾಭಿಪ್ರಾಯವೂ ಆಗ ಮಾಯವಾದೀತು.

ಇಂದಿನ ಪ್ರಾತಃಕಾಲ ಅವನು ಶತಪುತ್ರಾ ಪರ್ವತಗಳಲ್ಲಿಯ ಆ ಕಾಡುಗಳಲ್ಲಿ ಇಡೀ ವಿಶ್ವವನ್ನೇ ಮರೆತು ತನ್ನ ಕಲಾಸಾಧನೆಯಲ್ಲಿ ತಲ್ಲೀನನಾಗಿದ್ದನು. ಆಗ ಅವನು ತಾನು ಸ್ವತಃ ಕಲಾಶಿರೋಮಣಿಯಾದ ಭಗವಂತನ ಸುಂದರ ಹಾಗೂ ಅದ್ಭುತವಾದ ಕಲಾಕೃತಿಯಾಗಿದ್ದೇನೆಂಬುದನ್ನೂ ಕೂಡ ಮರೆತಿರಬೇಕು. ಆ ಎರಡು ಘಂಟೆಗಳ ಕಾಲ ಮರಿಯಮಳು ಏನೇನನ್ನು ಕಂಡಿದ್ದಳೊ ಅದು ಅವಳ ಹೃದಯವನ್ನು ಅಂದೋಲನಕ್ಕೆ ತಂದಿಳಿಸಿದ್ದಿತು. ಅವಳ ಅಂತರ್ಯದಲ್ಲಿ ಒಂದು ಬಗೆಯ ಸೂಕ್ಷ್ಮ ಸಂವೇದನೆಯು ಝೇಂಕಾರವನ್ನೆಬ್ಬಿಸಿತು. ಇಂತಹ ಆತ್ಮೀಯತೆ ಮತ್ತು ಸಹಾನುಭೂತಿಯನ್ನು ಇಂದಿನ ತನಕ ಅವನಿಗೆ ಯಾರೂ ತೋರಿಸಿದ್ದಿಲ್ಲ. ಹಾಗೆಂದು ಅವಳೊಡನೆ ಅಶೋಕನು ವಿಶೇಷವಾದ ಯಾವ ಮಾತುಗಳನ್ನೂ ಆಡಿಲ್ಲ. ಆದರೂ ಅವಳ ಪ್ರತಿಯೊಂದು ಹಾವಭಾವಗಳೂ, ಕಣ್ಣುಗಳಲ್ಲಿ ಅಡಗಿರುವ ವ್ಯಥೆ ಮತ್ತು ಅವಳ ಹೃದಯದ ಒಂದೊಂದು ಶ್ವಾಸವೂ ಅಶೋಕನಿಗೆ ಚೆನ್ನಾಗಿ ತಿಳಿಯುವಂತೆ ಹೇಳುವಂತಿದ್ದವು. ಈ ಸೂಕ್ಷ್ಮಭಾವಗಳು ನಾರಿಯ ನೇತ್ರಗಳಿಂದ ಎಂದೂ ಹೊರಬೀಳಲಾರವು. ಏಕೆಂದರೆ ಅವಳ ದೃಷ್ಟಿಯು ಒಳಮನಸ್ಸಿನ ಪ್ರತಿಭೆಯ ದಿವ್ಯ ಶಕ್ತಿಯಿಂದ ಕೂಡಿಕೊಂಡು ಅತ್ಯಂತ ದೀಪ್ತವಾಗಿಯೂ ಸೂಕ್ಷ್ಮವಾಗಿಯೂ ಇರುತ್ತದೆ.

ಈಗ ಅಶೋಕನ ಹೃದಯದಲ್ಲಿ ಒಂದುತರದ ಸಹವೇದನೆಯು ಯಾವುದೇ ಸ್ತ್ರೀಯ ಕಾರಣದಿಂದ ಒಬ್ಬ ಪುರುಷನಲ್ಲಿ ಉಂಟಾಗುವುದು ಅತಿ ವಿರಳ. ಆದರೆ ಅದು ಅಶೋಕನ ಹೃದಯದಲ್ಲಿ ಹುಟ್ಟಿದೆ ಎಂಬುದು ಮರಿಯಮಳಿಗೆ ತಿಳಿಯಿತು. ಇದರ ಅರ್ಥವೇನು? ಇದರ ಅವಸಾನವು ಏನಾಗಬಹುದು? ಈ ಪ್ರಶ್ನೆಗಳಿಗೆ ಉತ್ತರವು ಅವಳಿಗೆ ಹುಡುಕಿದರೂ ಸಿಗಲಿಲ್ಲ.

ಇತ್ತ ಅಶೋಕ್ ಠಾಕೂರನ ಮನಸ್ಸಿನಲ್ಲಿಯೂ ಮರಿಯಮಳ ವಿಚಾರವಾಗಿ ಅನೇಕ ಯೋಚನೆಗಳು ಹಾದು ಹೋಗುತ್ತಿದ್ದವು. ನಿಸರ್ಗದ ಈ

ಸುಂದರ ಕನ್ಯೆಗಾಗಿ, ದಿಕ್ಕಿಲ್ಲದ ಅವಳ ವೇದನಾಯುಕ್ತವಾದ ಕಥೆಯಲ್ಲಿ ಅವನ ಹೃದಯವೂ, ತೀವ್ರವಾದ ಸಹವೇದನೆಯನ್ನು ಅನುಭವಿಸುತ್ತಿತ್ತೆಂಬುದು ನಿಜವಾದ ಮಾತು. ಆದರೆ ಇದರೊಂದಿಗೆ ಅವಳ ಮೇಲ್ಮಟ್ಟದ ಬುದ್ಧಿ, ಅಂತಃಕರಣ ಶುದ್ಧಿ ಮತ್ತು ವಿವೇಕಪೂರ್ಣ ವಿಚಾರಗಳ ಬಗ್ಗೆ ತರ್ಕ ಇತ್ಯಾದಿಗಳಲ್ಲಿ ಅವನಿಗೆ ಕೌತುಕವನ್ನುಂಟು ಮಾಡಿದ್ದವು.

ಧರ್ಮ, ಸಮಾಜ ಶಾಸ್ತ್ರ ಮತ್ತು ಜೀವನಕಲೆಯ ವಿಷಯದಲ್ಲಿ ಅವಳ ವಿಚಾರಗಳು ಎಷ್ಟು ಸ್ವಾಭಾವಿಕನಾಗಿವೆಯೋ ಅಷ್ಟೇ ಪಕ್ವವಾಗಿರುವಂತೆಯೂ ಇವೆ. ವಿವಾಹದ ಕಟ್ಟನಲ್ಲಿ ಅವಳಿಗೆಂತಹ ಶ್ರದ್ಧೆ! ಅಲ್ಲಿಯೂ ಎಂತಹ ಸಾತ್ವಿಕತೆ ಮತ್ತು ಆಳವಾದ ಧಾರ್ಮಿಕತೆಯನ್ನು ಬೋಧಿಸುತ್ತಾಳೆ! ಈ ಸ್ಫುರದ್ರೂಪಿಯೂ, ಗುಣಶೀಲಳೂ ಆದ ಯುವತಿಯ ಭವಿಷ್ಯವು ಹೇಗೆ ಸಾಗಬಹುದು? ಕೊನೆಗೇನಾಗಬಹುದು? ಕ್ರೈಸ್ತ ಮತದ ರೂಢಿಯ ಸಂಸ್ಕಾರಗಳಿಗೆ ಬಲಿಯಾಗಿ ಆಮರಣ ಭಿಕ್ಷುಣಿಯಾಗುವುದರಲ್ಲಿ ಅವಳ ಜೀವನದ ಸಾರ್ಥಕತೆ ಇದೆಯೇ? ಒಂದು ವೇಳೆ ಇರುವದೇ ಆದರೆ ಅವಳ ಜೀವನವು ಎಷ್ಟು ನೀರಸ ಮತ್ತು ಕಠೋರವಾಗಿರಬಹುದು. ಅವಳಿಗೆ ಇದರಲ್ಲಿ ವಿಶ್ವಾಸವಿಲ್ಲದಿದ್ದು ಒಂದು ವೇಳೆ ಹೀಗಾದಲ್ಲಿ ಗತಿ ಏನು? ಲೋಕದಲ್ಲಿ ಇದಕ್ಕಿಂತಲೂ ಹೆಚ್ಚಿನ ವಿಡಂಬನೆಯಾದರೂ ಇನ್ನಾವುದಿದೆ?

ಒಂದು ವೇಳೆ ಅವಳ ಭಾಗ್ಯದಲ್ಲಿ ಹೀಗೆಯೇ ಬರೆದಿದ್ದರೆ ಇದರ ಕಾರಣವು ಅವಳ ಅನಾಥಾವಸ್ಥೆಯೇ ಅಲ್ಲವೇ? ಅವಳನ್ನು ಈ ದುರ್ಭಾಗ್ಯದಿಂದ ಉಳಿಸಲು ಯಾರೂ ಸಹಾಯಕರಾಗಲಾರರೇ? ಯಾವಳು ಮರಿಯಮ್ಮಳನ್ನು ಉಣಿಸಿ, ತಿನಿಸಿ, ಬೆಳೆಸಿದ್ದಳೊ ಅವಳು ಮರಿಯಮ್ಮಳಲ್ಲಿ ತನ್ನ ಪೂರ್ಣ ಹಕ್ಕನ್ನು ತೋರುವದಾದರೆ ಆಶ್ಚರ್ಯವೇನು? ಮಿಸ್ ಥಾಮಸರ ನೀತಿಯಾದರೂ ಈ ರೀತಿ ಯೋಚಿಸಿದರೆ ಅನೀತಿಯಾಗದು. ಅವರ ಯೋಚನೆಗಳೆಲ್ಲವೂ ಮರಿಯಮ್ಮಳ ಹಿತವನ್ನೇ ಅವಲಂಬಿಸಿವೆಯೆಂದು ಅಭಿಪ್ರಾಯವಾಗಬಹುದು. ಆದರೆ ಈ ಧಾರ್ಮಿಕತೆಯು ಎಲ್ಲಿಯಾದರೂ ಧರ್ಮಾಂಧತೆಯ ಹೆಸರಿನಲ್ಲಿ ತನ್ನ ಎಲ್ಲಾ ಆಟಗಳನ್ನು ಆಡಿಕೊಂಡರೆ, ಮರಿಯಮ್ಮಳು ಈ ಹಿಂದೆ ಅಂದಂತೆ ಇದಕ್ಕಿಂತಲೂ ಹೆಚ್ಚಿನ ದುರ್ಭಾಗ್ಯವಾದರೂ ಇನ್ನಾವುದಿದೆ?

ಮರಿಯಮ್ಮಳು ಕೂಡ ಮಿಸ್ ಥಾಮಸರಂತೆಯೇ ಧರ್ಮಾಂಧಳಾಗಿದ್ದು

ಕೊಂಡು ಈ ರೀತಿಯ ಜೀವನವ್ರತದಲ್ಲಿಯೇ ತನಗೆ ಕಲ್ಯಾಣವಿದೆಯೆಂದೂ ಅದುವೇ ತನ್ನ ಮುಕ್ತಿಯ ದಾರಿಯೆಂದೂ ಭಾವಿಸುತ್ತಿದ್ದರೆ ಅದೇನೊ ಒಂದು ವಿಧವೆನ್ನಬಹುದು. ಆದರೆ ಅವಳಿಗೆ ಆ ಜೀವನದ ವಿಚಾರದಲ್ಲಿ ಸಂದೇಹವೂ, ಅಶ್ರದ್ಧೆಯೂ ಇದೆ. ಹೀಗಿರುವಾಗ ಅವಳ ಆ ಶುದ್ಧ ಹೃದಯವನ್ನು ಈ ಮಹಾ ಘೋರ ವ್ರತದ ಬೆಂಕಿಯಲ್ಲಿ ಬೇಯಿಸುವದು ಎಲ್ಲಿಯ ಅನ್ಯಾಯ ?

ಈ ಯೋಚನಾತರಂಗವು ಅಶೋಕನನ್ನು ನೆಮ್ಮದಿಯಲ್ಲಿರಲು ಬಿಡಲಿಲ್ಲ. ಕಣ್ಣ ಮುಂದೆ ಒಂದು ಕೋಮಲ ಜೀವವು ನಾಶವಾಗುತ್ತಿರುವ ಕಲ್ಪನೆಯನ್ನು ಕೂಡ ಆತನು ಮಾಡಲಾರದಾದನು. ಆದರೆ ಅವನು ಅದನ್ನು ಯಾವ ಬಗೆಯಲ್ಲಿ ತಡೆಗಟ್ಟಲು ಸಾಧ್ಯ? ಮರಿಯಮಳಿಗಾದರೊ ಮಿಸ್ ಥಾಮಸರ ಆ ಬಂಧನದಿಂದ ಹೊರಗೆ ಬರುವದು ಕಷ್ಟದ ಮಾತೇನೂ ಅಲ್ಲ. ಆದರೆ ಅನಂತರದ ಆ ಮಹಾ ಜವಾಬ್ದಾರಿಯನ್ನು ಅವಳು ಹೇಗೆ ನಿರ್ವಹಿಸಿಕೊಂಡು ಮುಂದೊತ್ತಬಲ್ಲಳು ?

ಎಲ್ಲಿ ಮರಿಯಮ್, ಎಲ್ಲಿ ಆ ಮಾಯಾದೇವಿ. ಈ ಇಬ್ಬರೊಳಗೆ ಎಂತಹ ಅಂತರ. ಒಬ್ಬರ ಜೀವನದ ದಾರಿಯು ವೇದನೆ ಮತ್ತು ಕಂಟಕಗಳಿಂದ ಕೂಡಿದ್ದಾಗಿದ್ದರೆ, ಇನ್ನೊಬ್ಬಳದು ಸುಖ, ವಿಲಾಸಗಳಿಂದ ಕೂಡಿದುದು. ಒಬ್ಬಾಕೆ ಪರಾವಲಂಬಿಯೂ, ಪರತಂತ್ರಳೂ ಆಗಿದ್ದರೆ ಇನ್ನೊಬ್ಬಳು ಗುಡ್ಡದಂತಹ ಧನರಾಶಿಯನ್ನೊಳಗೊಂಡ ಸ್ವಚ್ಛಂದಳು. ಮೊದಲಿನವಳು ವಿಚಾರಶೀಲಳೂ, ಸಹೃದಯಳೂ ಆಗಿದ್ದರೆ, ಎರಡನೆಯವಳು ಮಹತ್ವಾಕಾಂಕ್ಷಿಯೂ, ಸುಖಲೋಲುಪಳೂ ಆಗಿದ್ದಾಳೆ. ಒಬ್ಬಳು ಸ್ವರ್ಗಲೋಕದ ಪವಿತ್ರ ಅಪ್ಸರೆಯಾಗಿದ್ದರೆ ಇನ್ನೊಬ್ಬಳು ಮಾಯಾಲೋಕದ ಮಾಯಾವಿನಿ. ಅತ್ಯಂತ ಸುಖಿಯಾಗಿರುವವಳೊಬ್ಬಳು, ಅತ್ಯಂತ ದುಃಖಿಯಾಗಿರುವವಳಿನ್ನೊಬ್ಬಳು.

ಹೀಗಿದ್ದರೂ ಕೂಡ, ಜೀವನವು ಸ್ವಸಂಪೂರ್ಣವಾಗಬೇಕಾದಲ್ಲಿ ಮರಿಯಮಳು ತನ್ನ ಅಸೀಮವಾದ ದುಃಖದಿಂದಲೂ ಮತ್ತು ಮಾಯಾದೇವಿಯು ತನ್ನ ಅಸೀಮ ಸುಖದಿಂದಲೂ ಮುಕ್ತಿ ಹೊಂದುವದು ಅತಿ ಆವಶ್ಯಕವೆಂದು ಅಶೋಕನ ವಿಚಾರ. ಇಬ್ಬರಲ್ಲಿಯೂ ಯಾವದು ಯಥೇಷ್ಟವಾಗಿದೆಯೊ ಅದೇ ಅವರಿಗೆ ಶತ್ರುವೂ ಆಗಿದೆ.

ಅಶೋಕನು ಇವರಿಬ್ಬರ ತುಲನೆಯನ್ನು ಮಾಡಿದನು. ಆ ಸಮಯಕ್ಕೆ

ಸರಿಯಾಗಿ ಮಾಯಾದೇವಿಯ ವಿಸಿಟಿಂಗ್ ಕಾರ್ಡಿನ ಜ್ಞಾಪಕವೂ ಬಂತು. ಆಗ ಅವನು ಆ ರಹಸ್ಯಮಯಳಾದ ರಮಣಿಯ ವಿಚಾರವಾಗಿ ಯೋಚಿಸ ಲಾರಂಭಿಸಿದನು.

'ವಿಚಿತ್ರ ಸ್ತ್ರೀ, ಮಾಯಾದೇವಿ! ಈ ಕಾಡಿನಲ್ಲಾದರೂ ನನ್ನನ್ನು ಅವಳು ಹುಡುಕಿ ಕಂಡುಹಿಡಿದಳು. ಅವಳು ನನ್ನ ಬೆನ್ನು ಹತ್ತಿರುವದನ್ನು ಕಂಡರೆ— ಕಲೆಗಿಂತಲೂ ಕಲಾಕಾರನಲ್ಲಿ ಅವಳು ಹೆಚ್ಚು ಮೋಹಿತಳಾಗಿರುವಳೆನ್ನಬಹುದು. ಈ ಬಾರಿ ಅವಳು ನಿಶ್ಚಯವಾಗಿ ನನ್ನಲ್ಲಿ ಸಿಟ್ಟಿಗೆದ್ದೇ ಇಲ್ಲಿಯತನಕ ಬಂದಿರ ಬಹುದಲ್ಲವೇ? ಏಕೆಂದರೆ ಅಂದು ರಾತ್ರಿಯ ಭೋಜನದ ನಂತರ ಅವಳ ಲ್ಲಿಗೆ ಹೋಗಲೂ ಇಲ್ಲ, ಅಲ್ಲದೆ ನಾಗಪುರವನ್ನು ಬಿಡುವ ಮೊದಲು ಅವಳ ಭೇಟಿ ಯನ್ನು ಕೂಡ ಮಾಡಲಿಲ್ಲ.

ಒಮ್ಮೆ ಅವಳೇ ಇವನ ಬಂಗ್ಲೆಗೆ ಬಂದಿದ್ದಳು. ಆದರೆ ಆಗ ಅವನು ಸ್ಟುಡಿಯೋದೊಳಗಿದ್ದನು. ಆ ಸಮಯ ಅಬ್ದುಲ್ಲನಿಂದ ನಿಯಮಕ್ಕನುಸಾರ ವಾದ ಉತ್ತರವೇ ಸಿಕ್ಕಿತ್ತು. ಅಬ್ದುಲ್ಲನು ಮಾಯಾದೇವಿಗೆ ಅಶೋಕನ ಭೇಟಿ ಮಾಡಿಸಲಿಲ್ಲ. ಆಗ ಅವಳೆಷ್ಟು ಉರಿದು ಬಿದ್ದಳು! ಅವಳ ಸಿಟ್ಟಿನ ಪ್ರಭಾವ ವನ್ನು ಅವಳು ತನ್ನ ಕಾರಿನಲ್ಲಿ ಕುಳಿತು ಕದವನ್ನು ಹಾಕುವಾಗ ನೋಡಬೇ ಕಾಗಿತ್ತು! ಎಂತಹ ರಭಸ! ಈ ಎಲ್ಲ ಕಾರಣಗಳಿಂದ ಮಾಯಾದೇವಿ ಯಂತಹ ಗರ್ವಿತ ರಮಣಿಯು ಕುಪಿತಳಾದುದು ಅಸ್ವಾಭಾವಿಕವೇನೂ ಅಲ್ಲ. ಆದರೆ ಅವನೇನು ಮಾಡಿಯಾನು? ಅವನ ಹೃದಯವು ಆ ನಾರಿಯ ವಿಚಾರ ವಾಗಿ ಏಕೆ ಅಷ್ಟು ಅರುಚಿಯನ್ನು ತೋರಿಸುತ್ತದೆಂಬುದು ಗೊತ್ತಿಲ್ಲ. ಅವನು ಮನಸ್ಸಿನಲ್ಲೇ ನಿಶ್ಚಯಿಸಿದನು. ತಾನು ಸಮಾಜದಲ್ಲಿರುವಾಗ ಇಷ್ಟು ರೀತಿ ಹೀನನಾಗಿ ಇರಲಾಗದು. ಇದನ್ನು ಸಂಪೂರ್ಣವಾಗಿ ಹೊರಗಟ್ಟಲು ಪ್ರಯತ್ನಿ ಸಬೇಕು. ಅವನು ಅಲ್ಲಿಯೇ ಇದನ್ನು ನಿಶ್ಚಯಿಸಿಕೊಂಡನು.

ಎರಡನೆಯ ದಿನ ಪ್ರಾತಃಕಾಲ ಅಬ್ದುಲ್ಲನು ಅವನ ಮಂಚದ ಬಳಿಯ ಸ್ಟೂಲ ಮೇಲೆ ಚಾವನ್ನಿಟ್ಟು ಮೆದುವಾಗಿ ಹಿಂದಿರುಗುವಾಗ, ಅಶೋಕನು ನುಸಿಪರದೆಯೊಳಗಿಂದಲೇ ಕೂಗಿದನು "ಅಬ್ದುಲ್ಲಾ" "ಹುಜೂರ್!" ಎನ್ನುತ್ತ ಅಬ್ದುಲ್ಲನು ಹಿಂದಿರುಗಿ ಮಾತೆತ್ತದೆ ನಿಂತನು.

"ನಾಳೆಯ ಸಂಜೆಗೆ ನಾಲ್ಕೈದು ಮಂದಿಗೆ ತಿಂಡಿತಿನಸುಗಳ ಏರ್ಪಾಡು ಮಾಡುವೆಯಾ?"

ಅಬ್ದುಲ್ಲನು ಒಂದು ನಿಮಿಷ ಯೋಚಿಸಿ ಹೇಳಲಾರಂಭಿಸಿದನು: "ಆದೀತು ಜೀಯಾ, ಆದರೆ ಕೆಲವು ಅಗತ್ಯವಾದ ಸಾಮಾನುಗಳನ್ನು ತರಲು ಈ ದಿನವೇ ಬೈತೂಲಿಗೆ ಹೋಗಬೇಕು."

"ಸರಿ, ಹಾಗಾದರೆ ಹೋಗಿ ಬಾ. ಮತ್ತು ಹೋಗುತ್ತಾ ದಾರಿಯಲ್ಲಿ ಮಿಸೆಸ್ ಮಾಯಾದೇವೀ-ನೀಲಕಂಠರವರಿಗೆ ನಮ್ಮಲ್ಲಿಯ ಔತಣದ ಆಮಂತ್ರಣ ವನ್ನು ಕೊಟ್ಟು ಹೋಗು."

"ಆ ದಿನ ಭೋಜನಕ್ಕೆ ಹೋಗಿದ್ದೆವಲ್ಲವೇ, ಅವರಿಗೆ ತಾನೇ?"

"ಹೌದು, ಹೌದು, ಅವರು ಬೈತೂಲಕ್ಕೆ ಬಂದಿದ್ದಾರೆ. ಸಿವಿಲ್ ಲೈನ್ಸ್ ನಲ್ಲಿದ್ದಾರಂತೆ. ಅಲ್ಲಿಯ ಯಾವುದಾದರೊಂದು ಬಂಗಲೆಯಲ್ಲಿರಬಹುದು. ಕೇಳಿ ತಿಳಿದುಕೊ."

ಹತ್ತು

ಆ ನಾಗಪುರದ ಗಣ್ಯ ಮಹಿಳೆಯ ವಿಷಯವಾಗಿ ಮರಿಯಮಳು ಅಬ್ದುಲ್ಲ ನಿಂದ ಬೇಕಷ್ಟು ಕೇಳಿ ತಿಳಿದಿದ್ದಳು. ಅವಳು ತನ್ನಲ್ಲಿಗೆ ಉಪಹಾರಕ್ಕೆ ಬರುವ ಳಲ್ಲವೇ—? ಅದಕ್ಕಾಗಿ ಮರಿಯಮಳು ಬಹಳ ಉತ್ಸಾಹದಿಂದ ಕೆಲಸ ಮಾಡು ತ್ತಿದ್ದಾಳೆ. ಉಪಹಾರದ ಕೋಣೆ, ಅಲ್ಲಿಯ ಮೇಜು ಇತ್ಯಾದಿಗಳನ್ನು ಅಂದ ವಾದ ಶುಭ್ರ ಬಟ್ಟೆಗಳಿಂದ ಅಲಂಕರಿಸಿದ್ದಳು. ಅಲ್ಲಿಯ ಅಲಂಕಾರದಲ್ಲಿ ಅನೇಕ ಕಾಡು ಲತೆಗಳೂ, ಚಿತ್ರವಿಚಿತ್ರವಾದ ಬಣ್ಣ ಬಣ್ಣದ ಕಾಡು ಹೂಗಳೂ ಸೇರಿದ್ದವು. ಶತಪುತ್ರಾ ಪರ್ವತದಲ್ಲಿ ವಸಂತ ಋತುವಿನ ಸಮಯ ಯಾವ ರೂಪವು ತೋರಿಬರುವದೋ ಅವಳ ರೂಪವು ಇಲ್ಲಿಯೂ ಕಾಣುತ್ತಿರುವಂತಿತ್ತು. ಈ ಎಲ್ಲಾ ಅಲಂಕಾರಗಳೂ ಅಶೋಕನು ಚಿತ್ರದಲ್ಲಿ ಮಗ್ನನಾಗಿದ್ದಾಗ ಮರಿಯಮ ಳಿಂದ ಏರ್ಪಾಟು ಆಗಿದ್ದವು.

ಕೋಣೆಯೊಳಗೆ ನಿರ್ಮಿತವಾಗಿರುವ ಉಪವನವನ್ನು ನೋಡಿದಾಗ ಅಶೋಕನು ಆಶ್ಚರ್ಯದಿಂದ ಕೂಡಿದವನಾಗಿ ಹೀಗೆಂದನು: "ನೀನೇತಕ್ಕೆ ಇದೆಲ್ಲವನ್ನು ನಿರ್ಮಿಸಿರುವೆ ಮರಿಯಮ್?"

"ಸರಿ, ಸರಿ, ಚೆನ್ನಾಗಿ ಹೇಳಿದಿ! ಏಕೆ ಮಾಡಬಾರದು? ನಾಗಪುರದ ನಾಗರಿಕ ಮಹಿಳೆಯೊಬ್ಬಳು ನಮ್ಮಲ್ಲಿಗೆ ಆಗಮಿಸಲಿದ್ದಾಳೆ. ಅಲ್ಲದೆ ಅವಳು ನಿಮ್ಮ ಮಿತ್ರಳೂ ಆಗಿದ್ದಾಳೆ. ಹೀಗಿರುವಾಗ ಅವಳನ್ನು ಉಚಿತರೀತಿಯಿಂದ ಸ್ವಾಗತಿಸದೆ ಇರಲು ಸಾಧ್ಯವೇ?"

"ಇಷ್ಟೊಂದು ಸಿದ್ಧತೆಗಳ ಅವಶ್ಯಕತೆ ಇರಲಿಲ್ಲ. ಇರಲಿ ಬಿಡು, ರಚಿಸಿದ ಮೇಲೆ ಒಳಿತೇ ಆಯಿತೆನ್ನಬೇಕು. ಎಷ್ಟು ರಮಣೀಯವಾಗಿ ಜೋಡಿಸಿದ್ದೀಯಾ—ಮರಿಯಮ್, ನಿಜವಾಗಿಯೂ ನಿನ್ನಲ್ಲಿಯ ಕಲಾದೃಷ್ಟಿಯು ಬಹಳ ಸುಂದರವಾಗಿದೆ." ಹೀಗೆನ್ನುತ್ತಿದ್ದ ಅಶೋಕನ ಮುಖವು ಕೌತುಕ ಮತ್ತು ಪ್ರಸನ್ನತೆಯಿಂದ ಅರಳಿತು. ಇದರಿಂದ ಮರಿಯಮಳಿಗೂ ಸಂತೋಷವಾಯಿತು.

"ಇಲ್ಲಿ ಮೂರೇ ಕುರ್ಚಿಗಳೇಕೆ?" ಅಶೋಕನು ಪ್ರಶ್ನಿಸಿದ.

"ಮಿಸ್ ಥಾಮಸರು ಬರುವದಿಲ್ಲ. ಅವರಿಗೆ ತಲೆನೋವಂತೆ. ನಾನು ಇದನ್ನು ನಿಮಗೆ ಮೊದಲೇ ತಿಳಿಸಬೇಕೆಂದಿದ್ದೆ, ಆದರೆ ತಾವು ಸ್ಟುಡಿಯೊದೊಳಗೆ ಅಡಗಿಕೊಂಡಿದ್ದಿರಿ."

"ಒಹೊ ಹಾಗೆಯೇ?...." ಅಶೋಕನು ಯೋಚಿಸಲಾರಂಭಿಸಿದನು.

"ಇನ್ನೂ ಅವರು ಬರಲಿಕ್ಕೆ ಒಂದೂವರೆ ಘಂಟೆ ಹೊತ್ತಿದೆ" ಮರಿಯಮಳೆಂದಳು. "ನಾನು ಸ್ನಾನ ಮಾಡಿಕೊಂಡು ಬರುತ್ತೇನೆ" ಎಂದು ಕುಣಿಯುತ್ತ, ಹಾರುತ್ತ ಹೊರಗೆ ಹೋದಳು.

ಮರಿಯಮಳಲ್ಲಿ ಯಾವದನ್ನೂ ಹೇಳದಿದ್ದರೂ ಇಷ್ಟೆಲ್ಲ ಕೆಲಸಗಳನ್ನು ಆಸಕ್ತಿಯಿಂದ ಮಾಡಿಟ್ಟದ್ದನ್ನು ಕಂಡ ಅಶೋಕನ ಮನಸ್ಸಿನಲ್ಲಿ ಒಂದು ರೀತಿಯ ಅತ್ಯಾನಂದವು ಉಂಟಾಯಿತು. ಆಗಿನ ಅವನ ಮನೋಭಾವದಲ್ಲಿ ಕೇವಲ ಕೃತಜ್ಞತೆಯೇ ಅಲ್ಲ, ಇನ್ನೂ ಏನೋ ಅಡಗಿಕೊಂಡಿತ್ತು. ಆದರೆ ಅವನಿಗೆ ಅದನ್ನು ಹೊರಗೆಡುಹಲಾಗುತ್ತಿರಲಿಲ್ಲ.

ರಾತ್ರಿ ಸರಿಯಾಗಿ ಎಂಟೂವರೆ ಘಂಟೆಗೆ 'ಬ್ಯುಕ್' ಮೋಟಾರಿನ ಹಾರ್ನ್' ಕೇಳಿಸಿತು. ಇದರಿಂದ ಅಶೋಕನಿಗೆ ಮಾಯಾದೇವಿಯ ಆಗಮನ,

ತಿಳಿದದ್ದಲ್ಲದೆ ಇಡೀ ಪಾದರೀಪುರಕ್ಕೇನೇ ತಿಳಿಯಿತು. ಅಶೋಕನು ಯೋಗ್ಯ ರೀತಿಯಿಂದ ಅವಳನ್ನು ಸ್ವಾಗತಿಸಿದನು.

ಈ ದಿನ ಮಾಯಾದೇವಿಯ ಶೃಂಗಾರದ ವಿಲಾಸಗಳು ಹಿಂದಿನ ದಿನಗಳಿಗಿಂತಲೂ ಇಮ್ಮಡಿಯಾಗಿದ್ದವು. ಪರಸ್ಥಳಕ್ಕೆ ಹೋಗುವಾಗ ಈ ತರದ ಶೃಂಗಾರಗಳನ್ನು ಮಾಡಿಕೊಳ್ಳುವದು ಆಶ್ಚರ್ಯದ ಸಂಗತಿಯಲ್ಲ. ಅದೂ ಸಾಲದ್ದಕ್ಕೆ ಸರಿಯಾದ ಸಂದರ್ಭ! ಋತುವೂ ಹಾಗೆಯೇ ವಸಂತ!

ಉಪಚಾರದ ನಮಸ್ಕಾರ ಪ್ರತಿ ನಮಸ್ಕಾರಗಳ ಮತ್ತು ಕುಶಲ ಪ್ರಶ್ನೆಗಳ ಅನಂತರ ಮಾಯಾದೇವಿಯು ಹೇಳಿದಳು:

"ತಾವು ಒಳ್ಳೇ ಮೋಸದಿಂದ ಓಡಿ ಬಂದಿರಿ!"

"ಇಲ್ಲ, ಇಲ್ಲ, ನಾನು ಇಲ್ಲಿಗೆ ಬರುವೆನೆಂದು ನಿಮಗೆ ಮೊದಲೇ ಹೇಳಿರಲಿಲ್ಲವೇ ?" ಅಶೋಕನೆಂದನು.

"ಆದರೆ ಬರುವ ಮುನ್ನ ನನಗೊಮ್ಮೆಯಾದರೂ ಸಿಗಬೇಡವೇ? ಏನು ನನ್ನಲ್ಲಿ ತಮಗೆ ತಾತ್ಸಾರವೇ ?" ಅವಳು ಕತ್ತಿಯಧಾರೆಯಂತೆ ಹರಿತವಾದ ಮಾತುಗಳನ್ನಾಡಿದಳು.

ಈ ತರದ ನೇರವಾದ ಪ್ರಶ್ನೆಗಳನ್ನು ಸಮಾಜದಲ್ಲಿ ಉಪಯೋಗಿಸುವದಿಲ್ಲ. ಒಂದೊಮ್ಮೆ ಕೇಳಲ್ಪಟ್ಟರೂ ಅವಕ್ಕೆ ನೇರವಾದ ಉತ್ತರವಾದರೂ ಸಿಗಲಾರದು. ಇದರಿಂದ ಕಠೋರತೆ ಹೆಚ್ಚಾಗಿ ಹಬ್ಬುವುದು.

"ಇಲ್ಲ, ಇಲ್ಲ, ಅದೇನು ತಾವು ಹಾಗೆನ್ನುವುದು! ನಾನಾದರೂ ನಿಮ್ಮಲ್ಲಿ ಏಕೆ ತಾತ್ಸಾರಗೊಳ್ಳಬೇಕು? ನಾನು ಹೊರಡುವ ಮೊದಲು ಕೆಲಸದ ಹೊರೆಗಳೇ ನನ್ನ ತಲೆಯ ಮೇಲಿದ್ದವು. ಆದ್ದರಿಂದ ನಿಮ್ಮನ್ನು ಸಂಧಿಸಲಾಗಲಿಲ್ಲ."

"ಹೌದು, ಹೌದು, ಇರಬಹುದು. ಏಕೆಂದರೆ ತಾವೊಬ್ಬ ಆರ್ಟಿಸ್ಟು ನೋಡಿ! ಆದರೆ ನಿಮ್ಮ ಮನೆಯ ತನಕ ಬಂದ ಮಾನ್ಯ ಮಹಿಳೆಯನ್ನು ಹಿಂದಕ್ಕೆ ಕಳಿಸಿಬಿಡುವುದು ತಮ್ಮದೇ ಆದ ಒಂದು ರೀತಿಯೂ, ನ್ಯಾಯವೂ ಆಗಿದೆ ಅಲ್ಲವೇ ? ಕೆಲಸದವರಿಂದ ಈ ರೀತಿಯಾಗಿ ಮಾನವಂತೆಯರಾದ ಮಾನಿನಿಯರ ಮಾನವನ್ನು ಮಾರಿಸುವುದು ಇದೂ ಒಂದು ಆರ್ಟ್ ಅಲ್ಲವಷ್ಟೆ?"

"ಇಲ್ಲ. ಹಾಗೆಂದೂ ಆಗಿರಲಿಕ್ಕಿಲ್ಲ. ಅಬ್ದುಲ್ಲನು ಎಂದೂ ಯಾರ ಅಪಮಾನವನ್ನೂ ಮಾಡನು. ಅವನು ನನ್ನ ತುಂಬಾ ಹಳೆಯ ಮನುಷ್ಯನೂ,

ತಿಳಿದವನೂ ಆದ ಸೇವಕ. ಅವನೂ ಇಲ್ಲಿಯೇ ಇದ್ದಾನೆ. ನೀವು ಅಭಿಪ್ರಾಯಪಡುವುದಾದರೆ ಅವನನ್ನೇ ಇಲ್ಲಿ ಕರೆಸಿ ಕೇಳೋಣ."

"ಬೇಡ. ಅವನ ಅಗತ್ಯವೇನೂ ಇಲ್ಲ." ಮಾಯಾದೇವಿಯು ಕೂಡಲೇ ಉತ್ತರವಿತ್ತಳು. ಏಕೆಂದರೆ ಪ್ರತಿವಾದಿಯೂ ಇಲ್ಲಿಯೇ ಇರಬಹುದೆಂಬ ಕಲ್ಪನೆಯು ಅವಳಿಗಿರಲಿಲ್ಲ. ತನ್ನ ಮುಖಭಂಗಿಯನ್ನು ಬದಲಿಸುತ್ತ ಹೇಳಿದಳು, "ತಾವು ಅಪಮಾನ ಮಾಡಿಲ್ಲವೆನ್ನುತ್ತೀರಿ. ಸರಿ. ಹಾಗೆಂದೇ ನಂಬುತ್ತೇನೆ. ಅಪಮಾನವಾಗಿಲ್ಲವೆಂದೇ ಇಟ್ಟುಕೊಳ್ಳೋಣ. ಹೇಳಿರಿ. ತಾವು ಕ್ಷೇಮವಷ್ಟೇ?"

"ಹೌದು, ಸೌಖ್ಯ." ಸಂಭಾಷಣೆಯ ರೀತಿಯು ಹೊರಳಿತು. ಇದನ್ನು ಕಂಡ ಅಶೋಕನು ಒಂದು ಸಂತೋಷದ ಶ್ವಾಸವನ್ನು ಹೊರಗೆಡಹಿದನು. ಇದುವರೆಗೆ ಅವನಿಗೆ ನ್ಯಾಯಾಸ್ಥಾನದಲ್ಲಿ ತಾನು ಸತ್ಯತೆಯನ್ನು ಪ್ರಕಟಿಸುವಂತಿತ್ತು. ಪ್ರತಿವಾದಿಯೂ ನಿತ್ರಾಣನೂ, ನಿಸ್ಸಹಾಯಕನೂ ಆಗಿದ್ದರೆ ಅದರಿಂದ ಲಾಭ ಪಡೆದು, ಅವನನ್ನೇ ಕೆಳಮಟ್ಟಕ್ಕಿಳಿಸುವುದರಲ್ಲಿ ಮಾಯಾದೇವಿಯು ಎಂತಹ ಜಾಣೆ ಎಂಬುದನ್ನು ಅಶೋಕನು ಈಗ ತಿಳಿದನು. ಇಂತಹ ಸ್ತ್ರೀಯೊಡನೆ ಎಚ್ಚರಿಕೆಯಿಂದ ವ್ಯವಹರಿಸತಕ್ಕದ್ದೆಂದು ನಿರ್ಧರಿಸಿಕೊಂಡನು. ಆಗ ಅವನು ಪುನಃ ಪ್ರಶ್ನಿಸಿದನು, "ನಾನಿಲ್ಲಿರುವೆನೆಂದು ನಿಮಗೆ ಹೇಗೆ ತಿಳಿಯಿತು?"

"ತಾವಾದರೊ ನನ್ನಿಂದ ತಪ್ಪಿಸಿಕೊಂಡು ವಿಳಾಸವನ್ನು ಕೊಡದೆ ಪಲಾಯನ ಹೊಡೆದಿರಿ. ಆದರೆ ನನಗೆ ಈ ರೀತಿಯ ಮೋಸದ ಕೆಲಸ ಮಾಡಿಬಿಡುತ್ತೇನೆಂದರೆ ಅದು ಸಾಗುವುದು ತುಸು ಕಷ್ಟ. ತಮ್ಮ ಆ ಪಾರಸೀಯುವನು, ತಮ್ಮ ಧಣಿ—ಅವನೂ ತಮ್ಮ ವಿಳಾಸವನ್ನು ನನಗೆ ಕೊಡಲಿಲ್ಲ. ಕೊನೆಗೆ ಪೋಸ್ಟಾಫೀಸಿನಲ್ಲಿ ತಿಳಿದುಕೊಂಡೆ. ಬೈತೂಲಿಗೆ ನನಗೆ ಬರುವ ಕೆಲಸವೂ ಇತ್ತು. ನೀವು ಇಲ್ಲಿಯೇ ಹತ್ತಿರದಲ್ಲಿದ್ದೀರಿ ಎಂದು ತಿಳಿದಾಗ ನಿಮ್ಮನ್ನೊಮ್ಮೆ ಸಂಧಿಸಿ ಹೋಗೋಣವೆಂದು ಬಂದೆ."

"ಓಹೋ" ಎಂದಲ್ಲದೆ ಬೇರಾವ ಮಾತುಗಳೂ ಅಶೋಕನ ಬಾಯಿಂದ ಹೊರಡಲಿಲ್ಲ.

"ತಾವು ನನ್ನ ಒಂದು ಕೆಲಸವನ್ನು ಮಾಡಿಕೊಟ್ಟೇ ತೀರಬೇಕು. ಈ ಬಾರಿ ಒಲ್ಲೆನೆಂದರೆ ನಾನೆಂದೂ ಕೇಳಲಾರೆ."

ಅಶೋಕನು ಕೊಂಚ ಹೆದರಿದನು. ಈ ವಿಚಿತ್ರ ಸ್ತ್ರೀಯ ಕೆಲಸವಾದರೂ

ಇನ್ನೆಷ್ಟು ವಿಚಿತ್ರವಾಗಿರಬಹುದೆಂದು ಯಾರಿಗೆ ಗೊತ್ತು. "ಸರಿ. ಹೇಳಿರಿ ನೋಡೋಣ" ಎಂದನು.

"ತಾವು ನನ್ನ ಒಂದು 'ಲೈಫ್ ಸೈಜ್ ಪೋರ್ಟ್‌ರೈಟ್' ಇಳಿಸಬೇಕು. ನಾನು ಯಾವ ಪೋಸನ್ನು ಕೊಡುತ್ತೇನೋ ಅದೇ ಪೋಸ್‌ನಲ್ಲಿ ಇಳಿಸಬೇಕು. ನನ್ನ ಮರಣಾನಂತರ ಅದೇ ನನ್ನ ಸೌಂದರ್ಯದ ವಿಶೇಷತೆಯನ್ನು ಲೋಕಕ್ಕೆಲ್ಲ ತೋರಿಸಬೇಕು. ಆದ್ದರಿಂದ ಅದಕ್ಕಾಗಿ ಎಷ್ಟು ಬೇಕಾದರೂ ವ್ಯಯಮಾಡಲು ಸಿದ್ಧಳಿದ್ದೇನೆ. ಆದರೆ ಅದು ನಿಜವಾಗಿಯೂ ಬಹಳ ಉತ್ತಮತರದ್ದಾಗಿದ್ದು, ಸೌಂದರ್ಯದಲ್ಲಿ ಅದಕ್ಕಿಂತ ಬೇರೆ ಇಲ್ಲವೆಂಬಂತಾಗಬೇಕು. ಇದರಿಂದ ತಮ್ಮ ಮತ್ತು ನನ್ನ ನಾಮಧೇಯಗಳು ಅಮರವಾಗಿರುವಂತಾಗಬೇಕು. ಏನು? ಒಂದು ಸಾವಿರ ಸಾಕೇ?"

"ಹಣದ ವಿಚಾರವಾಗಿ ನಾನೆಂದೂ ಆಡುವುದಿಲ್ಲವೆಂಬುದು ನಿಮಗೆ ತಿಳಿದೆ ಇದೆ. ನನ್ನ ಕಲೆಯ ಪಾರಿತೋಷಕವನ್ನು ಗ್ರಾಹಕರುಗಳಾದ ರಸಿಕರ ಮೇಲೆಯೆ ಬಿಡುವುದು ನನ್ನ ರೂಢಿ."

"ಅದೇ ಸರಿ." ಮಾಯಾದೇವಿಯು ಸಮಾಧಾನದ ಒಂದು ಮೃದು ನಗೆಯನ್ನು ಬೀರಿದಳು. ಅಶೋಕನಿಗೆ ಮಾಡಿದ ಅವಳ ಹಂಚಿಕೆಯು ಫಲಿಸಿತು. ಅಶೋಕನೂ ಸಮ್ಮತಿಸಿದನು.

"ಹಾಗಾದರೆ ನಾಗಪುರಕ್ಕೆ ಹಿಂದಿರುಗಿ ಬಂದ ಬಳಿಕ ನನ್ನ ಅಲ್ಲಿಯ ಸ್ಟುಡಿಯೋವಲ್ಲಿಯೇ ಚಿತ್ರ ಕೆಲಸ ಆರಂಭಿಸುತ್ತೇನೆ."

"ಇಲ್ಲ. ಅಷ್ಟು ದಿನ ಕಾಯಲು ಸಾಧ್ಯವಿಲ್ಲ. ಇಲ್ಲಿಯ ನನ್ನ ಬಂಗಲೆಯಲ್ಲಿಯ ಒಂದು ಪ್ರಕಾಶಮಾನವಾದ ಕೋಣೆ ಇದೆ. ಅದನ್ನೇ ಸ್ಟುಡಿಯೋ ಮಾಡಿಕೊಂಡು, ಆದಷ್ಟು ಬೇಗ ಬಣ್ಣದ ಕೆಲಸವನ್ನು ಮುಗಿಸಬೇಕು."

"ಹಾಗಾದರೆ ಇಲ್ಲಿಯ ನಮ್ಮ ಬಂಗಲೆಯಲ್ಲಿಯೇ ಏಕೆ ಪೋಸ್ ಕೊಡಬಾರದು? ಇಲ್ಲಿಯೂ ನಾನೊಂದು ಸ್ಟುಡಿಯೋವನ್ನು ಮಾಡಿಕೊಂಡಿದ್ದೇನೆ."

"ಇಲ್ಲ, ನನ್ನಲ್ಲಿಗೆ ಬಂದರೇನಾಗುವದು? ತಾವು ನನ್ನಲ್ಲಿಗೆ ಬರಲು ಭಯಪಡುವಿರಾ? ನಾನೇನೂ ನಿಮ್ಮ ಮೇಲೆ ಯಾವ ಮಂಕುಬೂದಿಯನ್ನೂ ಊದುವವಳಲ್ಲ. ಮತ್ತು ತಾವಾದರೂ ಹಾಲು ಕುಡಿಯುವ ಎಳೆಯ ಮಗುವಲ್ಲ."

"ಇಲ್ಲ. ಇಲ್ಲ. ಹಾಗೆಂದು ನಾನೂ ಎಣಿಸಿಲ್ಲ." ಅಶೋಕನು ಸ್ವಲ್ಪ ನಾಚಿಕೆಯಿಂದ ಹೇಳಿದನು. "ಇಲ್ಲಿ ತಯಾರಾಗಿ ಮಾಡಿಟ್ಟ ಸ್ಟುಡಿಯೊ ಇದೆ. ಆದ್ದರಿಂದ ಹೊಸದಾಗಿ ಏಕೆ ಏರ್ಪಾಡು ಮಾಡಬೇಕೆಂದು ಯೋಚಿಸಿದೆ. ನಿಮ್ಮ ಇಚ್ಛೆ ನಿಮ್ಮಲ್ಲಿಯೇ ಆಗಬೇಕೆಂದಿದ್ದರೆ ಹಾಗೆಯೇ ಆಗಲಿ."

ಅಶೋಕನು ಈ ಒಪ್ಪಿಗೆ ಸೂಚಿಸಿದ್ದಕ್ಕಾಗಿ ಮಾಯಾದೇವಿಯು ಒಂದು ಮಧುರವಾದ ಮುಗುಳ್ನಗೆಯೊಂದಿಗೆ ಅವನನ್ನು ಬಹಳ ತುಷ್ಟನನ್ನಾಗಿ ಮಾಡಿದಳು. ಅವಳ ಮನಸ್ಸಿನೊಳಗೇ ಅವಳಿಗುಂಟಾದ ಸಫಲತೆಗಾಗಿ ಸಂತೋಷವಾಗುತ್ತಿತ್ತು.

'ಉಪಹಾರವು ಸಿದ್ಧವಾಗಿದೆ' ಎಂದು ಅಬ್ದುಲ್ಲನು ಸೂಚಿಸಿದನು.

ಆಗ ಅಶೋಕನು ಕೇಳಿದನು "ಮರಿಯಮಳೆಲ್ಲಿ? "

"ಉಪಹಾರದ ಕೋಣೆಯಲ್ಲಿ ಹುಜೂರ್."

ಇಬ್ಬರೂ ಆ ಕೋಣೆಯತ್ತ ಸಾಗಿದಾಗ ಮರಿಯಮಳು ಅಲ್ಲಿಯ ಮೇಜಿನ ಬಳಿಯಲ್ಲಿ ವಿನಯಪೂರ್ವಕವಾಗಿ ನಿಂತುಕೊಂಡಿದ್ದುದನ್ನು ಕಂಡರು. ಅವಳು ಚೊಕ್‌ಲೇಟ್ ಬಣ್ಣದ ಸಾದಾ ಸೀರೆಯನ್ನು ಉಟ್ಟಿದ್ದಳು. ಅದು ಅವಳ ಗೌರಾಂಗವನ್ನು ಇನ್ನೂ ಸೊಗಸಾಗಿ ಶೋಭಿಸುವಂತೆ ಮಾಡಿತ್ತು. ಇತರ ವೇಷಭೂಷಣಗಳಾದರೂ ಬಹಳ ಸಾಧಾರಣವಾದವುಗಳೇ ಆಗಿದ್ದವು. ಕಾಲುಗಳಲ್ಲಿ ಯಾವಾಗಲೂ ಇರುವ ಪಾದರಕ್ಷೆಗಳೇ ಇವೆ. ಅವಳ ಸ್ವಾಭಾವಿಕವಾದ ಸೌಂದರ್ಯದ ದೆಸೆಯಿಂದ ಇತರ ಸೌಂದರ್ಯ ಪ್ರಸಾಧನೆಯ ಅವಶ್ಯಕತೆ ಅವಳಿಗಿರಲಿಲ್ಲ.

ಮರಿಯಮಳನ್ನು ಅಶೋಕನು ಇಂದಿನವರೆಗೂ ಸೀರೆಯೊಂದಿಗೆ ಕಂಡಿಲ್ಲ. ಆದ್ದರಿಂದ ಈ ನವೀನ ರೂಪದೆಡೆಗೆ ಒಂದೇಸಮನೆ ನೋಡಲಾರಂಭಿಸಿದನು. ಮರಿಯಮಳು ನೆಲವನ್ನೇ ನೋಡುತ್ತಿದ್ದಳು. ಮಾಯಾದೇವಿಯ ಕಣ್ಣುಗಳಿಗೆ ಅಶೋಕನ ದೃಷ್ಟಿಯನ್ನು ಅಪಹರಿಸಲಾಗಲಿಲ್ಲ. ಅವಳ ಮನಸ್ಸಿನಲ್ಲಿ ಅಸ್ಪಷ್ಟವಾದ ಈರ್ಷೆಯು ಜಾಗ್ರತವಾಯಿತು. ಇವೆಲ್ಲ ಎರಡೇ ಕ್ಷಣಗಳಲ್ಲಿ ನಡೆದುಹೋದವು. ಅವಳು ತನ್ನನ್ನು ತಾನೇ ಬಲಪಡಿಸುತ್ತ ಬಂದಳು.

"ಬಹಳ ಸುಂದರ! 'ಬ್ಯೂಟಿಫುಲ್' ಎನ್ನುತ್ತ ಅವಳು ಆ ಕೋಣೆಯ ಶೋಭೆಯನ್ನೂ ಮತ್ತು ಮರಿಯಮಳನ್ನೂ ಎವೆ ಇಕ್ಕದೆ ನೋಡಲಾರಂಭಿಸಿ

ದಳು. ಇಷ್ಟೆಲ್ಲ ಯಾರು ಯಾರಿಗಾಗಿ ಮಾಡಿದರೆಂದು ಆಗ ಅವಳಿಗೆ ತಿಳಿಯಲಿಲ್ಲ. ಆದರೂ ಇದೆಲ್ಲವನ್ನು ಕಂಡ ಮಾಯಾದೇವಿಯು ಇಷ್ಟೆಲ್ಲ ತನಗಾಗಿಯೇ ಅಶೋಕನು ಮಾಡಿಸಿರಬಹುದೆಂದು ನೆನೆಸಿ ಹಿರಿಹಿಗ್ಗಿದಳು. ಅವಳ ಅಹಂಭಾವಕ್ಕೆ ಇದರಿಂದ ಸಮಾಧಾನವೂ ಉಂಟಾಯಿತು. ಅಶೋಕನು ಇಷ್ಟಾದರೂ ತನ್ನ ವಿಚಾರದಲ್ಲಿ ಗಮನವನ್ನಿಟ್ಟಿರುವನಲ್ಲ—ಎಂದು ಆಗಿನ ಅವಳ ಅಭಿಪ್ರಾಯ.

ಮರಿಯಮಳನ್ನು ಕಂಡ ಮಾಯಾದೇವಿಯು ಬಾಗಿಲಲ್ಲಿ ಒಬ್ಬ ರಾಣಿಯಂತೆ ಠೀವಿಯಿಂದ ನಿಂತುಕೊಂಡಳು. ಅವಳ ಮುಂದೆ ಕಾಣುವ ಎಲ್ಲ ವಸ್ತುಗಳು, ಮರಿಯಮಳೂ ಕೂಡ ತುಚ್ಛವೆಂಬ ಅಭಿಪ್ರಾಯವು ಅವಳಲ್ಲಿ ಮೂಡಿದೆ ಎಂಬುದು ಆಗ ಅವಳನ್ನು ನೋಡಿದರೆ ತಿಳಿಯುವಂತಿತ್ತು. ಅಶೋಕನಿಗಿದು ಹಿತವೆನಿಸಲಿಲ್ಲ.

"ಈಕೆಯೇ ಮರಿಯಮ್" ಅಶೋಕನು ಮಾಯಾದೇವಿಯೊಡನೆ ಅವಳ ಪರಿಚಯವನ್ನು ಮಾಡುತ್ತಾ ಹೇಳಿದನು: ಮತ್ತು ಮರಿಯಮಳ ಕಡೆಗೆ ಬಾಗಿ ಮಾಯಾದೇವಿಯ ಕಡೆಗೆ ಕೈಗಳನ್ನು ಚಾಚುತ್ತ ನುಡಿದನು "ಇವರೇ ಶ್ರೀಮತಿ ಮಾಯಾದೇವೀ ನೀಲಕಂಠ್."

ಸ್ತ್ರೀಯು ಸ್ತ್ರೀಯನ್ನು ಗುರುತಿಸುವಂತೆ, ಆ ಹೆಂಗಸರಿಬ್ಬರೂ ದೃಷ್ಟಿಗೂಡಿಸಿ ಒಬ್ಬರನ್ನೊಬ್ಬರು ನೋಡಿಕೊಂಡು ಗುರುತಿಸಿಕೊಂಡಂತೆ ತೋರುತ್ತಿ.

"ಮರಿಯಮ್!" ಮಾಯಾದೇವಿಯು ಅಸ್ಪಷ್ಟ ವಾಣಿಯಿಂದ ಆ ಹೆಸರನ್ನು ಎರಡು ಬಾರಿ ಉಚ್ಚರಿಸಿದಳು. "ಮರಿಯಮ್ ಎಂಬುದು ಕ್ರೈಸ್ತಮತೀಯರಾದ ಹುಡುಗಿಯರ ಹೆಸರಲ್ಲವೇ?"

"ಹೌದು" ಎಂದು ಮರಿಯಮಳು ಮೃದುವಾಗಿ ಉತ್ತರಿಸಿದಳು. ಅವಳ ದನಿಯೂ ಮೃದು ಮಧುರವಾಗಿದೆ ಎಂದು ಮಾಯಾದೇವಿಗೆ ಈಗ ತಿಳಿಯಿತು. ಅಶೋಕನಂತಹ ಕಠಿಣ ಕಲಾಕಾರನ ಹೃದಯವೇ ಮರುಳುಗೊಂಡಾಗ ಹೆಂಗಸಿನ ಪಾಡೇನು?"

ಉಪಹಾರವು ಆರಂಭವಾಯಿತು. ಮೊದಲಿನಿಂದ ಕೊನೆಯ ವರೆಗೂ ಮರಿಯಮಳು ತಾನೊಬ್ಬ ಹಳ್ಳಿಯ ಹುಡುಗಿಯಾಗಿದ್ದುಕೊಂಡು, ಈಗ ಒಬ್ಬ 'ಫೇಶನೆಬಲ್' ರಮಣಿಯ ಮುಂದೆ ಕುಳಿತಿದ್ದೇನೆ ಎಂಬ ಭಾವನೆಯುಳ್ಳ

ವಳಾಗಿ ತುಂಬಾ ಸಂತೋಷಪಡುತ್ತಿದ್ದಳು. ಆದರೆ ಅವಳಿಗೆ ಸಭ್ಯಮನುಷ್ಯರೊಂದಿಗೆ ತಿನ್ನುವ ಪದ್ಧತಿ ತಿಳಿಯದು. ಅವರೊಡನೆ ಮಾತನಾಡುವ ಕ್ರಮವನ್ನೂ ಅರಿಯಳು. ಇದೇ ವಿಚಾರಯುತಳಾಗಿ ಅವಳು ಸುಮ್ಮಗೆ ಕುಳಿತಿದ್ದಳು.

ಅಶೋಕನು ಅವಳ ಈ ಭಾವನೆಯನ್ನು ತಿಳಿದುಕೊಂಡಿದ್ದನು. ಆದ್ದರಿಂದ ಅವಳನ್ನು ತಿನ್ನುವುದಕ್ಕೆ—ಅದರಲ್ಲೂ ವಿಶೇಷವಾಗಿ ಸಿಹಿಯನ್ನು ತಿನ್ನುವುದಕ್ಕೆ ಆಗ್ರಹ ಮಾಡುತ್ತಿದ್ದನು. ಅವನಿಗೆ ಮರಿಯಮಳಲ್ಲಿ ಸ್ನೇಹ ಮತ್ತು ಆತ್ಮೀಯತೆ ಇದೆ ಎಂದು ಮಾಯಾದೇವಿಯು ಪೂರ್ತಿ ತಿಳಿದಳು.

ಉಪಹಾರ ಸಮಯದಲ್ಲಿ ಹವಾ ಗುಣ, ನಾಗಪುರದ ಮಿತ್ರರು, ಕ್ಲಬ್, ಕಲೆ, ಸಿನಿಮಾ ಇತ್ಯಾದಿಗಳ ಚರ್ಚೆಯು ಸಾಧಾರಣವಾಗಿ ಸಾಗುತ್ತಿತ್ತು ಇದೆಲ್ಲವನ್ನು ಕೇವಲ ಆಲಿಸುವ ಕೆಲಸವಲ್ಲದೆ ಬೇರೆ ಕೆಲಸವಿಲ್ಲ—ಮರಿಯಮಳಿಗೆ. ಅವಳಲ್ಲಿ ಯಾವ ಪ್ರಶ್ನೆಯನ್ನಾದರೂ ಪ್ರಶ್ನಿಸಿದರೆ ಅದಕ್ಕೆ ಸಂಕ್ಷಿಪ್ತವಾಗಿ ಹೌದು ಇಲ್ಲವೆಂದಿಷ್ಟೆ ಉತ್ತರವಿತ್ತು ಸುಮ್ಮಗಾಗುತ್ತಿದ್ದಳು. ಮಾಯಾದೇವಿಯು ಅವಳ ಕಡೆಗೆ ದುರ್ಲಕ್ಷ್ಯದಿಂದ ನೋಡುವುದೇ ತನ್ನ ರೀತಿ ಎಂದು ಭಾವಿಸಿದಳು.

ಉಪಹಾರಾನಂತರ ಮಾಯಾದೇವಿಯು ಬೈತೂಲಕ್ಕೆ ಹೊರಡಲುದ್ಯುಕ್ತಳಾದಳು. ಆಗ ಅಶೋಕನು ಅವಳನ್ನು ಕಾರಿನ ತನಕ ಕಳುಹಿಸಲು ಅವಳೊಂದಿಗೆ ಹೋದನು. ಮರಿಯಮಳು ಕೋಣೆಯಲ್ಲಿಯೇ ಉಳಿದುಕೊಂಡಿದ್ದಳು. ಏಕೆಂದರೆ ಮೊದಲೇ ಅಲ್ಲಿಂದ ಹೋಗುವುದಕ್ಕೆ ಮಾಯಾದೇವಿಯು ಇವಳಲ್ಲಿ ಅಪ್ಪಣೆಯನ್ನು ಪಡೆದಿದ್ದಳು. ಅಲ್ಲದೆ ಮಾಯಾದೇವಿಗೆ ಅಶೋಕನೊಂದಿಗೆ ಕೆಲವು ನಿಮಿಷಗಳ ಏಕಾಂತವೂ ಬೇಕಾಗಿದೆ ಎಂಬುದನ್ನು ಮರಿಯಮಳು ಹೇಗೋ ತಿಳಿದುಕೊಂಡಿದ್ದಳು.

ಹೋಗುತ್ತ ಮಾಯಾದೇವಿ ಎಂದಳು: "ಈ ಮರಿಯಮಳನ್ನು ಎಲ್ಲಿಂದ ಹಿಡಿದು ತಂದಿರಿ ? ಈ ಮನೆಯಲ್ಲಿ ನಿಮ್ಮೊಡನೆಯೇ ಇದ್ದಾಳೆಯೇ ?"

ಈ ಪ್ರಶ್ನೆಯಲ್ಲಿ ಅಡಗಿರುವ ಕುತ್ಸಿತ ಭಾವನೆಯು ಅಶೋಕನಿಗೆ ಏಕಕಾಲದಲ್ಲಿ ಕ್ರೋಧವನ್ನೂ ದುಃಖವನ್ನೂ ಉಂಟು ಮಾಡಿತು.

"ಅವಳು ನನ್ನೊಡನೆ ಏತಕ್ಕಾಗಿ ಇರುತ್ತಾಳೆ. ? ಅವಳನ್ನು ಮಿಸ್ ಥಾಮಸರು ಪಾಲಿಸಿದ್ದಾರೆ. ಅನಾಥ ಹುಡುಗಿ, ಅವರೊಂದಿಗೇ ಅವಳು ಇರುತ್ತಾಳೆ."

"ಹೌದು, ಅನಾಥಳು. ಆದ್ದರಿಂದಲೇ ಅವಳು ತಮ್ಮ ಕರುಣೆಗೂ ಪಾತ್ರಳಾಗಿದ್ದಾಳೆ. ಕಲಾಕಾರರ ಭಾವುಕ ಹೃದಯವು ಅವಳಿಗಾಗಿ ದ್ರವಿತವಾಗದಿದ್ದರೆ ಬೇರೆ ಯಾರಿಗೆ ಆಗಬೇಕು? ನನ್ನಂಥವರಲ್ಲಿಯೇ ?" ಈ ಮಾತುಗಳು ವ್ಯಂಗವಾಗಿ ಹೊರಬಿದ್ದವು. ಇದರಿಂದ ಅಶೋಕನು ಪುನಃ ಕ್ರೋಧಗೊಂಡನು.

"ನಿಮಗೆ ನನ್ನಂಥವನ ಕರುಣೆಯೋ ಅಥವಾ ಸಹಾನುಭೂತಿಯೋ ಬೇಕಾಗಿಲ್ಲ. ನೀವು ಸ್ವತಂತ್ರರಾಗಿದ್ದೀರಿ. ನಿಮ್ಮ ಜೀವನವನ್ನು ನೀವು ಹೇಗೆ ಬೇಕಾದರೂ ಆಡಿಸಿ ಜೋಡಿಸಬಹುದು. ನಿಮಗೆ ನನ್ನಂತಹ ಮನುಷ್ಯರ ಅಗತ್ಯವಾದರೂ ಏನು ?"

"ಹೌದು ಆ ದೀನೆ, ಸುಂದರ ನವಯುವತಿಯಾದ ಕನ್ಯೆಗೆ ತಮ್ಮ ಸಹಾನುಭೂತಿಯ ಅಗತ್ಯವಿದೆ. ಅವಳೇನೋ ಸುಂದರಿ ಎಂಬುದರಲ್ಲಿ ಸಂದೇಹವಿಲ್ಲ ಆದರೆ ಶುದ್ಧ ಹಳ್ಳಿಯವಳು."

ಪುನಃ ಒಂದೇಟು! ಅಶೋಕನೀಗ ಪೂರ್ಣ ಚಂಚಲಮನಸ್ಕನಾದನು. ಈ ಸಲ ಅವನು ತನ್ನನ್ನು ತಾನು ತಡೆಯಲಾರದಾದನು. ಆಗ ಹೇಳಲಾರಂಭಿಸಿದನು. "ಹಳ್ಳಿಗರ ಸರಳ ಹೃದಯದಲ್ಲಿಯೂ ನಮ್ಮ ಪಟ್ಟಣದಲ್ಲಿರುವ ಎಲ್ಲ ಬಗೆಯ ಸಂಸ್ಕೃತಿ, ಶಿಷ್ಟತೆ, ಅಪೇಕ್ಷೆಗಳೂ ಇದ್ದೇ ಇರುತ್ತವೆ ಮಾಯಾದೇವೀ. ಅವರನ್ನು ಕಡೆಗಣಿಸುವುದು ಸುಲಭ. ಆದರೆ ಅವರಿಗೆ ಸರಿಸಮಾನರಾಗಿರುವುದು ಬಹಳ ಕಠಿನ."

"ಓ........, ತಾವು ಇಷ್ಟರಲ್ಲೆ ಸಿಟ್ಟಿಗೆದ್ದಿರೇನು ?" ಮಾಯಾದೇವಿಯು ಒಂದು ರೀತಿಯಿಂದ ಪ್ರಶ್ನಿಸಿದಳು. "ಕ್ಷಮಿಸಿ. ನಾನು ನಿಮಗೆ ದುಃಖವನ್ನುಂಟು ಮಾಡಿದೆನು. ಆ ಕನ್ನಿಕೆಯು ಇಷ್ಟುಮಟ್ಟಿಗೆ ನಿಮಗೆ ಹೊಂದಿದ್ದಾಳೆಂದು ನನಗೇನು ಗೊತ್ತು ? ಸರಿ ಬಿಡಿ. ತಾವು ನನ್ನ ಪೋರ್ಟ್‌ರೈಟ್‌ನ ಕೆಲಸವನ್ನು ಎಂದು ಆರಂಭಿಸುತ್ತೀರಿ ? ನಿಮ್ಮನ್ನು ಕರೆತರಲು ಮೋಟಾರು ಕಾರನ್ನು ಕಳಿಸುತ್ತೇನೆ."

"ಯೋಚಿಸಿ ಅನಂತರ ಹೇಳುತ್ತೇನೆ." ಅಶೋಕನು ಸಿಟ್ಟಿನೊಂದಿಗೇ ಎಂದನು. ಒಂದು ಕ್ಷಣ ಅವನಿಗೆ ಅವಳಲ್ಲಿಂದ ತೊಲಗಿದರೆ ಸಾಕೆಂದು ಕಂಡಿತು. ಆದರೆ ಮಾಯಾದೇವಿಯೇ ಸಾಧಾರಣದಲ್ಲಿ ಬಿಟ್ಟುಬಿಡುವವಳು! ಹೇಳಲಾ

ರಂಭಿಸಿದಳು:

"ಓಹೊ! ತಾವು ಪೂರ್ಣ ಕ್ರೋಧಗೊಂಡಿದ್ದೀರಿ. ನಾನು ತಮ್ಮಲ್ಲಿ ಕ್ಷಮೆ ಬೇಡುತ್ತೇನೆ. ತಮ್ಮ ಆರ್ಟ್‌ನಿಂದ ನನ್ನನ್ನು ದೂರವಾಗಿರುವಂತೆ ಮಾಡಲು ಈ ಪರವಾಗಿ ಸಿಟ್ಟಾಗಬೇಡಿರಿ. ನಿಜವಾಗಿ ಹೇಳುತ್ತೇನೆ ಆರ್ಟಿಸ್ಟ್! ನಾನು ಸತ್ತೇ ಹೋದೇನು. ಆಗ ಆ ಸ್ತ್ರೀಹತ್ಯಾ ಪಾಪವೂ ತಮಗೇ ಬಂದೀತು ತಮ್ಮ ಕಲೆಗೆ ನಾನೆಷ್ಟು ಮೋಹಿತಳಾಗಿದ್ದೇನೆಂಬುದು ತಮಗೆ ತಿಳಿಯದು. ಸಂಭಾವಿತರು ಈ ರೀತಿಯಾಗಿ ಭಾಷೆ ಕೊಟ್ಟು ಮೋಸ ಮಾಡುವುದೂ ಇಲ್ಲ. ತಾವು ನನ್ನ ಚಿತ್ರ ಒಂದನ್ನು ಇಳಿಸಲೇ ಬೇಕು. ಹೇಳಿರಿ. ಈ ನನ್ನ ವಿನಂತಿ ಯನ್ನು ಎಂದು ಪೂರ್ತಿಗೊಳಿಸುವಿರಿ?"

ಮೇಲಣ ಸಂಭಾಷಣೆಯನ್ನು ಮನೆಗೂ ಕಾರಿಗೂ ಮಧ್ಯದಲ್ಲೇ ಇಬ್ಬರೂ ನಿಂತುಕೊಂಡೇ ನಡೆಸಿದ್ದರು. ಸಂಭಾಷಿಸುತ್ತ ಅವರು ಕತ್ತಲೆಯಲ್ಲಿ ರಸ್ತೆಗೆ ಬಂದು ಮೋಟಾರಿನಲ್ಲಿ ಡ್ರೈವರನನ್ನು ನೋಡಲು ಅವನು ಅಲ್ಲಿ ಇರಲಿಲ್ಲ. ಪ್ರಾಯಶಃ ಜೋಶೆಫ್ ತಾತನ ಅಂಗಡಿಯಲ್ಲಿ ಸಿಗರೇಟ್ ಸೇದುತ್ತಿರಬಹುದು.

ಮಾಯಾದೇವಿಯು ಅಶೋಕನ ಅತಿ ಸಮೀಪಕ್ಕೆ ಹೋಗಿ ವಯ್ಯಾರದಿಂ ದೆಂದಳು:

"ನೋಡಿ, ನನ್ನ ಮೇಲೆ ಸಿಟ್ಟಾಗಬೇಡಿ. ಕ್ರೋಧವನ್ನು ನಾನೂ ಸಹಿಸ ಲಾರದವಳು. ತಮಗಾಗಿ ಕಾಡು ಗುಡ್ಡಗಳನ್ನು ಬಳಸಿಕೊಂಡು ಇಲ್ಲಿಯತನಕ ಬಂದಿದ್ದೇನೆ. ಎಲ್ಲಿಯ ವರೆಗೆ 'ನಾನು ಕೋಪಿಸಿಕೊಳ್ಳುವುದಿಲ್ಲ' ಎಂದು ನೀವು ಎನ್ನುವುದಿಲ್ಲವೋ ಅದುವರೆಗೆ ನಿಮ್ಮನ್ನು ನಾನು ಬಿಡಲಾರೆ" ಎನ್ನುತ್ತ ನಿಜ ವಾಗಿಯೂ ಅವನ ಕೈಯನ್ನು ಹಿಡಿದುಕೊಂಡೇ ಬಿಟ್ಟಳು.

ಅಶೋಕನು ಗಾಬರಿಗೊಂಡು ಒಂದು ಹೆಜ್ಜೆ ಹಿಂದಾದನು. ಒಮ್ಮೆಯೇ ಈ ಘಟನೆಯ ಮುಕ್ತಾಯಕ್ಕಾಗಿ ಎಂದನು "ಇಲ್ಲ, ನಾನು ಕೋಪಿಸುವುದಿಲ್ಲ."

"ಹಾಗಾದರೆ ಎಂದು ಬರುವಿರಿ?" ಮಾಯಾದೇವಿಯು ಕೈಯನ್ನುಬಿಟ್ಟು ಕೇಳಿದಳು.

"ಇದೇ ನಾಲ್ಕೈದು ದಿನಗಳಲ್ಲಿ"

"ಮುಂದಿನ ಮಂಗಳವಾರಕ್ಕೆ?"

"ಸರಿ. ಆದೀತು. ಬಂದೇ ಬರುತ್ತೇನೆ."

" ಹಾಗಾದರೆ ಅಂದು ಪ್ರಾತಃಕಾಲ ಎಂಟುಘಂಟೆಗೇ ಮೋಟಾರನ್ನು ಕಳಿಸುತ್ತೇನೆ. ತಾವು ಬೆಳಗಿನ ಉಪಹಾರವನ್ನು ಅಲ್ಲಿಯೇ ಮಾಡಬಹುದು. ಅನಂತರ ಚಿತ್ರಕೆಲಸದ ಆರಂಭ. "

ಈ ವಿಚಿತ್ರ ಸ್ತ್ರೀಯೊಂದಿಗೆ ಹೆಚ್ಚು ಹೊತ್ತಿನ ವರೆಗೆ ಕತ್ತಲೆಯಲ್ಲಿ ನಿಂತು ಕೊಂಡಿರುವದು ಸರಿಯಲ್ಲವೆಂದೆಣಿಸಿ, ಅಶೋಕನು ಕಾರಿನ ಹಾರ್ನನ್ನು ಬಾರಿಸಲು ಆರಂಭಿಸಿದನು. ಎಲ್ಲಿಂದಲೋ ಡ್ರೈವರನು ಕತ್ತಲೆಯಲ್ಲೇ ಉತ್ತರಿಸಿದನು.

" ಬಂದೆ ಹುಜೂರ್ " ಎಂದು.

" ಒಳ್ಳೇದು, ಬರುತ್ತೇನೆ. ನಮಸ್ತೆ ! " ಮಾಯಾದೇವಿಯು ಅಶೋಕ ನಿಗೆಂದಳು.

" ನಮಸ್ತೆ ! "

ಕೆಲವೇ ನಿಮಿಷಗಳಲ್ಲಿ ಆ ಮೋಟಾರು ಕಾರು ಕತ್ತಲೆಯಲ್ಲಿ ಕಾಣದಾ ಯಿತು. ಅಶೋಕನ ಒಂದು ದೊಡ್ಡ ಹೊರೆ ಇಳಿಯಿತು.

ಹನ್ನೊಂದು

ಆ ರಾತ್ರಿಯ ಉಪಹಾರಾನಂತರ ಮರಿಯಮಳ ಮನಃಶಾಂತಿಯು ಬಹಳ ವಾಗಿ ಕುಂದಿತ್ತು. ಆ ಧನಸಂಪನ್ನಳಾದ ಸುಂದರಿಯು ಅಶೋಕನನ್ನು ಹೊಂದುವ ದಕ್ಕಾಗಿ ಅವನಿಗೆ ಗಂಟುಬಿದ್ದುದನ್ನು ಕಂಡ ಮರಿಯಮಳ ಮನಸ್ಸು ತೀರ ತಿರುಗುಮುರುಗಾದಂತಾಯಿತು. ಅಶೋಕ ಠಾಕೂರನನ್ನು—ಇವಳ ಪ್ರೀತಿಯ ಅಶೋಕನನ್ನು, ಕಸಿದುಕೊಳ್ಳಲು ಇವಳೆದುರು ನಿಂತಿರುವ ಪ್ರತಿಸ್ಪರ್ಧಿಯಂತೆ ಆಗ ಮಾಯಾದೇವಿಯನ್ನು ಮರಿಯಮಳು ಪುನಃ ಮನದಲ್ಲೇ ಕಂಡಳು. ಅಶೋಕ ಠಾಕೂರನನ್ನು ತಾನು ಸಂಪೂರ್ಣ ಆಶಿಸುತ್ತಿದ್ದೇನೆಂಬುದು ಈ ದಿನ ಅವಳಿಗೆ ನಿಶ್ಚಯವಾಯಿತು.

ಮಾಯಾದೇವಿಯ ವಿಚಾರದಲ್ಲಿ ಮರಿಯಮಳ ಅಭಿಪ್ರಾಯವು ಚೆನ್ನಾಗಿ ರಲಿಲ್ಲ. ತನಗೆ ಪ್ರತಿಸ್ಪರ್ಧಿನಿಯಾಗಿ ನಿಂತಿದ್ದಾಳೆಂಬುದಕ್ಕಾಗಿ ಅಲ್ಲ, ಆದರೆ ಅವಳು ಅಶೋಕನನ್ನು ಅವಳ ಭೋಗವಿಲಾಸದ ಕೈಬೊಂಬೆಯಾಗಿ ಮಾಡ

ಬೇಕೆಂದಿದ್ದಾಳೆಂಬುದಕ್ಕಾಗಿ. ಮಾಯಾದೇವಿಯ ವಾಸನಾಯುಕ್ತ ಹೃದಯವು ಅಶೋಕನಿಂದ ಸಂಪೂರ್ಣ ಆನಂದವನ್ನು ಪಡೆದ ಮರುಕ್ಷಣದಲ್ಲೇ ಅವನನ್ನು ಜಗಿದು ಮುಗಿದ ಜೊಂಡನ್ನು ಉಗುಳುವಂತೆ ಮಾಡುತ್ತಾಳೆಂಬ ಭಯದಿಂದ.

ಆದರೆ ಆಕೆಯನ್ನು ಇವಳಾದರೂ ಹೇಗೆ ತಡೆದು ನಿಲ್ಲಿಸಲು ಸಾಧ್ಯ?

ಅಶೋಕನಿಗೆ ಮನಸ್ಸಿನಲ್ಲಿ ತಾನು ಮಾಯಾದೇವಿಯನ್ನು ಈರ್ಷ್ಯೆಯಿಂದ ಕಾಣುತ್ತೇನೆಂಬ ಭಾವನೆಯು ಮೂಡದಿದ್ದರೆ ಸಾಕು ಎಂದು ಮರಿಯಮಳು ನೆನೆಸಿದಳು. ಮರಿಯಮಳು ಸ್ವಾರ್ಥಕ್ಕಾಗಿ ಅವನ ಮನಸ್ಸನ್ನು ಕೆಡಿಸುವ ವಳಲ್ಲ. ಅವಳು ಎಲ್ಲವನ್ನೂ ಸಹಿಸಿಕೊಂಡಳು. ಆದರೆ ಅಶೋಕನೆದುರಿಗೆ ತನ್ನನ್ನು ತಾನು ಕೇವಲಪಡಿಸಿಕೊಳ್ಳಲಾರದಾದಳು.

ಅಶೋಕನು ಮಾಯಾದೇವಿಯು ತನ್ನ ಚಿತ್ರವನ್ನು ಬರೆಯಬೇಕೆಂದು ಪ್ರಾರ್ಥಿಸಿದಳೆಂದೂ, ಅದಕ್ಕಾಗಿಯವಳು ಇವನಿಗೆ ಒಂದು ಸಹಸ್ರ ರೂಪಾಯಿ ಗಳನ್ನಾದರೂ ಕೊಡಲು ಸಿದ್ಧಳಿದ್ದಾಳೆಂದೂ, ಹೇಳಿದಳೆಂಬುದನ್ನು ಮರಿಯಮ ಳಿಗೆ ತಿಳಿಸಿ, ಮುಂದಿನ ಮಂಗಳವಾರ ಅವಳ ಚಿತ್ರವನ್ನು ಬರೆಯಲು ತಾನು ಅಲ್ಲಿಗೆ ಹೋಗಬೇಕಾಗುವದೆಂದೂ, ಅಲ್ಲದೆ ಅಲ್ಲಿಯೇ ಬಿಡದೆ ನಾಲ್ಕೈದು ದಿನ ಗಳ ವರೆಗೆ ತಂಗಬೇಕಾಗಿ ಬರಬಹುದೆಂದೂ ತಿಳಿಸಿದನು.

ಮುಂದಕ್ಕೆ ಇದರಿಂದ ಖಂಡಿತವಾಗಿಯೂ ಕೆಡಕು ಇದೆ ಎಂಬುದು, ಈಗಾ ಗಲೇ ನಿಶ್ಚಯವಾಗಿರುವ ಕಾರ್ಯಕ್ರಮದ ವಿಚಾರದಲ್ಲಿ ಮರಿಯಮಳ ಅಭಿ ಪ್ರಾಯವಾಗಿತ್ತು. ಮಾಯಾದೇವಿಯು ಮಾಯಾಜಾಲವನ್ನು ಬೀಸುತ್ತಿ ದ್ದಾಳೆ. ಅಶೋಕನ ಮಹತ್ವಾಕಾಂಕ್ಷೆಗಳಿಗೆ ಮತ್ತು ಅವನ ಸಂಪಾದನೆಗೆ ಅಡ್ಡ ಬರಲು ಅವಳಿಗಾವ ಹಕ್ಕಿದೆ? ಮಾಯಾದೇವಿಯ ಕಲೋಪಾಸನೆಯ ಬೆನ್ನ ಹಿಂದೆಯೇ ಕಲಿಯ ಉಪಾಸನೆಯನ್ನು ಮಾಡುತ್ತಿದ್ದಾಳೆಂದು ಮರಿಯಮಳ ದೃಢನಂಬಿಕೆ. ಇದರ ಕಲ್ಪನಾ ಮಾತ್ರದಿಂದ ಅವಳ ಹೃದಯವು ಕಂಪನ ಗೊಳ್ಳುತ್ತಿತ್ತು.

ಅಶೋಕನು ಮಾಯಾದೇವಿಯ ಪ್ರಸ್ತಾವನೆಗಳೆಲ್ಲವುಗಳನ್ನೂ ವ್ಯಾವ ಹಾರಿಕ ದೃಷ್ಟಿಯಿಂದಲೇ ಕಂಡಿದ್ದಾನೆ. ಆದರೆ ಮಾಯಾದೇವಿಯಂಥವಳ ನಿಜ ವಾದ ಕುಟಿಲ ನೀತಿಯ ಅರಿವೇ ಇವನಿಗೆ ಇರಲಿಲ್ಲ ಎಂಬ ಮಾತಲ್ಲ. ಆ ಸಹಸ್ರ ರೂಪಾಯಿಗಳ ಮರ್ಮವನ್ನು ಆತನು ತಿಳಿದುಕೊಳ್ಳದೆ ಇಲ್ಲ. ಆದರೂ—

ಆ ರಾತ್ರಿ. ಪಾದ್ರೀಪುರದಲ್ಲಿ ಉಪಹಾರದ ದಿನದ ರಾತ್ರಿ, ಮಾಯಾದೇವಿಯು ಅಶೋಕನೊಂದಿಗೆ ವರ್ತಿಸಿದ ರೀತಿಯಿಂದ ಅವನ ಮನಸ್ಸು ತುಂಬಾ ಖೇದಗೊಂಡದ್ದಲ್ಲದೆ ಅವಳ ಮೇಲಿನ ಆ ಅರುಚಿಯ ಭಾವನೆ ಇನ್ನೂ ಹೆಚ್ಚಿತು. ಅವನು ಮತ್ತೆ ಮತ್ತೆ ಇಂತಹ ವಿಚಾರಗಳೆಲ್ಲ ತನ್ನ ಮನಸ್ಸನ್ನೇಕೆ ತೊಂದರೆ ಪಡಿಸುತ್ತಿವೆ ಎಂದು ಯೋಚಿಸಿದನು.

ಆ ಮಂಗಳವಾರ ದಿನ ಬೆಳಿಗ್ಗೆ ಅಶೋಕನು ಮೋಟಾರು ಕಾರಲ್ಲಿ ಬೈತೂಲಕ್ಕೆ ಹೊರಟಾಗ ಮರಿಯಮಳು ಪ್ರಶ್ನಿಸಿದಳು— "ಹಿಂದಿರುಗಿ ಬರುವದು ಯಾವಾಗ ? "

ಆಗ ಅವಳಲ್ಲಿ ನಿತ್ಯವೂ ಇರುವ ಸ್ವಾಭಾವಿಕ ಉಲ್ಲಾಸವು ಇದ್ದಂತೆ ತೋರಲಿಲ್ಲ. ಅವಳು ತನ್ನ ಭಾವನೆಗಳನ್ನು ಬಚ್ಚಿಡಲು ಪ್ರಯತ್ನಿಸುತ್ತಿದ್ದಂತೆ ಇತ್ತು

"ಮಧ್ಯಾಹ್ನಕ್ಕೆ ಬಂದುಬಿಡುತ್ತೇನೆ. ಏನು ಮರಿಯಮ್ ! ನಿನ್ನ ಮೈಲಿ ಚೆನ್ನಾಗಿಲ್ಲವೇ? ಮೋರೆಯು ಇಳಿದಂತಿದೆ. "

"ಇಲ್ಲ? ಇಲ್ಲ! ನಾನು ಎಂದಿನಂತೆಯೇ ಇದ್ದೇನೆ! ಹಿಂದಿರುಗಲು ವಿಳಂಬ ಮಾಡಲಾಗದು........ಊಟಕ್ಕೆ ನಿಮ್ಮನ್ನು ಎದುರು ನೋಡುತ್ತಲೇ ಇರುತ್ತೇನೆ. "

* * * *

"ನೀನು ನನ್ನನ್ನು ಕಾಯದಂತೆ ಸರಿಯಾದ ಸಮಯಕ್ಕೆ ಬಂದು ಸೇರುತ್ತೇನೆ. "

ಮಾಯಾದೇವಿಯು ಕಲಾಕಾರನ ಸ್ವಾಗತಕ್ಕಾಗಿ ತನ್ನ ಮನೆಯ ಸ್ಟುಡಿಯೋವನ್ನು ಸುಂದರವಾಗಿ ಅಲಂಕರಿಸಿದ್ದಳು.

"ಬನ್ನಿರಿ, ಈಗ ನೀವು ಸ್ಟೂಲಿನ ಮೇಲೆ ಕೂರಬೇಕು. ಅದಾವ ಪೋಜಿನಲ್ಲಿ ಚಿತ್ರವನ್ನಿಳಿಸಲು ಇಚ್ಛೆ ? " ಅಶೋಕನು ಮಾಯಾದೇವಿಯನ್ನು ಪ್ರಶ್ನಿಸಿದನು.

ಮಾಯಾದೇವಿಯು ರೇಶ್ಮೆಯ ಹಸುರಾದ ಹೊಳಪಿನ ಗೌನನ್ನು ಧರಿಸಿದ್ದಳು. ಅಶೋಕನ ಆದೇಶವನ್ನು ಕೇಳುತ್ತಲೇ ಆ ಗೌನನ್ನು ಬಿಚ್ಚಿದಳು. ಆಶ್ಚರ್ಯ ! ಆಗ ಅವಳ ವಕ್ಷಸ್ಥಳ ಮತ್ತು ಉರೋಭಾಗವು ವಸ್ತ್ರರಹಿತವಾಯಿತೆಂದು ಬೇರೆ ಹೇಳಬೇಕೆ ? ಅರ್ಧ ನಗ್ನಾವಸ್ಥೆಯ ರೂಪ, ಜೊತೆಗೆ ಬಿಚ್ಚಿದ.

ಆ ಕರ್ರಗಿನ ತಲೆಗೂದಲು ಬಲಭುಜವನ್ನು ಹಾದು ಎದೆಯ ಮೇಲೆ ಹರಡಿತ್ತು.

ಅಶೋಕನು ಅವಳ ಈ ನಿರ್ಲಜ್ಜೆಯ ಸ್ವರೂಪವನ್ನು ಕಂಡು ಸ್ತಬ್ಧನಾದನು. ಅಶೋಕನಿಗೆ ಮಾಯಾದೇವಿಯ ಕಣ್ಣುಗಳಲ್ಲಿ ಉದ್ರೇಕಗೊಂಡ ಉನ್ಮಾದ ಭಾವವನ್ನು ಕಂಡಂತಾಯಿತು. ಆಗ ಅವನು ಆಕೆಯನ್ನು ಪ್ರಶ್ನಿಸಿದನು—

" ಏನು? ನೀವು ಇದೇ ಪೋಜಿನಲ್ಲಿ ಚಿತ್ರ ಬರೆಸುವಿರಾ? "

"ಏಸಡ್ಡಿ? ಗ್ರೀಕ್ ದೇವತೆಗಳ ಚಿತ್ರಗಳು ಇದೇ ರೂಪದಲ್ಲಿರುವವಲ್ಲವೇ?"

" ಹೌದು " ಎಂದು ಅಶೋಕನು ಹಾಗೆಯೇ ಸುಮ್ಮನೆ ನಿಂತುಬಿಟ್ಟನು. ಮನಸ್ಸಿನಲ್ಲಿ ಸಂಕೋಚ ಮತ್ತು ಅಸ್ವಸ್ಥತೆಯ ಭಾವವು ಉತ್ಪನ್ನವಾಯಿತು.

ಮಾಯಾದೇವಿಯ ತೀಕ್ಷ್ಣ ಕಣ್ಣುಗಳು ಅಶೋಕನಲ್ಲಿ ಉಂಟಾದ ಭಾವನೆಯನ್ನು ಸ್ವಚ್ಛವಾಗಿ ಕಂಡವು. ಆಗ ಅವಳೆಂದಳು—

"ತಾವು ಚಿತ್ತ ಭ್ರಮಿತರಾದಿರಾ ಅಶೋಕ್ ಬಾಬೂ? ಮಾನವ ಶರೀರವನ್ನು ಯಾವ ರೀತಿಯಲ್ಲಿ ದೃಷ್ಟಿಸಿದರೂ, ಅಥವಾ ಸ್ಪರ್ಶಿಸಿದರೂ ಚಿತ್ರಕಾರ ಮತ್ತು ಡಾಕ್ಟರರುಗಳ ಮನಸ್ಸು ವಿಚಲಿತವಾಗಬಾರದಂತೆ. ಹಾಗೆ ಆಗುವದೂ ಇಲ್ಲವಂತೆ. ಆದರೆ ತಮ್ಮ ಮನಸ್ಸು...." ಎನ್ನುತ್ತ ಒಮ್ಮೆ ಅವಳ ಮಾತಿನ ಸರಣಿಯು ತುಸು ನಿಂತು ಮತ್ತೆ ಮುಂದರಿಯಿತು. " ಇದಕ್ಕೇನೇ ಡಾಕ್ಟರುಗಳನ್ನು ಒಂದು ರೀತಿಯ ವೈಜ್ಞಾನಿಕನೆಂದೂ, ಚಿತ್ರಕಾರರನ್ನು ಆರ್ಟಿಸ್ಟ್ ಎಂದೂ ಸಂಬೋಧಿಸುವುದು."

ಅಶೋಕನ ಮುಖವು ಲಜ್ಜೆಯಿಂದ ಸಪ್ಪಗಾಯಿತು. ಕೆನ್ನೆಗೆ ಅಪ್ಪಳಿಸಿದ ಏಟು ಬಿದ್ದಂತಾಯಿತು ಆತನಿಗೆ. ಆಗ ಮೋಹದ ಯಾವ ಸೂಕ್ಷ್ಮಭಾವವು ಅವನ ಮನಸ್ಸಿನಲ್ಲಿ ಎದ್ದಿತ್ತೊ ಅದು ಮಾಯವಾಗುತ್ತ ಬಂದಿತು. ಅವನ ಕಣ್ಣುಗಳ ಕಾಮುಕ ಭಾವವು ನಷ್ಟವಾಗಿ ಅವನ ದೃಷ್ಟಿಯಲ್ಲಿ ಕಲಾಸಕ್ತಿಯ ವಿಶುದ್ಧ ಆನಂದವು ಮಿಂಚಲಾರಂಭಿಸಿತು.

ಉಪಕರಣದ ಮೇಲೆ ಅಶೋಕನ ಕುಂಚವು ಓಡಲಾರಂಭಿಸಿತು. ಕೂಡಲೆ ಅವನು ತನ್ನ ಕಲೆಯ ಸಾಧನೆಯಲ್ಲಿ ತಲ್ಲೀನನಾದನು. ಮಾಯಾದೇವಿಯು ನಿಶ್ಚಲಳಾಗಿ ಮಂಡಿಸಿದ್ದಳು. ಅಶೋಕನು ವಿಚಲಿತನಾದುದನ್ನು ಕಂಡ ಅವಳು ಒಮ್ಮೆಗೆ ತುಂಬಾ ಸಂತೋಷಪಟ್ಟಳು. ಆದರೆ ಈಗ ಅವನು ಆತ್ಮಸಂಯಮ

ತೆಯ ಮೂರ್ತಿಯಾಗಿ ಕೆಲಸ ಮಾಡುತ್ತಿದ್ದನು. ಇದು ಇವಳಿಗೆ ಹಿಡಿಸಲಿಲ್ಲ. ಅಶೋಕನು ಒಮ್ಮೆ ಮಾಯಾದೇವಿಯತ್ತ ನೋಡುವನು, ಚಿತ್ರಿಸಲಾರಂಭಿಸುವನು. ಪುನಃ ನೋಡುವನು. ಪುನಃ ಬಣ್ಣ ಬಳೆಯುವನು………… ಈ ರೀತಿಯಾಗಿ ನಡೆಯುತ್ತಲೇ ಇತ್ತು.

ಬಳಲಿದವನಾದ ಅಶೋಕನು ಒಂದು ನಿಮಿಷ ಕಾಲ ತನ್ನ ತೂಲಿಕೆಯನ್ನು ಬಣ್ಣದ ಡಬ್ಬಿಯಲ್ಲಿಟ್ಟು ಚಿತ್ರದ ಗುರಿಯನ್ನು ನೋಡಲಾರಂಭಿಸಿದನು.

"ಇನ್ನೆಷ್ಟು ಹೊತ್ತು ಇದೇ ರೀತಿ ಕುಳಿತುಕೊಳ್ಳುವ ಶಿಕ್ಷೆಯನ್ನು ಕೊಡುತ್ತೀರಿ ? ಒಂದು ಮುಕ್ಕಾಲು ಘಂಟೆ ಮುಗಿದು ಹೋಯಿತು. ಕೂತು ಕೂತು ಸಾಕಾಯಿತು."

"ಆಂ ! ಅಷ್ಟು ಹೊತ್ತಾಯಿತೇ? ಇಲ್ಲ. ಆಗಿರಲಿಕ್ಕಿಲ್ಲ." ವಿಸ್ಮಯದಿಂದ ಅಶೋಕನೆಂದನು " ಏನು ಅರ್ಧ ಘಂಟೆಗಿಂತ ಹೆಚ್ಚಾಗಿರಲಾರದು. "

"ನಿಮಗೀಗ ಈ ಕಡೆಯ ಧ್ಯಾನವಾದರೂ ಇದ್ದರೆ ತಾನೆ. ಸ್ವಲ್ಪ ನೋಡಿ ಆ ಎದುರಿನ ಗಡಿಯಾರವನ್ನು."

ಅಶೋಕನು ಗೋಡೆಯ ಗಡಿಯಾರವನ್ನು ನೋಡಿದನು. ಪುನಃ ತನ್ನ ಕೈಗಡಿಯಾರವನ್ನು ನೋಡಿಕೊಂಡನು. ಮಾಯಾದೇವಿಯ ಹೇಳಿಕೆಯು ನಿಜವಾಗಿತ್ತು.

"ಹಾಗಾದರೆ ಈ ದಿನಕ್ಕೆ ಸಾಕು. ಈಗ ಇಲ್ಲಿಗೆ ಮುಗಿಸಿ, ನಾಳೆಗೆ ಪುನಃ ಆರಂಭಿಸುವ. ಇದನ್ನು ಇಲ್ಲಿಯೇ ಮುಚ್ಚಿಡುತ್ತೇನೆ."

"ನಾಳೆಗೆ ನಾನು ಈ ಪೋಸನ್ನು ಪುನಃ ಕೊಡಲಾರದವಳಾಗಿ ಚಿತ್ರವು ಕೆಟ್ಟು ಹೋದರೆ—? ಈಗ ಒಂದು ಕಪ್ ಕಾಫಿ ಕುಡಿಯುವ ವೇಳೆ ಕೊಟ್ಟರೆ ಸಾಕು. ಪುನಃ ಇದೇ ರೀತಿ ಒಂದೆರಡು ಘಂಟೆ ಕುಳಿತುಕೊಳ್ಳಬಲ್ಲೆ."

"ಬೇಕಾಗಿಲ್ಲ. ಎಲ್ಲಾ ಸ್ಥೂಲ ರೇಖೆಗಳ ಬಣ್ಣವನ್ನು ಮುಗಿಸಿಯಾಯಿತು. ಆದ್ದರಿಂದ ಎಲ್ಲಿಯೂ ಕೆಡುವ ಸಂಭವವೇ ಇಲ್ಲ."

"ನಾಳೆಗೆ ಸಂಪೂರ್ಣವಾದೀತೇ?"

"ಇದೇ ಪ್ರಕಾರವಾಗಿ ನಾಡಿದ್ದಿನ ತನಕ ಕುಳಿತುಕೊಳ್ಳಬೇಕಾಗಿ ಬರಬಹುದು. ಆನಂತರ ನಾನು ಅದನ್ನು ಫಾದರೀಪುರದ ಸ್ಟುಡಿಯೋದಲ್ಲಿಯೇ ಪೂರ್ಣ ಮಾಡುತ್ತೇನೆ…….. ನಂತರ ಪುನಃ ನಿಮ್ಮ ಪೋಸ್‌ನ ಅವಶ್ಯಕತೆ

ಇಲ್ಲ."

ಅಶೋಕನು ಫಾದರೀಪುರಕ್ಕೆ ಬಂದಾಗ ಮರಿಯಮಳು ಉಣ್ಣದೆ ಅವನ ದಾರಿಯನ್ನೇ ಕಾಯುತ್ತಿದ್ದಳು. ಅಶೋಕನು ಬರುತ್ತಲೇ ಇವಳಲ್ಲಿ ಊಟದ ವಿಷಯವಾಗಿ ಕೇಳುವನೆಂದೂ ಅನಂತರ ಅವರಿಬ್ಬರೂ ಊಟ ಮಾಡುವರೆಂದೂ ಮನಸ್ಸಲ್ಲೇ ಯೋಚಿಸಿ ಸಂತೋಷಪಡುತ್ತಿದ್ದಳು. ಆದರೆ ಅಶೋಕನು ಮರಿಯಮಳು ಮಧ್ಯಾಹ್ನದ ಊಟವನ್ನು ಮುಗಿಸಿರಬಹುದೆಂದೂ, ರಾತ್ರಿಯ ಊಟವನ್ನು ಇಬ್ಬರೊಟ್ಟಿಗೆ ಮಾಡುವುದೆಂದೂ ಎಣಿಸಿ, ಇವಳಲ್ಲಿ ಒಂದನ್ನೂ ಮಾತನಾಡದೆ ತನ್ನ ಭೋಜನವನ್ನು ತೀರಿಸಿದನು. ಅವನು ತನ್ನ ವಿಚಾರಗಳಲ್ಲಿಯೆ ತಲ್ಲೀನನಾಗಿದ್ದನು.

ಈ ಆಶಾಭಂಗವು ಮರಿಯಮಳಿಗೆ ತುಂಬಾ ಕಷ್ಟವನ್ನುಂಟು ಮಾಡಿತು.

ಎರಡನೆಯ ದಿನ ಅಶೋಕನು ಮಾಯಾದೇವಿಯ ಸ್ಟುಡಿಯೋಕ್ಕೆ ಹೋದವನು ಸಂಜೆ ಆರು ಘಂಟೆಗೆ ಹಿಂತಿರುಗಿದನು. ಮೂರನೆಯ ದಿನ ಬೆಳಿಗ್ಗೆ ಹೊರಟಾಗ "ರಾತ್ರಿಯ ಫಲಹಾರಕ್ಕೆ ನನ್ನ ನಿರೀಕ್ಷೆಯನ್ನು ಮಾಡುವುದು ಬೇಡ" ಎಂದು ಹೇಳಿ ಹೊರಟು ಹೋದನು.

ಅಂದು ಅವನ ಅಭಿಪ್ರಾಯದಂತೆ ಮಾಯಾದೇವಿಯ ಪೋಸಿಂಗ್ ಮುಗಿಯುವುದು, ಅದೇ ಕಾರಣವಾಗಿರಬಹುದು—ಮಾಯಾದೇವಿಯು ಆ ದಿನ ಅಶೋಕನಿಗೆ ತನ್ನಲ್ಲಿ ಫಲಹಾರದ ಬಗ್ಗೆ ಆಮಂತ್ರಣವನ್ನಿತ್ತಿದ್ದಳು.

ಅಶೋಕನ ಮನಸ್ಸು ಈದಿನ ಪ್ರಫುಲ್ಲಿತವಾಗಿದೆ. ಕಲಾಸೇವೆಯ ಆನಂದದಿಂದ ಅವನ ಹೃದಯವು ತುಂಬಿ ಹೋಗಿತ್ತು.

"ತಾವು ನನ್ನ ಚಿತ್ರವನ್ನು ಬರೆದು ನನ್ನನ್ನು ಅನಂತ ಅನುಗ್ರಹಿಸಿದಿರಿ" ವಿನೀತ ಭಾವದಿಂದ ಮಾಯಾದೇವಿ ಎಂದಳು. "ತಮ್ಮ ಏಕಾಗ್ರತೆಯ ಪ್ರಭಾವದಿಂದ ಅದು ಖಂಡಿತವಾಗಿಯೂ ಅಪೂರ್ವವಾದ ವಸ್ತುವೇ ಆಗುವುದೆಂದು ನನಗೆ ತೀವ್ರವಾದ ವಿಶ್ವಾಸವಿದೆ."

"ಇದರಲ್ಲಿ ಅನುಗ್ರಹವಾದರೂ ಏನಿದೆ? ಕೊನೆಯದಾಗಿ ಯೋಚಿಸಿ ನೋಡಿದರೆ ಇದು ಔದ್ಯೋಗಿಕ ಸಮ್ಮಂಧವೇ ಅಲ್ಲವೇ?"

"ತಾವೇಕೆ ಈ ರೀತಿಯಾಗಿ ಅನ್ನುತ್ತೀರಿ ಅಶೋಕ ಬಾಬೂ? ಮಾಯಾದೇವಿಯು ಕೃತ್ರಿಮ ಕ್ರೋಧದೊಂದಿಗೆಂದಳು. ನಾನಾದರೊ ನಿಮ್ಮೊಂದಿಗೆ

ಎಂದೂ ಔದ್ಯೋಗಿಕ ಸಮ್ಮಂಧವನ್ನಿಟ್ಟುಕೊಂಡಿಲ್ಲ. ನಾನು ಎಂದೆಂದೂ ನಿಮ್ಮ ಪ್ರೀತಿಯನ್ನು ಆಶಿಸುವವಳು, ಅದೇ ಆಸೆಯಿಂದ ಮೊದಲಿನಿಂದಲೂ ನಿಮ್ಮಲ್ಲಿ ಸಂಬಂಧವನ್ನು ಬೆಳೆಸುತ್ತ ಬಂದಿದ್ದೇನೆ. ನೀವಾದರೊ ಇದನ್ನು ಒಪ್ಪುವುದಿಲ್ಲವೇಕೆ ?"

"ಒಪ್ಪುತ್ತೇನೆ" ಅಶೋಕನು ಉತ್ತರವಿತ್ತನು. "ಅದಕ್ಕಾಗಿ ನಿಮಗೆ ನಾನು ಹೃತ್ಪೂರ್ವಕ ಕೃತಜ್ಞನಾಗಿದ್ದೇನೆ. ನನ್ನ ಕಲೆಗೆ ತಕ್ಕ ರೀತಿಯಲ್ಲಿ ಪ್ರೋತ್ಸಾಹವನ್ನಿತ್ತಿದ್ದೀರೆಂದೂ ಒಪ್ಪುತ್ತೇನೆ." ಈ ನಿಜ ಅಭಿಪ್ರಾಯವನ್ನು ಅಶೋಕನು ಸ್ವಚ್ಛ ಮನಸ್ಸಿಂದಲೇ ಅಂದಿದ್ದನು. ಇದರಿಂದ ಮಾಯಾದೇವಿಗೆ ಸಂತೋಷವೇನೋ ಆಯಿತು. ಆದರೆ ಸಮಾಧಾನವಾಗಲಿಲ್ಲ.

"ನೀವು ನನಗೆ ಸಂದರ್ಭವನ್ನಿತ್ತರೆ ನಾನು ನಿಮಗಾಗಿ ಎಲ್ಲವನ್ನೂ ಮಾಡಬಲ್ಲೆ" ಮಾಯಾದೇವಿಯು ಆವೇಶದೊಂದಿಗೆ ಎಂದಳು. "ಎಂದು ನಿಮ್ಮನ್ನು ನಾನು ಕಂಡೆನೊ ಅಂದಿನಿಂದ ನನ್ನ ಮನಸ್ಸು ಒಂದು ಬಗೆಯ ವಿಚಿತ್ರವಾದ ಅಶಾಂತಿಯಿಂದ ಒದ್ದಾಡುತ್ತಿದೆ." ಅವಳು ಒಂದು ದೀರ್ಘವಾದ ಉಸಿರನ್ನೆಳೆದಳು. "ನನ್ನ ಜೀವನದಲ್ಲಿಯ ನೀರಸತೆಯನ್ನು ತಾವೇ ದೂರಮಾಡಬಲ್ಲಿರಿ ಅಶೋಕ್ ಬಾಬೂ ! ತಾವು ಸ್ವೀಕರಿಸುವುದೇ ಆದರೆ ನನ್ನ ಸರ್ವಸ್ವವನ್ನು ತಮ್ಮ ಚರಣಗಳಲ್ಲಿ ಅರ್ಪಿಸಲು ಸಿದ್ಧಳಿದ್ದೇನೆ."

ಆಗ ಅಶೋಕನಿಗೆ ಒಂದೂ ತಿಳಿಯದಾಯಿತು. ಈ ಸ್ಪಷ್ಟವಾದ ಪ್ರಶ್ನೆಗೆ ಎಂತು ಉತ್ತರಿಸುವುದೆಂದು ಯೋಚಿಸಿದನು. ಕೊನೆಗೆ ಕೆಳಮುಖ ಮಾಡಿ ಹೇಳಲಾರಂಭಿಸಿದನು:

"ನಿಮ್ಮ ಸೇವೆಯನ್ನು ಮಾಡುವ ಶಕ್ತಿಯು ನನ್ನಲ್ಲಿಲ್ಲ ಮಾಯಾದೇವಿ. ನಾನು ನನ್ನ ಕಲೆ ಎಂಬ ಚಿಕ್ಕ ಧ್ಯೇಯದ ಹಿಂದೆ ಹುಚ್ಚನಾಗಿದ್ದೇನೆ. ಅದಕ್ಕಾಗಿಯೇ ನನ್ನ ಸೇವೆಯನ್ನು ಸಲ್ಲಿಸಲು ಅವಕಾಶ ಕೊಡಿ. ಯಾವನಾದರೊಬ್ಬ ಯೋಗ್ಯ ಪುರುಷನೊಂದಿಗೆ ನೀವೇಕೆ ವಿವಾಹವಾಗಬಾರದು? ನಿಮ್ಮ ಜೀವನದಲ್ಲಿ ಆನಂದ ಮತ್ತು ಉಲ್ಲಾಸವು ಉಂಟಾಗುವ ಸಂಭವವಿದೆ."

ಅಶೋಕ ಠಾಕೂರನು ಈ ಮಾತುಗಳನ್ನು ಅತ್ಯಂತ ಶಾಂತನಾಗಿ ಹೇಳಿದನು. ಆದರೆ ಇದರ ಪರಿಣಾಮವು ಮಾಯಾದೇವಿಯ ಹೃದಯ ಶಾಂತಿಯನ್ನು ಭಂಗಗೊಳಿಸಿತು.

“ವಿವಾಹ ? ವಿವಾಹ ಮಾಡಿಕೊಳ್ಳಲೇ.......... ನಾನು ? ಒಂದು ವಿವಾಹವನ್ನಾದರೂ ಮಾಡಿಕೊಂಡಿದ್ದೇನೆ. ಆದರೆ ಅದರ ನೆನಪು ಕೂಡ ಸುಖಕರವಾಗಿಲ್ಲ. ಆ ವಿಚಾರದಲ್ಲಿ ಯಾವ ವ್ಯಕ್ತಿಯ ಕಡೆಗೆ ಮನಸ್ಸಿಲ್ಲವೋ ಅವನೊಂದಿಗೆ ಸಂಸಾರ ಸಾಗಿಸುವಂತಹ ದುಃಖದ ಪ್ರಸಂಗದಂತಹ ಪ್ರಸಂಗವು ಬೇರಾವುದೂ ಇರಲಾರದು ಎಂಬುದು ಮಾತ್ರ ನನ್ನ ನೆನಪಿನಲ್ಲಿದೆ.”

ಅವಳ ಕಠೋರವಾದ ಅನುಭವದ ಕಠಿಣ ಶಬ್ದಗಳು ಸಂಪೂರ್ಣ ಸತ್ಯವಾಗಿರಲಿಲ್ಲವಾದರೂ ಪೂರ್ಣ ಅಸತ್ಯವೂ ಆಗಿರಲಿಲ್ಲ ಎಂಬುದನ್ನು ಅಶೋಕನು ತಿಳಿದುಕೊಂಡನು. ಇದೇ ಕಾರಣದಿಂದ ಅವಳ ಮೇಲಿದ್ದ ಆ ಹೇಯಭಾವವು ಈಗ ಕಡಿಮೆಯಾಗಿ, ಈಗ ಆ ಸ್ಥಳದಲ್ಲಿ ತುಸು ಸಹಾನುಭೂತಿಯು ಜಾಗೃತವಾಯಿತು.

“ಹೌದು. ಅಂತಹ ವಿವಾಹವು ದುಃಖಪ್ರದವಾಗಿರುತ್ತದೆ. ಈಗಲಾದರೊ ನೀವು ಸ್ವತಂತ್ರರಾಗಿದ್ದೀರಿ. ಯಾರಲ್ಲಿ ನಿಮ್ಮ ಹೃದಯವು ಒಂದುಗೂಡುವುದೋ ಅವನೊಡನೆ ನೀವು ಸಂಸಾರ ಮಾಡಿಕೊಂಡು ಈಗಲೂ ಸುಖಿಯಾಗಿರಬಹುದು.”

“ಹೃದಯವು ಒಂದುಗೂಡುವುದು !.... ನಾನೆನ್ನುತ್ತೇನೆ, ನನ್ನ ಹೃದಯವು ತಮ್ಮ ಹೃದಯದೊಡನೆಯೇ ಒಂದುಗೂಡುತ್ತದೆಂದು. ತಾವು ನನ್ನನ್ನು ವರಿಸಲು ಸಿದ್ಧರಾಗಿದ್ದೀರೇನು ? ಹೇಳಿರಿ ?”

“ನಾನು........ನಾನು........ನಾನೇ ?” ಅಶೋಕನು ತಡವರಿಸುತ್ತ ಹೇಳಿದನು. “ನಾನು ಮೊದಲೇ ಹೇಳಿ ಮುಗಿಸಲಿಲ್ಲವೇ ? ಈ ವಿಚಾರದಲ್ಲಿ ಮಾತ್ರ ನಾನು ಅಸಮರ್ಥನೆಂದು. ನನ್ನ ಮಾರ್ಗದಲ್ಲಿ ಯಾರ ಆತಂಕವೂ ಇರಬಾರದು.”

“ಹಾಗಿದ್ದರೆ ತಮ್ಮ ಈ ವ್ಯರ್ಥವಾದ ಸಹಾನುಭೂತಿ ಮತ್ತು ಸಲಹೆಗಳಿಂದ ಏನು ಪ್ರಯೋಜನ ? ಅವುಗಳಿಗೆ ಬೆಲೆಯಾದರೂ ಇದೆಯೆ ? ಒಬ್ಬ ನಾರಿಯ ‘ಹಾರ್ಟ್’ನ್ನು ಗುರುತಿಸಲಾರದ ತಾವು ಆರ್ಟನ್ನಾದರೂ ಏನು ಮಾಡಬಲ್ಲಿರಿ ? ನನ್ನ ಮೇಲಿನ ಲೋಕಾಪವಾದದ ಮಾತುಗಳಿಂದ ನನ್ನನ್ನು ನೀವು ಹೇಯ ಭಾವದಿಂದ ಕಾಣುತ್ತೀರೆಂದು ಬಲ್ಲೆ. ಅವು ಪೂರ್ಣ ಸುಳ್ಳೆಂದೂ ನಾನು ಹೇಳಲಾರೆ. ಯೌವನವೆಂಬ ಅಂಗಳದಲ್ಲಿ ಹೆಜ್ಜೆ ಇಡುತ್ತಲೇ ವಿವಾಹ

ವೇನೋ ಆಯಿತು. ಆದರೆ ಎಂಥವನೊಂದಿಗೆ ಬಲ್ಲಿರಾ? ಅಮೂಲ್ಯ ಧನದ ದರ್ಪದಿಂದ ಕೊಬ್ಬಿ, ಭೋಗವಿಲಾಸದಲ್ಲಿ ಮುಳುಗಿ, ತನ್ನ ಶರೀರ ಮತ್ತು ಆತ್ಮ ಇವೆರಡನ್ನು ಇತರರಿಗೆ ಮಾರಿದಾತನೊಂದಿಗೆ. ಅವನು ಕೊನೆಯ ತನಕವೂ ನನ್ನನ್ನು ಭೋಗದ ಬೊಂಬೆ ಎಂದೇ ತಿಳಿದನೇ ವಿನಹ ನಾನು ಅವನ ಗೃಹ ಲಕ್ಷ್ಮಿ ಎಂದೆಣಿಸಲಿಲ್ಲ. ವೈವಾಹಿಕ ಜೀವನದ ವಿಚಾರದಲ್ಲಿ ನನ್ನ ಎಂತೆಂತಹ ಎಷ್ಟೊಂದು ಆಸೆಗಳಿದ್ದವು. ಅವುಗಳಿಗಾಗಿ ನಾನು ಎಲ್ಲವನ್ನೂ ತ್ಯಾಗಮಾಡಲು ಸಿದ್ಧಳಿದ್ದೆ. ಆದರೆ ಆ ಎಲ್ಲ ಸುಖಸ್ವಪ್ನಗಳೂ ಗಳಿಗೆಯೊಳಗೆ ಅಳಿದವು. ನನ್ನ ಸಂಬಂಧವು ಒಬ್ಬ ಪ್ರೇಮಿಯೊಡನಲ್ಲ, ಒಂದು ಪಶುವಿನೊಂದಿಗಾಯಿತೆಂದು ತಿಳಿದೆ. ನನ್ನಲ್ಲಿ ಅವನ ಪ್ರತಿಯಾಗಿ ಘೋರವಾದ ಹೇಯಭಾವವು ದಿನೇದಿನೇ ಹೆಚ್ಚುತ್ತ ಬಂದಿತು. ಎರಡು ವರ್ಷಗಳ ಮೇಲೆ ಅವನ ಆಯುಷ್ಯವೂ ಆಗಿ ಹೋಯಿತು. ಅವನು ಇಹಲೋಕ ಯಾತ್ರೆಯನ್ನು ಮುಗಿಸಿದನು. ಅದು ನನಗೆ ಒಂದು ರೀತಿಯಲ್ಲಿ ಒಳಿತೇ ಆಯಿತು. ಶರೀರ ಮತ್ತು ಹೃದಯ ದಾಹವು ದಿನದಿನಕ್ಕೆ ಹೆಚ್ಚುತ್ತ ಹೋಗುತ್ತಿತ್ತು. ಸಂಪತ್ತು ಮತ್ತು ಸುಖಸಾಧನೆಗಳಿಗೇನೂ ಕೊರತೆ ಇರಲಿಲ್ಲ. ಆದರೂ ಎಷ್ಟು ದಿನಗಳ ತನಕ ನನ್ನನ್ನು ನಾನು ತಡೆಯಬಲ್ಲೆ? ನನ್ನ ಸುತ್ತುಮುತ್ತಲೂ ಭ್ರಮರಗಳು ಹಾರಾಡಲಾರಂಭಿಸಿದವು. ನಾನೂ ಜಾಲದಲ್ಲಿ ಬಿದ್ದೆ. ಆದರೆ ಅವರಲ್ಲಿ ಒಬ್ಬನಾದರೂ ನನ್ನ ಇಳಿದುಹೋದ ಹೃದಯ ಮತ್ತು ಆತ್ಮಗಳನ್ನು ಮೇಲ್ಮಟ್ಟಕ್ಕೆ ತರಲು ಯತ್ನಿಸುವವನೆಂದು ನನಗೆ ಅನಿಸಲಿಲ್ಲ. ಪ್ರತಿಯೊಬ್ಬನೂ ನನ್ನ ಶರೀರ ಮತ್ತು ಧನದ ಮೇಲೆ ದೃಷ್ಟಿಯನ್ನಿಟ್ಟುಕೊಂಡಿದ್ದರು. ನಾನು ನನ್ನ ಜೀವನವು ಸಾಕಷ್ಟು ಅಪವಿತ್ರವಾದದ್ದೆಂದು ಒಪ್ಪುತ್ತೇನೆ. ಆದರೆ ನಾನೇನು ಮಾಡಲಿ? ಇಂದಿಗೆ ನನ್ನ ವಯಸ್ಸು ಮೂವತ್ತೈದು. ಹಾಗೆಯೇ ನನ್ನ ಹೃದಯದಾಹವೂ ಬೆಳೆದುಕೊಂಡಿದೆ. ಮೊದಲು ನಾನು ಕೆಟ್ಟವಳಾಗಿರಲಿಲ್ಲ. ಆದರೆ ಪರಿಸ್ಥಿತಿ ಮತ್ತು ನನ್ನ ಧನರಾಶಿಯು ನನ್ನನ್ನು ಕೆಟ್ಟವಳನ್ನಾಗಿ ಮಾಡಿತು. ಸ್ತ್ರೀಯು ಪ್ರೇಮಕ್ಕಾಗಿ ತನ್ನ ಎಲ್ಲವನ್ನೂ ತ್ಯಜಿಸಲು ಸಿದ್ಧಳಿರುತ್ತಾಳೆಂಬುವನ್ನು ನಾನು ಬಲ್ಲೆ. ಆದರೆ ಆ ಅಮೂಲ್ಯ ಪ್ರೇಮವು ನನಗೆ ಇದುವರೆಗೂ ಸಿಗಲೇ ಇಲ್ಲ. ಹೀಗಿರುವಾಗ ನಾನು ನನ್ನ ಸಂಪತ್ತಿಯನ್ನು ಕಳೆದುಕೊಂಡೆನೆಂದರೆ ಆಗ ನನ್ನ ಕಡೆಗೆ ಒಂದು ನಾಯಿಯೂ ಕೂಡ ಮುಖ ತಿರುಗಿಸಿ ನೋಡಲಾರದೆಂದು ಇಂದಿನ

ಸಮಾಜ ಸ್ಥಿತಿಯು ಸಾರಿ ಹೇಳುತ್ತಿದೆ. ನನ್ನ ಹೃದಯವನ್ನು ಪ್ರಾಯಶಃ ನೀವಾದರೂ ಅರಿತುಕೊಳ್ಳಬಹುದೆಂದು ಇಷ್ಟೆಲ್ಲ ನಿಮ್ಮೊಡನೆ ಹೇಳುತ್ತಿದ್ದೇನೆ. ಲೋಕವೇ ನನ್ನನ್ನು ಅಪವಾದದ ಕೋಶವನ್ನಾಗಿ ಮಾಡಿದೆ. ಅಂತಹ ಸಂದರ್ಭದಲ್ಲಿ ನಾನು ಹೃತ್ಪೂರ್ವಕವಾಗಿ ಮನ್ನಣೆ ಕೊಡುತ್ತಿರುವ ಒಬ್ಬನು ನನ್ನನ್ನು ಉಚಿತ ರೀತಿಯಿಂದ ಅರಿತುಕೊಂಡನೆಂದರೆ ಸಾಲದೇ? ಅದೇ ನನ್ನ ಮನಸ್ಸಿಗೆ ತುಂಬಾ ಸಂತೋಷವನ್ನುಂಟು ಮಾಡಲು ಯಥೇಷ್ಟ ಪರ್ಯಾಪ್ತವಾಗಬಹುದು."

ಮಾಯಾದೇವಿಯ ಚಕ್ರಬಂಧದಂತಹ ಜೀವನದೆಡೆಗೆ ಅಶೋಕನು ಈ ವರೆಗೂ ಯೋಚಿಸಿದುದೇ ಇಲ್ಲ. ಲಜ್ಜಾರಹಿತಳಾದ ವಿಚಿತ್ರ ರಮಣಿಯ ಜೀವನದಲ್ಲೂ ಸಹಾನುಭೂತಿ ಮತ್ತು ಕರುಣೆಗೆ ಪಾತ್ರವಾಗುವಂತಹ ಕೆಲವು ವಿಚಾರಗಳಿವೆ. ಆದರೆ ಅವನೇನು ಮಾಡಬಲ್ಲನು? ಅವನು ಪಶ್ಚಾತ್ತಾಪವನ್ನು ಮಾತ್ರ ಕೋರಿಯಾನು. ಇನ್ನಾವ ರೀತಿಯ ಭಾವವೂ ಅವನಲ್ಲಿ ಜಾಗೃತವಾಗಲಿಲ್ಲ.

"ಆದರೆ ನೀವು ಇಚ್ಛಿಸುತ್ತಿದ್ದರೆ ಆ ದಾರಿಯನ್ನು ಬಿಡಲಾಗುತ್ತಿರಲಿಲ್ಲವೆ? ನೀವು ಭೋಗಿಸಿದುದು ಸಫಲವಾಗುತ್ತಿದ್ದರೆ ನೀವಾರನ್ನು ಕೆಡಿಸುತ್ತಿದ್ದಿರಿ?"

"ನಾನು ಯಾರ ಒಳ್ಳೆಯದನ್ನೋ ಕೆಟ್ಟದ್ದನ್ನೋ ನೋಡುವುದಿಲ್ಲ." ಮಾಯಾದೇವಿಯು ಚಟ್ಟೆಂದು ಉತ್ತರವಿತ್ತಳು. ನಾನು ಸಮಾಜದ ಮೇಲಿನ ಸೇಡನ್ನು ತೀರಿಸಲು ಇಚ್ಛಿಸುತ್ತೇನೆ. ಬಂಗಾರದ ಗಟ್ಟಿಗಾಗಿ ಯೋಗ್ಯರು ಕೂಡ ತಮ್ಮ ಎಲ್ಲ ನೈತಿಕ ಕಲೆಗಳಿಗೂ ತಿಲಾಂಜಲಿಯನ್ನೀಯುತ್ತಾರೆ. ಅಂತಹರ ಪತನವನ್ನು ಕಂಡು ನಾನು ಸಂತೋಷಪಡಲು ಆಶಿಸುತ್ತೇನೆ."

"ಆದರೆ ಹೇಗೆ ಸಮಾಜದ ಮೇಲಿನ ಸೇಡನ್ನು ತೀರಿಸಿಕೊಳ್ಳುವಿರೋ? ನಾವು ಮಾಡಿದ ಪಾಪಗಳಿಗೆ ಸಮಾಜವು ಎಂದೂ ಹೊಣೆಯಲ್ಲ. ಆದ್ದರಿಂದ ಅದನ್ನು ದೂಷಿಸುವುದೂ ಸರಿಯಲ್ಲ. ಹೀಗೆ ಹೇಳಿದ ಮಾತ್ರಕ್ಕೆ ಸೇಡುತೀರಿಸಿಕೊಳ್ಳುವ ಅಧಿಕಾರವೂ ಸಿಗುವುದಿಲ್ಲ ಮಾಯಾದೇವಿ. ಅಲ್ಲದೆ ಯಾವ ಸಮಾಜದ ಮುಂದೆ ತಾನಾಗಿ ಪತಿತನಾದವನೂ ಇಂದಿನ ವರೆಗೆ ಅದರ ಸೇಡನ್ನು ತೀರಿಸಿಕೊಂಡಿಲ್ಲ. ಎಂದಿನ ತನಕ ಸಮಾಜದಲ್ಲಿ ಘೋರ ಕ್ರಾಂತಿಯಾಗುವುದಿಲ್ಲವೋ ಅದುವರೆಗೆ ವ್ಯಕ್ತಿಯೇ ತನ್ನಲ್ಲಿ ತಾನು ಕ್ರಾಂತಿಯನ್ನುಂಟು ಮಾಡಿ

ಕೊಳ್ಳಬೇಕಾಗುತ್ತದೆ. ನಾವು ನಮ್ಮಲ್ಲಿರುವ ದೋಷಗಳನ್ನೆಂದೂ ನೋಡುವುದಿಲ್ಲ. ಏಕೆಂದರೆ ಅವು ನಮಗೇನೇ ತುಂಬ ಅಸಹ್ಯವಾಗಿ ಕಾಣುತ್ತವೆ. ಆದರೆ ಯಾವಾಗಲೂ ದೀಪದಡಿಯಲ್ಲಿ ಕತ್ತಲೆಯೇ ಮಾಯಾದೇವೀ. ನನ್ನ ಸ್ಪಷ್ಟವಾದ ಈ ಹೇಳಿಕೆಗೆ ಕ್ಷಮಿಸಬೇಕು. ಮನುಷ್ಯ ತನ್ನಿಂದಲೇ ತಾನು ಗುಣವಂತನಾಗಲೀ, ದುರ್ಗುಣಿಯಾಗಲೀ ಆಗುತ್ತಾನೆ. ಗುಣವಂತನಾದರೆ ಲೋಕವು ಅವನನ್ನು ಹೇಗೆ ಹೊಗಳುತ್ತದೋ ಅದೇ ರೀತಿ ದುರ್ಗುಣನಾದರೆ ತೆಗಳಲೂ ಅದಕ್ಕೆ ಸರ್ವಸಿದ್ಧವಾದ ಹಕ್ಕಿಲ್ಲವೇ ?"

"ತಾವು ವಿರೋಧವಾಗಿ ವಾದಿಸಬೇಡಿ ಅಶೋಕಬಾಬೂ" ಮಾಯಾದೇವಿಯು ನಮ್ರತೆಯಿಂದ ಅಂದಳು "ನಾನು ಸಹಿಸಲಾರೆ."

"ಇಲ್ಲ, ಇಲ್ಲ. ನಾನು ನಿಮ್ಮನ್ನು ವಿರೋಧಿಸಿ ವಾದಿಸಿಲ್ಲ." ಅಶೋಕನು ಕೂಡಲೇ ಉತ್ತರವಿತ್ತನು. "ನಾನೂ ದೋಷಯುಕ್ತನಾದ ಮಾನವನೇ. ನಾನಾದರೂ ಯಾರ ನ್ಯಾಯಾನ್ಯಾಯಗಳನ್ನು ವಿಮರ್ಶಿಸಲು ಸಾಧ್ಯ ?" ಸ್ನೇಹದಿಂದ ದ್ರವಿತನಾಗಿ ತನ್ನ ಕೈಯನ್ನು ಕೋಮಲವಾದ ಮಾಯಾದೇವಿಯ ಭುಜದ ಮೇಲಾಡಿಸಿದನು.

ಈ ಮೃದುಸ್ಪರ್ಶದಿಂದ ಮಾಯಾದೇವಿಯ ಹೃದಯದಲ್ಲುಂಟಾದ ಬಿರುಗಾಳಿಯ ವೇಗವು ಶಾಂತವಾಯಿತು, ಅವಳೂ ಅತಿ ಸ್ನೇಹದಿಂದ ಹುಚ್ಚಳಂತಾಗಿ ಅಶೋಕನನ್ನೇ ನೋಡಲಾರಂಭಿಸಿದಳು.

ರಾತ್ರಿಯು ಹೆಚ್ಚುತ್ತಲೇ ಇತ್ತು. ಅಶೋಕನು ಬಂಗಲೆಗೆ ಹಿಂದಿರುಗುವುದಕ್ಕಾಗಿ ಎದ್ದುನಿಂತನು. ಈಗ ಮಾಯಾದೇವಿಯ ವಿಚಾರದಲ್ಲಿ ಇವನ ಭಾವನೆಗಳು ಮೃದುವಾಗಿದ್ದವು. ಇದು ಮಾಯಾದೇವಿಗೂ ತಿಳಿಯಿತು. ಭೋಜನಕ್ಕಾಗಿಯೇ ಇದ್ದ ಮೇಜುಗಳ ಹತ್ತಿರದ ಆಸನದಲ್ಲಿ ಅಶೋಕನೊಂದಿಗೆ ಕುಳಿತುಕೊಳ್ಳಲು ಇವಳೂ ಬಂದಳು. ದೀಪದ ಸೌಮ್ಯ ಪ್ರಕಾಶವು ತುಸು ಮಂಕಾಗಿತ್ತು. ಅಶೋಕನ ಅತಿ ಸಮೀಪಕ್ಕೆ ಬಂದ ಮಾಯಾದೇವಿಯು ಅವನ ಎರಡೂ ಕೈಗಳನ್ನು ಹಿಡಿದು ಪ್ರೇಮದ ನುಡಿಯಲ್ಲಿ ಹೇಳಿದಳು.

"ತಾವು ನನ್ನನ್ನು ದೂಷಣೆಯ ದೃಷ್ಟಿಯಿಂದ ಕಾಣುವುದಿಲ್ಲ ತಾನೆ?"

"ಇಲ್ಲ" ಅಶೋಕನು ತನ್ನ ಕೈಗಳನ್ನು ಹಿಂದಕ್ಕೆಳೆದುಕೊಳ್ಳಲಿಲ್ಲ.

"ತಮ್ಮ ಸ್ಪರ್ಶವು ನನ್ನ ಈ ಉನ್ಮಾದ ಹೊಂದಿದ ಚಿತ್ತಕ್ಕೆ ತುಂಬ ಶಾಂತ

ತೆಯನ್ನಿತ್ತಿವೆ ಅಶೋಕ್ ಬಾಬೂ. ನಾನು ಹೃತ್ಪೂರ್ವಕವಾಗಿ ಮಾಡಿದ ಪೂಜೆಯನ್ನು ತಾವು ಸ್ವೀಕರಿಸಲಿಲ್ಲ. ಆದರೆ ದುಃಖಿನಿಯ ದುಃಖವನ್ನು ಉಪಶಮನಗೊಳಿಸಲಾರಿರೆ ?"

ಅಶೋಕನು ಒಂದೂ ತಿಳಿಯದವನಾದನು.

"ಏನು ತಾವು ನನಗೆ ಒಂದು ಬಾರಿಯಾದರೂ ತಮ್ಮ ಶೀತಲವಾದ ಬಾಹುಪಾಶಗಳ ಬಂಧನವನ್ನೀಯಲಾರಿರೇ ?" ಅಶೋಕನು ಇದಕ್ಕೆ ಉತ್ತರವನ್ನೀಯುವ ಮೊದಲೇ ಅವಳು ತನ್ನ ಎರಡು ಕೈಗಳನ್ನು ಅಶೋಕನ ಕತ್ತಿಗೆ ಬಿಗಿದು ಬಿಟ್ಟಳು.

ಮಾಯಾದೇವಿಯ ಕೇಶಪಾಶಗಳಿಗೆ ಹಾಕಿದ್ದ ಉನ್ಮಾದಕ ಸುಗಂಧವು ಅಶೋಕನನ್ನು ಪುಲಕಿತನನ್ನಾಗಿ ಮಾಡಿತು. ಒಂದು ಘಳಿಗೆ ಅಶೋಕನು ಮೂಢನಾದನು. ಅನಂತರ ಅವನು ಅವಳನ್ನು ಹತ್ತಿರಕ್ಕೆಳೆದುಕೊಂಡನು. ಆಗ ಮಾಯಾದೇವಿಯು ಇದರಿಂದ ಉತ್ತೇಜನವನ್ನು ಪಡೆದುಕೊಂಡು ತನ್ನ ಮೊಗವನ್ನು ಮೇಲಕ್ಕೆತ್ತಿದಳು. ಈ ಬಾರಿ ಅಶೋಕನೂ ತನ್ನಲ್ಲುಂಟಾದ ಆವೇಗವನ್ನು ತಡೆಯಲಾರದಾದ. ಆಗ ಅವಳ ತುಟಗಳ ಮೃದುಸ್ಪರ್ಶವೂ ಕೂಡ ಇವನ ಕೆನ್ನೆಗಳಿಗೆ ರುಚಿ ಎನಿಸಿತು. ಮಾಯಾದೇವಿಯು ಸುಖದಲ್ಲಿ ತನ್ನ ಕಣ್ಣುಗಳನ್ನು ಮುಚ್ಚಿಕೊಂಡಳು. ಉನ್ಮಾದಕ ಮತ್ತು ಮೋಹಕವಾದ ಆ ವಾತಾವರಣವು ಅಶೋಕನ ಶರೀರವನ್ನು ನಡುಗಿಸಲಾರಂಭಿಸಿತು. ಅರ್ಧ ನಿಮಿಷದೊಳಗೆ ಅಶೋಕನು ಮೋಹಶಯ್ಯೆಯಿಂದ ಎಚ್ಚೆತ್ತು, ಮಾಯಾದೇವಿಯನ್ನು ಒಂದೇ ಭರಕ್ಕೆ ಹಿಂದೆ ತಳ್ಳಿ ಅತ್ಯುಗ್ರ ಸ್ವರೂಪನಾಗಿ ವೇಗದೊಂದಿಗೆ ಹೊರಗಿನ ಪೋರ್ಟಿಕೆಗೆ ಬಂದನು. ಹೊರಗೆ ಮೋಟಾರು ನಿಂತಿದ್ದಿತು. ಅದರಲ್ಲಿ ಕುಳಿತು ಹೇಳಿದನು "ಡ್ರೈವರ್ ಸ್ವಲ್ಪ ವೇಗವಾಗಿಯೇ ಓಡಿಸು." ಅನಂತರ ಅಶೋಕನು ಒಂದು ಬಾರಿಯಾದರೂ ಮಾಯಾದೇವಿಯ ಕಡೆಗೆ ಕಣ್ಣೆತ್ತಿ ನೋಡಲಿಲ್ಲ.

ಹನ್ನೆರಡು

ಚೈತೂಲದಿಂದ ಬಂದ ಮೂರು-ನಾಲ್ಕು ದಿನಗಳ ತನಕ ಅಶೋಕನು ಅನ್ಯಮನಸ್ಕನಂತಿದ್ದನು. ಹೊರಗೆ ತಿರುಗಾಡಲೂ ಹೋಗುತ್ತಿರಲಿಲ್ಲ. ಹೆಚ್ಚಿನ ಸಮಯವನ್ನು ತನ್ನ ಸ್ಟುಡಿಯೋದೊಳಗೇ ಕಳೆಯುತ್ತಿದ್ದನು. ಅವನು ಮಾಯಾ ದೇವಿಯ ಚಿತ್ರವನ್ನು ಪೂರ್ಣ ಮಾಡುವದರಲ್ಲಿಯೇ ನಿರತನಾಗಿದ್ದನು. ಆದರೆ ಅಬ್ದುಲ್ಲ ಮತ್ತು ಮರಿಯಮ್ ಇವರಿಬ್ಬರಿಗೆ ಮಾತ್ರ ಅವನ ಮನಸ್ಸಿನಲ್ಲಿ ಯಾವುದೋ ಒಂದು ಚಿಂತೆಯು ಚಿಗುರಿ ಅವನನ್ನು ವ್ಯಾಕುಲನನ್ನಾಗಿ ಮಾಡಿದೆ ಎಂಬುದು ತಿಳಿದಿದೆ. ಮಾಯಾದೇವಿಯ ಮನೆಯಲ್ಲಿ ಯಾವುದೊ ಒಂದು ಅನಿರೀಕ್ಷಿತ ಘಟನೆಯು ನಡೆದಿರಬೇಕೆಂದು ಮರಿಯಮಳು ಅನುಮಾನಿಸಿದಳು. ಈ ವಿಚಾರವನ್ನು ತಿಳಿಯಲು ಅವಳ ಹೃದಯವು ಆತುರವಾಗಿತ್ತು. ಆದರೆ ಇದರ ವಿಷಯವಾಗಿ ಅಶೋಕನೊಂದಿಗೆ ಏನನ್ನು ಕೇಳಲೂ ಭಯವೂ, ಕಷ್ಟವೂ, ಆಗುತ್ತಿತ್ತು. ಒಂದು ಮಾತನ್ನೂ ಆಡದೆ ಸುಮ್ಮಗೆ ಎಲ್ಲವನ್ನೂ ಗಮನಿಸುತ್ತಿದ್ದಳು.

ಇತ್ತೀಚೆಗೆ ಅವಳೂ ಅಶೋಕನ ಕೊಠಡಿಯಲ್ಲಿಯೇ ಹೆಚ್ಚಿನ ಸಮಯವನ್ನು ಕಳೆಯಲಾರಂಭಿಸಿದಳು. ಅವನು ಸ್ಟುಡಿಯೋದಿಂದ ಹೊರಗೆ ಬಂದೊಡನೆ, ಅವನಿಗೆ ಕಾಫಿ ಇಲ್ಲವೆ ಶರಬತ್ತುಗಳನ್ನು ತನ್ನ ಕೈಗಳಿಂದಲೇ ತಂದು ಅದನ್ನು ತುಂಬಾ ಆತ್ಮೀಯತೆಯೊಂದಿಗೆ ಕೊಡುತ್ತಿದ್ದಳು. ಅವಳ ಕಣ್ಣುಗಳಲ್ಲಿ ಉಂಟಾಗುವ ಆತ್ಮೀಯ ಸ್ನೇಹಭಾವವನ್ನು ಕಂಡು ಅಶೋಕನ ಮನಸ್ಸೂ ಕರಗುತ್ತಿತ್ತು. ಹಾಗೂ ಬಹು ಶ್ರದ್ಧೆಯಿಂದ ಮರಿಯಮಳಿತ್ತ ಪಾನೀಯವನ್ನು ಸ್ವೀಕರಿಸುತ್ತಿದ್ದನು.

ಮಾಯಾದೇವಿಯಲ್ಲಿಂದ ವಿಚಿತ್ರ ರೀತಿಯಾಗಿ ಹೊರಟು ಬಂದಾಗಿನಿಂದ ಅಶೋಕನ ಮನಸ್ಸು ಪೂರ್ಣ ವ್ಯಾಕುಲಗೊಂಡಿತ್ತು ಎಂಬುದಕ್ಕೆ ಯಾವ ರೀತಿಯ ಸಂದೇಹವೂ ಇಲ್ಲ. ಮಾಯಾದೇವಿಯಲ್ಲಿ ಅವನಿಗಿದ್ದ ಪರಿಚಯವು ಈ ಬಗೆಯಾಗಿ ಅವಸಾನ ಹೊಂದುವುದೆಂಬ ಕಲ್ಪನೆಯನ್ನು ಕೂಡ ಅವನು ಮಾಡಿರಲಿಲ್ಲ.

ಒಬ್ಬ ಸ್ತ್ರೀಯ ಪ್ರಣಯ ಯಾಚನೆಯನ್ನು ಕೂಡ ತಾನು ಸ್ವೀಕರಿಸಲಿಲ್ಲವೆಂಬುದಕ್ಕೂ ಅವನು ಒಂದು ರೀತಿಯಿಂದ ಕೊರಗುತ್ತಿದ್ದನು. ಮತ್ತು ಪ್ರಣಯ ಯಾಚನೆಯನ್ನು ಧಿಕ್ಕರಿಸಿದರೆ ಆ ಯಾಚಕಳಿಗೆ ಉಂಟಾಗುವ ದುಃಖಕ್ಕೆ ಸಮಾನವಾದ ದುಃಖ ಪ್ರಪಂಚದಲ್ಲಿ ಇನ್ನಾವುದೂ ಇಲ್ಲವೆಂದು ಅಶೋಕನು ಒಮ್ಮೊಮ್ಮೆ ಯೋಚಿಸುವನು. ಆದರೆ ಮಾಯಾದೇವಿಯ ಯಾಚನೆಯ ಪರಿಶುದ್ಧತೆಯ ವಿಚಾರದಲ್ಲಿ ಅಶೋಕನಿಗೆ ಸಂದೇಹವಿದೆ.

ಮಾಯಾದೇವಿಯ ಇಚ್ಛೆಯನ್ನು ಅವನು ಒಂದು ರೀತಿಯಿಂದ ಪೂರ್ಣ ಮಾಡಿದ್ದನು. ಆದರೇನು ಅವನು ಈ ಕಾರ್ಯದ ಹಿಂದೆ ಕೇವಲ ಆ ದುಃಖಿನಿಯನ್ನು ದುಃಖದಿಂದ ಪಾರು ಮಾಡುವ ಪರೋಪಕಾರ ಬುದ್ಧಿಯೇ ಇದ್ದಿತೋ ಅಥವಾ ಇನ್ನಾವುದಾದರೂ ಇದ್ದಿತೊ ? ಅವನ ಆಗಿನ ಮೋಹಾವೇಶವು ಅದರೊಂದಿಗೆ ಸಮ್ಮಿಲಿತವಾಗಿರಲಿಲ್ಲವೇ ? ಅದವನ ಅಧಃಪತನದ ಮೊದಲನೆಯ ಚಿಹ್ನೆಯಲ್ಲವೇ ?

ಈ ಪ್ರಶ್ನೆಗೆ ಯುಕ್ತವಾದ ಉತ್ತರವನ್ನು ಅವನು ಕೊಡಲಾರನು. ಮಾನವನ ಮನಸ್ಸಿನೊಳಗೆ ಮರಳುತ್ತಿರುವ ಆಂದೋಲನವನ್ನು ಅಳೆಯಲು ಅಸಾಧ್ಯವಾಗಿರುವಷ್ಟು ಅದು ಸೂಕ್ಷ್ಮವೂ ಗೂಢವೂ ಆಗಿರುತ್ತದೆ.

ಅವನ ಮನಸ್ಸಿನಲ್ಲುಂಟಾದ ವ್ಯಾಕುಲತೆಗೆ ಕಾರಣವಿತ್ತು. ಅವನ ಭಾವನೆಗಳು ಪೂರ್ಣವಾಗಿ ಶುದ್ಧ ಮತ್ತು ನಿಷ್ಪಾಪವಾದವುಗಳೆಂದು ಅವನ ಮನಸ್ಸೆ ಅವನಿಗೆ ಪಕ್ಷಪಾತವಿಲ್ಲದ ತೀರ್ಪನ್ನೀಯಲೆಂಬುದೇ ಅವನ ಆ ವ್ಯಗ್ರತೆಗೆ ಕಾರಣ. ಆದರೆ ಇದರ ನಿರ್ಣಯವೇ ಅವನಿಗೆ ಕಠಿಣವಾಗಿ ಕಂಡಿತು.

ಮರಿಯಮಳು ಮಾಯಾದೇವಿಯ ಚಿತ್ರವನ್ನು ತಾನೊಮ್ಮೆ ನೋಡಬೇಕೆಂದು ಹಲವು ಬಾರಿ ಕೇಳಿದ್ದಳು. ಆದರೆ ಅಶೋಕನು ಪ್ರತಿಸಲವೂ ಆ ಚಿತ್ರವು ಪೂರ್ಣವಾಗುವ ತನಕ ಅದನ್ನು ಯಾರಿಗೂ ತೋರಿಸುವದಿಲ್ಲವೆಂದು ಹೇಳುತ್ತಿದ್ದನು. ಅಪೂರ್ಣವಾದ ಚಿತ್ರವನ್ನು ನೋಡುವದರಿಂದ ಅದರ ಪೂರ್ಣ ಕಲ್ಪನೆಯು ಕೂಡ ಸಾಧ್ಯವಿಲ್ಲ. ಈ ದಿನ ಚಿತ್ರವು ಪೂರ್ಣವಾಗಿದೆ, ಅದರ ತೆರೆಯನ್ನೀಗ ತೆರೆಯಲೇ ಬೇಕು.

ತನ್ನ ಪ್ರತಿಸ್ಪರ್ಧಿಯ, ಅದೂ ತನ್ನ ಪ್ರೀತಿಪಾತ್ರನ ಕೈಯಿಂದಲೇ ಚಿತ್ರಿತವಾದ ಚಿತ್ರವನ್ನು ನೋಡುವದಕ್ಕೆ ಮರಿಯಮಳಿಗಾದರೂ ಉತ್ಸಾಹವು ಕಡಿ

ಮೆಯೇ? ಅವಳನ್ನು ಅಶೋಕನು ಸ್ಟುಡಿಯೋದೊಳಗೆ ಕರೆದಾಗ ಅವಳ ಹೃದಯವು ಒಮ್ಮೆ ಜುಮ್ಮೆಂದಿತು.

ಅಶೋಕನು ಆ ಭವ್ಯ ಚಿತ್ರದೆದುರಿಗೇ ನಿಂತಿದ್ದನು. ಅವನ ಕೈಯಲ್ಲಿ ಚಿತ್ರದ ಮೇಲೆ ಹೊದಿಸಲ್ಪಟ್ಟ ರೇಷ್ಮೆಯ ತೆರೆಯ ದಾರವಿತ್ತು. ಅವನು ಮರಿಯಮಳನ್ನು ಚಿತ್ರದಿಂದ ಏಳು ಹೆಜ್ಜೆ ದೂರದಲ್ಲಿರುವ ಸ್ಟೂಲಿನ ಮೇಲೆ ಕುಳಿತುಕೊಳ್ಳಲು ಹೇಳಿದನು.

"ಒಂದು, ಎರಡು, ಮೂರು!" ಅಶೋಕನು ಸರ್ರೆಂದು ಬಟ್ಟೆಯನ್ನೆಳೆದನು.

ಮರಿಯಮಳು ಉತ್ತೇಜಿತಳಾಗಿ ಸ್ಟೂಲಿನಿಂದ ಕೆಳಗಿಳಿದು ನಿಂತುಕೊಂಡಳು. ಈಗ ಆ ಚಿತ್ರವನ್ನು ಸಂಪೂರ್ಣ ಮನೋಬಲದೊಂದಿಗೆ ನೋಡುತ್ತಿದ್ದಾನೆ.

ಅಶೋಕನು ಅದೇ ಪ್ರಮಾಣದ ಮನೋಬಲದೊಡನೆ ಮರಿಯಮಳ ಮುಖದಲ್ಲಿ ಉಂಟಾಗುವ ಅತಿ ಸೂಕ್ಷ್ಮ ಭಾವಗಳನ್ನು ಅತ್ಯಂತ ಉತ್ಸುಕನಾಗಿ ನೋಡುತ್ತಿದ್ದಾನೆ.

ಮರಿಯಮಳ ಚಿತ್ರವನ್ನು ನೋಡಬೇಕೆಂದು ಪ್ರಬಲವಾದ ಆಶೆಯು ನಿಂತುಹೋಗಿ, ಅದರ ಬದಲು ಆಶ್ಚರ್ಯ ಮತ್ತು ಕೌತುಕಗಳು ಉಂಟಾದವು.

ವಿವಿಧ ಬಣ್ಣಗಳಿಂದ ಕೂಡಿದ ಆ ಮೋಹಕ ಸುಂದರಿಯ ಸಜೀವದಂತಿರುವ ಚಿತ್ರವನ್ನು ಕಂಡ ಮರಿಯಮಳು ಸ್ತಂಭಿತಳಾದಳು. ಸಾಕ್ಷಾತ್ ಮಾಯಾದೇವೀ ನೀಲಕಂಠಳೇ ಅರ್ಧ ನಗ್ನಾವಸ್ಥೆಯಲ್ಲಿ ಅವಳ ಮುಂದೆ ಸ್ಟೂಲಿನ ಮೇಲೆ ಕುಳಿತಿದ್ದಂತೆ ಆಗ ಅವಳಿಗೆ ಭಾಸವಾಯಿತು.

ಆದರೆ ಈ ಕೌತುಕ ಭಾವವು ಹೆಚ್ಚು ಸಮಯ ನಿಲ್ಲಲಿಲ್ಲ. ಅದರ ಸ್ಥಾನವನ್ನು ಗಾಂಭೀರ್ಯವು ಸೆಳೆದುಕೊಂಡಿತು. ಕಣ್ಣುಗಳ ಸೌಮ್ಯ ದೀಪ್ತಿಯು ಬಹಳ ಆಳವಾದ ಜಲರಾಶಿಯಂತೆ ಸ್ಥಿರವಾಯಿತು. ಪುನಃ ಅವಳ ಮುಖದಲ್ಲಿ ಎರಡು ಭಾವಗಳು ಪ್ರಕಟಗೊಂಡವು. ಒಮ್ಮೆ ಅದು ಬಹಳ ಸುಂದರವಾಗಿದೆ ಎಂಬ ಅಭಿಪ್ರಾಯವು ಉಂಟಾದರೆ, ಕೂಡಲೆ ಆ ಅಭಿಪ್ರಾಯವನ್ನೇ ಮರೆತು, ಅದರಲ್ಲಿ ಅರುಚಿಯ ಅಭಿಪ್ರಾಯ. ಮತ್ತೆ ತಿರಸ್ಕಾರದ ಭಾವನೆ. ಇತ್ಯಾದಿಗಳು ಅವಳನ್ನು ದ್ವಂದ್ವ ಸಂಕಟಕ್ಕೀಡು ಮಾಡಿದವು.

ಅನಂತರ ಒಂದು ಕಾರಣವಿಲ್ಲದ ವೇದನೆಯ ಚಿಹ್ನವು ಅವಳ ಮುಖದಲ್ಲಿ ಪ್ರತಿಬಿಂಬಿತವಾಯಿತು. ಅವಳ ಮನಸ್ಸಿಗೆ ಒಂದು ಬಗೆಯ ಗಾಯವಾದಂತೆ, ಅಸೀಮವಾದ ದುಃಖದ ದೆಸೆಯಿಂದ ಅವಳ ಮುಖವು ವಿವರ್ಣಗೊಂಡಿತು. ಅವಳಿಗೆ ತಿಳಿಯದೇನೇ ಅವಳ ಕಣ್ಣುಗಳು ಬಲಾತ್ಕಾರವಾಗಿ ನೆಲದ ಕಡೆಗೆ ಇಳಿದವು.

ಅಶೋಕನು ಈ ಎಲ್ಲ ಸ್ಥಿತಿ ಅಂತರಗಳನ್ನು ಸೂಕ್ಷ್ಮವಾಗಿ ನೋಡಿದನು. ಈಗ ಮರಿಯಮಳ ಕೊನೆಯ ಅವಸ್ಥೆಯನ್ನು ಕಂಡು ಅವನ ಮೋರೆಯೂ ಇಳಿದುಹೋಯಿತು.

" ಏಕೆ? ಮರಿಯಮ್, ಮನಸ್ಸಿಗೆ ಒಪ್ಪಲಿಲ್ಲವೆ ? "

" ಇಲ್ಲ, ಇಲ್ಲ. ಚೆನ್ನಾಗಿದೆ. ಯಾರಂದರು ಹಿಡಿಸಲಿಲ್ಲವೆಂದು ! ಮರಿಯಮಳು ನಿರ್ವಾಹವಿಲ್ಲದ ಕಂಠದೊಡನೆ ಉತ್ತರವಿತ್ತಳು. ಮುಖವೆತ್ತುವಾಗ ಕಣ್ಣ ಮೂಲೆಗಳು ಕಣ್ಣೀರಿನಿಂದ ಒದ್ದೆಯಾಗಿದ್ದವು.

" ನೀನು ನಿನ್ನ ನಿಜವಾದ ಅಭಿಪ್ರಾಯವನ್ನು ಹೇಳುತ್ತಿಲ್ಲ ಮರಿಯಮ್ " ಅಶೋಕನು ವ್ಯಾಕುಲತೆಯಿಂದ ಹೇಳಿದನು. " ನೀನೆಂದೂ ಅಸತ್ಯವನ್ನು ಹೇಳುವವಳಲ್ಲ. ಆದರೆ ಇಂದೇಕೆ ನಿನ್ನ ಮನಸ್ಸಿನಲ್ಲಿರುವ ಭಾವನೆಯನ್ನು ಅಡಗಿಸುತ್ತೀ ? ನಿನ್ನ ವಿಚಾರಗಳಿಗೆ ನಾನೆಷ್ಟು ಮನ್ನಣೆಯನ್ನು ಕೊಡುತ್ತಿರುವೆನೆಂಬುದು ನಿನಗೆ ತಿಳಿಯದೇ? :ನಿಜ !ಹೇಳು ಮರಿಯಮ್. ನಿನ್ನ ಅಭಿಪ್ರಾಯವೇನು ? ಅದಕ್ಕಾಗಿಯೇ ನಿನಗೆ ಚಿತ್ರವನ್ನು ಮೊತ್ತಮೊದಲು ತೋರಿಸಿದ್ದೇನೆ. "

" ಕೋಪಿಸಲಾರಿರಷ್ಟೇ ? "

" ಇಲ್ಲ. "

" ತಪ್ಪು ತಿಳಿದುಕೊಳ್ಳಲಾರಿರಷ್ಟೇ? "

" ಎಂದೂ ಇಲ್ಲ. "

" ನನ್ನನ್ನು ತಿರಸ್ಕರಿಸಲಾರಿರಷ್ಟೇ ? "

" ಇಲ್ಲ, ಇಲ್ಲ. ಆದರೆ ಇದೆಲ್ಲವನ್ನು ಈ ದಿನ ಮಾತ್ರವೇಕೆ ಕೇಳುತ್ತಿದ್ದೀ ಮರಿಯಮ್ ? ನಿನಗೇನು ನನ್ನ ಸ್ವಭಾವದ ಪರಿಚಯವಿಲ್ಲವೇ? ಬೇಗನೆ ಹೇಳು ಮರಿಯಮ್. "

"ಸರಿ ಹಾಗಾದರೆ ಹೇಳುತ್ತೇನೆ.......... ನನ್ನ ಮನಸ್ಸಿನಲ್ಲಿ ಈ ಚಿತ್ರದ ವಿಚಾರವಾಗಿ ಉತ್ತಮ ಅಭಿಪ್ರಾಯವು ಉಂಟಾಗಿಲ್ಲ. ಈ ಚಿತ್ರವು ಒಬ್ಬ ನಿರ್ಲಜ್ಜಳಾದ ಹುಚ್ಚು ವಿಲಾಸಿನಿಯ ಚಿತ್ರವಾಗಿದೆ. ಇದನ್ನು ನೋಡುವುದರಿಂದ ವಿಷಯವಾಸನೆ ಮತ್ತು ಕಾಮುಕತೆಯ ಭಾವನೆಗಳೇ ಜಾಗ್ರತವಾಗುತ್ತವೆ. ಇದನ್ನು ಕಾಣುವುದರಿಂದ ಉಂಟಾಗುವ ಭಾವಗಳು ನಮ್ಮನ್ನು ಉನ್ನತ ಮಟ್ಟಕ್ಕೆತ್ತುವವುಗಳಾಗಿರುವುದಿಲ್ಲ. ಬದಲಾಗಿ ಕೆಳಮಟ್ಟಕ್ಕೆ ತುಳಿಯುವವುಗಳಾಗಿರುತ್ತವೆ."

"ಸಾಕು! ಸಾಕು! ನಿಲ್ಲಿಸು" ಅಶೋಕನು ಹುಚ್ಚನಂತಾಗಿ ತನ್ನ ಬಲಗೈಯನ್ನು ಮೇಲಕ್ಕೆತ್ತಿ ತಡೆಯಲಾರಂಭಿಸಿದನು. ಅವನ ಮುಖವು ಚಿಂತೆಯಿಂದ ತುಂಬಿ ಹೋಯಿತು. "ನಾನೀಗ ತಿಳಿದುಕೊಂಡೆ ಮರಿಯಮ್, ಸಂಪೂರ್ಣವಾಗಿ ತಿಳಿದುಕೊಂಡೆ. ನೀನು ನಿಜವನ್ನೇ ಅನ್ನುತ್ತಿ! ಅಬ್ದುಲ್ಲಾ" ಅವನು ಕಾತರನಾಗಿ ಕೂಗಿದನು. ಅಬ್ದುಲ್ಲನು ಓಗೊಡದಿರಲು, ಕುರ್ಚಿಯನ್ನು ಎಡವಿಕೊಂಡು ತಾನೇ ಓಡುತ್ತ ಅಡಿಗೆಯ ಮನೆಗೆ ಹೋಗಿ, ಅಲ್ಲಿಂದ ಅರ್ಧ ನಿಮಿಷದೊಳಗಾಗಿ ಡಬಲ್ ರೊಟ್ಟಿಯನ್ನು ಕೊಯ್ಯುವ ಫಳಫಳವೆನ್ನುತ್ತಿದ್ದ ಚೂರಿಯನ್ನು ತೆಗೆದುಕೊಂಡು ಹಿಂದಿರುಗಿದನು.

ಮರಿಯಮಳ ಹೃದಯವು ಭಯದಿಂದ ನಡುಗಿತು. ಅಶೋಕನಿಗೇನಾಗಿದೆ? ಅವನೇನಾದರೂ ನಿಜವಾಗಿಯೂ ಹುಚ್ಚನಾದನೇ? ಇದೆಲ್ಲವನ್ನು ಯೋಚಿಸುವುದರೊಳಗಾಗಿಯೇ ಅಶೋಕನು ಹಾರಿ ಬಂದು, ಆ ಚಿತ್ರದೆದುರು ನಿಂತು, ಬಲಗೈಯಲ್ಲಿ ಚೂರಿಯನ್ನು ಹಿಡಿದುಕೊಂಡು ಹಲ್ಲನ್ನು ಕಡಿಯುತ್ತ ಹೇಳಿದನು:

"ವಿಷಯವಾಸನೆಯನ್ನುಂಟು ಮಾಡುವ, ಪತನಕ್ಕಿಳಿಸುವ ಮಾಯಾವಿನೀ!"

ಅಶೋಕನು ಪೂರ್ಣ ನಿರ್ಮಾಮನಾಗಿ ಆ ಚಿತ್ರವನ್ನು ಸೀಳುವುದನ್ನು ಮರಿಯಮಳು ಕಂಡಳು. ಆಗ ಅವಳಿಗೆ ಆ ಕತ್ತಿಯು ತನ್ನ ಹೃದಯವನ್ನೆ ಇರಿಯುತ್ತಿದ್ದಂತೆ ಭಾಸವಾಯಿತು.

ಒಂದೇ ನಿಮಿಷ ಮಾತ್ರದಲ್ಲಿ ಆ ಚಿತ್ರರೂಪಳಾದ ಮಾಯಾದೇವಿಯು ಕುರೂಪಳಾಗಿ ಚಿಂದಿಚಿಂದಿಯಾಗಿ ಕೆಳಗೆ ಬಿದ್ದುಕೊಂಡಳು. ಇದೆಲ್ಲವೂ ಚಿಟಕೆ

ಹಾಕಿ ಮುಗಿಸುವುದರೊಳಗಾಗಿ ಆಯಿತು.

ಮರಿಯಮಳೂ ಅತಿ ವೇಗದಿಂದ ಅಶೋಕನ ಬಳಿ ಧಾವಿಸಿದಳು. ಅವನ ಕೈಯಿಂದ ಕತ್ತಿಯನ್ನು ಸೆಳೆದುಕೊಳ್ಳಲು ಪ್ರಯತ್ನಿಸಿದಳು. ಆದರೆ ಅಶೋಕನು ಅದನ್ನು ಬಲವಾಗಿ ಹಿಡಿದುಕೊಂಡಿದ್ದನು. ಅವಳಿಂದ ಅದನ್ನು ಸೆಳೆದುಕೊಳ್ಳಲಾಗಲಿಲ್ಲ.

ಇಬ್ಬರ ಕೈಗಳಿಗೂ ತಿಕ್ಕಾಟವಾಯಿತು. ಅಶೋಕನ ಬಲಗೈಯ ತರ್ಜನಿಯ ಕೆಳಭಾಗದಲ್ಲಿ ಗಾಯವಾಗಿ ರಕ್ತ ಸುರಿಯುತ್ತಿದ್ದುದನ್ನು ಮಾಯಾದೇವಿಯು ನೋಡಿದಳು. ಚೂರಿಯೂ ರಕ್ತರಂಜಿತವಾಯಿತು.

ಮರಿಯಮಳೊಮ್ಮೆ ಚೀರಿಕೊಂಡು, ಮೂರ್ಛಿತಳಾಗಿ ಬಿದ್ದಳು.

ಅಶೋಕನ ಕೈಯ ರಕ್ತದ ಕೆಲವು ಹನಿಗಳು ಮಾಯಾದೇವೀ ನೀಲಕಂಠಳ ಭಿನ್ನ ಭಿನ್ನ ಚಿತ್ರದ ಮೇಲೂ ಬಿದ್ದಿದ್ದವು.

ಹದಿಮೂರು

ಅಶೋಕನು ತನ್ನ ಬಂಗಲೆಯ ಹಿಂಭಾಗದಲ್ಲಿರುವ ಜಗಲಿಯಲ್ಲಿ ಕುಳಿತಿದ್ದನು. ಮರಿಯಮಳು ಅವನ ಗಾಯವನ್ನು ತೊಳೆದು ಮದ್ದಿಟ್ಟು ಕಟ್ಟುತ್ತಿದ್ದಾಳೆ. ಪ್ರಾತಃಕಾಲ. ಮನೋಲ್ಲಾಸವಾದ ಗಾಳಿಯು ಬೀಸುತ್ತಿದೆ. ಎದುರಿನ ಶತಪುತ್ರದ ನೀಲವರ್ಣದ ಪರ್ವತಗಳು ಕಣ್ಣುಗಳಿಗೂ ಶೀತಲವಾಗಿವೆ.

"ಆ ದುರ್ಘಟನೆಯಾದುದಕ್ಕೆ ತಮ್ಮಲ್ಲಿ ಕ್ಷಮೆಯನ್ನು ಬೇಡುತ್ತೇನೆ." ಮರಿಯಮಳು ಪಟ್ಟಿಯನ್ನು ಕಟ್ಟುತ್ತ ಹೇಳಿದಳು. "ನಾನು ನನ್ನ ಸ್ಪಷ್ಟ ಅಭಿಪ್ರಾಯವನ್ನು ಕೊಡದಿರುತ್ತಿದ್ದರೆ, ನೀವು ಆ ಸುಂದರ ಚಿತ್ರವನ್ನು ಪೂರ್ಣವಾಗಿ ನಾಶ ಮಾಡುತ್ತಿದ್ದಿಲ್ಲ! ಹೀಗೆ ಹೇಳುತ್ತಿದ್ದಂತೆಯೇ ಅವಳ ಮುಖವು ಖಿನ್ನತೆಯಿಂದ ಆರಕ್ತವಾಯಿತು.

"ಇಲ್ಲ. ಅದರಲ್ಲಿ ನಿನಗೆ ಹೆಮ್ಮೆಯ ಮಾತಿದೆ ಮರಿಯಮ್. ನೀನು ಸತ್ಯದ ದಿಗ್ದರ್ಶನವನ್ನು ಮಾಡಿಸಿ, ನನ್ನನ್ನು ಅಗಾಧವಾದ ಆತ್ಮವಂಚನೆಯಿಂದ ಉಳಿಸಿದೆ. ಆದ್ದರಿಂದ ನಿನಗೆ ನಾನೇ ಕೃತಜ್ಞನಾಗಿರಬೇಕಾಗುತ್ತೆ. ಮತ್ತು

ಆ ದಿನ ಈ ಕೈಯ ಗಾಯವಾಗದಿರುತ್ತಿದ್ದರೆ ಈ ದಿನ ನಿನ್ನಿಂದ ಈ ಬಗೆಯ ಅನುಪಮವಾದ ಶಿಶ್ರೂಷಾಸುಖವನ್ನು ಹೇಗೆ ಪಡೆಯುತ್ತಿದ್ದೆನು ?"

" ಗಾಯವು ನಿಮ್ಮ ಕೈಬೆರಳಿಗಾಗಲಿಲ್ಲ. ನನ್ನ ಹೃದಯಕ್ಕುಂಟಾಗಿದೆ " ಮರಿಯಮಳು ಮುಂದುವರಿಸಲು ಸಾಮರ್ಥ್ಯವಿಲ್ಲದವಳಾಗಿ ಮಾತನ್ನು ಅಲ್ಲಿಗೇ ನಿಲ್ಲಿಸಿದಳು. " ಸರಿ. ಈಗ ಹೇಳಿ—ನೀವು ಏತಕ್ಕಾಗಿ ಆ ಚಿತ್ರವನ್ನು ಹರಿದು ಚಿಂದಿಗೂಡಿಸಿದಿರಿ ?"

"ಆ ಚಿತ್ರವು ಮಾಯಾದೇವಿಯದಲ್ಲ. ಅದು ನನ್ನ ಅಧಃಪತನದ ಸ್ವರೂಪವಾಗಿತ್ತು. ಆದ್ದರಿಂದ ಅದರ ಮೂಲವನ್ನು ಅಳಿಸಿಬಿಡುವುದೇ ಶ್ರೇಯಸ್ಕರವಾಗಿತ್ತು."

"ಅದರಿಂದೇಕೆ ನಿಮ್ಮ ಅಧಃಪತನವಾಗುತ್ತದೆ. ಅಧಃಪತನವಾದರೂ ಮಾಯಾದೇವಿಯದಾಗಲು ಸಾಧ್ಯ. ನೀವಾದರೊ ಕೇವಲ ಅವಳ ವ್ಯಕ್ತಿತ್ವದ ಸಜೀವ ಪ್ರತಿಬಿಂಬವನ್ನಷ್ಟೇ ಇಳಿಸಿದ್ದೀರಿ. ಆದ್ದರಿಂದ ಅದರಲ್ಲಿ ನಿಮ್ಮ ದೋಷವೇನಿದೆ ?"

"ಇಲ್ಲ. ಆ ರೀತಿಯಾಗಿ ಮನಸ್ಸನ್ನು ಸಮಾಧಾನಪಡಿಸಲಾಗುವುದಿಲ್ಲ. ಕಲೆಯು ಕೇವಲ ಯಾವುದೇ ವಸ್ತು ವಿಶೇಷದ ಪ್ರತಿಬಿಂಬವನ್ನಷ್ಟೇ ಮಾಡುವದಿಲ್ಲ. ಬದಲಾಗಿ ಅದು ಕಲಾಕಾರನ ಚಾರಿತ್ರ್ಯವನ್ನು ಕೂಡ ವ್ಯಕ್ತಪಡಿಸುತ್ತದೆ. ಆರ್ಟಿಸ್ಟನ ಸಂಸ್ಕಾರವು ಎಷ್ಟು ಶುದ್ಧ ಮತ್ತು ಸಾತ್ವಿಕವಾಗಿರುತ್ತದೋ ಅವನ ಕಲಾವಸ್ತುವೂ ಕೂಡ ಅಷ್ಟೇ ಮಹತ್ವದ್ದಾಗಿದ್ದು, ಶುದ್ಧ ಮತ್ತು ಸಾತ್ವಿಕವಾಗಿರುತ್ತದೆ. ಆ ಚಿತ್ರವನ್ನು ನೋಡುವುದರಿಂದ ವಿಷಯ ವಾಸನೆಯು ಹುಟ್ಟುವುದಾದರೆ ಅದರ ನಿಜವಾದ ದೋಷವು ಮಾಯಾದೇವಿಯದ್ದೇ ಮಾತ್ರವಲ್ಲ ಅಶೋಕನದೂ ಇದೆ. ಆ ಚಿತ್ರವು ನನ್ನ ಮನಸ್ಸನ್ನು ಮೋಹಾವೇಶಗೊಳಿಸಿದೆ ಎಂಬುದು ಖಂಡಿತ. ಇದರಿಂದ ನಾನು ನನ್ನ ಉದಾತ್ತವೂ ನಿರ್ಮಲವೂ ಆದ ವ್ಯಕ್ತಿತ್ವದಿಂದ ಜಾರಿಬಿದ್ದಂತಾಗಲಿಲ್ಲವೆ ? "

"ಆದರೆ ನನ್ನ ಅಭಿಪ್ರಾಯವು ತಪ್ಪೂ ಆಗಿರಬಹುದು. ನಾನೇನು ಅಂತಹ ಕಲಾತತ್ವಗಳನ್ನರಿತ ಕಲಾಕಾರಳಲ್ಲ. ಹೀಗಿರುತ್ತ ನೀವು ನನ್ನ ವಿಮರ್ಶೆಗೆ ಇಷ್ಟು ಮಹತ್ವವನ್ನಿತ್ತದ್ದು ಸರಿಯಿಲ್ಲದಿರಬಹುದು."

"ಸರಿಯಲ್ಲವೇ ? ಎಂದಿಗೂ ಇಲ್ಲ. ನಿಜವಾದ ಕಲಾವಿಮರ್ಶೆಯು

ಕೇವಲ ಕಲಾವಿದರಿಂದ ಮಾತ್ರವೇ ಆಗಲಾರದು. ಅದು ಜನಸಾಧಾರಣದವರಿಂದಲೂ ತೀರ್ಪನ್ನು ಪಡೆಯಬೇಕು. ಪವಿತ್ರತೆ, ಪ್ರೇಮ, ದಯೆ, ಶಾಂತಿ ಮೊದಲಾದವುಗಳ ಮೂಲ ರೂಪವನ್ನು ಯಾರು ಕಂಡಿರುವರೋ ಅವರು ಮಾತ್ರ ಕಲೆಯ ನಿಜವಾದ ವಿಮರ್ಶಕರಾಗಿರುತ್ತಾರೆ. ನಾನಂದ ಭಾವನೆಗಳು ನಿನ್ನಲ್ಲಿ, ನಿನ್ನ ಸಂಸ್ಕೃತ ಹೃದಯದಲ್ಲಿ ಪೂರ್ಣ ರೂಪದಿಂದ ಜೀವಂತವಾಗಿದೆ. ಆದ್ದರಿಂದಲೇ ನಾನು ನಿನ್ನ ಯೋಜನೆಗೆ ಇಷ್ಟು ಮನ್ನಣೆಯನ್ನಿತ್ತಿದ್ದೆ."

ಮರಿಯಮಳು ನಿರುತ್ತರಳಾದಳು. "ನೀವು ನನ್ನನ್ನು ನಿರರ್ಥಕವಾಗಿ ಇಷ್ಟು ಉನ್ನತಳನ್ನಾಗಿ ಮಾಡುತ್ತೀರಿ" ಎಂದಿಷ್ಟೇ ಹೇಳಿದಳು.

ನಾಲ್ಕು ದಿನಗಳ ಮೇಲೆ ಅಶೋಕನ ಬಂಗಲೆಯ ಎದುರು ಮಾಯಾದೇವೀ ನೀಲಕಂಠಳ ಮೋಟಾರುಕಾರು ಬಂದು ನಿಂತಿತು. ಅದರಲ್ಲಿ ಇದರ ಮಾಲಿಕಳಿರಲಿಲ್ಲ. ನಿಯಮಿತವಾದ ಉಡುಪನ್ನು ಧರಿಸಿದ್ದ ಡ್ರೈವರನು ಮಾತ್ರ ಕೆಳಗಿಳಿದನು. ಅವನು ಅಶೋಕನ ಕೈಗೆ ಒಂದು ಹಸರು ಬಣ್ಣದ ಲಕ್ಕೋಟೆಯನ್ನು ಕೊಟ್ಟನು. ಆ ಬಣ್ಣವು ಮಾಯಾದೇವಿಯ ರೇಶ್ಮಿಸೀರೆಯ ಬಣ್ಣವನ್ನೇ ಹೋಲುತ್ತಿತ್ತು. ಆ ನೆನಪು ಬರುತ್ತಲೇ ಅವನ ಮನಸ್ಸಿನಲ್ಲಿ ಏನಾಗುತ್ತಿದೆ ಎಂಬುದು ಅವನಿಗೇ ತಿಳಿಯದಾಯಿತು. ಪತ್ರವು ಮಾಯಾದೇವಿಯ ಸುಂದರ ಅಕ್ಷರಗಳಲ್ಲಿತ್ತು. 'ಅವಳು ತನ್ನ ಚಿತ್ರವನ್ನು ನೋಡಲು ಅತ್ಯಂತ ಆತುರಳಾಗಿದ್ದಾಳೆ. ಅದು ಪೂರ್ಣವಾಗಿದ್ದರೆ ಆರ್ಟಿಸ್ಟ ಮಹಾಶಯರು ಅದನ್ನು ತಾವೇ ತರುವ ಕೃಪೆಯನ್ನು ಮಾಡಲಿ' ಎಂದು ಆ ಪತ್ರದಲ್ಲಿ ಬರೆದಿತ್ತು. ಪುನಃ ಕೊನೆಯಲ್ಲಿ 'ಅಶೋಕ ಠಾಕೂರನ ಆ ದಿನದ ಸಂದರ್ಶನವು ಅವಳ ಹೃದಯದಲ್ಲಿ ಅತ್ಯಂತ ಮಧುರವಾದ ಸ್ಮೃತಿಗಳನ್ನು ಬಿಟ್ಟು ಬಂದಿದೆ. ಆದ್ದರಿಂದ ಅವಳು ಅವನ ಪುನರ್ದರ್ಶನಕ್ಕಾಗಿ ದಾರಿಯನ್ನು ಕಾಯುತ್ತಿದ್ದಳೆಂದೂ' ಬರೆದಿತ್ತು.

ಅಶೋಕನು ಅದಕ್ಕೆ ಮೂರು ಸಾಲುಗಳ ಉತ್ತರವನ್ನು ಹೀಗೆಂದು ಬರೆದು ಕಳುಹಿಸಿದನು. "ತಾನು ಆಕೆಯ ಚಿತ್ರವನ್ನು ಬರೆದು ಪೂರ್ಣಮಾಡಲಾಗಲಿಲ್ಲವೆಂದೂ, ಅದು ಕೆಟ್ಟು ಹೋಯಿತೆಂದೂ, ಪುನಃ ಚಿತ್ರವನ್ನು ಚಿತ್ರಿಸಲು ತಾನು ಅಸಮರ್ಥನೆಂದೂ ಬರೆದು ಮುಗಿಸಿ ಕಳುಹಿಸಿದನು. ಕೊನೆಗೆ ಮಾಯಾದೇವಿಯು ಆ ಕೆಲಸಕ್ಕೆ ಬೇರೊಬ್ಬ ಆರ್ಟಿಸ್ಟನ್ನು ಕಂಡರೆ ಒಳ್ಳೆಯ

ದೆಂದು ದುಃಖಪೂರ್ವಕವಾಗಿ ಸೂಚಿಸುವದಾಗಿಯೂ ತಿಳಿಸಿದನು.

ಎರಡನೆಯ ದಿನ ಇನ್ನೊಂದು ಲಿಖಿತವು ಬಂತು. ಅದರಲ್ಲಿ ಈ ರೀತಿ ಬರೆದಿತ್ತು. 'ನಾಳೆ ನನ್ನ ಹುಟ್ಟು ಹಬ್ಬದ ದಿನ, ಆ ಶುಭಸಮಯದಲ್ಲಿ ತಾವು ನನ್ನಲ್ಲಿಗೆ ಭೋಜನಕ್ಕೆ ದಯಮಾಡಿಸುವ ಕಷ್ಟವನ್ನು ವಹಿಸಿಕೊಂಡರೆ ಬಹಳ ಕೃಪೆ. ಮಿಸ್ ಮರಿಯಮಳೂ ನಿಮ್ಮೊಂದಿಗೆ ಬಂದಳೆಂದರೆ ಅನುಗ್ರಹವೇ ಸರಿ.'

ಅಶೋಕನು ಮರಿಯಮಳ ಸಲಹೆಯನ್ನು ಪಡೆದು ಕೂಡಲೆ ಉತ್ತರ ಬರೆದನು. 'ಜನ್ಮೋತ್ಸವದ ಮಂಗಲ ಕಾರ್ಯಕ್ಕೆ ಇತ್ತ ಆಮಂತ್ರಣಕ್ಕಾಗಿ ನಿಮಗೆ ಹಾರ್ದಿಕ ಅಭಿವಂದನೆಗಳು. ಆದರೆ ನಿಮ್ಮಲ್ಲಿಯ ಭೋಜನ ಸಮಾರಂಭಕ್ಕೆ ಬರಲು ನಾನು ಅಸಮರ್ಥನಾಗಿದ್ದೇನೆ. ನನ್ನ ಆರೋಗ್ಯವು ಚೆನ್ನಾಗಿಲ್ಲ. ನಾನು ಬಾರದಿರುವದರಿಂದ ಮರಿಯಮಳೂ ತಾನೂ ಹೋಗುವದಿಲ್ಲವೆನ್ನುತ್ತಾಳೆ. ಧನ್ಯವಾದ.'

ಈ ಬಾರಿಯೂ ಶೂನ್ಯವಾಯಿತು. ಆದರೆ ಮಾಯಾದೇವಿಯು ಇಷ್ಟರಲ್ಲೇ ಹಿಮ್ಮೆಟ್ಟುವ ಸ್ತ್ರೀಯಲ್ಲ. ಮಾರನೆಯ ದಿನ ಮತ್ತೊಂದು ಪತ್ರ ಬಂದಿತು. 'ನಿನ್ನೆ ರಾತ್ರಿ ಒಮ್ಮಿಂದೊಮ್ಮೆಗೆ ಅವಳ ಆರೋಗ್ಯವೂ ಕೆಟ್ಟುಹೋದುದರಿಂದ ಜನ್ಮದಿನದ ಕಾರ್ಯಕ್ರಮವನ್ನು ನಿಲ್ಲಿಸಿದೆ. ತಾವು ಈಗ ಕ್ಷೇಮವಾಗಿದ್ದರೆ ಒಮ್ಮೆ ಭೇಟಿಕೊಡುವ ಕೃಪೆ ಮಾಡಬೇಕಾಗಿ ವಿನಂತಿ. ಇಂಥ ಸಮಯದಲ್ಲಿ ತಮ್ಮ ಅಲ್ಪ ಸಾನ್ನಿಧ್ಯದಿಂದಲೂ ನನಗೆ ಬಹಳವಾದ ಸುಖವು ದೊರೆಯಬಲ್ಲುದು. ಈ ಸಲವಾದರೂ ನಿರಾಸೆಗೊಳಿಸಲಾರಿರೆಂಬ ಆಸೆ ಇದೆ.'

ಅಶೋಕನು ಡ್ರೈವರನನ್ನು ಪ್ರಶ್ನಿಸಿದನು. "ಏನು? ಮಾಯಾದೇವಿಗೆ ಮೈಯಲ್ಲಿ ಚೆನ್ನಾಗಿಲ್ಲವೇ?"

"ಅದೇನೂ ಇಲ್ಲ. ಈ ದಿನವೇ ಬೆಳಿಗ್ಗೆ ಮಾರ್ಕೆಟ್ ಕಡೆ ಹೋಗಿದ್ದರು." ಮಾಯಾದೇವಿಯು ಅಶೋಕನಿಂದ ಈ ಪ್ರಶ್ನೆಯನ್ನು ನಿರೀಕ್ಷಿಸಿದ್ದಿಲ್ಲವಾದ್ದರಿಂದ ಡ್ರೈವರನಲ್ಲಿ ಯಾವದನ್ನೂ ಹೇಳಿರಲಿಲ್ಲ. ಪುನಃ ಡ್ರೈವರನು ತನ್ನ ಯಜಮಾನಿಯ ಕಪಟವನ್ನರಿತು ತನ್ನ ತಪ್ಪನ್ನು ತಿದ್ದಿಕೊಳ್ಳುತ್ತ ಹೇಳಿದನು. "ಹೌದು, ಹೌದು. ನಿನ್ನೆ ರಾತ್ರಿ ಅವರು ಚೆನ್ನಾಗಿದ್ದಂತೆ ಕಾಣಲಿಲ್ಲ."

ಆ ಪತ್ರಕ್ಕೆ ಇಷ್ಟೇ ಉತ್ತರ:—

ತನ್ನ ಆರೋಗ್ಯವು ಸುಧಾರಿಸುತ್ತ ಬರುತ್ತಿದೆ. ಆದರೆ ಮೊದಲಿನ ರೂಪಕ್ಕೆ ಇನ್ನೂ ಬಂದಿಲ್ಲ. ಆದ್ದರಿಂದ ಈ ದಿನ ಕ್ಷಮಿಸಬೇಕು. ಮುಂದೆ ಎಂದಾದರೊಮ್ಮೆ ಬರುವ ಪ್ರಯತ್ನವನ್ನು ಮಾಡುತ್ತೇನೆ.

ಮಾಯಾದೇವಿಯು ಈ ಬಾರಿ ತುಂಬಾ ಕೋಪಿಸಿಕೊಂಡಳು. ಆದರೆ ಧೈರ್ಯಗೆಡಲಿಲ್ಲ. ಮರುದಿನ ಸಾಧಾರಣ ಒಂಭತ್ತು ಘಂಟೆ ಸುಮಾರಿಗೆ ಸ್ವತಃ ಅಶೋಕನಲ್ಲಿಗೆ ಬಂದಿಳಿದಳು. ಬಂದರೇನು! ಅಲ್ಲಿ ಅಬ್ದುಲ್ಲನ ಹೊರತು ಬೇರಾರೂ ಸಿಗಲಿಲ್ಲ. ಅಶೋಕನು ಮುಂಜಾವಿನಲ್ಲೇ ಕಾಡುಗಳಲ್ಲಿ ಸುತ್ತಲು ಹೋಗಿದ್ದಾನೆಂದು ಅವಳಿಗೆ ಅಬ್ದುಲ್ಲನಿಂದ ತಿಳಿಯಿತು. ಅವನೊಡನೆ ಮರಿಯಮುಳೂ ಹೋಗಿದ್ದಾಳೆಂದೂ ಗೊತ್ತಾಯಿತು. ಇನ್ನೆರಡು ಮೂರು ಘಂಟೆಗಳೊಳಗೆ ಹಿಂದಿರುಗಬಹುದೆಂದೂ ಅವನು ತಿಳಿಸಿದನು. ಮತ್ತು ಅಶೋಕನ ಆರೋಗ್ಯವು ಮುಂಚಿಗಿಂತ ಎಷ್ಟೋ ಸುಧಾರಿಸಿದೆ ಎಂದು ಕೂಡ ಹೇಳಿದನು.

ಮಾಯಾದೇವಿಯು ಸಿಟ್ಟಿಗೆದ್ದು, ಕಾರಿನಲ್ಲಿ ಹೋಗಿ ಕುಳಿತುಕೊಂಡಳು. ಅವಳು ತನ್ನ ವಿಜಿಟಿಂಗ್ ಕಾರ್ಡನ್ನು ಕೊಡುವದಕ್ಕೆ ಮರೆಯಲಿಲ್ಲ. ಜೋರಾಗಿ ಕಾರಿನ ಬಾಗಿಲನ್ನು ಹಾಕಿಕೊಂಡಳು. ಇದರ ಶಬ್ದವು ಸುತ್ತುಮುತ್ತಲೆಲ್ಲ ಪ್ರತಿಧ್ವನಿತವಾಯಿತು. ಅಂದು ನಾಗಪುರದಲ್ಲಿ ಮಾಯಾದೇವಿಯು ಇದೇ ರೀತಿಯಾಗಿ ಕಾರಿನ ಬಾಗಿಲನ್ನು ಒಳ್ಳೆ ದರ್ಪದಿಂದ ಹಾಕಿಕೊಂಡ ನೆನಪು ಅಬ್ದುಲ್ಲನ ಮನಸ್ಸಿಗೆ ಹೊಳೆಯಿತು.

ಮಾಯಾದೇವಿಯು ಸಾಧಾರಣ ಒಂದು ವಾರದ ತನಕ ತನ್ನ ಆ ವಿಜಿಟಿಂಗ್ ಕಾರ್ಡಿಗೆ ಉತ್ತರವನ್ನು ಪಡೆಯಲು ದಾರಿಯನ್ನು ನೋಡುತ್ತಿದ್ದಳು. ಆದರೆ ನಿರಾಶೆಯೇ ಇದರ ಪ್ರತಿಫಲವಾಯಿತು. ಅವಳ ಕ್ರೋಧದ ಜ್ವಾಲೆಯು ದಿನ ದಿನಕ್ಕೆ ಹೆಚ್ಚುತ್ತಲೇ ಇತ್ತು. ಆ ಕ್ರೋಧವು ಅಶೋಕನ ಮೇಲೇನೊ ಇದ್ದೇ ಇತ್ತು. ಆದರೆ ಇದಕ್ಕಿಂತಲೂ ಹೆಚ್ಚಾಗಿ ಮರಿಯಮಳ ಮೇಲಿತ್ತು.

ಒಂದು ದಿನ ಅಬ್ದುಲ್ಲನು ಬೈತೂಲಕ್ಕೆ ಸಾಮಾನುಗಳನ್ನು ತರಲು ಹೋದಾಗ, ಅಲ್ಲಿಯ ದೊಡ್ಡಂಗಡಿಯವರ ಎಲ್ಲಾ ಲೆಖ್ಖಗಳನ್ನು ತೀರಿಸಿ,

ಮಾಯಾದೇವಿಯು ಅಲ್ಲಿಂದ ಹೊರಟು ಹೋಗಿದ್ದಾಳೆಂದು ತಿಳಿದು ಬಂದಿತು. ಅಶೋಕನು ಈ ಸಮಾಚಾರವನ್ನು ಕೇಳಿದಾಗ ಸಂತೋಷದ ಒಂದು ಉದ್ದವಾದ ಉಸಿರನ್ನು ಎಳೆದುಬಿಟ್ಟನು.

ಹದಿನಾಲ್ಕು

ಅಶೋಕನ ಕೈಯ ಗಾಯವು ಅಷ್ಟೊಂದು ದೊಡ್ಡ ಗಾಯವಾಗಿರಲಿಲ್ಲ. ಆದರೂ ಮರಿಯಮಳು ಬಹಳ ತನ್ಮಯಳಾಗಿ ಅವನ ಸೇವೆ ಮಾಡುತ್ತಿದ್ದಳು. ಮರಿಯಮಳ ಸಂಪೂರ್ಣ ಸ್ನೇಹವು ಪರಿಚಾರಿಕೆಯಲ್ಲಿಯೇ ನಿರತವಾಗಿತ್ತು. ಅವನ ಗಾಯಗೊಂಡ ಕೈಬೆರಳಿಗೆ ಮದ್ದನ್ನು ಹಚ್ಚಿ ಪಟ್ಟಿಮಾಡುವದನ್ನು ಕಂಡರೆ, ಅವಳ ಸ್ನೇಹಪೂರ್ಣ ಹೃದಯದ ವ್ಯಕ್ತಿತ್ವವನ್ನು ಅಳೆಯಬಹುದು.

ಈ ಏಕಾಗ್ರತೆಯ ಸೇವೆಯು ಅಶೋಕನ ಆಂತರ್ಯದಲ್ಲಿ ಒಂದು ತರದ ವಿಶೇಷ ದೃಷ್ಟಿಯನ್ನುಂಟುಮಾಡಿತು. ಆ ಅರ್ಧನಗ್ನ ವಿಲಾಸಿನಿಯ ಚಿತ್ರಕ್ಕೆ ಮರಿಯಮಳು ತನ್ನ ಅಭಿಪ್ರಾಯವನ್ನಿತ್ತು, ಸತ್ಯದ ದಿಕ್ಕನ್ನು ನಿರ್ದೇಶಿಸಿ ಅಶೋಕನ ಕಣ್ಣುಗಳನ್ನು ಆವರಿಸಿದ್ದ ಮಾಯಾ ಪರದೆಯ ಅನಾವರಣ ಮಾಡಿದ್ದಳು. ಇವೆಲ್ಲ ಅಶೋಕನಿಗೆ ತುಂಬಾ ಆಶ್ಚರ್ಯವನ್ನುಂಟು ಮಾಡಿದ್ದವು.

ಮರಿಯಮಳಿಗಾದರೂ ಅಶೋಕನ ಸೇವೆ ತೆರೆದ ಸ್ವರ್ಗದ ಬಾಗಿಲಂತಿತ್ತು. ಈಗ ಅಶೋಕನು ಅವಳನ್ನು ಮತ್ತಷ್ಟು ಸ್ನೇಹ ಮತ್ತು ಆದರದಿಂದ ಕಾಣುತ್ತಾನೆ. ಇದೇ ಅವಳ ಆನಂದಕ್ಕೆ ಮೂಲ ಕಾರಣ. ಅಶೋಕನಿಗಾಗಿ ಅವಳು ತನ್ನ ಸರ್ವಸ್ವವನ್ನು ಅರ್ಪಣ ಮಾಡಲು ಸಿದ್ಧಳಾಗಿದ್ದಳು.

ಅಶೋಕನು ಮರಿಯಮಳ ಭಾವನೆಗಳ ಸೂಕ್ಷ್ಮ ಪರಿವರ್ತನೆಗಳನ್ನು ನೋಡಲಿಲ್ಲವೆಂದಲ್ಲ. ಇದರಿಂದ ಅವನಿಗೂ ಒಂದು ಬಗೆಯ ಸುಖದ ಅನುಭವವಾಗುತ್ತಿತ್ತು. ಮರಿಯಮಳ ವ್ಯಕ್ತಿತ್ವದ ಮುದ್ರೆಯು ಅವನಲ್ಲಿ ದಿನೇದಿನೇ ಹೆಚ್ಚುತ್ತಿದೆ ಎಂದೂ, ಅವನು ಅವಳ ಆಕರ್ಷಣೆಯ ಪ್ರಭಾವದಲ್ಲಿ ಮೆಲ್ಲಮೆಲ್ಲಗೆ ಬೀಳುತ್ತಿರುವನೆಂದೂ ಅವನ ಮನಸ್ಸು ಅವನಿಗೇ ಅನ್ನುತ್ತಿತ್ತು.

ಒಂದು ದಿನ ಬೆಳಗಿನ ಸಮಯ. ಅವರಿಬ್ಬರೂ ಸುತ್ತಾಡುತ್ತಾ ಒಂದು

ಚಿಕ್ಕ ಜಲಾಶಯವನ್ನು ದಾಟುತ್ತಿದ್ದರು. ಮರಿಯಮಳು ಮುಂದೆ ಮುಂದೆ ನಡೆಯುತ್ತಿದ್ದಳು. ಹಿಂದಿನಿಂದ ಅಶೋಕನು ನಡೆಯುತ್ತಿದ್ದನು. ಇಷ್ಟರಲ್ಲೇ ಅವಳ ಕಾಲು ಜಾರಿತು. ಅವಳು ಚೀರಿದಳು : " ಅಯ್ ! ಬಿದ್ದುಬಿಟ್ಟೆ ! " ಅಶೋಕನು ಕೂಡಲೆ ವಿದ್ಯುತ್ ವೇಗದಿಂದ ಮುಂದಕ್ಕೆ ಹಾರಿ, ಅವಳನ್ನು ನಿಲ್ಲಿಸಿದನು. ತುಸು ಹೊತ್ತಿನ ವರೆಗೆ ಅವರಿಬ್ಬರೂ ಹಾಗೆಯೇ ನಿಂತಿದ್ದರು. ಮರಿಯಮಳು ಹೆದರಿದವಳಾಗಿ ತನ್ನ ತಲೆಯನ್ನು ಅವನ ಎದೆಯ ಮೇಲಿರಿಸಿದಳು. ಆಗ ತನ್ನ ದೇಹದ ಭಾರವನ್ನು ಅಶೋಕನು ಹೊರುವಂತೆ ಆ ಅಂಗವಿನ್ಯಾಸವು ಸೂಚಿಸುವುದಾಗಿತ್ತೆಂದು ಹೇಳಿದರೂ ಒಪ್ಪುವಂತಿತ್ತು. ಅಶೋಕನು ಮೆಲ್ಲಗೆ ಅವಳ ನುಣುಪಾದ ತಲೆಕೂದಲನ್ನು ಸವರುತ್ತ ಮೆಲುದನಿಯಿಂದ ಪ್ರಶ್ನಿಸಿದನು.

" ಏನು, ಬಹಳ ಹೆದರಿದೆಯೇ ಮರಿಯಮ್ ? "

" ಹೂಂ ! " ಮರಿಯಮಳು ತನ್ನ ಕಣ್ಣುಗಳನ್ನು ತೆರೆದುಕೊಳ್ಳದೇ ತಾನು ಬೆಂಬಲವಾಗಿ ನಿಂತಿದ್ದ ರೀತಿಯಲ್ಲಿಯೇ ಉತ್ತರವಿತ್ತಳು. ಈ ಸುಖಾವಸ್ಥೆಯು ಸಮಾಪ್ತವಾಗಬಾರದೆಂದು ಆಸೆಯವಳದು.

ಅಶೋಕನು ಮೆದುವಾಗಿ ಅವಳ ತಲೆಯನ್ನು ತನ್ನ ಹೃದಯದಿಂದೆತ್ತಿ, ಅವಳ ಕೈಗಳನ್ನು ಹಿಡಿದುಕೊಂಡು, ಹಾಗೆಯೇ ಮುಂದಕ್ಕೆ ಕರೆದುಕೊಂಡು ಹೋಗಲಾರಂಭಿಸಿದನು.

ಈ ಪವಿತ್ರವಾದ ಕೈಗಳು ಜೀವನದ ಕೊನೆಯ ವರೆಗೆ ಅವಳಿಗೆ ಹೀಗೆಯೇ ಆಧಾರವಾಗಿದ್ದರೆ ಎಷ್ಟು ಒಳ್ಳೆಯದಾಗಿರಬಹುದು—ಎಂಬ ವಿಚಾರವೂ ಮರಿಯಮಳ ಮನಸ್ಸಿನಲ್ಲಿ ಮೂಡಿತು.

ಅಶೋಕನು ಅವಳ ಮೋಹಕವಾದ ವಿಶಾಲ ನೇತ್ರದ ಕಡೆಗೂ ಹಾಗೂ ಅವಳ ತೆಳ್ಳಗಿನ ಕೆಂದುಟಿಗಳ ಕಡೆಗೂ ನೋಡುತ್ತಾ ಇದ್ದನು.

" ನನ್ನ ಕಣ್ಣುಗಳಲ್ಲೇನು ನೋಡುತ್ತೀರಿ ? " ಮರಿಯಮಳು ಪ್ರಶ್ನಿಸಿದಳು.

" ಮರಿಯಮಳನ್ನು " ಎಂದು ಉತ್ತರಸಿಕ್ಕಿತು.

" ಅದರಲ್ಲಿ ನಿಮಗೆ ಮರಿಯಳು ಕಾಣಲಾರಳು. ನಿಮ್ಮ ಮೂರ್ತಿಯೇ ನಿಮಗದರಲ್ಲಿ ಕಾಣಿಸಿಕೊಳ್ಳುತ್ತದೆ. " ಅವಳು ಹೇಳುವದನ್ನೇನೊ ಹೇಳಿಯೇ

ತೀರಿಸಿದಳು. ಆದರೆ ಆಗವಳನ್ನು ಲಜ್ಜೆ ಮತ್ತು ಸಂಕೋಚಗಳು ಆವರಿಸಿದ್ದವು. ಕಣ್ಣುಗಳು ಕೆಳಗಿಳಿದವು.

ಒಮ್ಮೆಯೇ ಅವಳ ಕಪೋಲಗಳಿಗೆ........ಲೊ ಎಂದು ಅಶೋಕನು ಮನಸ್ಸಿನಲ್ಲಿ ಮುಂಡಿಗೆ ತಿಂದನು. ಆದರವನು ಬೇರೆ ಕಡೆಗೆ ತಿರುಗಿಕೊಂಡು ಒಂದು ಬಿಸಿ ಉಸಿರನ್ನೆಳೆದು ಹೊರಗೆ ಬಿಟ್ಟನು. ಅದರ ಉಷ್ಣತೆಯು ಮರಿಯಮಳ ಶರೀರಕ್ಕೆ ಒಂದು ಬಗೆಯ ಭಯವನ್ನು ಹುಟ್ಟಿಸಿತು.

ಇಷ್ಟರಲ್ಲೇ ಮರಿಯಮಳು ಅತ್ಯಾನಂದದಿಂದ ಕೂಗಿಕೊಂಡಳು " ಬಕುಲ ವೃಕ್ಷ, ಬಕುಲವೃಕ್ಷ" ಎಂದು.

ಎದುರಿಗೇನೇ ಪುಷ್ಪಗಳಿಂದ ತುಂಬಿದ ಒಂದು ಬಕುಲ ವೃಕ್ಷವು ಕಂಗೊಳಿಸುತ್ತಿತ್ತು.

" ಎಷ್ಟು ಅಂದವಾಗಿವೆ ಈ ಹೂವುಗಳು ! " ಮರಿಯಮಳು ಉಲ್ಲಾಸದೊಂದಿಗೆ ಹೇಳಿದಳು. " ಕೆಲವು ಹೂವುಗಳನ್ನು ಕೊಯ್ದುಕೊಳ್ಳೋಣವೆ ? "

ಅಶೋಕನ ಮನಸ್ಸು ಆಹ್ಲಾದಗೊಂಡಿತು. ಅವನು ಪಾದರಕ್ಷೆಗಳನ್ನು ತೆಗೆದಿಟ್ಟು ಕೂಡಲೆ ಮರವನ್ನು ಹತ್ತಿದನು. ಪ್ರಾಕೃತಿಕ ಸೌಂದರ್ಯದ ವಾತಾವರಣದಲ್ಲಿ ಅವನೂ ಚಿಕ್ಕಮಗುವಿನಂತೆ ಕ್ರೀಡಾರತನಾದನು.

ಅವನ ಚಂಚಲತೆಯನ್ನು ಕಂಡ ಮರಿಯಮಳೂ ಅಚ್ಚರಿಗೊಂಡಳು.

ಅಶೋಕನು ಕೈತುಂಬ ಹೂ ತುಂಬಿಕೊಂಡಾಗ, ಅವನೆಂದನು " ಇದೊ ತೆಗೆದುಕೊ " ಎಂದು.

ಮರಿಯಮಳು ತಲೆಯನ್ನೆತ್ತಿ ಹಿಂದಕ್ಕೆ ಬಾಗಿಸಿ, ತನ್ನೆರಡೂ ಕೈಗಳನ್ನು ಎತ್ತರಕ್ಕೆ ಚಾಚಿದಳು. ಆದರೆ ಅಶೋಕನು ಆ ಎಲ್ಲಾ ಪುಷ್ಪಗಳನ್ನು ಮರಿಯಮಳ ತಲೆಯ ಮೇಲೆ ಸುರಿದನು.

" ಆಹಾ ! ದೇವರು ನನ್ನ ಮೇಲೆ ಪುಷ್ಪವೃಷ್ಟಿಯನ್ನು ಮಾಡಿದನು " ಎನ್ನುತ್ತ ಕೆಳಗೆ ಬಿದ್ದ ಹೂಗಳನ್ನು ಹೆಕ್ಕಲು ಆರಂಭಿಸಿದಳು.

" ಇಲ್ಲ. ಅವುಗಳನ್ನೆತ್ತಿಕೊಳ್ಳಬೇಡ ಮರಿಯಮ್, ಅವು ಈಗ ನಿರ್ಮಾಲ್ಯಗಳಾಗಿವೆ. ನಾನು ಹೊಸತಾದ ಬೇರೆ ಕುಸುಮಗಳನ್ನು ಕೊಯ್ದು ಕೊಡುತ್ತೇನೆ. "

ಈ ಪ್ರಿಯವಚನಗಳನ್ನು ಕೇಳಿದ ಮರಿಯಮುಳ ಕಂಠವು ಗದ್ಗದಿತವಾಯಿತು.

" ಈಗ ಇವುಗಳನ್ನು ತೆಗೆದುಕೊ " ಅಶೋಕನೆಂದನು.

ಆ ರಮ್ಯವೂ, ಸುಗಂಧಿತವೂ ಆದ ಪುಷ್ಪಗಳ ಸಾಕ್ಷಿಯಲ್ಲಿ ಪುನಃ ಅವರಿಬ್ಬರ ಹಸ್ತವು ಸ್ಪರ್ಶವಾಯಿತು. ಒಂದು ಬಗೆಯ ಮಧುರ ಸಂಚಲನೆಯು ಇವರಿಬ್ಬರ ಶರೀರಗಳಲ್ಲೂ ಉಂಟಾಯಿತು. ಇಬ್ಬರೂ ಒಬ್ಬರನ್ನೊಬ್ಬರು ನೋಡಿಕೊಂಡು ಸುಂದರವಾದ ಮುಗುಳ್ನಗೆಯನ್ನು ನಕ್ಕರು.

ಇನ್ನೊಮ್ಮೆ ಇದೇ ರೀತಿ ಸಂಧ್ಯಾಸಮಯದ ಮುಳುಗುವ ಸೂರ್ಯನ ವಿವಿಧ ವರ್ಣರಂಜಿತ ಕಿರಣಗಳನ್ನು ನೋಡಲು ಅವರಿಬ್ಬರೂ ಸಂಜೆಯ ಬಿಸಿಲಲ್ಲೇ ಹೊರಟರು. ಈ ಸ್ಥಳವನ್ನು ಮುಟ್ಟಲು ಸುಮಾರು ಎರಡೂವರೆ ಮೈಲುಗಳ ದೂರವಿತ್ತು.

ಇಳಿಯುತ್ತಿರುವ ಪ್ರಭಾಕರನ ತೇಜಸ್ವಿಯಾದ ಕಿರಣಗಳಲ್ಲಿ ಕಾಲ್ನಡೆಯಲ್ಲೇ ಹೋಗುತ್ತಿದ್ದ ಕಾರಣ ಮರಿಯಮುಳ ಕೋಮಲವಾದ ಮುಖವು ಕೆಂಪೇರಿತು. ಗಂಟಲು ಒಣಗಿತು. ಆ ಸುಂದರವಾದ ಸ್ಥಳವನ್ನು ತಲಪುತ್ತಲೇ ಅವಳು ಚೇತರಿಸಿಕೊಂಡವಳಾಗಿ, ಒಂದು ಶಾಂತವಾದ ಶ್ವಾಸವನ್ನು ಹೊರಗೆಡಹಿದಳು.

" ಅಯ್ಯಮ್ಮಾ, ಈ ಬಿಸಿಲಾದರೊ—ನನ್ನನ್ನು ಬೆಂದ ಬದನೆ ಕಾಯಿಯ ಹಾಗೆ ಮಾಡಿಬಿಟ್ಟಿತು. ಇಡೀ ಶರೀರವೇ ಕಾದಿದೆ. ತಲೆಗೂ ಚೆನ್ನಾಗಿ ಬಿಸಿ ಏರಿದೆ. " ಹಾಗೆಯೇ ಅವಳು ಕರವಸ್ತ್ರವನ್ನು ಬೀಸಣಿಕೆಯಾಗಿ ಮಾಡಿಕೊಂಡಳು.

" ಸ್ವಲ್ಪ ನೋಡುತ್ತೇನೆ. " ಎನ್ನುತ್ತ ಅಶೋಕನು ಮರಿಯಮುಳ ಹಣೆಯನ್ನು ಸ್ಪರ್ಶಿಸಿದನು. " ನಿಜವಾಗಿಯೂ ಬಹಳವಾಗಿ ಬಿಸಿ ಏರಿ ಹೋಗಿದೆ. ನೀನು ತುಸು ವಿಶ್ರಮಿಸಿಕೋ ಕೆಲವು ನಿಮಿಷಗಳ ನಂತರ ಸ್ವಲ್ಪ ಶರಬತ್ತನ್ನು ಕುಡಿ. ಆಗ ಸುಧಾರಿಸಿಕೊಳ್ಳುತ್ತದೆ. "

" ಸರಿ. ಹಾಗಾದರೆ ನಾನು ಸ್ವಲ್ಪ ಒರಗಿಕೊಳ್ಳುತ್ತೇನೆ. " ಅವಳು ನೆಲದ ಮೇಲೆ ಮಲಗಲು ಉದ್ಯುಕ್ತಳಾದಳು.

ಅಶೋಕನು ಆ ಕೂಡಲೆ ಅವಳ ತಲೆಯ ಕಡೆಗೆ ಕೈಯನ್ನು ನೀಡುತ್ತ ಹೇಳಿದನು : " ಬೇಡ. ನೆಲದ ಮೇಲೆ ತಲೆಯನ್ನಿಟ್ಟು ಮಲಗಬೇಡ. ತಲೆಗೆ

ನೋವಾದೀತು. ಬಾ ಇಲ್ಲಿಗೆ; ನನ್ನ ಹತ್ತಿರಕ್ಕೆ." ಅವನು ಮರಿಯಮಳ ಶಿರಸ್ಸನ್ನು ತನ್ನ ತೊಡೆಯ ಮೇಲಿಟ್ಟುಕೊಂಡನು.

ಮರಿಯಮಳೂ ಇದನ್ನೇ ಕಾಯುತ್ತಿದ್ದಳೊ ಏನೊ! ಅವಳು ಸುಖವಾಗಿ ತನ್ನ ತಲೆಯನ್ನು ಅಶೋಕನ ತೊಡೆಯ ಮೇಲಿಟ್ಟು, ಎರಡೂ ಕಣ್ಣುಗಳನ್ನು ಮುಚ್ಚಿಕೊಂಡು, ಸುಖದ ಮೂರ್ಛೆಯನ್ನು ಹೊಂದಿದಳು. ಅಶೋಕನು ಅವಳ ತಪ್ತ ಮಸ್ತಕವನ್ನು ಮೃದುವಾಗಿ ಒತ್ತಲಾರಂಭಿಸಿದನು. ಅನಂತರ ಅದೇ ಸ್ನೇಹಾವೇಶಗೊಂಡ ಕೈ ಮರಿಯಮಳ ಕಾಂತಿಯುತವಾದ ಕಪೋಲಗಳನ್ನೂ, ಕಣ್ಣುಗಳನ್ನೂ ಹಾಗೆಯೇ ಪೂರ್ಣ ವದನವನ್ನೇ ಪ್ರೀತಿಯಿಂದ ಸವರಲಾರಂಭಿಸಿತು. ಕಡೆಗೆ ಪ್ರೇಮಪೂರಿತನಾಗಿ ಮೆಲ್ಲಗೆ ಕೇಳಿದನು: "ಈಗ ಹೇಗೆನಿಸುತ್ತಿದೆ ಮರಿಯಮ್?"

"ನನ್ನ ಶ್ರಮ ಪರಿಹಾರವಾಗಿ, ಮನಸ್ಸು ಹಾಯಾದಂತಿದೆ." ಅವಳು ಮುಚ್ಚಿದ ಕಣ್ಣುಗಳನ್ನು ತೆರೆಯದೆ ಹೇಳಿದಳು:

"ಈಗ ನನ್ನಂತಹ ಸುಖಿಯಾದ ನಾರಿಯು ಇಡೀ ಪ್ರಪಂಚದಲ್ಲೇ ಇಲ್ಲ."

"ಹೌದು, ಹೌದು. ಅರ್ಥವಿಲ್ಲದ ಮಾತನಾಡಬೇಡ" ಅಶೋಕನೆಂದನು.

ಇದು ಮರಿಯಮಳ ಕಿವಿಗೆ ಕೇಳಿಸಿದರೂ ಒಂದೂ ಕೇಳದವಳಂತೆ ನಟಿಸಿದಳು. ಅವಳು ತನ್ನ ವಿಚಾರಗಳಲ್ಲಿಯೇ ಮಗ್ನಳಾಗಿದ್ದಳು. "ಇದೇ ಕ್ಷಣದಲ್ಲಿ ನನ್ನನ್ನು ಕಾಲನು ಬಂದು ಕೊಂಡೊಯ್ದನೆಂದರೆ, ನನ್ನ ಭಾಗ್ಯವು ಅದರ ತುತ್ತುದಿಯನ್ನು ಮುಟ್ಟಿದಂತೆ."

"ನೀನು ಒಮ್ಮೊಮ್ಮೆ ಇಂತಹ ದುಃಖದಾಯಕ ಪ್ರಸಂಗಳನ್ನೇಕೆ ಸ್ಮರಿಸುತ್ತೀ ಮರಿಯಮ್?" ಅಶೋಕನು ವ್ಯಸನಚಿತ್ತನಾಗಿ ಕೇಳಿದನು.

"ಇಲ್ಲ. ಅದು ದುಃಖದಾಯಕ ಪ್ರಸಂಗವೂ ಅಲ್ಲ. ಅಂತಹ ಮಾತೂ ಅಲ್ಲ. ಅದು ನನ್ನ ಜೀವನದ ಪರಮ ಸುಖದಾಯಕ ಪ್ರಸಂಗ. ಅದನ್ನೇ ನಾನು ಭಗವಂತನಲ್ಲಿ ಬೇಡುವುದೂ ಕೂಡ." ನಿಶ್ಚಲವಾದ ಮನಸ್ಸಿನೊಂದಿಗೆ ಮರಿಯಮಳೆಂದಳು. "ನನ್ನಂತಹ ಅನಾಥ ಹುಡುಗಿಯ ಜೀವನವೆಂಬುದಾದರೂ ಏನು? ಮರಣವೆಂಬುದಾದರೂ ಏನು? ನನ್ನ ಜೀವನಮರಣಗಳಿಂದ

ಯಾರಿಗೆ ಏನಾಗಬೇಕಾಗಿದೆ? ನಿಮ್ಮ ತೊಡೆಯ ಮೇಲೆಯೇ ನನ್ನ ಆಯುಷ್ಯದ ಕೊನೆಯಾಯಿತೆಂದರೆ, ನನ್ನ ಭಾಗ್ಯಹೀನ ಜೀವನದಲ್ಲೂ ಕೂಡ ಪರಮ ಸೌಭಾಗ್ಯವು ಎದ್ದು ಕಾಣದೇ? ”

ಅಶೋಕನು ವಿಚಲಿತ ಮನಸ್ಕನಾದನು. ಅವನು ತಾನಾಗಿ ಒಂದನ್ನೂ ಹೇಳಲಿಲ್ಲ. ಆದರೆ ಅವನು ಮರಿಯಮಳ ತಲೆಯನ್ನೆತ್ತಿ ಎದೆಗಪ್ಪಿಕೊಂಡು, ಹಾಗೆಯೇ ಅದನ್ನು ಸವರಲಾರಂಭಿಸಿದನು.

ಇಲ್ಲಿಯ ತನಕ ಪ್ರೇಮವೇ ಶೂನ್ಯವೆಂದು ಹೇಳುತ್ತಿದ್ದ ಅವನ ಮನಸ್ಸು ಈಗ ಈ ಮಧುರವಾದ ಅನುಭವಾನಂತರ, ನಾರಿಯ ಕೋಮಲವಾದ ಆಲಿಂಗನಕ್ಕಾಗಿ ಹಾತೊರೆಯುವಂತಾಗಿತ್ತು. ಪ್ರತಿದಿನವೂ ಮರಿಯಮಳ ಸುಂದರ ಕಪೋಲಗಳ ಆ ತೆಳ್ಳಗಿನ ತುಟಿಗಳ ಆಕರ್ಷಣೆಯು ಇವನನ್ನು ಮೋಹಿತನನ್ನಾಗಿ ಮಾಡುತ್ತಿರುವದನ್ನು ಅವನು ಇಂದೇ ತನ್ನಲ್ಲಿ ತಾನೇ ತಿಳಿದುಕೊಂಡನು. ಮಾತ್ರವಲ್ಲದೆ ಆ ರಮಣಿಯ ಕರೆ ಇವನ ಹೃದಯದಲ್ಲಿ ಗುಲ್ಲೆಬ್ಬಿಸುತ್ತಿತ್ತು. ಇದು ಬರಿ ಪಾಶವಿಕ ಶಕ್ತಿಯಲ್ಲ. ಅವನ ಹೃದಯದ ಒಂದು ಮೂಲೆಯಲ್ಲಿ ಆಂದೋಲನವನ್ನುಂಟು ಮಾಡುವ ಪಾಶವಿಕ ಶಕ್ತಿಗಿಂತಲೂ ಮೇಲಾದ ಉನ್ನತ ಶಕ್ತಿ. ಹೀಗಿದ್ದರೂ ಈ ಪವಿತ್ರ ಸನ್ನಿವೇಶದೆಡೆಗೆ ಎಂದಿನ ತನಕ ಅವನ ದೃಷ್ಟಿಯು ದುರ್ಲಕ್ಷ್ಯವಾಗಿಯೇ ಉಳಿಯುವದೊ ತಿಳಿಯದು.

ಅಶೋಕನ ಮನಸ್ಸಿನಲ್ಲಿ ಒಂದು ವಿಚಿತ್ರ ರೀತಿಯ ಅಶಾಂತಿಯು ತುಂಬಿಕೊಂಡಿತ್ತು. ಮರಿಯಮಳಿಂದ ಇವನು ದಿನಂಪ್ರತಿ ಆಕರ್ಷಿತನಾಗುತ್ತಿದ್ದನು. ಅವಳ ಸುಂದರವೂ ಪುಷ್ಟವೂ ಆದ ಶರೀರದ ಮೋಹವೂ ಜೊತೆಗೆ ಉಂಟಾಗುತ್ತಿತ್ತು. ಅವಳಲ್ಲಿ ಅಡಗಿಕೊಂಡಿರುವ ಸರಳತೆ, ಸತ್ಯತೆ ಮತ್ತು ಉಪದೇಶಾತ್ಮಕ ಅಭಿಪ್ರಾಯ ಇವುಗಳೆಲ್ಲ ಇವನನ್ನು ಅವಳೆಡೆಗೆ ಬಲಪೂರ್ವಕವಾಗಿ ಎಳೆಯುತ್ತಿದ್ದವು. ಅವನಾದರೂ ಎಷ್ಟು ದಿನಗಳ ತನಕ ಈ ಸ್ತ್ರೀ ಶಕ್ತಿಗೆ ಎದುರಾಗಿ ನಿಲ್ಲಲು ಸಾಧ್ಯ? ಈ ಸ್ವಾಭಾವಿಕ ಪ್ರವೃತ್ತಿಗಳೆದುರು ಅವನ ಸಂಯಮ ಶಕ್ತಿಯೂ ಕೂಡ ದುರ್ಬಲವೆನಿಸಿಕೊಳ್ಳದೇ?

ಪುನಃ ಪುನಃ ಅದೇ ವಿಚಾರ. ಅದು ಮುಗಿಯುವಂತಿರಲಿಲ್ಲ. ಜವಾಬ್ದಾರಿ ಎಂಬುದು ಕೂಡ ಅಲ್ಲಿಂದಲೇ ಹುಟ್ಟುತ್ತದೆ. ಈ ಭಯಂಕರ ಭವಿಷ್ಯದ ಜವಾಬ್ದಾರಿಯನ್ನು ಅವನು ಹೇಗೆ ನಡೆಸಿಕೊಂಡು ಹೋಗಲು ಸಾಧ್ಯ. ಕೊನೆಗೆ

ಅವನ ಕಲಾವಿಚಾರವಾದರೂ ಏನಾಗಬಹುದು ? ಅವನ ಮಹತ್ವಾಕಾಂಕ್ಷೆಗಳ ಪರಿಣಾಮವಾದರೂ ಏನಾಗಬಹುದು? ಕಲೆ ಮತ್ತು ಸ್ತ್ರೀ ಇವೆರಡರ ಆರಾಧನೆಯನ್ನು ಏಕಕಾಲದಲ್ಲಿ ಅವನು ಹೇಗೆ ಮಾಡಬಲ್ಲನು? ಈ ವಿಚಾರವಾಗಿ ಮರಿಯಮಳು ಹಲವು ಬಾರಿ ಹೇಳಿದ್ದಳು. ಕಲೆ ಮತ್ತು ಸ್ತ್ರೀ ಇವೆರಡರ ಸುಂದರವಾದ ಸಮನ್ವಯವು ಆಗಲು ಖಚಿತವಾಗಿಯೂ ಸಾಧ್ಯವಿದೆ ಎಂದು. ಆದರೆ ಬೇರೆ ಯಾರಾದರೂ ಇದನ್ನು ಪ್ರಯೋಗಿಸುವುದಾದರೆ ಪ್ರಯೋಗಿಸಲಿ. ಅವನ ಶಕ್ತಿಗೆ ಮೀರಿದ ಅಸಾಧ್ಯವಾದ ಈ ಆದರ್ಶವನ್ನು ಅವನು ಮಾತ್ರ ಸಫಲತಾಪೂರ್ವಕವಾಗಿ ಮಾಡಲಾರನೆಂಬ ಅಭಿಪ್ರಾಯವು ಅವನನ್ನು ಆಗಾಗ ಎಚ್ಚರಿಕೆ ಹೇಳುತ್ತಿತ್ತು.

ಹದಿನೈದು

ಶೀತಲವಾದ ತಿಂಗಳ ಬೆಳಕಿನ ರಾತ್ರಿ. ಮಧ್ಯರಾತ್ರಿಯ ತಂಪಾದ ಗಾಳಿಯು ಮಂದವಾಗಿ ಬೀಸುತ್ತಿತ್ತು. ಅದು ಮಲಗಿದ್ದ ಎಲೆಗಳನ್ನು ಮೆತ್ತಗೆ ಎಬ್ಬಿಸಿ, ಸರ್‌ಸರ್ ಎಂದು ಅಲುಗಿಸುತ್ತಿತ್ತು. ಬಂಗಲೆಯ ಆವರಣದೊಳಗಿನ ರಜನೀಗಂಧದ ಅರಳಿದ ಹೂಗಳು ತಮ್ಮ ಮಾದಕ ಸುಗಂಧವನ್ನು ಸುತ್ತಮುತ್ತಲೆಲ್ಲ ಹರಡಿದ್ದವು.

ಅಶೋಕನು ಅದುವರೆಗೂ ನಿದ್ರಿಸಿರಲಿಲ್ಲ. ಅವನು ದೀಪವನ್ನಷ್ಟು ದೊಡ್ಡದು ಮಾಡಿ ಒಂದು ಕಾದಂಬರಿಯನ್ನು ಓದಲಾರಂಬಿಸಿದನು. ಕಷ್ಟದಿಂದ ಅರ್ಧ ಗಂಟೆಯ ವರೆಗೆ ಓದಿರಬಹುದು. ಆಗಲೇ ಅವನ ಮನಸ್ಸೂ ಮಾರ್ಪಾಟು ಹೊಂದಿ ದೀಪದಬೆಳಕನ್ನು ಇಳಿಸದೆ ಹಾಗೆಯೇ ಒರಗಿಕೊಂಡನು. ಸುಮಾರು ಅರ್ಧ ಘಂಟೆ ಈ ರೀತಿ ಒರಗಿರಬಹುದು. ಪುನಃ ಚಟ್ಟನೆ ಎದ್ದು, ಬಾಗಿಲು ತೆರೆದು ಬಂಗಲೆಯ ಹಿಂದಿನಜಗಲಿಯ ಮೇಲಿರುವ ಆರಾಮು ಖುರ್ಚಿಯಲ್ಲಿ ಹೋಗಿ ಕುಳಿತನು.

ಅಕಸ್ಮಾತ್ತಾಗಿ ಎದುರಿನ ಅರಳೀ ಮರದ ನೆರಳಲ್ಲಿ ಒಂದು ಆಕೃತಿಯು

ಅವನಿದ್ದ ಕಡೆಗೇ ಮೆದುವಾಗಿ ಬರುತ್ತಿರುವುದನ್ನು ಕಂಡನು. ಒಮ್ಮೆಗೆ ಅವನು ಭಯಗೊಂಡನು. ಗಮನಿಸಿ ನೋಡಿದಾಗ ಬರುತ್ತಿದ್ದ ಆಕೃತಿಯು ಮರಿಯಮ ಳದ್ದೆಂದು ತಿಳಿಯಿತು. ಅವನ ಬಾಯಿಯಿಂದ ವಿಸ್ಮಯ ಸಹಿತವಾದ ಒಂದು ಪ್ರಶ್ನೆಯು ಹೊರಬಂದಿತು.

"ಈ ಅವೇಳೆಯಲ್ಲಿ ನೀನು ಈ ಕಡೆ ಏತಕ್ಕಾಗಿ ಬಂದೆ ಮರಿಯಮ್ ?"

"ಏನು ಮಾಡಲಿ ನನಗೆ ನಿದ್ದೆಯೇ ಬರಲಿಲ್ಲ. ನಾನು ಕೋಣೆಯ ಕಿಡಿಕಿಯಿಂದ ನಿಮ್ಮ ಕೋಣೆಯನ್ನು ಅಷ್ಟು ಹೊತ್ತಿನಿಂದ ನೋಡುತ್ತ ಇದ್ದೆ. ನಿಮಗೂ ಈ ದಿನ ನಿದ್ದೆ ಬರಲಿಲ್ಲವೆಂದು ತಿಳಿಯಿತು."

"ಹೌದು" ಎಂಬ ಏಕಪದ ಒಂದೇ ಅವನ ಬಾಯಿಂದ ಬಂತು. ಮರಿಯ ಮಳು ಅವನ ಆರಾಮು ಕುರ್ಚಿಯ ಕೈಯ ಮೇಲೆ ಕುಳಿತಳು.

"ಎಂತಹ ಮನೋಲ್ಲಾಸವನ್ನೊದಗಿಸುವ ಸಮಯ ಮರಿಯಮ್."

"ಹೌದು"

ಅಶೋಕನು ಮರಿಯಮಳ ಕಡೆಗೆ ನೋಡಲಾರಂಭಿಸಿದನು. ಅವಳ ವಿಶಾಲ ನೇತ್ರಗಳು ಆ ಅಂಧಕಾರದಲ್ಲಿಯೂ ಚಮಕಿಸುತ್ತಿದ್ದವು. ಕೋಮಲಾಂ ಗಿಯಾದ ಮರಿಯಮಳ ದೇಹದಲ್ಲಿ ಒಂದು ವಿಧವಾದ ನಡುಕ ಉಂಟಾಯಿತು. ಅವಳ ನಾಡಿಗಳಲ್ಲಿ ರಕ್ತವು ವೇಗವಾಗಿ ಹರಿಯಲಾರಂಭಿಸಿತು.

ಅಶೋಕನು ತನ್ನ ಕೈಗಳಿಂದ ಮರಿಯಮಳ ನಡುವನ್ನು ಬಿಗಿದು ತನ್ನ ಪಕ್ಕಕ್ಕೆ ಸೆಳೆದುಕೊಂಡನು. ಮರಿಯಮಳಾದರೊ ತನ್ನ ಬಲಗೈಯನ್ನು ಅಶೋ ಕನ ಭುಜದ ಮೇಲಿಟ್ಟು ಎಡಗೈಯಿಂದ ಅವನ ನೀಳವಾದ ಕೂದಲನ್ನು ಸವರ ಲಾರಂಭಿಸಿದಳು.

"ನೀನು ಈ ಹೊತ್ತಿಗೆ ಇಲ್ಲಿಗೆ ಬರಬಾರದಿತ್ತು ಮರಿಯಮ್" ಅಶೋ ಕನು ಮರುದನಿಯಲ್ಲೆಂದನು.

"ಅದೇಕೆ ?"

"ನನ್ನನ್ನು ಕೇಳಬೇಡ."

"ಏನು ? ನಿಮಗೆ ನನ್ನಿಂದ ಭಯವಾಗಬಹುದೇ ?"

"ಇಲ್ಲ. ನನ್ನಿಂದಲೇ ನನಗೆ ಭಯವಾಗುತ್ತಿದೆ."

"ಹುಂ !" ನೀವು ಹೊರಗಿನ ಜಗಲಿಯ ಕಡೆಗೆ ಬರುವುದನ್ನು ಕಂಡೆ.

ನಾನೂ ಸದ್ದಿಲ್ಲದೆ ಈ ಕಡೆಗೆ ಬಂದೆ. ನನಗೂ ಏಕೋ ಒಬ್ಬಂಟಿಗಳಾಗಿರಲು ಮನಸ್ಸು ಒಪ್ಪಲಿಲ್ಲ.

"ಒಬ್ಬಂಟಿಗಳೇ!" ತುಟಿಗಳ ಒಳಗಿಂದೊಳಗೇ ಅಶೋಕನೆಂದನು.

"ಅಶೋಕ್ ಬಾಬೂ!" ಮರಿಯಮಳು ಕಾತರತೆಯಿಂದ ಕೂಗಿದಳು.

ಅಶೋಕನು ಎದ್ದುನಿಂತನು. ಮರಿಯಮಳೂ ಎದ್ದು ನಿಂತಳು. ಇಬ್ಬರೂ ಒಬ್ಬರಿಗೊಬ್ಬರು ಸರಿಯಾಗಿ ಎದುರೆದುರಾಗಿ ನಿಂತಿದ್ದಾರೆ.

"ಅಶೋಕ್ ಬಾಬೂ" ಮರಿಯಮಳು ಪುನಃ ಕಂಪಿತ ಸ್ವರದೊಂದಿಗೆ ಎಂದಳು. "ನೀವೇತಕ್ಕೆ ತಿಳಿಯುವುದಿಲ್ಲ?"

ಕ್ಷಣ ಹೊತ್ತಿನ ವರೆಗೆ ಉತ್ತರಿಸಲು ಇಚ್ಛೆ ಇಲ್ಲದವನಾದರೂ ಅಶೋಕನು ಪುನಃ ಉತ್ತರ ರೂಪವಾಗಿ ಮರಿಯಮಳನ್ನು ತನ್ನ ಬಾಹುಪಾಶಗಳಿಂದ ಬಿಗಿಯಾಗಿ ಅಪ್ಪಿಕೊಂಡನು. ಅನಂತರ ಮೆಲ್ಲಗೆ ತನ್ನ ತಲೆಯನ್ನು ತಗ್ಗಿಸಿ ಅವಳ ಗಲ್ಲವನ್ನು ಮೇಲಕ್ಕೆತ್ತಿ, ಅವಳ ಅಧರಗಳಿಗೆ ಅತಿ ತೀವ್ರವಾಗಿ ಒಂದು ಮುತ್ತನ್ನಿತ್ತನು.

ಮರಿಯಮಳು ತನ್ನ ಅರೆಹುಚ್ಚಾದ ಮನಸ್ಸಿನೊಂದಿಗೆ ಕಣ್ಣುಗಳೆರಡನ್ನೂ ಮುಚ್ಚಿಕೊಂಡಳು. ಈ ಪರಮಾನಂದಮಯ ಕ್ಷಣದ ಸರ್ವಸುಖವನ್ನೂ ಅನುಭವಿಸಲು ಅವಳ ಸರ್ವೇಂದ್ರಿಯಗಳೂ ತನ್ಮಯವಾಗಿದ್ದವು.

ಅವಳ ದೇಹದಲ್ಲಿ ಒಂದು ಬಗೆಯ ಮಧುರ ರಸವು ಹರಿಯಲಾರಂಭಿಸಿತು. ಅವಳ ತನುಮನಗಳೆರಡೂ ಒಂದು ವಿಧದ ಅಪೂರ್ವ ಚಪಲತೆಯನ್ನು ಹೊರಗೆಡಹುತ್ತಿದ್ದವು. ಆಗ ಅವಳಿಗೆ ಇನ್ನಾವ ವಸ್ತುವಿನ ಧ್ಯಾನವೂ ಇರಲಿಲ್ಲ. ಅತ್ತ ಅಶೋಕನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲವೆನ್ನಬಹುದು.

ಸ್ವಪ್ನದಲ್ಲಿ ಮಾತನಾಡುವಂತೆ ಮರಿಯಮಳು "ಅಶೋಕ ಬಾಬೂ! ಈ ಸುಂದರ ರಾತ್ರಿಯು ನಮಗಿಬ್ಬರಿಗಾಗಿಯೇ ಬಂದಿದೆ" ಎಂದಳು.

ಈ ರೀತಿಯ ಸಮಾಧಿ ಸ್ಥಿತಿಯಲ್ಲಿ ಅವರಿಬ್ಬರೂ ಎಷ್ಟು ಹೊತ್ತು ಕಳೆದರೆಂಬುದು ತಿಳಿಯದು.

ಮರುದಿನ ಅವನು ತಡವಾಗಿ ಎದ್ದಾಗ, ಅವನಿಗೆ ಈ ರೀತಿಯ ಮಧುರ ಸ್ವಪ್ನವನ್ನು ಎಷ್ಟು ವರ್ಷಗಳಿಂದ ಕಾಣುತ್ತಿದ್ದೇನೆಂಬ ಶಂಕೆಯು ಹುಟ್ಟಿತು. ಅಬ್ದುಲ್ಲನು ಅವನ ಮಂಚದ ಬಳಿ ಚಾ ಪಾತ್ರೆಯನ್ನಿಟ್ಟು ಅಂಗಡಿಗೆ ಸಾಮಾನು

ತರಲು ಹೋಗಿದ್ದನು. ಅಶೋಕನು ಚಾ ಕುಡಿದು ಪುನಃ ಹಾಸಿಗೆಯಲ್ಲೇ ಬಿದ್ದುಕೊಂಡನು. ಕಣ್ಣುಗಳನ್ನು ಮುಚ್ಚಿಕೊಂಡು ರಾತ್ರಿಯ ಸುಖಸ್ವಪ್ನವನ್ನು ಮನಸ್ಸಿನಲ್ಲೇ ಅನುಭವಿಸಲು ಆಶಿಸಿದನು.

ಮರಿಯಮಳು ಗುಲಾಬಿ ಹೂವಿನ ಗೊಂಚಲೊಂದನ್ನು ಕೈಯಲ್ಲಿ ಹಿಡಿದುಕೊಂಡು, ಒಂದು ಹಾಡನ್ನು ಗೊಣಗುತ್ತ ಒಳಗೆ ಅಶೋಕನಿದ್ದೆಡೆಗೇ ಬಂದು ಅವನ ಮಂಚದಲ್ಲೇ ಕುಳಿತಳು. ಹೂಗೊಂಚಲನ್ನು ಅವನ ಕೈಗಿತ್ತಳು. ಅಶೋಕನು ಅವಳನ್ನು ಸ್ನೇಹಪೂರ್ವಕವಾಗಿ ನೋಡಿ ಪ್ರಶ್ನಿಸಿದನು.

"ಏನು ? ನಿನ್ನೆಯದೆಲ್ಲ ನಿಜವೇ ?"

ಮರಿಯಮಳು ಉತ್ತರವನ್ನೀಯಲಿಲ್ಲ. ಅತ್ತಿತ್ತ ನೋಡಿ, ಪಟ್ಟೆಂದು ಅಶೋಕನ ತುಟಿಗಳಿಗೊಂದು ಮೃದುವಾದ ಮುತ್ತಿಟ್ಟಳು.

"ಹಾಗಾದರದು ನಿಜವಾಗಿತ್ತಲ್ಲವೇ ?" ಅಶೋಕನು ಕೇಳಿದನು.

"ತಾವು ನನ್ನಲ್ಲಿ ಅನುರಕ್ತರಾಗಿದ್ದೀರೆಂದು ನನಗೆ ತಿಳಿದಿತ್ತು. ಮತ್ತು ನಾನು ? ಹೌದು ! ನಾನು ಅದನ್ನೆಂದಿಗೂ ಮರೆಯಲಾರೆ. ಎಂದೂ ಅದಕ್ಕಾಗಿ ಪಶ್ಚಾತ್ತಾಪವನ್ನು ಪಡೆಯಲಾರೆ."

"ನಿಜವಾಗಿಯೂ ?"

"ನಿಜವಾಗಿಯೇ ಮಾತ್ರವೇನು ? ಸಂಪೂರ್ಣ ನಿಜವಾಗಿಯೂ" ಮರಿಯಮಳು ದೃಢತೆಯೊಂದಿಗೆ ಹೇಳಿದಳು. "ನಿಮ್ಮನ್ನು ಕಾಣುವುದಕ್ಕೆ ಮೊದಲು ನಾನು ಜೀವನದ ನಿಜವಾದ ಆನಂದವನ್ನು ತಿಳಿದುಕೊಂಡಿರಲಿಲ್ಲ. ಈಗ ಆ ಅನುಭವದ ಅರಿವಾಯಿತು. ಪುರುಷನು ಸ್ತ್ರೀಗೂ, ಸ್ತ್ರೀಯು ಪುರುಷನಿಗೂ ಅತ್ಯಾವಶ್ಯಕ ಅಶೋಕ್ ಬಾಬೂ. ಇವರಿಬ್ಬರ ಸುಖಸಂಯೋಗದ ವಿನಹ ಜೀವನ ಸಂಪೂರ್ಣವಾಗದು. ಈಗಲೂ ನನಗೆ ನಿಮ್ಮ ಹೃದಯದಲ್ಲಿ ಏನೂ ಸ್ಥಾನ ಸಿಗದೇ ?"

ಅಶೋಕನು ಒಂದನ್ನೂ ಹೇಳಲಿಲ್ಲ. ಮರಿಯಮಳು ಇದಕ್ಕೆ ಉತ್ತರವನ್ನು ಅಪೇಕ್ಷಿಸದಷ್ಟು ಉಲ್ಲಾಸಯುತಳಾಗಿದ್ದಳು. ಅಲ್ಲದೆ ಇದಕ್ಕೆ ಉತ್ತರ ಸಿಗಲಿಲ್ಲವಲ್ಲಾ ಎಂಬ ವ್ಯಥೆಯನ್ನೂ ಹಚ್ಚಿಕೊಳ್ಳಲಿಲ್ಲ ಆ ಚಪಲೆ.

ಅವಳಿಗೆ ಲೋಕದಲ್ಲಿ ಎಲ್ಲೆಡೆಯಲ್ಲಿಯೂ ಆನಂದವೇ ಆನಂದ ತುಂಬಿ ಹೋಗಿದ್ದಂತೆ ತೋರಿತು. ಯಾರಾದರೂ ಅಳುವುದು, ದುಃಖಪಡುವುದು

ಇತ್ಯಾದಿಗಳು ಅಪ್ರಯೋಜಕವೆಂದು ಅವಳ ಮತ. ಮಿಸ್ ಥಾಮಸರ ಆಶ್ರಯವೂ ಆಗ ಅವಳಿಗೆ ಉದಾತ್ತವೂ, ಉದಾರವೂ ಆಗಿ ಕಂಡಿತು. ಇಟಾರಸಿಯಿಂದ ಬಂದ ಮೋಟಾರುಗಳಿಗೂ ಹೊಸ ಬಣ್ಣ ಬಳೆದಿದ್ದರು. ಅದರಲ್ಲಿದ್ದ ಪ್ರತಿಯೊಬ್ಬ ಸ್ತ್ರೀ-ಪುರುಷರೂ ಇವಳಿಗೆ ಸಭ್ಯರೆಂದು ಕಾಣಿಸಿಕೊಂಡರು. ಅವಳ ದೃಷ್ಟಿಗೆ ಜಡ ಜಗತ್ತೇ ಬದಲಾಗಿ ಹೋಗಿತ್ತು. ಇದೇ ಸ್ವರ್ಗವಲ್ಲದೆ ಬೇರಾವ ಸ್ವರ್ಗವಿದೆ ಎಂಬ ವಿಚಾರವು ಮರಿಯಮಳಲ್ಲಿ ಉಂಟಾಗುತ್ತಿತ್ತು.

ಹದಿನಾರು

ಮರಿಯಮಳಲ್ಲಿ ಉಂಟಾಗಿದ್ದ ನಿರ್ಮಲಾನಂದವು ಅಶೋಕನಲ್ಲೂ ಸಾಂಕ್ರಾಮಿಕದಂತೆ ಹರಡಿತು. ಅವನ ಜೀವನದಲ್ಲಿ ಇದುವರೆಗೆ ಎಂದೂ ಉಂಟಾಗದ ಆನಂದವನ್ನು ಅವನು ಆಗ ಕಂಡನು.

ಈ ರೀತಿಯಾಗಿ ಕಲಾಪೂರ್ಣವೂ ಮತ್ತು ಪ್ರಣಯಾನುಭೂತವೂ ಆದ ಆನಂದದಲ್ಲಿ ಅಶೋಕ ಹಾಗೂ ಮರಿಯಮಳ ದಿನಗಳು ಉರುಳತೊಡಗಿದವು. ದಿನವೆಂದು ಮೂಡಿ ಎಂದು ಕತ್ತಲಾಗುತ್ತಿತ್ತೆಂಬುದರ ಅರಿವೂ, ಅಲ್ಲದೆ ಆ ದಿನವನ್ನು ತಾವು ಹೇಗೆ ಕಳೆದೆವೆಂಬ ಅರಿವೂ ಇಬ್ಬರಲ್ಲೊಬ್ಬರಿಗೂ ಇರಲಿಲ್ಲ. ಅವರು ಜೀವನವೇ ಒಂದು ಸುಂದರವಾದ ಸುವರ್ಣ ಪಾತ್ರೆಯಂತೆ ಭಾಸವಾಗುತ್ತಿದ್ದುದನ್ನು ಕಾಣುತ್ತಿದ್ದರು.

ಈಗ ಅಶೋಕನು ತನ್ನ ಭಾವನೆಗಳೊಂದಿಗೆ ಜಗಳಾಡುವುದನ್ನು ಪೂರ್ಣವಾಗಿ ನಿಲ್ಲಿಸಿದ್ದನು. ಅಲ್ಲದೆ ತನ್ನನ್ನು ತಾನು ಆ ಭಾವನಾತರಂಗದಲ್ಲಿ ಸ್ವತಂತ್ರವಾಗಿ ಹರಿಯಲು ಬಿಟ್ಟಿದ್ದನು. ಇದರ ಅವಸಾನವಾದರೂ ಏನಾಗಿರಬಹುದು, ಇದರ ಜವಾಬ್ದಾರಿಯಾದರೂ ಎಲ್ಲಿಂದ ಆರಂಭಿಸುವುದು, ಮತ್ತು ಎಲ್ಲಿ ಮುಕ್ತಾಯವಾಗುವುದು.... ಈ ಬಗೆಯ ಪ್ರಶ್ನೆಗಳು ಅವನಲ್ಲಿ ಒಮ್ಮೊಮ್ಮೆ ಹುಟ್ಟುತ್ತಿದ್ದು, ಅವನ ಮನಸ್ಸನ್ನು ಅಶಾಂತಿಗೊಳಿಸುತ್ತಿದ್ದವು. ಈಗ ಅವನ ಮೆದುಳು ಮತ್ತು ವಿವೇಕವು ತೀಕ್ಷ್ಣವಾಗಿಯೂ ತುಲನಾತ್ಮಕವಾಗಿಯೂ ಕೆಲಸ ಮಾಡದಿರುವುದರಿಂದ ಮೇಲಿನ ಪ್ರಶ್ನೆಗಳಿಗೆ ಉಚಿತ ಉತ್ತರವನ್ನು

ಕೊಡಲು ಅವನು ಅಸಮರ್ಥನಾಗಿದ್ದನು. ಭಾವನೆಗಳ ಬಿರುಗಾಳಿಯ ಎದುರು ಅವನು ಪೂರ್ಣ ಬಲಹೀನನಾಗಿ ಅಸಹಾಯನಾಗಿ ನಿಂತಿದ್ದನು.

ಇಷ್ಟು ದೂರ ಮುಂದೊತ್ತಿ ಬಂದಾಗಲೂ ಅಶೋಕನ ಮನಸ್ಸಿನ ಒಂದು ಮೂಲೆಯಲ್ಲಿ ದ್ವಂದ್ವವಿದ್ದೇ ಇದೆ. ಒಮ್ಮೊಮ್ಮೆ ಇದನ್ನು ನೋಡಿ ಮರಿಯ ಮಳು ಉದಾಸೀನಳಾಗುತ್ತಿದ್ದಳು. ಆದರೆ ಅವಳು ಒತ್ತಾಯವಾಗಿ ಯಾರ ಜೀವನದಲ್ಲೂ ಸೇರಿ ಹೋಗಲು ಇಚ್ಛಿಸುವ ನಾರಿಯರ ಸ್ತೋಮಕ್ಕೆ ಸೇರಿದ ಸ್ತ್ರೀಯಲ್ಲ. ಆದ್ದರಿಂದ ಕೊನೆಯ ತೀರ್ಪಿನ ಪೂರ್ಣ ಜವಾಬ್ದಾರಿಯನ್ನು ಅಶೋಕನ ಮೇಲೆಯೇ ಬಿಟ್ಟುಬಿಟ್ಟಿದ್ದಳು.

ಒಂದು ದಿನ ಬೆಳಗ್ಗಿನ ಸುತ್ತಾಟವನ್ನು ಮುಗಿಸಿಕೊಂಡು ಬರುತ್ತಿದ್ದಾಗ ಬೈತೂಲದಿಂದ ಅಂಚೆಯವನು ಒಂದು ತಂತಿಯೊಂದಿಗೆ ಇವನನ್ನು ಕಾಯುತ್ತಿದ್ದುದನ್ನು ಅಶೋಕನು ಕಂಡನು.

ಮನೆ ಸೇರಿದ ಮರಿಯಮಳು ತನ್ನ ಕೆಲಸದಲ್ಲಿ ನಿರತಳಾದಳು. ಅಶೋಕನು ತಂತಿಯನ್ನೊಡೆದು ಓದುತ್ತಿದ್ದಾಗ, ಮರಿಯಮಳು ತನ್ನ ಕೆಲಸವನ್ನು ತುಸು ನಿಲ್ಲಿಸಿ, ಅದರಲ್ಲೇನಿದೆ ಎಂಬುದನ್ನು ನೋಡಲು ಉತ್ಸುಕಳಾಗಿ ಅಶೋಕನಿದ್ದೆಡೆಗೆ ಬಂದಳು. ತಂತಿ ಎಂಬ ಹೆಸರನ್ನು ಕೇಳಿ ಮೊದಲೇ ಅವಳು ತುಸು ಹೆದರಿದ್ದಳು.

ತಂತಿಯ ಮೂರು ಪುಟಗಳ ಸಮಾಚಾರವು ಸಾರಂಗಪುರದ ಮಹಾರಾಜರ ಆಪ್ತ ಕಾರ್ಯದರ್ಶಿಯಿಂದ ಬಂದುದೆಂದು ತಿಳಿಯಿತು. ತಂತಿಯ ಭಾವವು ಈ ರೀತಿ ಇತ್ತು:—

ಮುಂದಿನ ತಿಂಗಳು ಇಪ್ಪತ್ತನೇ ತಾರೀಖಿಗೆ ಯುವರಾಜರ ಕಲ್ಯಾಣ ಸಮಾರಂಭವು ಏರ್ಪಾಡಾಗಿದೆ. ಇದು ಬಹಳ ವಿಜೃಂಭಣೆಯಿಂದ ಸಾಗುವುದು. ಆ ಸಮಯದಲ್ಲಿ ಮಹಾರಾಜರು ತಮ್ಮ ಪರಿವಾರದ ಪ್ರತಿಯೊಬ್ಬ ವ್ಯಕ್ತಿಯ ತೈಲಚಿತ್ರವನ್ನು ಬರೆಸಲು ಇಚ್ಛಿಸುತ್ತಾರೆ. ಆದ್ದರಿಂದ ಅಶೋಕ ಠಾಕೂರರು ಒಂದು ತಿಂಗಳು ಅಲ್ಲಿರುವಂತೆ ಸೌಕರ್ಯಗಳನ್ನು ಮಾಡಿಕೊಂಡು ಸಾರಂಗ ಪುರವನ್ನು ಸೇರತಕ್ಕದ್ದು.

ಆಗ ವ್ಯಾಕುಲಳಾಗಿ ಮರಿಯಮಳು ಪ್ರಶ್ನಿಸಿದಳು: " ಹೋಗಲೇ ಬೇಕೇನು? "

"ಹೌದು ಹೋಗಿಯೇ ತೀರಬೇಕು" ಅಶೋಕನೆಂದನು "ಸಾರಂಗ ಪುರದ ಮಹಾರಾಜರು ನನ್ನ ಹಳೆಯ ಗ್ರಾಹಕರು."

ಮರಿಯಮಳ ಮುಖವು ತುಸು ಕಪ್ಪಾಯಿತು.

"ಎಂದು ಹೊರಡುವಿರಿ?"

"ಮೂರು ನಾಲ್ಕು ದಿನಗಳ ಮೊದಲು ಹೇಗೆ ಹೊರಡಲು ಆಗುತ್ತೆ?" ಅಶೋಕನು ಯೋಚಿಸುತ್ತ ನುಡಿದನು "ಹೊರಡಲು ಬೇಕಾದ ವ್ಯವಸ್ಥೆಗಳಾಗ ಬೇಕಷ್ಟೆ?"

ಮರುದಿನ ಅಶೋಕನು ಅಬ್ದುಲ್ಲನನ್ನು ನಾಗಪುರದ ಬ್ಯಾಂಕಿನಿಂದ ಹಣ ವನ್ನು ತರಲು ಕಳುಹಿಸಿದನು. ಸಾವಕಾಶವಾಗಿ ತನ್ನ ಪ್ರಯಾಣಸಿದ್ಧತೆಗಳನ್ನು ಮಾಡಲಾರಂಭಿಸಿದನು. ತಂತಿಯನ್ನು ಕಂಡಂದಿನಿಂದ ಮರಿಯಮಳ ಹೃದ ಯಕ್ಕೆ ಮುಳ್ಳು ಚುಚ್ಚಿದಂತಾಗಿತ್ತು. ಅವಳ ವದನವು ಉದಾಸೀನತೆಯನ್ನು ತಾಳಿತ್ತು. ಯಾವ ಕೆಲಸಗಳಲ್ಲಿಯೂ ಅವಳಿಗೆ ಉತ್ಸಾಹವಿರಲಿಲ್ಲ.

ಸಂಜೆಯ ಸಮಯ ಇವರಿಬ್ಬರೂ ಒಂದು ಗುಡ್ಡದ ಮೇಲೆ ಕುಳಿತಿ ದ್ದಾಗ ಮರಿಯಮಳು ಮಾತನಾಡಲಾರಂಭಿಸಿದಳು. "ಮೂರು ನಾಲ್ಕು ವಾರಗಳು ಒಂದು ಸುಂದರ ಸ್ವಪ್ನದಂತೆ ಕಳೆದು ಹೋದವು. ಈ ಬಗೆಯ ಅತಿ ಸುಖವನ್ನು ನಾನೆಂದೂ ಪಡೆದಿರಲಿಲ್ಲ. ಇನ್ನು ಮುಂದೆ ನಮ್ಮಿಬ್ಬರ ಸಂದ ರ್ಶನವು ಎಂದಾಗುವುದೋ ತಿಳಿಯದು." ಅವಳು ಒಂದು ಉಷ್ಣವಾದ ಉಸಿ ರನ್ನು ಹೊರಬಿಟ್ಟಳು.

ಅಶೋಕನಿಗೂ ತನ್ನ ಜೀವನದ ಸರ್ವಶ್ರೇಷ್ಠವಾದ ರಸನಿಮಿಷಗಳು ಕಳೆದು ಹೋಗುವವೆಂಬ ವಿಚಾರದ ವಿಷಯವಾಗಿ, ಆ ತಂತಿಯಿಂದ ತುಂಬಾ ದುಃಖವುಂಟಾಗಿತ್ತು. ಅವನೂ ಶೋಕಾರ್ತನಾಗಿದ್ದನು. ಆಗ "ಹೂಂ" ಎಂದು ಉತ್ತರವಿತ್ತನು.

ಆ ಸಮಯ ಮರಿಯಮಳಿಗೆ ಮರಣದಂಡನೆಯಿತ್ತಂತಾಯಿತು. ಆ ಒಂದೇ ಉದ್ಗಾರದಿಂದ ಅಶೋಕನು ಅವಳನ್ನು ಅವನೊಂದಿಗೆ ಕರೆದುಕೊಂಡು ಹೋಗಲು ಇಚ್ಛಿಸುವುದಿಲ್ಲವೆಂಬುದು ಅವಳಿಗೆ ತಿಳಿಯಿತು.

"ತಮ್ಮ ಜೀವನದ ಎಲ್ಲಕ್ಕಿಂತ ಮುಖ್ಯವಾದ ಧ್ಯೇಯವು ಕಲೆ ಎಂಬು ದನ್ನೂ, ಇನ್ನುಳಿದವು ಗೌಣಗಳೆಂಬುದನ್ನೂ ನಾನು ಬಲ್ಲೆನು. ತಾವು ಅದ

ರಲ್ಲೇ ಪ್ರಾವೀಣ್ಯತೆಯನ್ನು ಪಡೆದು, ಹೆಸರನ್ನು ಗಳಿಸಿರಿ. ಅದರಿಂದಲೇ ನಾನೂ ಸುಖಿಯಾಗುತ್ತೇನೆ. ನನ್ನ ಹೃದಯವನ್ನು ಸಂತೈಸುತ್ತೇನೆ. ಈ ತಿಂಗಳಲ್ಲಿ ನನ್ನ ಸುಖವು ಪೂರ್ಣವಾದ ಅದರ ಸೀಮೆಯನ್ನು ತಲುಪಿದೆ. ನಾನು ಇನ್ನು ಮುಂದೆ ಅದರ ಸವಿನೆನಪೇ ನನ್ನ ಜೀವನದ್ಮಉತ್ಕಟ ಸುಖವೆಂದೆಣಿಸುತ್ತೇನೆ."

ಮರಿಯಮಳ ಮಾತು ಅಶೋಕನ ಹೃದಯವನ್ನೇನೋ ವ್ಯಥೆಗೊಳಿಸಿತು. ಆದರೆ ಅವಳಿಗಾಗಿ ತನ್ನ ಜವಾಬ್ದಾರಿಯಾದರೂ ಏನಿದೆ ಎಂಬುದನ್ನು ಅವನು ಈಗಲೂ ಸರಿಯಾಗಿ ತಿಳಿದುಕೊಂಡಿಲ್ಲ. ಈ ಸಮಯದಲ್ಲೂ ಅವನು ವಿವಾಹದ ವಿಚಾರದಲ್ಲಿ ಮೊದಲಿನಷ್ಟೇ ಉದಾಸೀನ ಭಾವವನ್ನು ಹೊಂದಿದವನಾಗಿದ್ದನು. ಈ ದಿನ ಮರಿಯಮಳು ಅವನನ್ನು ಪ್ರೇಮಿಸುತ್ತಾಳೆ. ನಾಳೆ ಈ ಪ್ರೇಮವು ಪೂರ್ಣತೃಪ್ತಿಯನ್ನು ಹೊಂದೀತು. ಪುನಃ ಅದರಿಂದ ಚಿಂತೆಯೂ ಮೂಡಬಹುದು. ಆಮೇಲೆ ಮತಭೇದ, ಅಭಿಪ್ರಾಯ ಭೇದಗಳುಂಟಾಗುವವು ಕೊನೆಗೆ ತಿರಸ್ಕಾರ ಭಾವದ ವಿಷಗಾಳಿ ಬೀಸಿ, ಸಂಪೂರ್ಣ ಜೀವನವನ್ನು ನೀರಸಗೊಳಿಸುವುದು. ಈ ತರದ ಅನಾವಶ್ಯಕ ಅಪಾಯವನ್ನು ಹೊರಿಸಿಕೊಳ್ಳುವುದರಿಂದ ಲಾಭವಾದರೂ ಏನು ? ಅವನ ಹೃದಯದಲ್ಲಿ ಇಂದಿಗೆ ದೊಡ್ಡ ಮಹತ್ವಾಕಾಂಕ್ಷೆಗಳಿವೆ. ಇವುಗಳಲ್ಲಿ ಮುಖ್ಯವಾದುದು ತಾನು ಪ್ರಪಂಚದ ಕಲೆ ಮತ್ತು ಸಂಸ್ಕೃತಿ ಪ್ರದರ್ಶನ (**World Art & Culture Exhibition**) ದಲ್ಲಿ ಭಾರತದ ಪರವಾಗಿ ಪ್ರತಿನಿಧಿತ್ವವನ್ನು ವಹಿಸಬೇಕೆಂಬುದು ಮಾತ್ರವಲ್ಲದೆ— ತನ್ನ ಗುಲಾಮಗಿರಿ ಮತ್ತು ದುರ್ಭಾಗ್ಯದ ಅವಧಿಯಲ್ಲೂ ಕೂಡ ಈ ವೃದ್ಧ ಭಾರತವು ಜೀವಿತವಾಗಿದೆ, ಅಷ್ಟೇ ಅಲ್ಲದೆ—ತನ್ನದೇ ಆದ ಒಂದು ಪ್ರತಿಭೆಯೊಂದಿಗೆ ಕುಣಿದಾಡುತ್ತಿದೆ ಎಂಬುದನ್ನು ಲೋಕಕ್ಕೆ ತಿಳಿಸಲು ಹಾತೊರೆಯುತ್ತಿದ್ದನು, ಸ್ತ್ರೀಯ ಮೋಹಾವೇಶದ ದವಡೆಯಲ್ಲಿ ಸಿಲುಕಿ ಅವನು ಈ ಉಚ್ಚ ಆದರ್ಶವನ್ನು ಸಾಧಿಸಲು ಹೇಗೆ ಸಾಧ್ಯ ?

ಸರಲಳೂ, ಸ್ನೇಹಮಯಿಯೂ ಆದ ಈ ವನಬಾಲೆಯನ್ನು ಪುನಃ ಪ್ರಪಂಚದಲ್ಲಿ ಒಬ್ಬಂಟಿಗಳನ್ನಾಗಿ ಮಾಡಿಹೋಗುವುದು ಅಪರಾಧವಲ್ಲವೇ ? ಎಂದು ಒಮ್ಮೊಮ್ಮೆ ಅವನೊಳಗೇನೇ ಅವನನ್ನು ಯಾರೋ ಪ್ರಶ್ನಿಸುವಂತಿತ್ತು. ಮಾತ್ರವಲ್ಲದೆ ತಾನೇ ವಹಿಸಿಕೊಂಡ ಜವಾಬ್ದಾರಿಕೆಗೆ ಮೋಸವನ್ನು ಮಾಡಿ, ಹೇಡಿಯಂತೆ ಪಲಾಯನ ವ್ರತವನ್ನು ಕೈಗೊಳ್ಳುವುದು ನ್ಯಾಯವೇ ? ಎಂದೂ

ಕೇಳುವಂತಾಗುತ್ತಿತ್ತು.

“ ಮರಿಯಮ್ ಈ ಕೆಲವು ದಿನಗಳಿಂದ ನಿನ್ನಿಂದ ನನಗೆ ದೊರೆತ ಸುಖವು ಅಪೂರ್ವವಾದುದು. ಆದರೆ ಮಾನವ ಜೀವನದಲ್ಲಿ ಒಂದು ಉದಾತ್ತಗುರಿಯು ಇದ್ದೇ ಇರುತ್ತದೆ. ಅವನು ಅದರ ಕರೆಯನ್ನು ಕೇಳಿಯೂ ಕೇಳದವನಂತೆ ನಟಿಸಲು ಅಸಮರ್ಥನು. ಹೀಗಿರುವಾಗ ಅವನಿಗೆ ಒಂದಲ್ಲ ಒಂದು ಬಹಳ ದುಃಖದಾಯಕವಾದ ನಿರ್ಣಯವನ್ನು ಮಾಡಲೇಬೇಕಾಗುವುದು?”

“ಮಾನವನಿಗಾಗಿ ಅಲ್ಲ. ಪುರುಷರಿಗಾಗಿ ಎನ್ನಿ. ಅವನಿಗೆ ಪ್ರೇಮವೆಂಬುದೊಂದೇ ಸರ್ವಸ್ವವೂ ಅಲ್ಲ. ಅದಕ್ಕಿಂತಲೂ ವಿಶೇಷತರವಾದ ಒಂದು ಗುರಿಯು ಆತ್ಮವನ್ನು ಚಂಚಲಿಸುತ್ತಲೇ ಇರುತ್ತದೆ. ಇದೇ ಅವನ ಜೀವನದ ಧ್ಯೇಯವಾಗಿರುತ್ತದೆ. ಆದರಿಂದ ಅವನು ದೂರ ಸರಿದಿರಲಾರ. ಇದೆಲ್ಲವನ್ನು ನಾನೂ ತಿಳಿದುಕೊಂಡಿದ್ದೇನೆ. ಆದ್ದರಿಂದ ತಮ್ಮ ದಾರಿಯಲ್ಲಿ ನಾನು ಯಾವ ತರದ ಬಾಧೆಯನ್ನೊಡ್ಡಲು ಇಚ್ಛಿಸುವುದಿಲ್ಲ. ಪ್ರಾಯಶಃ ತಮಗಾದರೋ ಆ ಅಲ್ಪಾವಕಾಶವಾದ ಮೂವತ್ತು ದಿನಗಳಲ್ಲಿ ಯಾವ ಮಹತ್ವವೂ ಇಲ್ಲದಿರಬಹುದು. ಆದರೆ ನನಗೆ ಮಾತ್ರ ಅದೇ ಸರ್ವಸ್ವ, ಮತ್ತು ಅದರ ನೆನಪೇ ಜೀವನದ ಪರಮ ಸಂಪತ್ತಲ್ಲವೇ? ”

ಅಶೋಕನು ಚಿಂತಿತನಾಗಿ ತಲೆ ತಗ್ಗಿಸಿಕೊಂಡು ಇದೆಲ್ಲವನ್ನು ಕೇಳುತ್ತಿದ್ದಾನೆ. ಮರಿಯಮಳು ಹೇಳುತ್ತಿದ್ದ ಸ್ತ್ರೀ-ಪುರುಷರ ಸಂಬಂಧವನ್ನೂ, ಅವರ ಜೀವನ ಕರ್ತವ್ಯವನ್ನೂ ಇವನು ಅರಿತುಕೊಂಡನೊ ಇಲ್ಲವೊ ತಿಳಿಯದು. ಅವನು ಈ ದಿನ ತನ್ನ ಮನಸ್ಸನ್ನೇ ತಾನು ತಿಳಿದುಕೊಳ್ಳಲಾರದಷ್ಟು ಮಾನಸಿಕ ಅಶಕ್ತನಾಗಿದ್ದಾನೆ. ಈ ಸಂದರ್ಭದಲ್ಲಿ ಉಂಟಾಗುವ ಅವನ ಮನಸ್ಸಿನ ವಿಚಾರಗಳು ಪ್ರಣಯ ಸಂಬಂಧವಾದವುಗಳಲ್ಲ. ಭವಿಷ್ಯದ ಮಹತ್ವಾಕಾಂಕ್ಷೆಗಳಿಗೆ ಸಂಬಂಧವಾದುವು.

ತುಸು ಹೊತ್ತು ಮೌನವಾಗಿದ್ದು ಅಶೋಕನು ಅಂದನು “ಮರಿಯಮ್, ಇನ್ನು ಮೇಲೆ ನೀನೇನು ಮಾಡುತ್ತೀಯಾ ? ಇಲ್ಲಿಯೇ ಇರುವಿಯೇ? ಎಲ್ಲಾದರೂ ಇದ್ದುಕೋ. ಆದರೆ ಭಿಕ್ಷುಣಿಯ ದೀಕ್ಷೆಯನ್ನು ಮಾತ್ರ ತೆಗೆದುಕೊಳ್ಳಬಾರದೆಂದು ನಿನ್ನಲ್ಲಿ ನನ್ನ ವಿನಂತಿ.”

“ನಾನು ಮುಂದೇನು ಮಾಡುವೆನೆಂಬುದು ನನಗೇ ತಿಳಿಯದು. ಜೀವನ

ಪ್ರವಾಹವು ನನ್ನನ್ನು ಎತ್ತ ಕಡೆ ಸೆಳೆದುಕೊಂಡು ಹೋಗುವುದೋ ಆ ಕಡೆಗೇ ನಾನೂ ಹೋಗಬೇಕಾಗಬಹುದು. ಈ ಪ್ರಪಂಚಕ್ಕೆ ಇಳಿದವಳೂ ನಾನೊಬ್ಬಳೇ. ಇದುವರೆಗೆ ಒಬ್ಬಂಟಿಗಳಾಗಿದ್ದವಳೂ ನಾನೇ. ಮತ್ತು ಒಂದಿಲ್ಲ ಒಂದು ದಿನ ಈ ಜಗತ್ತಿನಿಂದ ಹೊರಟುಹೋಗುವವಳೂ ಏಕಾಕಿನಿಯಾದ ನಾನೇ. ನನ್ನ ಜೀವನವಾದರೂ ಏನು? ನೀರಿನ ಒಂದು ಗುಳ್ಳೆ. ಎಂದಾದರೊಂದು ದಿನ ಅದು ಒಡೆದು ಹೋಗುವುದು. ಲೋಕಕ್ಕೆ ಇದರಿಂದ ನಷ್ಟವಾದರೂ ಏನು?" ಅವಳ ಕಣ್ಣುಗಳು ಅಶ್ರುಪೂರ್ಣವಾದವು.

"ಹಾಗೆನ್ನಬೇಡ ಮರಿಯಮ್" ಅಶೋಕನು ಅವಳ ಕೈಗಳನ್ನೆತ್ತಿ ಮೃದುವಾಗಿ ಸವರುತ್ತ ಎಂದನು. "ನೀನು ನನ್ನನ್ನು ನಿನ್ನ ಮಿತ್ರನೆಂದು ನೆನೆಸಲಾರೆಯಾ? ಯಾವ ಸಮಯದಲ್ಲಿ ಬೇಕಾದರೂ ನನಗೆ ಪತ್ರವನ್ನು ಬರೆ—ನಾನು ಒಡನೆ ನಿನ್ನ ಸಹಾಯಕ್ಕಾಗಿ ಧಾವಿಸಿ ಬರುವೆ. ಈ ಸುಂಟರ ಸುಳಿಗಾಳಿಯಲ್ಲಿ ನಿನ್ನನ್ನು ಎಂದೂ ಬಿಡುವೆನೆಂದೆಣಿಸಬೇಡ."

ಮರಿಯಮಳು "ಹೂಂ" ಎಂದಿಷ್ಟೇ ಉತ್ತರವಿತ್ತಳು. ನೇತ್ರಗಳಿಂದ ಜಲಧಾರೆಯು ಹರಿಯಲಾರಂಭಿಸಿತು. ಅಶೋಕನು ತನ್ನೆಡೆಗೆ ಎಳೆದುಕೊಂಡು ತನ್ನ ಕರವಸ್ತ್ರದಿಂದ ಅವಳ ಕಣ್ಣೀರನ್ನು ಒರಸಲಾರಂಭಿಸಿದನು.

"ಇನ್ನು ಮುಂದೆ ನನ್ನ ಕಣ್ಣೀರನ್ನು ಒರಸುವವರಾದರೂ ಯಾರು? ನಾನಾಯಿತು, ನನ್ನೊಂದಿಗಿರುವ ಈ ವಿಲಾಪನೆಯಾಯಿತು" ಮರಿಯಮಳು—ಒಡೆದ ಅಣೆಕಟ್ಟಿನ ನೀರಿನಂತೆ ಬರುವ ದುಃಖವನ್ನು ಸಹಿಸಲಾರದೆ, ಅಶೋಕನ ಎದೆಯ ಮೇಲೆ ತನ್ನ ತಲೆಯನ್ನಿಟ್ಟು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಅಶೋಕನು ಅವಳ ನಯವಾದ ಕೂದಲನ್ನು ಮಮತೆಯಿಂದ ಸವರಿದನು. ಆಗ ಅವನ ಹೃದಯವು ಸೀಳಿ ಹೋದಂತೆ ಭಾಸವಾಯಿತು. ನಿಜವಾಗಿಯೂ ಅವನು ಯಾವ ರೀತಿಯ ಭಯಂಕರವಾದ ಅಪರಾಧವನ್ನು ಮಾಡುತ್ತಿಲ್ಲವಷ್ಟೆ."

ದುಃಖದ ಆವೇಗವು ಕಡಿಮೆಯಾದಾಗ ಮರಿಯಮಳು ಕಣ್ಣೊರಸಿಕೊಂಡು ತನ್ನನ್ನು ತಾನು ಸಮಾಧಾನ ಪಡಿಸುತ್ತ ಎದ್ದು ಕುಳಿತು ಹೇಳಲಾರಂಭಿಸಿದಳು: "ಇನ್ನು ಮೇಲೆ ನಾನು ಅಳುವುದಿಲ್ಲ. ನನ್ನನ್ನು ಕ್ಷಮಿಸಿ. ನಾನೇನು ಮಾಡಲಿ. ನನಗೇ ತಡೆಯಲಾಗಲಿಲ್ಲ. ತಾವು ತಮ್ಮ ಈ ಕರವಸ್ತ್ರವನ್ನು ಮಾತ್ರ ದಯಪಾಲಿಸಿರಿ. ಇನ್ನು ಮೂರು ದಿನಗಳು ಉಳಿದಿವೆ. ನಾನೇಕೆ ತಮ್ಮನ್ನು

ವ್ಯಸನಚಿತ್ತರನ್ನಾಗಿ ಮಾಡಬೇಕು? ತಮ್ಮನ್ನು ಸುಖ ಮತ್ತು ಆನಂದದಿಂದ ಬೀಳ್ಕೊಡಬೇಕು." ಎನ್ನುತ್ತ ಮರಿಯಮಳು ಲೋಹಮನಸ್ಕಳಾಗಿ ಎದ್ದಳು.

ಮೂರು ದಿನಗಳ ನಿರ್ಮಲಾನಂದ, ಅಪಾರ ಸುಖ. ಮತ್ತೆ ಪುನಃ ವಿಯೋಗದ ಸಮಯ.

ಮರಿಯಮಳು ಅಶೋಕನಿಗೆ ಬಂಗಲೆಯಲ್ಲಿಯೇ ತನ್ನ ಕೊನೆಯ ಭೇಟಿಯನ್ನು ಕೊಡಲಾರೆನೆಂದಿದ್ದಳು. ಅಲ್ಲಿಂದ ಒಂದು ಮೈಲಷ್ಟು ದೂರದಲ್ಲಿ ಅವಳು ಇವನ ಪ್ರತೀಕ್ಷೆ ಮಾಡಿಕೊಂಡಿರುವುದಾಗಿಯೂ, ಅಲ್ಲಿಯೇ ತಾವಿಬ್ಬರೂ ಬೇರೆಯಾಗುವುದೆಂದೂ ಹೇಳಿದ್ದಳು.

ಅಶೋಕನು ಮಿಸ್ ಥಾಮಸ್, ಜೊಸೆಫ್ ತಾತ, ಮತ್ತು ಪರಿಚಿತರೆಲ್ಲರನ್ನು ಕಂಡು ಹೊರಡಲುದ್ಯುಕ್ತನಾದನು. ಶಾಲಾ ಮಕ್ಕಳಿಗೆ ಮಿಠಾಯಿ ಹಂಚಿಕೆಗೆಂದು ಹತ್ತು ರೂಪಾಯಿಗಳನ್ನು ಮೆಮ್‌ಸಾಹೇಬರ ಹತ್ತಿರ ಕೊಟ್ಟು ಹಾಗೆಯೇ ಅಲ್ಲಿಯೆ ಅವನ ನೌಕರರಿಗೆ ಯಥೋಚಿತ ಸಂಭಾವನೆಗಳನ್ನು ಕೊಟ್ಟು ಎದ್ದು ನಿಂತು, ಅವನು ಆ ಪಾದರೀಪುರ ಬಂಗಲೆ, ಆಚೆಈಚಿನ ಪ್ರಾ-ಕೃತಿಕ ದೃಶ್ಯಗಳ ಮೇಲೆ ತನ್ನ ಕೊನೆಯ ದೃಷ್ಟಿಯನ್ನು ಬೀರಿ, ಮೋಟಾರು ಕಾರಿನಲ್ಲಿ ಕುಳಿತು ಹೊರಟು ಹೋದನು. ಆ ಪ್ರಿಯ ವಾತಾವರಣವನ್ನು ಬಿಟ್ಟು ಹೋಗಲು ಅವನು ತುಂಬಾ ದುಃಖಪಟ್ಟನು.

ಮೈಲು ದೂರದ ಆ ತಿರುಗಾಟದಲ್ಲಿಯ ಮಾವಿನ ಮರದಡಿ ಮರಿಯಮಳು ನಿಂತಿದ್ದಳು. ಅವಳು ಕೈಸನ್ನೆಯಿಂದ ಮೋಟಾರನ್ನು ತಡೆದು ನಿಲ್ಲಿಸಿದಳು.

ಸುಖದ ದಿನಗಳ ಕೊನೆಯ ಗಳಿಗೆ ಬಂದಿತು. ಮರಿಯಮಳು ತನ್ನ ಕೈಗಳಿಂದ ಬಕುಲ ಪುಷ್ಪಗಳನ್ನು ಅಶೋಕನಿಗೆ ಸಮರ್ಪಿಸಿದಳು. ಅವನು ಅವುಗಳನ್ನೊಮ್ಮೆ ತನ್ನ ಮುಖಕ್ಕೆ ಒತ್ತಿಕೊಂಡು ಸ್ವೀಕರಿಸಿದನು. ಅವುಗಳನ್ನು ರೇಶ್ಮೆಯ ಕರವಸ್ತ್ರದಲ್ಲಿ ಕಟ್ಟಿಕೊಂಡನು.

ಕೊನೆಗೆ ಅಶೋಕನು ತೆಳು ನೀಲಬಣ್ಣದ ಒಂದು ಲಕ್ಕೋಟೆಯನ್ನು ಮರಿಯಮಳ ಕೈಗಿತ್ತನು. ಅವರಲ್ಲಿ ನೂರು ರೂಪಾಯಿಗಳ ನಾಲ್ಕು ನೋಟುಗಳಿದ್ದವು. ಇದರಿಂದ ನೀನೇನಾದರೂ ಸ್ವತಂತ್ರವಾದ ವ್ಯವಸ್ಥೆಯನ್ನು ಕಲ್ಪಿಸಿಕೊಂಡರೆ ಒಳಿತೆಂದೂ ಹೇಳಿದನು. ಮರಿಯಮಳೊಂದನ್ನೂ ಹೇಳಲಿಲ್ಲ.

" ಈಗ ನಾವಿಲ್ಲಿಯೇ ಬೇರೆಯಾಗಬೇಕಾಗುವುದು ಮರಿಯಮ್" ಅವನ ಕೊರಳಲ್ಲಿ ಒಂದು ಬಗೆಯ ನಡುಕವು ತುಂಬಿ ಬಂತು. ವಿಯೋಗವು ಇಷ್ಟು ಕಠಿಣವೂ, ವೇದನಾಮಯವೂ ಆಗಿರುವುದೆಂದು ಅವನೆಂದೂ ಕಲ್ಪನೆಯನ್ನು ಕೂಡ ಮಾಡಿರಲಿಲ್ಲ. ಆದರೆ ಮರಿಯಮಳು ಈ ಪ್ರಸಂಗಕ್ಕಾಗಿಯೇ ಎಂಬಂತೆ ಮನಸ್ಸನ್ನು ಗಟ್ಟಿ ಮಾಡಿಕೊಂಡಿದ್ದಳು.

"ನಾನು ಈ ರಾತ್ರಿ—ಏಕೆ—ಪ್ರತಿ ರಾತ್ರಿ ತಮ್ಮನ್ನೇ ಜ್ಞಾಪಿಸಿಕೊಂಡಿರುತ್ತೇನೆ." ಆಗ ಅಶೋಕನಿಗೆ ಅವಳು ತನಗೆ ಉಂಟಾಗುವ ದುಃಖವನ್ನು ಒತ್ತಾಯದಿಂದ ನುಂಗುತ್ತಿದ್ದಾಳೆಂದು ತಿಳಿಯಿತು. ಅವನೂ ಬಹು ದುಃಖದ ದೆಸೆಯಿಂದ ದ್ರವಿತನಾದನು.

"ಒಳ್ಳೇದು ಮರಿಯಮ್ !"

"ಒಳ್ಳೇದು !"

ಕೊನೆಗೆ ವಿಯೋಗದ ಸುದೀರ್ಘವೂ, ಸುಕೋಮಲವೂ ಆದ ಚುಂಬನ.

ಮೋಟಾರಿನ ಘರಘಶತೆಯು ಪ್ರಾರಂಭಿಸಿತು. ಮರಿಯಮಳು ತನ್ನ ಕರವಸ್ತ್ರವನ್ನೆತ್ತಿ ಅಲುಗಿಸಿದಳು. ಅಶೋಕನು ಅದರ ಉತ್ತರ ರೂಪವಾಗಿ ಕಾರಿನ ಕಿಟಕಿಯಿಂದ ತನ್ನ ಕೈಯನ್ನು ಹೊರಹಾಕಿ ಅಲುಗಾಡಿಸಿದನು. ಮೋ-ಟಾರು ಹೋಗಿಯೇ ಹೋಯಿತು.

ಮರಿಯಮಳಿಗೆ ಪ್ರಾಣವೇ ಅವಳ ಶರೀರದಿಂದ ಎದ್ದು ಓಡುತ್ತಹೋಗುವಂತೆ ಭಾಸವಾಯಿತು. ಅಶೋಕನಿಗೂ ಒಂದು ಕ್ಷಣ ಕಾಲದ ವರೆಗೆ ತಾನೆಂತಹ ತಪ್ಪು ಕೆಲಸ ಮಾಡುತ್ತಿರುವೆನೆಂಬುದರ ತಿಳುವಳಿಕೆಯುಂಟಾಯಿತು........

ಹಾಗೆಯೇ ಹಿಂದಿರುಗಿ ಮರಿಯಮಳನ್ನೇತಕ್ಕೆ ಕರೆದುಕೊಂಡು ಹೋಗಬಾರದೆಂಬ ಮನಸ್ಸೂ ಉಂಟಾಯಿತು. ಆದರೆ........ ?

ಮೋಟಾರು ಕಾರು ವೇಗವಾಗಿ ಓಡುತ್ತ ಆ ತಿರಗಾಸನ್ನು ಒಂದು ನಿಮಿಷದೊಳಗೆ ದಾಟಿಕೊಂಡು ಮರಿಯಮಳ ಕಣ್ಣಿನಿಂದ ಬಹಳ ದೂರವಾಯಿತು. ಕಾರಿನಲ್ಲಿ ಕುಳಿತಿರುವ ಅಶೋಕನ ನಾಸಿಕಗಳಲ್ಲಿ ಬಕುಲದ ಸುವಾಸನೆಯು ತುಂಬಿತು. ಆದರೆ ಶಿಲಾಮೂರ್ತಿಯಂತೆ ನಿಂತಿರುವ ಮರಿ

ಯವಳ ಮೂಗಿನಲ್ಲಿ ಅವನ ಮೋಟಾರಿನ ಪೆಟ್ರೋಲು ಎಣ್ಣೆಯ ದುರ್ವಾಸನೆಯೂ, ಮತ್ತು ರಸ್ತೆಯ ಧೂಳೂ ತುಂಬಿಕೊಂಡಿತು.

ಹದಿನೇಳು

ಸುಮಾರು ಒಂದೂವರೆ ತಿಂಗಳ ಕಾಲ ಅಶೋಕನು ಸಾರಂಗಪುರದ ಮಹಾರಾಜರ ಆತಿಥ್ಯವನ್ನು ಸ್ವೀಕರಿಸಬೇಕಾಯಿತು— ಎನ್ನುವುದರ ಬದಲು, ಹೀಗೆನ್ನಬಹುದು— 'ಅವನಲ್ಲಿ ಸೆರೆಯಾಗಿದ್ದನು' ಎಂದು. ನಮ್ಮ ಸಂಸ್ಥಾನಗಳಲ್ಲಿ ಯಾವಾಗಲೂ ಗಡಿಯಾರವು ನಿಧಾನವಾಗಿ ನಡೆಯುವುದೇ ಇದಕ್ಕೆ ಮುಖ್ಯ ಕಾರಣ. ಅಲ್ಲಿ ಎಲ್ಲಾ ಕೆಲಸ ಕಾರ್ಯಗಳೂ ಬಹು ಮಂದವೇಗದಿಂದ ಸಾಗುತ್ತಿದ್ದವು, ಮೆರವಣಿಗೆ ಸಮಯವು ಸಂಜೆ ನಾಲು ಗಂಟೆಗೆಂದಿರಿಸಿದರೆ, ಅಂದು ರಾತ್ರಿ ಒಂಭತ್ತು ಘಂಟೆಗಾದರೂ ಹೊರಟರೆ ಒಂದು ಸಂತೋಷದ ಮಾತೇ ಸರಿ. ಆ ರಾತ್ರಿಯ ಊಟ ೨-೩ಂಕ್ಕೆ ಮುಗಿಯುವುದು. ಅದಾದ ನಂತರ ಭರತನಾಟ್ಯ, ಸಂಗೀತಗಳಿಂದ ಆ ರಾತ್ರಿ ಪೂರ್ಣವಾಗುತ್ತಿತ್ತು. ಆ ಜನರಿಗೆ ಪುನಃ ಎರಡನೆಯ ದಿನವು ಆರಂಭವಾಗುವ ಸಮಯವು ಬೆಳಗಿನ ಹತ್ತು ಘಂಟೆಗೆ. ಯುವರಾಜರು ಚಿತ್ರವನ್ನು ಬರೆಯಲು ಪೋಜ್ ಕೊಡುವ ದಿನವದು. ಅದೇ ದಿನ ಅವರಿಗೆ ತಲೆನೋವು ಆರಂಭವಾಯಿತು. ಎರಡನೆಯ ದಿನ ಅವರು ಬೇಟೆಗೆ ಹೋದರು. ಮೂರನೆ ದಿನ ಅವರು ಶರಾಬನ್ನು ತುಸು ಹೆಚ್ಚಾಗಿ ಕುಡಿಯುವದರಿಂದ ಹಾಗೆಯೇ ಎಲ್ಲಿ ನೋಡಿದರಲ್ಲಿ ಬಿದ್ದುಕೊಳ್ಳುವದೇ ಪೋಜ್ ವಿನಹ ಬೇರೆ ಯಾವ ತರದ ಪೋಜ್‌ಗಳೂ ಸಿಗುತ್ತಿರಲಿಲ್ಲ. ಇವೇ ಹಲವಾರು ಕಾರಣಗಳಿಂದ ಅಶೋಕನ ಕೆಲಸವು ಮುಂದಕ್ಕೆ ಹೋಗುತ್ತಲೇ ಇತ್ತು.

ಈ ಮಧ್ಯೆ ಒಂದು ದಿನದ ಮಾತ್ರಕ್ಕೆ ಮಹಾರಾಜರಿಗೆ ದರ್ಶನ ಕೊಡುವದಕ್ಕಾಗಿ ಪೊಲಿಟಿಕಲ್ ಏಜಂಟ್ (Political Agent) ಬರುವುದಾಗಿ ರಾಜರಿಗೆ ಪತ್ರ ಬಂದಿತು. ಇದರಿಂದ ಸಂಪೂರ್ಣ ಸಂಸ್ಥಾನದ ಕೆಲಸ ಕಾರ್ಯ

ಗಳೆಲ್ಲವೂ ನಿಂತುಹೋದವು. ವಿವಾಹ ಸಮಾರಂಭವನ್ನು ನಿಲ್ಲಿಸಿಬಿಡುವ ವರೆಗೂ ಬಂದು ನಿಂತಿತು. ಎಲ್ಲಿ ಕಂಡರೂ ಒಬ್ಬರಲ್ಲದಿದ್ದರೆ ಒಬ್ಬರು ಓಡಾ ಡುತ್ತಲೇ ಇದ್ದಾರೆ. ಸ್ಟೇಟ್‌ಗೆಸ್ಟ್ ಹೌಸಿನ ಸಿಂಗಾರ, ಹಣ್ಣು-ಹಂಪಲಗಳ ಜೋಡಣೆ, ಕೋಳಿಯ ಮಾಂಸ, ಬೇಟೆಯ ಪ್ರಬಂಧ, ಫೋಟೊ, ಟೀ ಪಾರ್ಟಿ, ಇತ್ಯಾದಿ ಎಲ್ಲವುಗಳ ವ್ಯವಸ್ಥೆಯೂ ಆಯಿತು. ಮಾತ್ರವಲ್ಲದೆ ಪೊಲಿಟಿಕಲ್ ಏಜಂಟರೊಂದಿಗೆ ಬರುವ ಅವರ ಪ್ರಿಯಪತ್ನಿಯ ಸುಹಸ್ತದಿಂದ ಮಹಿಳೆಯರಿ ಗಾಗಿ ಒಂದು ಆಸ್ಪತ್ರೆಯ ತಳಹದಿಯ ಕಲ್ಲನ್ನೂ ಹಾಕಿಸಬೇಕೆಂದು ಮಹಾ ರಾಜರ ಅಪ್ಪಣೆಯಾಯಿತು. ದೇಶೀ ಗೆಸ್ಟ್‌ಹೌಸಿನಲ್ಲಿ ಪೊಲಿಟಿಕಲ್ ಏಜಂಟರ ಬ್ರಾಹ್ಮಣ ಹೆಡ್ ಕ್ಲಾರ್ಕನಿಗೆ ತಂಗುವ ಸಲುವಾಗಿ ಅಶೋಕನನ್ನು ಅಲ್ಲಿಂದ ಹೊರಗೆ ಹಾಕಲಾಯಿತು. ಈ ಕಾರ್ಯವು ಮಹಾರಾಜರ ಗಮನಕ್ಕೆ ಬಾರ ದೇನೇ ದಿವಾನರಿಂದ ನಡೆದಿತ್ತು. ಅಶೋಕನು ತನ್ನ ಚಿತ್ರಕಲಾ ಸಂಬಂಧ ವಾದ ಉಪಕರಣಗಳನ್ನು ತೆಗೆದುಕೊಂಡು, ಸ್ಟೇಶನಿಗೆ ಹೋಗುವ ಸಲುವಾಗಿ ಮೋಟಾರು ಕಾರು ಬೇಕೆಂದು ಮಹಾರಾಜರಿಗೆ ಸೂಚಿಸುವಂತೆ ಹೇಳಿದನು. ಇದನ್ನು ಕೇಳಿ ಮಹಾರಾಜರು ಕೂಡಲೆ ತನ್ನ ಪ್ರೈವೇಟ್ ಸೆಕ್ರೆಟರಿಯನ್ನು ಅಶೋಕನಿದ್ದೆಡೆಗೆ ಕಳುಹಿಸಿ, ಅವನನ್ನು ಸಮಾಧಾನಪಡಿಸಿ, ಅಲ್ಲೇ ಉಳಿದು ಕೊಳ್ಳುವಂತೆ ಹೇಳಿ ಕಳುಹಿದರು. ಇದನ್ನು ವಿಚಾರಿಸಿದಾಗ ತಿಳಿದುದೇ ನಂದರೆ :— ಅಶೋಕನನ್ನು ಪ್ರೈವೇಟ್ ಸೆಕ್ರೆಟರಿಯ ಸಲಹೆಯಂತೆ ಕರೆತರಿಸಿ ದ್ದರು. ಆ ಸೆಕ್ರೆಟರಿ ಮಹಾಶಯರಿಗೂ ಈ ದಿವಾನ ಮಹಾಶಯರಿಗೂ ಹಿಂದಿನಿಂದಲೇ ವೈಮನಸ್ಸಿತ್ತು. ಇದರ ಸೇಡು ತೀರಿಸಲು ಅದೇ ಸಮಯ ವೆಂದು ದಿವಾನರು ಈ ಪ್ರಯತ್ನವನ್ನು ಮಾಡಿದರು. ಆದರೆ ಅದು ಫಲಿಸಲಿಲ್ಲ.

ಅಶೋಕನು ಚಿತ್ರ ಬರೆಯುವದಕ್ಕಾಗಿ ಅಂತಃಪುರಗಳಿಗೂ ಹೋಗಬೇಕಾ ಗುತ್ತಿತ್ತು. ಆಗ ಅವನೆದುರು ಮಹಾರಾಣಿಯರು ಯಾವ ತರದ ಘೋಷಾ, ಪರದೆಗಳಿಲ್ಲದೆಯೇ ಮಂಡಿಸಬೇಕಾಗಿ ಬರುತ್ತಿತ್ತು. ಮೊದಲು ಹಿರಿಯ ರಾಣೀ ಸಾಹೇಬರು ತಮ್ಮ ಚಿತ್ರವು ಮೊದಲಿನ ಚಿತ್ರಕ್ಕಿಂತಲೂ ಉದ್ದಗಲಗಳಲ್ಲಿ ಅರ್ಧ ಕ್ಕರ್ಧ ದೊಡ್ಡದು ಬೇಕೆಂದರು.

ಇದು ಮುಗಿಯುವಾಗ ಇನ್ನೊಬ್ಬ ವನಿತಾಮಣಿಯು ಚಿತ್ರಕ್ಕೆ ಬಂದು

ನಿಂತಳು. ಆಗ ಅಶೋಕನು ಇದಾರೆಂದು ಪ್ರಶ್ನಿಸಿದನು. ಇವರೂ ರಾಣಿಯವರಲ್ಲೊಬ್ಬರು ಎಂದು ತಿಳಿಯಿತು. "ಮಹಾರಾಜರಿಗೆ ಇಂತಹ ರಾಣಿಯರೆಷ್ಟು ಮಂದಿ ಇದ್ದಾರೆ?" ಆಗ ಪರಿಚಾರಿಕೆ ಉತ್ತರವಿತ್ತಳು: "ಮದುವೆಯಾಗಿ ಕೈಹಿಡಿದವರೆಂದರೆ ಮೂವರು. ಅವರಲ್ಲೊಬ್ಬರು ಈಚೆಗೆ ಗತಿಸಿದರು. ಈಗ ಇಬ್ಬರು ಅರಸಿಯರು ಮಾತ್ರ ಇದ್ದಾರೆ. ಉಳಿದವರೆಲ್ಲ ಅವಿವಾಹಿತ ರಾಣಿಯರೇ." ಇನ್ನೆಷ್ಟು ಚಿತ್ರಗಳನ್ನು ಬರೆಯಬೇಕಾಗಿ ಬರಬಹುದೊ ಎಂಬ ಭಯದಿಂದಲೊ ಏನೊ ಎಂಬಂತೆ ಅಶೋಕನು "ಈ ಸಂಖ್ಯೆಗಳು ಎಲ್ಲಿಗೆ ಮುಕ್ತಾಯವಾಗುವವು?" ಎಂದು ಆಕೆಯನ್ನು ಕೇಳಿದಾಗ, ಅವಳೂ ಕೂಡಲೆ ಉತ್ತರಿಸಿದಳು: "ಹೆಚ್ಚೇನೂ ಇಲ್ಲ. ಇನ್ನುಳಿದವರಲ್ಲಿ ಯಾರೂ ಚಿತ್ರಗಳನ್ನು ಬರೆಸುವಷ್ಟು ಯೋಗ್ಯತೆಯನ್ನು ಪಡೆದಿಲ್ಲ."

ಅಶೋಕನ ಮನಸ್ಸು ಈ ವಿಚಿತ್ರ ವಾತಾವರಣವನ್ನು ಕಂಡು ಬೇಸತ್ತಿತ್ತು. ಎಷ್ಟೋ ಸಲ ಅವನು ಅಲ್ಲಿಂದ ತಪ್ಪಿಸಿ ಹೋಗಲು ಪ್ರಯತ್ನಿಸಿದನು. ಆದರೆ ಮಹಾರಾಜರ ಆಗ್ರಹವನ್ನವನು ವಿರೋಧಿಸಲಾರದಾದ.

ಯುವರಾಜರ ವಿವಾಹ ಸಂಬಂಧಕ್ಕಾಗಿ ಮಹಾರಾಜರು ಎಂದೋ ಒಂದು ಲಕ್ಷ ಹೊನ್ನನ್ನು ತೆಗೆದಿರಿಸುತ್ತಿದ್ದರು. ಇದರಿಂದ ಅಶೋಕನ ಪರಿಶ್ರಮಕ್ಕೂ ಹೆಚ್ಚಿಗೆ ಹಣವು ಸಿಕ್ಕುತ್ತಿತ್ತು. ಆದರೆ ಅಶೋಕನಿಗೆ ಬರೇ ಧನದಾಸೆ ಮಾತ್ರವೇ ಇರಲಿಲ್ಲ. ಅಲ್ಲಿಯ ಮಹಾರಾಜರ ದೆಸೆಯಿಂದಾಗಿ ಹತ್ತಿರದ ಇನ್ನಿತರ ರಾಜರ ಪರಿಚಯವೂ ಅವನಿಗೆ ಆಯಿತು. ಅದೇನೋ ಲಾಭದ ಮಾತು ಹೌದು. ಆದರೆ ಅಲ್ಲಿಯೂ ಇಲ್ಲಿಯಂತೆಯೇ ವ್ಯವಸ್ಥೆಯಾದರೆ, ಅಲ್ಲಿಂದಲೂ ಬೇಗನೆ ಬಿಡುಗಡೆಯನ್ನು ಹೊಂದುವದು ಕಠಿಣ.

* * * *

ತಾನು ಸೇವಾಗ್ರಾಮದಲ್ಲಿರುವ ಶ್ರೀ. ಗಾಂಧೀಜೀಯ ಸೆಕ್ರೆಟರಿ ಶ್ರೀ. ಮಹಾದೇವಭಾಯೀ ದೇಸಾಯಿಯವರಿಗೆ ಬರೆದ ಪತ್ರಕ್ಕೆ ಉತ್ತರವನ್ನು ಕಂಡ ಅಶೋಕನಿಗೆ ತುಂಬಾ ಸಂತೋಷವಾಯಿತು. ಅದರಲ್ಲಿ 'ನೀವು ಯಾವಾಗ ಬೇಕಾದರೂ ಬಂದು, ಸೇವಾಗ್ರಾಮದಲ್ಲಿದ್ದು, ಗಾಂಧೀಜಿಯವರ ದರ್ಶನವನ್ನು ಪಡೆಯಬಹುದು. ಆದರೆ ಅವರ ದೇಹಾರೋಗ್ಯವು ಈಚೆಗೆ ಉಷ್ಣದ ದೆಸೆಯಿಂದ ನಿತ್ರಾಣವಾಗಿದೆ. ಆದ್ದರಿಂದ ನೀವು ಅವರೊಂದಿಗೆ ಕೆಲವು ದಿನಗಳ

ವರೆಗೆ ಸಂಭಾಷಣಾ ವ್ಯವಹಾವನ್ನಿಟ್ಟುಕೊಳ್ಳುವಂತಿಲ್ಲ" ಎಂದು ಬರೆದಿತ್ತು.

ಅಶೋಕನಿಗೆ ಅವರಲ್ಲಿ ಸಂಭಾಷಣೆಯ ಅಗತ್ಯವೇನೂ ಅಷ್ಟು ಇರಲಿಲ್ಲ. ಅವನು ಕೇವಲ ಭಾರತದ ಆತ್ಮಪ್ರತಿನಿಧಿತ್ವವನ್ನು ವಹಿಸಿದ್ದ ಆ ಮಹಾತ್ಮನನ್ನು ಸಮೀಪದಿಂದ ನೋಡಬೇಕೆಂದಷ್ಟೇ ಹವಣಿಸಿದ್ದನು. ಅವನಿಗೆ ಮಹಾತ್ಮರ ಒಂದು ಚಿತ್ರವನ್ನು ಬರೆಯಬೇಕೆಂಬ ಆಸೆಯೂ ಬಹಳ ದಿನದಿಂದಿತ್ತು. ಇದಕ್ಕೆ ನಾಲಿಗೆಯು ಯಾವ ಕಾರ್ಯವನ್ನು ಮಾಡಬೇಕಾಗಿಲ್ಲ. ಕಣ್ಣು ಮತ್ತು ಕೈಗಳೆರಡೇ ಸಾಕು. ಇದರಿಂದ ನಾಗಪುರದ ಧನಿಕ ಗುಜರಾತೀ ವ್ಯಾಪಾರಸ್ಥರಾದ ಶ್ರೀ. ಕಾನ್‌ಜೀ ಧರ್ಮಜೀಯವರಿಗೆ ತಾನು ಹಿಂದೆ 'ಗಾಂಧೀಜೀಯ ಒಂದು ನವೀನ ಚಿತ್ರವನ್ನು ಬರೆದು ಕೊಡುವೆನೆಂದು' ಕೊಟ್ಟ ವಚನವನ್ನು ಪೂರೈಸಬಹುದೆಂದು ಭಾವಿಸಿಕೊಂಡನು.

ಹದಿನೆಂಟು

ಸಂಜೆಗೆ ಅಶೋಕ್ ಠಾಕೂರನು ಸೇವಾಗ್ರಾಮವನ್ನು ತಲುಪಿದಾಗ ಗಾಂಧೀಜಿಯವರು ಆಶ್ರಮವಾಸಿಗಳೊಂದಿಗೂ ಮತ್ತು ಚಿಕ್ಕ ಮಕ್ಕಳೊಂದಿಗೂ ಹೊರಗಿನ ತಿರುಗಾಟವನ್ನು ತೀರಿಸಿಕೊಂಡು ಹಿಂದಿರುಗುತ್ತಿದ್ದರು. ಅವರು ತಮ್ಮ ಲಾಠಿಯನ್ನೂರುತ್ತ ಉದ್ದವಾದ ಹೆಜ್ಜೆಯಿಂದ ನಡೆಯುತ್ತಿದ್ದರು. ಆದರೆ ಅವರ ಅನುಯಾಯಿಗಳಿಗೆ ಅವರೊಂದಿಗೆ ಓಡಬೇಕಾಗಿಬರುತ್ತಿತ್ತು. ಅವರ ಹಿಂದೆ ಓರಿಸ್ಸಾ ಪ್ರಾಂತ್ಯದ ಒಬ್ಬ ಕಾರ್ಯಕರ್ತನಿದ್ದನು. ಅವನು ಅವರೊಡನೆ ಪ್ರಶ್ನೆಗಳನ್ನು ಕೇಳುತ್ತಿದ್ದು, ತನ್ನ ಹಣೆಯ ಮೇಲಿನ ಬೆವರನ್ನು ಒರಸುತ್ತಿದ್ದನು. ಮೆದುಳಿನ ವೇಗದೊಡನೆ ಅವನು ತನ್ನ ಹೆಜ್ಜೆಗಳನ್ನು ಓಡಿಸಬೇಕಾಗಿತ್ತು. ಪಾಪ! ಅವನೇನು ಮಾಡಿಯಾನು—! ಗಾಂಧೀಜೀಯವರು ಪ್ರಶ್ನೆ ಮತ್ತು ಚರ್ಚೆಗಳಿಗೆ ಇದೇ ಸಮಯವನ್ನು ಗೊತ್ತುಪಡಿಸಿದ್ದರು :

ಮಹಾದೇವಭಾಯಿಯವರು ಅಶೋಕನನ್ನು ಸ್ವಾಗತಿಸಿ, ಪ್ರಶ್ನಿಸಿದರು.

"ನೀವು ಪ್ರಾರ್ಥನಾಕೂಟದಲ್ಲಿ ಭಾಗವಹಿಸುವಿರಾ?"

"ಅವಶ್ಯವಾಗಿ."

" ಹಾಗಿದ್ದರೆ ಬನ್ನಿ, ಸಮಯವಾಗುತ್ತ ಬಂತು. "

ದಿನ ಮತ್ತು ರಾತ್ರಿಯ ಸಂಧಿಕಾಲವಾಗಿತ್ತು. ಕ್ರಮವಾಗಿ ಬೆಳಕಿನ ಆ ಪ್ರಭೆಯನ್ನು ರಾತ್ರಿಯು ತನ್ನ ಸ್ಥಾನಕ್ಕೆ ಕರೆದೊಯ್ಯುತ್ತಿತ್ತು. ಹಗಲಿನ ಉಷ್ಣತೆ, ಜನರ ಓಡಾಟ, ಕ್ರೂರವಾದ ಬಿಸಿಲು ಹಾಗೂ ಕೋಲಾಹಲಗಳೆಲ್ಲ ಈಗ ಮಾಯವಾಗಿ, ರಾತ್ರಿಯ ಶೀತಲತೆ ಮತ್ತು ಶಾಂತ ವಾತಾವರಣದ ಆರಂಭವಾಗುತ್ತಿತ್ತು. ಅಲ್ಲಿ ಒಂದು ವಿಧವಾದ ಅಪೂರ್ವ ಸ್ತಬ್ಧತೆ ಮತ್ತು ಪಾವನತೆಯು ಹರಡಿತ್ತು.

ಧ್ಯಾನಮಗ್ನ ಮತ್ತು ನಿಶ್ಚಲರಾದ ಗಾಂಧೀಜಿಯವರು ಆಸನದಲ್ಲಿ ಮೌನವಾಗಿ ಕುಳಿತಿದ್ದರು. ಅವರೆದುರು ಮತ್ತು ಬಲಭಾಗದಲ್ಲಿ ಆಶ್ರಮವಾಸಿಗಳು, ದರ್ಶಕರು ಹಾಗೆಯೇ ಆಗಂತುಕರು ಕುಳಿತಿದ್ದರು. ಎಡಭಾಗದಲ್ಲಿ ಮಹಿಳೆಯರು ಮಂಡಿಸಿದ್ದರು.

ಪ್ರಾರ್ಥನೆಯು ಪ್ರಾರಂಭವಾಯಿತು.

ಅಶೋಕನ ಭಾವುಕ ಹೃದಯವು ಆನಂದಸಾಗರದಲ್ಲಿ ಮುಳುಗಿತು.

ಗಾಂಧೀಜಿಯವರ ಪ್ರಾರ್ಥನಾ ಸಮಯದಲ್ಲಿ ಅಶೋಕನು ಒಳ್ಳೇ ಕುಶಲತೆಯಿಂದ, ಸಮಾಧಿಸ್ಥ ಅವಸ್ಥೆಯಲ್ಲಿಯೋ ಎಂಬಂತೆ ಒಂದು ಅಮೂಲ್ಯವಾದ ಚಿತ್ರವನ್ನು ಬರೆದನು. ಆಗಲೇ ಅದರ ನಾಮಕರಣವನ್ನೂ ಮಾಡಿದ್ದನು. ' ಬ್ರಹ್ಮನಲ್ಲಿ ಲೀನ '

ಆ ಚಿತ್ರಕ್ಕೆ ತಕ್ಕ ಹೆಸರದು. ಅದರಂತೆಯೇ ಆ ಚಿತ್ರವನ್ನು ನೋಡುವಾಗ ಗಾಂಧೀಜೀಯವರು ಧ್ಯಾನಮಗ್ನರಾಗಿ, ಪರಬ್ರಹ್ಮ ಪರಮೇಶ್ವರನೊಂದಿಗೆ ಏಕರೂಪವನ್ನು ಹೊಂದಿಕೊಂಡಂತೆ ಇತ್ತು.

ಅವರ ಮುಖದ ಮೇಲೆ ಪರಮ ಪವಿತ್ರವಾದ ಶಾಂತಿ ಇದೆ. ಅವರ ಮಸ್ತಕದ ಇಕ್ಕೆಡೆಗಳಲ್ಲಿಯೂ ಸೌಮ್ಯ ಹಾಗೂ ದೇದೀಪ್ಯಮಾನವಾದ ಜ್ಯೋತಿ ಚಕ್ರಗಳು ಪಸರಿಸಿವೆ.

ಚಿತ್ರದ ಮೂಲಪ್ರತಿಯನ್ನು ಧರಮ್‌ಜೀ ಸೇಠ್‌ರವರೇ ತೆಗೆದುಕೊಂಡರೆಂಬುವದರಲ್ಲಿ ಸಂದೇಹವಿಲ್ಲ. ಅದರ ಲಕ್ಷಗಟ್ಟಲೆ ಪ್ರತಿ ಚಿತ್ರಗಳು ಕೈಗಳಿಂದ ಕೈಗೆ ಮಾರಾಟವಾದವು. ಗಾಂಧೀಜೀಯವರ ವ್ಯಕ್ತಿತ್ವದ ಇಷ್ಟು ಭಾವಪೂರ್ಣವಾದ ಚಿತ್ರವನ್ನು ತಾನೆಲ್ಲಿಯೂ ಇಂದಿನ ತನಕ ಕಂಡಿಲ್ಲವೆಂದು ಮಹಾದೇವ

ಛಾಯಿಯುವರೆಂದರು.

ಈ ಚಿತ್ರದ ಚಿತ್ರಣವಾದ ನಂತರ ಅಶೋಕನ ಮನಶ್ಚಾಂಚಲ್ಯವೂ ಉದ್ವಿಗ್ನತೆಯೂ ಮತ್ತು ವಿರಹವೂ ಬಹಳ ಕಡಿಮೆಯಾಯಿತು. ಮರಿಯಮ ಳಿಗೆ ಅನ್ಯಾಯವನ್ನು ಮಾಡಿದೆನೆಂಬ ಅಸಮಂಜಸ ಅಭಿಪ್ರಾಯವೂ ಈಗ ಬಹು ಮಟ್ಟಿಗೆ ಕಡಿಮೆಯಾಯಿತು. ಅವಳು ತಾನಿತ್ತ ನಾನ್ನೂರು ರೂಪಾಯಿಗ ಳಿಂದ ಯಾವುದಾದರೊಂದು ವ್ಯವಸ್ಥೆಯನ್ನು ಮಾಡಿಕೊಂಡು ಜೀವನಯಾಪನೆ ಯನ್ನು ಮಾಡುತ್ತಿರಬಹುದೆಂಬುದೇ ಇವನ ಮನಸ್ಸಿಗೆ ಶಾಂತಿಯನ್ನು ಕೊಡಲು ಕಾರಣ.

ಹತ್ತೊಂಬತ್ತು

ಈ ವರ್ಷ ನಾಗಪುರದಲ್ಲಿ ತುಂಬಾ ಮಳೆ. ಇದರ ಪರಿಣಾಮವು ಎಲ್ಲರ ಮೇಲೂ ಆದದ್ದೇನೋ ಆಯಿತು. ಆದರೆ ಅಶೋಕನನ್ನು ಇದು ಸನ್ನಿಪಾತ ಜ್ವರಕ್ಕೆ ತಳ್ಳಿತು. ಅವನು ಬಿಡದೆ ಮೂರು ತಿಂಗಳ ಕಾಲ ಅಸ್ವಸ್ಥನಾಗಿದ್ದನು. ಒಮ್ಮೆ ಜ್ವರವು ಏರುವುದು. ಮತ್ತೊಮ್ಮೆ ಇಳಿಯುವುದು. ನಿತ್ರಾಣವು ಮಿತಿ ಮೀರಲು ಜ್ವರವು ಬೇರಾವುದೋ ಒಂದು ರೋಗಕ್ಕೆ ಮಾರ್ಪಾಟಾಯಿತು. ಕಾಯಿಲೆಯಿಂದ ಅಶೋಕನು ತುಂಬಾ ಬೇಸತ್ತಿದ್ದನು. ಡಾಕ್ಟರರು ಕೆಲವು ಇಂಜೆಕ್ಷನ್ನುಗಳನ್ನು ಚುಚ್ಚಿದರು. ಜೊತೆಗೆ ಔಷಧಿಯನ್ನೂ ಚಾಚೂ ತಪ್ಪದೆ ಕೊಡುತ್ತಿದ್ದರು. ಆದರೆ ಯಾರೂ ರೋಗವು ನಿರ್ಮೂಲವಾಯಿತು ಎನ್ನಲು ಹೆದರುತ್ತಿದ್ದರು. ಅಶೋಕನು ಮೋಟಾರಿನಲ್ಲಿ ತಿರುಗುವಷ್ಟು ಶಕ್ತಿ ಪಡೆದರೂ ಪೂರ್ಣ ಗುಣಮುಖನಾಗಲಿಲ್ಲ. ಆದ್ದರಿಂದ ಅವನಲ್ಲಿ ಸ್ಫೂರ್ತಿ ಇರಲಿಲ್ಲ. ಹವೆಯ ಬದಲಾವಣೆಯಿಂದ ಖಂಡಿತವಾಗಿ ಲಾಭವಿದೆ ಎಂದು ವೈದ್ಯರು ಸಲಹೆ ಯನ್ನಿತ್ತರು. ಅದೂ ಸಮುದ್ರದ ಬದಿಯಾಗಿದ್ದುಕೊಂಡು, ಅಲ್ಲಿಯ ನೀರಲ್ಲಿ ಕಬ್ಬಿಣದ ಸತ್ವವೂ ಮತ್ತು ಇತರ ಖನಿಜ ದ್ರವ್ಯವೂ ಸೇರಿರಬೇಕೆಂದೂ ಸೂಚಿಸಿ ದರು.

"ನನ್ನನ್ನು ಎಲ್ಲಿಯಾದರೂ ಬೆಟ್ಟದೂರಲ್ಲಿ ಕೊಂಡು ಹೋಗಿ ಬಿಡಿ. ನಾನಲ್ಲಿ ಪೂರ್ಣ ಕ್ಷೇಮವನ್ನು ಹೊಂದುತ್ತೇನೆ" ಎಂದು ಅಶೋಕನು ಡಾಕ್ಟರರೊಂದಿಗೆ ಹೇಳುತ್ತ ಮುಂದರಿಸಿದನು. "ಕೇವಲ ಸಮುದ್ರದ ದೃಶ್ಯವನ್ನೇ ನೋಡಿ ನನ್ನ ಮನಸ್ಸು ಸಂತೋಷಗೊಳ್ಳಲಾರದು. ಸಹ್ಯಾದ್ರಿ ಪರ್ವತದ ಹಿಲ್ ಸ್ಟೇಶನಿಗೆ ಹೋದರೆ ಒಳ್ಳೇದು. ಮಾಥರೇನೋ, ಮಹಾಬಲೇಶ್ವರವೋ, ಪಂಚವಟಿಯೋ ಯಾವುದಾದರೊಂದು."

ಡಾಕ್ಟರರಲ್ಲಿ ಪ್ರಶ್ನೋತ್ತರವಾದ ನಂತರ ಎಲ್ಲವುಗಳಿಗಿಂತ 'ಲೋನಾವಳ' ಬಹಳ ಉತ್ತಮ ಸ್ಥಳವೆಂದು ಅಭಿಪ್ರಾಯಪಟ್ಟರು. ಅದು ಸಮುದ್ರ ತಟದಿಂದ ಸುಮಾರು ನಾಲ್ವತ್ತು ಮೈಲುಗಳಷ್ಟು ದೂರವಿದ್ದರೂ, ಸಮುದ್ರ ಗಾಳಿಯು ಅಲ್ಲಿಯ ತನಕವೂ ಬೀಸುತ್ತಿರುವುದು. ಸಹ್ಯಾದ್ರಿ ಪರ್ವತವೂ ಅದಕ್ಕೆ ಹತ್ತಿರವೇ ಇದೆ. ಅಲ್ಲಿಯೂ ವಿಪರೀತ ಮಳೆ ಬೀಳುವ ವಾಡಿಕೆ. ಆದ್ದರಿಂದ ನವರಾತ್ರಿಯ ನಂತರ ಹೋಗುವುದು ಉತ್ತಮವೆಂದರು.

ಈ ಮಧ್ಯೆ ಅಶೋಕನು ತನ್ನ ಕಲಾ ಉದ್ಯಮಕ್ಕೆ ರಾಜೀನಾಮೆಯನ್ನಿತ್ತವನಂತೆ ಇದ್ದು, ಯಾರ ದರ್ಶನವನ್ನು ಕೂಡ ಮಾಡಿಲ್ಲ. ಆದರೂ ಒಂದು ಬಾರಿ ಕ್ಲಬ್ಬಿಗೆ ಹೋಗಿದ್ದನು. ಅಲ್ಲಿ ಮಾಯಾದೇವಿಯನ್ನು ಕಂಡಿದ್ದನು. ಆದರೆ ಅವಳು ಆಗ ಇವನನ್ನು ವಿರೋಧ ದೃಷ್ಟಿಯಿಂದ ಕಂಡಂತೆ ತೋರಿತು. ಅಲ್ಲದೆ ಆಗ ಅವಳು ಒಬ್ಬ ಐ. ಸಿ. ಯಸ್. ಆಫೀಸರನೊಂದಿಗೆ ಅಲೆಯುತ್ತಿದ್ದಳು. ಇದನ್ನು ನೋಡಿದ ಅಶೋಕನಿಗೆ ತನ್ನ ಜೀವ ಉಳಿಯಿತೆಂಬ ಭಾವನೆಯಾಯಿತು.

* * * *

ಲೋನಾವಳವನ್ನು ತಲಪುತ್ತಲೇ ಅಶೋಕನ ಅರ್ಧ ಕಾಯಿಲೆಯು ಗುಣವಾದಂತಾಯಿತು. ತಾನು ಬಹು ಬೇಗ ಹಿಂದಿನಂತೆ ಆರೋಗ್ಯವಂತನಾಗುವೆನೆಂಬ ಬಗ್ಗೆ ಅವನಿಗೇ ನಿಶ್ಚಯವಾಯಿತು. ಅಲ್ಲಿಯ ಪ್ರಾಕೃತಿಕ ಸೌಂದರ್ಯ ಮತ್ತು ಸ್ವಾಸ್ಥ್ಯವರ್ಧಕ ಹವೆಯು ಇವನ ಮನಸ್ಸನ್ನು ಉಲ್ಲಾಸಪೂರ್ಣವಾಗಿ ಮಾಡಿತ್ತು.

ಅವನು ಮನೆಯೊಂದರ ಅರ್ಧ ಭಾಗವನ್ನು ಬಾಡಿಗೆಗೆ ಪಡೆದುಕೊಂಡಿ

ದ್ದನು. ಅದರ ಇನ್ನೊಂದು ಭಾಗದಲ್ಲಿ ಮಧ್ಯಪ್ರದೇಶದ ಡಿಸ್ಟ್ರಿಕ್ಟ್ ಜಡ್ಜರೊಬ್ಬರು ಪತ್ನೀಸಮೇತರಾಗಿ ವಾಸಿಸುತ್ತಿದ್ದರು. ಅಶೋಕ ಠಾಕೂರನೂ ಕೂಡ ಮಿಸ್ಟರ್ ಅಧಿಕಾರಿ ಜಡ್ಜರ ಪ್ರಾಂತದವನೇ ಆಗಿದ್ದುದಲ್ಲದೆ ಅವರ ಕೆಲವು ಗೆಳೆಯರನ್ನು ಇವನೂ ಬಲ್ಲನು. ಆದ್ದರಿಂದ ಅವರು ಆಶೋಕನಲ್ಲಿ ಅತ್ಯಂತ ಆತ್ಮೀಯತೆಯ ವ್ಯವಹಾರವನ್ನು ಮಾಡಲಾರಂಭಿಸಿದರು. ಅವರ ಪರಿವಾರವೂ ಬಹು ಚಿಕ್ಕದು. ಅವರು, ಅವರ ಪತ್ನಿ, ಅಲ್ಲದೆ ಅವರ ಒಬ್ಬಳೇ ಒಬ್ಬಳಾದ ಮಗಳು ಅರುಣಾ. ಅವಳು ಮುಂದಿನ ದೀಪಾವಳಿಯ ರಜೆಗೆ ತಂದೆ-ತಾಯಿಯರೊಂದಿಗೆ ಕೆಲವು ದಿನಗಳನ್ನು ಕಳೆಯಲು ಲೋನಾವಳಕ್ಕೆ ಬರುವವಳಿದ್ದಳು. ಅವಳು ನಾಗಪುರದ ವಿಮೆನ್ಸ್ ಕಾಲೇಜಿನಲ್ಲಿ ಎಮ್. ಎ. ಯಲ್ಲಿ ಓದುತ್ತಿದ್ದಾಳೆ. ಶ್ರೀ ಅಧಿಕಾರಿಯವರು ನಾಲ್ಕು ತಿಂಗಳ ರಜೆಯಲ್ಲಿ ಈಗ ಅಲ್ಲಿದ್ದಾರೆ. ಅವರೂ ಅಲ್ಲಿಗೆ ಹೋದ ಕಾರಣವೂ ಹವೆ ಬದಲಾವಣೆಯೇ ಹೌದು. ಆದರೂ ತಮ್ಮ ನಾಲ್ಕು ತಿಂಗಳ ವಿರಾಮವನ್ನು ಅಲ್ಲೇ ಕಳೆಯಲು ಆಶಿಸುತ್ತಿದ್ದರು. ಆದರೆ ಅವರ ಸುಪುತ್ರಿ ಅರುಣಾ ಅಲ್ಲಿ ಕಷ್ಟದಲ್ಲಿ ಒಂದು ತಿಂಗಳು ಇದ್ದರೆ ಇರಬಹುದು.

ಜಡ್ಜ್ ಮಹಾಶಯರು ಒಮ್ಮೊಮ್ಮೆ ಅಶೋಕನೊಂದಿಗೆ ಸಂಜೆಯ ನಡಿಗೆಗೆ ಹೋಗುತ್ತಿದ್ದರು. ಹಲವು ಬಾರಿ ಅವರು ಇವನನ್ನು ತಮ್ಮ ಮನೆಯಲ್ಲೇ ಉಣ್ಣಬೇಕೆಂದು ಒತ್ತಾಯಪಡಿಸಿ ಉಣಿಸಿದ್ದರು. ಇದರಿಂದ ಅವರಿಗೂ ಅವರ ಪತ್ನಿಗೂ ಅಶೋಕನ ಸ್ವಭಾವ, ವ್ಯಾಪಾರ, ವ್ಯವಹಾರ, ಆದಾಯ ಇತ್ಯಾದಿ ಎಲ್ಲವುಗಳ ಮುಕ್ಕಾಲು ಪಾಲು ಪರಿಚಯವಾಯಿತು. ಒಂದು ದಿನ ಅಶೋಕ್ ಬಾಬು ಇನ್ನೂ ತನ್ನ ವಿವಾಹವಾಗಿಲ್ಲವೆಂದು ಹೇಳಿದನು. ಮುಖ್ಯವಾಗಿ ಅಂದಿನಿಂದ ಶ್ರೀಮತೀ ಅಧಿಕಾರಿಯವರು ಅಶೋಕನ ವಿಚಾರದಲ್ಲಿ ನಡೆದುಕೊಳ್ಳುವ ರೀತಿಯಲ್ಲಿ ಒಂದು ಬಗೆಯ ವಿಶೇಷ ಪರಿವರ್ತನೆಯುಂಟಾಯಿತು. ಅಶೋಕನು ತಮ್ಮವನೆಂದೇ ಭಾವಿಸಲಾರಂಭಿಸಿದರು. ಅಂದಿನಿಂದ ಮಗಳು ಅರುಣಾಳ ಹೆಸರು ಅಶೋಕನೆದುರಿನಲ್ಲಿ ಬಾರಿಬಾರಿಗೂ ಬರಲಾರಂಭಿಸಿತು. 'ಅರುಣಾಳಿಗೂ ಕಲೆ ಎಂದರೆ ಪ್ರಾಣ. ಈ ಮೇಜಿನ ಮೇಲಿನ ಹೊದಿಕೆಯನ್ನು ಅವಳೇ ಹೊಲಿದುದು. ಆ ಚಿತ್ರವನ್ನು ಚಿತ್ರಿಸಿದುದೂ ಅವಳೇ. ಅರುಣಳು ದಿಲ್ ರುಬಾವನ್ನು ಬಾರಿಸುತ್ತಾಳೆ.' ಎಂದು ಮೊದಲಾಗಿ ವ್ಯಾಖ್ಯಾನಗಳಾಗಹತ್ತಿದವು. ಒಂದು ದಿನ ಅವರ ಕುಟುಂಬದ ಚಿತ್ರಗಳ ಪುಸ್ತಕವನ್ನು ತೆಗೆದು, ಒಮ್ಮೆಲೇ

ಅದರಲ್ಲಿರುವ ಅರುಣಾಳ 'ಫೋಟೋ'ವನ್ನು ತೆರೆದು ಅಶೋಕನ ಮುಂದಿಟ್ಟರು.

ಆಗ ಆ ಚಿತ್ರವು ಬಹು ಲಾವಣ್ಯವತಿಯಾದ ಯುವತಿಯ ಚಿತ್ರವೆಂದು ತಿಳಿದುದಲ್ಲದೆ ಬೇರೇನು? ಅಶೋಕನು ಸ್ಮೈಮರೆತು ತುಸು ಹೊತ್ತು ಅದನ್ನೇ ನೋಡುತ್ತಿದ್ದ. ಶ್ರೀಮತಿ ಅಧಿಕಾರಿಯವರು ತನ್ನನ್ನೇ ನೋಡುತ್ತಿದ್ದಾರೆ ಎಂಬುದನ್ನು ತಿಳಿದ ಅಶೋಕನು ಚಂಚಲಮನಸ್ಕನಾಗಿ ಒಡನೆ ಪುಸ್ತಕದ ಹಾಳೆಯನ್ನು ಮಗುಚಿದನು.

ಅರುಣಳ ಫೋಟೋ ಮತ್ತು ಅವಳಿಂದ ಚಿತ್ರಿತವಾದ ಚಿತ್ರಗಳನ್ನು ಕಂಡ ಅಶೋಕನಿಗೆ ಆ ತರುಣಿಯನ್ನೊಮ್ಮೆ ಪ್ರತ್ಯಕ್ಷ ಕಾಣಬೇಕೆಂಬ ಇಚ್ಛೆಯು ಮನಸ್ಸಿನಲ್ಲಿ ಹುಟ್ಟಿದುದಲ್ಲದೆ, ಒಂದು ಬಗೆಯ ಕುತೂಹಲವೂ ಉಂಟಾಯಿತು.

ಅರುಣಾ ನಾಳೆಯ ದಿನ ಬೆಳಗಿನ ಎಕ್ಸ್‌ಪ್ರೆಸ್ ಗಾಡಿಯಿಂದ ಇಲ್ಲಿಗೆ ಬರುವಳೆಂದು ತಿಳಿದಾಗ ಮಾತಾಪಿತರುಗಳು ಸಂತೋಷಪಡುವುದು ಸಹಜವೇ! ಆದರೆ ಅಶೋಕನೂ ಉತ್ಕಂಠಿತನಾದುದನ್ನು ಕಂಡರೆ ಆಶ್ಚರ್ಯ! ಹಾಗಿದ್ದರೂ ಕೂಡ ಅಶೋಕನು ಆ ಭಾವವನ್ನು ಹೊರಗೆಡವಿರಲಿಲ್ಲ. ಅರುಣಾಳನ್ನು ಎದುರ್ಗೊಳ್ಳಲು ಅವಳ ತಾಯ್ತಂದೆಯರು ರೈಲ್ವೇ ಸ್ಟೇಶನಿಗೆ ಹೋದಾಗ, ಅಶೋಕನು ಅನ್ಯ ವಿಧಿಯಿಲ್ಲದೆ ವಲವಣಾ ಸರೋವರದೆಡೆಗೆ ತಿರುಗಾಡಲು ಹೋದನು.

ಅರುಣಾಳು ನಿಜವಾಗಿಯೂ ಅತಿ ಸುಂದರಿ ಎಂಬುದನ್ನು ಅಶೋಕನು ಮನೆಗೆ ಹಿಂದಿರುಗಿದಾಗ ಕಂಡನು. ಅಚ್ಚುಮೆಚ್ಚಿನ ಪುತ್ಥಳಿಯಂತೆ ಸಾಕಿದ ಕನ್ಯೆ. ಅಲ್ಲದೆ ಧನ, ವೈಭವ, ವಿಲಾಸಗಳ ತೊಡೆಯಲ್ಲೇ ಅವಳ ಪಾಲನೆ-ಪೋಷಣೆಯೂ ನಡೆದಿದೆ. ಸ್ವಾಭಾವಿಕವಾಗಿಯೇ ಅವಳು ರೂಪವತಿ. ಜೊತೆಗೆ ಅವಳ ನಡೆನುಡಿ, ರೀತಿನೀತಿಗಳು ಉಚ್ಚತರಗತಿಯವುಗಳಾಗಿದ್ದವು. ಅಷ್ಟೂ ಸಾಲದೆ ಅವಳು ತನ್ನನ್ನು ಇನ್ನೂ ಸುಂದರಿಯನ್ನಾಗಿ ಮಾಡಿಕೊಳ್ಳುವ ಸೌಂದರ್ಯ ಪ್ರಸಾಧನೆಯ ವಿಷಯದಲ್ಲಿ ಅವಳು ವಿಶೇಷವಾಗಿ ಲಕ್ಷ್ಯವನ್ನಿಟ್ಟಿದ್ದಳು. ಈಗಾಗಲೇ ಅವಳಿಗೆ ಇಪ್ಪತ್ತುಮೂರು ವರ್ಷ ತುಂಬಿತ್ತು. ಅವಳಿನ್ನೂ ಅವಿವಾಹಿತಳು. ಪ್ರಣಯ ಜೀವನದ ಸ್ವಪ್ನವನ್ನು ಕಾಣಲು ಆರಂಭಿಸಿದ್ದಳು. ಇದರಿಂದ ಒಮ್ಮೊಮ್ಮೆ ಅವಳ ದೇಹದಲ್ಲಿ ಸ್ಫೂರ್ತಿಯುಂಟಾಗುತ್ತಿತ್ತು.

ಶ್ರೀ. ಅಧಿಕಾರಿಯವರೂ ಅವಳಿಗಾಗಿ ಒಬ್ಬ ಯೋಗ್ಯ ವರನನ್ನು ಹುಡುಕು

ತ್ತಿದ್ದರು. ಆದರೆ ಅವರಿಗಿನ್ನೂ ಅದರಲ್ಲಿ ಸಫಲತೆಯು ಸಿಕ್ಕಿರಲಿಲ್ಲ. ಈ ವಿಚಾರದಲ್ಲಿ ಅವರಿಗೆ ಚಿಂತೆಯೂ ಇದ್ದೇ ಇತ್ತೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆರೋಗ್ಯವಂತನೂ, ಸುಸಂಸ್ಕೃತನೂ, ಸುಂದರನೂ ಅಲ್ಲದೆ ಸಂಪಾದಿಸುವವನೂ ಆದ ಅಶೋಕನನ್ನು ನೋಡಿದಂದಿನಿಂದ ಅಧಿಕಾರಿಯವರಿಗೂ, ಅವರಿಗಿಂತಲೂ ಮಿಗಿಲಾಗಿ ಅವರ ಪತ್ನಿಗೂ ಬಹಳ ಆನಂದವಾಗಿತ್ತು. ತಮ್ಮ ತಲೆಯ ಮೇಲಿನ ಹೊರೆಯೊಂದು ಇಳಿದು ಹೋಯಿತೆಂದೇ ಅವರ ಭಾವನೆ. ಅದೂ ಅಲ್ಲದೆ ಅರುಣಾಳ ಮನಸ್ಸು ಅಶೋಕನನ್ನೇ ಬಯಸುತ್ತಿದೆ ಎಂದು ತಿಳಿದ ಆ ದಂಪತಿಗಳ ಸಂತೋಷಕ್ಕೆ ಎಣೆಯೇ ಇಲ್ಲ. ಈಗ ಉಳಿದದ್ದೆಂದರೆ ಕೇವಲ ಅಶೋಕನ ಅಭಿಪ್ರಾಯ. ಅವನಾದರೂ ಒಬ್ಬ ರಹಸ್ಯಮಯ. ಆದ್ದರಿಂದ ಅವನ ವಿಚಾರವೇನಿದೆ ಎನ್ನುವುದನ್ನು ತಿಳಿಯುವುದೂ ತುಸು ಕಷ್ಟ. ಅವನ ಆಂತರಿಕ ಜೀವನದಲ್ಲಿ ಯಾವುದೊ ಒಂದು ವಿಧವಾದ ಗಂಭೀರವೂ ಗೂಢವೂ ಆದ ವಿಚಾರವಿರಬೇಕು. ಅದನ್ನವರು ಅಳೆಯುವ ಕೆಲಸವೂ ಬಹು ಕಷ್ಟತರವಾದುದು.

ಪೂರ್ಣ ಯೌವನವನ್ನು ಪಡೆದಿದ್ದ ಅರುಣಾ ಈಗ ಪ್ರೇಮಕ್ಕಾಗಿ ಕಾತರಳಾಗಿದ್ದಾಳೆ. ಪ್ರಣಯವೆಂಬ ಉದ್ಯಾನದಲ್ಲಿ ನಲಿದಾಡಲು ಉತ್ಕಂಠಿತಳಾಗಿದ್ದಾಳೆ. ಆ ಸಮಯದಲ್ಲಿ ಅವಳ ಹೃದಯವು ಒಂದು ವಿಚಿತ್ರ ಮಾಧುರ್ಯವನ್ನು ತುಂಬಿಕೊಂಡು ಶೋಭಿಸುವಂತಿತ್ತು. ಆಗವಳು ರೊಮಾನ್ಸ್ (Romence)ನ್ನು ಹುಡುಕುತ್ತ ಅಲೆಯುತ್ತಾಳೆ. ಅವಳ ಪ್ರಣಯಾರ್ಚನೆಯು ಇತರರಿಗಿಂತ ಬೇರೆ ರೀತಿಯಾಗಿರಬೇಕೆಂದು ಅವಳ ಇಚ್ಛೆ.

ಇಂತಹ ಸ್ವಪ್ನಾಂಧಳೂ, ಪ್ರಣಯವಿಹ್ವಲಳೂ ಆದ ರಮಣಿಯ ಮನಸ್ಸಿಗೆ ಅಶೋಕನಂತಹ ಅದ್ವಿತೀಯ ಕಲಾಕಾರನು ಒಪ್ಪಿಗೆಯಾಗುವದರಲ್ಲಿ ಆಶ್ಚರ್ಯವೇನಿದೆ? ಅಂಥವನು ಸಾವಿರಕ್ಕೊಬ್ಬ ಸಿಗುವದೂ ಅಪರೂಪ. ಅರುಣಾಳ ಸ್ವಪ್ನಲೋಕದಲ್ಲಿ ಇದಕ್ಕೆ ಮಹತ್ತರವಾದ ಸ್ಥಾನವಿತ್ತು.

ಅಶೋಕನ ಸೌಂದರ್ಯಾಸಕ್ತ ದೃಷ್ಟಿಯಲ್ಲಿ ಅರುಣಳ ಲಾವಣ್ಯವು ತುಂಬಿ ಹೋಗಿತ್ತು ಎಂಬುದರ ಸಂದೇಹವಿಲ್ಲ. ಆ ರಮಣಿಯ ಚಿತ್ರಕಲಾಸಕ್ತಿಯೂ ಅವನನ್ನವಳೆಡೆಗೆ ಆಕರ್ಷಿಸುತ್ತಿತ್ತು. ಅವನು ಕೆಲವೊಮ್ಮೆ ಬಹಳ ಆತುರತೆಯಿಂದ ಆ ಕನ್ಯೆಯ ಕಡೆಗೆ ನೋಡುತ್ತಾ ಇರುತ್ತಾನೆ. ಅರುಣಳ ಸಹವಾಸದಿಂದ

ಅವನಿಗೆ ಆನಂದವು ಉಂಟಾಗುತ್ತಿತ್ತು. ಆ ಯುವತಿಯು ಇವನಿಗಾಗಿ ಕಲೆ ಮತ್ತು ಸ್ತ್ರೀಯ ಉತ್ತಮ ಸಮನ್ವಯವನ್ನು ಮಾಡಬಲ್ಲಳೇ?

ಒಮ್ಮೊಮ್ಮೆ ನಾಲ್ವರೂ ಪಿಕ್‌ನಿಕ್ಕಿಗಾಗಿ ಪರ್ವತದ ಮೇಲೆ ಹೋಗುತ್ತಿದ್ದರು. ಕಾರ್ಲಾದ ಗುಹೆಗಳಿಗೆ ಅವರೆಲ್ಲರೂ ಒಂದಾಗಿ ಹೋಗಿ ಅಲ್ಲಿನ ಬುದ್ಧಕಾಲೀನ ಸ್ತ್ರೀ-ಪುರುಷರ ಅಂಗವಿಲಾಸಗಳನ್ನು ಪೂರ್ಣ ಧ್ಯಾನದಿಂದ ನೋಡಿದರು. ಒಬ್ಬಂಟಿಗಳಾಗಿ ಅರುಣಳು ಅವುಗಳೆದುರು ಎಷ್ಟು ಹೊತ್ತು ನಿಂತಿದ್ದಳೆಂದು ಹೇಳುವುದು ಕಷ್ಟ.

ಕೆಲವು ಸಲ ಅಧಿಕಾರೀ ಪತಿ-ಪತ್ನಿಯರು ಅವರಿಬ್ಬರನ್ನೇ ಬೇಕೆಂತಲೇ ಹಿಂದೆ ಬಿಟ್ಟು ತಾವು ಮುಂದೆ ಸಾಗುತ್ತಿದ್ದರು. ಅಶೋಕ್-ಅರುಣಾ ಇವರಿಬ್ಬರೇ ತಿರುಗಾಡಲು ಹೋಗುವದಕ್ಕೆ ಪ್ರೋತ್ಸಾಹಿಸುತ್ತಿದ್ದರೇ ವಿನಹ ಅಡ್ಡಿ ಮಾಡುತ್ತಿರಲಿಲ್ಲ. ಈ ಸಹವಾಸದಿಂದ ಕೆಡುಕಾಗಲಾರದೆಂದವರೆಣಿಕೆ.

ಅಶೋಕನು ಈ ಸೂಕ್ಷ್ಮ ವ್ಯವಹಾರಗಳ ಅರ್ಥವನ್ನು ತಿಳಿದುಕೊಂಡಿಲ್ಲವೆಂದು ಹೇಳುವಂತಿಲ್ಲ. ಒಂದು ದಿನ ಅವರಿಬ್ಬರೂ ಜಲಪಾತದ ಬಳಿಯಲ್ಲಿ ಕುಳಿತಾಗ ಅಶೋಕನ ಮನಸ್ಸು ಆ ಸುಂದರ ಯುವತಿಯ ಸಾನ್ನಿಧ್ಯದಿಂದ ಪುನಃ ಮೋಹದ ಆವರಣದೊಳಗೆ ಹೊಕ್ಕಂತೆ ಭಾಸವಾಯಿತು. ಅರುಣಳ ಸ್ವಾಭಾವಿಕವಾದ ಆರೋಗ್ಯ ಮತ್ತು ಸೌಂದರ್ಯವು ನಿಜವಾಗಿಯೂ ಅಪ್ರತಿಮವಾಗಿತ್ತು. ಅವಳ ಕಪ್ಪುಕಪ್ಪಾದ ದೊಡ್ಡ ಕಣ್ಣುಗಳು, ತೆಳ್ಳಗಿನ ಚೆಂದುಟಿಗಳು, ಕೋಮಲವಾದ ಗಲ್ಲ, ಕರ್ಣಕುಸುಮಗಳಿಂದ ಅಲಂಕೃತವಾದ ಆ ಎರಡು ಕಿವಿಗಳು, ಸ್ಫೂರ್ತಿ ತುಂಬಿದ ಬಳ್ಳಿಯಂತೆ ಬಳಕುವ ದೇಹ, ಇದೆಲ್ಲವನ್ನು ಮೀರಿಸುವಂತಹದೂ, ಅವಳಲ್ಲಿ ಎದ್ದು ತೋರುತ್ತಿರವುದೂ, ಆದ ಅವಳ ವೇಷಭೂಷಣಗಳು ಮತ್ತು ಇದರ ಜೊತೆಗಿರುವ ಸೌಂದರ್ಯಸಾಧನೆ, ಇವುಗಳೆಲ್ಲವುಗಳ ಮೋಹಕ ಪ್ರಭಾವದಿಂದ ಅಶೋಕನಿಗೆ ತಾನು ನಿಶ್ಚಲನಾಗಿರಲು ಸಾಧ್ಯವಾಗುತ್ತಿರಲಿಲ್ಲ. ಸಾಲದ್ದಕ್ಕೆ ಅವನಲ್ಲಿ ಆಗ ಒಂದು ವಿಚಾರವು ಬೇರೆ ಬೇರೂರಿತ್ತು.

ಇಂತಹ ಸಂದರ್ಭಗಳಲ್ಲಿ ಅಶೋಕನಿಗೆ ಮರಿಯಮಳ ನೆನಪಾಗುತ್ತಿತ್ತು. ಅವನು ಮನಸ್ಸಿನಲ್ಲೇ ಮರಿಯಮ್ ಮತ್ತು ಅರುಣಳ ತುಲನೆಗೆ ಆರಂಭಿಸುತ್ತಿದ್ದನು. ಅವರಿಬ್ಬರಲ್ಲಿ ಅರುಣಳೇ ಸುಂದರಳು. ಆದರೆ ಮರಿಯಮಳ

ಹೃದಯಾಂತರಾಳದಲ್ಲಿರುವ ಸೌಂದರ್ಯವು ಇವಳಿಗೆಲ್ಲಿ ಬರಬೇಕು! ಆದರೂ ಮರಿಯಮುಳಲ್ಲಿ ಕಲಾಪ್ರಿಯತೆ ಮತ್ತು ಗೃಹಣಶಕ್ತಿ ಇರುವುದಾದರೆ—ಅರುಣಳು ಅದನ್ನೇ ಸೃಷ್ಟಿಸುತ್ತಾಳೆ. ಅಲ್ಲದೆ ಅರುಣಳು ಎಮ್. ಎ. ಓದುತ್ತಾಳೆ. ಅವಳ ವಿದ್ಯೆ ಹೆಚ್ಚಿನದು. ಅವಳ ಮಾತಾಪಿತರು ಮರ್ಯಾದೆಯುಳ್ಳ ಮನೆತನದವ ರೆಂಬುದು ಅಶೋಕನಿಗೆ ಗಮನಾರ್ಹವಾದ ಸಂಗತಿ.

ಅಶೋಕನು ತನ್ನ ಹೃದಯದೊಳಗೆ ಕೈಹಾಕಿ ಹುಡುಕಿ ನೋಡುವಂತೆ ನೋಡಿದಲ್ಲಿಯೂ, ಮರಿಯಮುಳನ್ನು ವಿವಾಹವಾಗಬೇಕೆಂಬ ಇಚ್ಛೆಯವನಲ್ಲಿ ಉದ್ಭವಿಸಲೇ ಇಲ್ಲ. ಆದರೆ ಅರುಣಳ ವಿಚಾರದಲ್ಲಾದರೂ ಈ ಯೋಚನೆ ಗಳು ಒಮ್ಮೊಮ್ಮೆ ಉಂಟಾಗುತ್ತಿದ್ದವು. ಅವನೊಮ್ಮೆ ಎಣಿಸುತ್ತಿದ್ದ 'ಇನ್ನೂ ಮರಿಯಮುಳೊಡನೆ ಇದ್ದ ಆ ಜೀವನದ ಅಧ್ಯಾಯವು ಪೂರ್ಣವಾಗಿಲ್ಲವೇ ?' ಎಂದು. ಆದರದು ಪೂರ್ಣವಾಗಲು ಹೇಗೆ ಸಾಧ್ಯ ?

ಅಶೋಕನು ಪಾದರೀಪುರವನ್ನು ಬಿಟ್ಟಂದಿನಿಂದ ಮರಿಯಮುಳ ಯಾವು ದೊಂದು ಪತ್ರವೂ ಬರಲಿಲ್ಲ. ಅಲ್ಲದೆ ಅವಳ ವಿಚಾರವಾಗಿ ಯಾರಲ್ಲೂ ಏನನ್ನೂ ಕೇಳಿಲ್ಲವೆಂಬ ಯೋಚನೆಯು ಪುನಃ ಈಗಲೇ ಅವನ ಮನಸ್ಸಿಗೆ ಹೊಳೆದುದು. ಅವಳು ಜೀವಿಸಲು ಅಸಹಾಯಳಾಗಿರಲಾರಳು. ಏಕೆಂದರೆ ಅವಳಲ್ಲಿ ನಾನೂರು ರೂಪಾಯಿಗಳಿವೆ, ಎಂಬ ಒಂದು ಭ್ರಮೆಯು ಅವನನ್ನು ಸಮಾಧಾನಪಡಿಸುತ್ತಿತ್ತು.

ಮುಂದೆ ಒಂದು ರೀತಿಯಿಂದ ಮರಿಯಮುಳೊಂದಿಗೆ ಜೀವಿಸಿದ ಜೀವ ನವು ಪೂರ್ಣವಾಗಿ, ಇನ್ನೊಂದು ನವೀನ ಜೀವನದ ಮೊದಲನೆಯ ಪುಟವು ತೆರೆಯುವುದರಲ್ಲಿದೆ.

ಅರುಳ ವಿಚಾರವಾಗಿ ಅವನ ಹೃದಯದಲ್ಲಿ ರಭಸದಿಂದ ಯೋಚನಾ ತರಂಗಗಳು ಹೊರಹೊಮ್ಮಲಾರಂಭಿಸಿದವು. ಜೊತೆಗೆ ವಿವಾಹ ವಿಚಾರವಾ ಗಿಯೂ ಯೋಚನೆಗಾರಂಭವಾಯಿತು.

ವಿವಾಹ? ಅವನು ವಿವಾಹಿತನಾಗುವನೇನು? ಸ್ತ್ರೀ ಮತ್ತು ಕಲೆ! ಕಲೆ ಮತ್ತು ಸ್ತ್ರೀ! ಅವನು ಈ ಎರಡರ ಮಧ್ಯೆ ಸಮನ್ವಯವನ್ನು ತರಬಲ್ಲನೇ? ಅವನಲ್ಲಿ ಆ ಹಳೆಯ ಹೃದಯ ಮಂಥನಕ್ಕೆ ಆರಂಭ ವಾಯಿತು.

ಮನುಷ್ಯನ ಮನಸ್ಸು ಎಂತಹ ಪರಿವರ್ತನಶೀಲ ಸ್ವಭಾವವನ್ನೊಳಗೊಂಡಿದೆ. ಅದೇನನ್ನು ಇಚ್ಛಿಸುವುದೊ ಅದನ್ನು ಕಾರ್ಯರೂಪಕ್ಕೆ ತರಲು ಬೇಕಾದ ದಾರಿಯನ್ನೊ ಅಥವಾ ಉಪಾಯವನ್ನೊ ಅದೇ ಹುಡುಕಿ ತೆಗೆಯುತ್ತಿದೆ. ಅಂದು ಅವನ ಮನಸ್ಸಿನಲ್ಲಿ ವಿವಾಹದ ಇಚ್ಛೆಯಾದುದೇ ತಡ, ಅದಕ್ಕೆ ಬೇಕಾದ ಸಹಾಯಕ ಸಾಮಗ್ರಿಗಳನ್ನು ಅವನ ಮನಸ್ಸು ಅವನಿಗೆ ಒದಗಿಸಿತು. ಆ ದಿನ ಪಾದರೀಪುರದಲ್ಲಿ ಮರಿಯಮಳೊಂದಿಗೆ ನಡೆದ ಪವಿತ್ರ ಸಂಭಾಷಣೆಯನ್ನವನೀಗ ಮರೆಯಲು ಆಶಿಸುತ್ತಿದ್ದ.

ಯೋಚಿಸುತ್ತಲೇ ಇರುವಂತೆ ಅಶೋಕ ಮತ್ತು ಅರುಣಾ ಇಬ್ಬರೂ ವಿವಾಹ ಸೂತ್ರದಿಂದ ಬಂಧಿತರಾದರೆಂದೂ, ಅವರಿಬ್ಬರ ಪ್ರಣಯದ ಪಾಕ ರೂಪದಲ್ಲಿ ಒಂದು ಸುಂದರ ಶಿಶುವು ಶೀಘ್ರದಲ್ಲೇ ಅರುಣಳ ಉದರವನ್ನು ಅಲಂಕರಿಸುವದರಲ್ಲಿದೆ ಎಂದೂ ಸ್ವಪ್ನವು ಅವನ ಕಣ್ಣುಗಳೆದುರಿಗೆ ಕುಣಿಯಲಾರಂಭಿಸಿತು.

ಇಪ್ಪತ್ತು

ಸುಮಾರು ನಾಲ್ಕು ವಾರಗಳ ಆಮೋದ ಪ್ರಮೋದಗಳನಂತರ ಅರುಣಳು ಪುನಃ ಕಾಲೇಜು ವ್ಯಾಸಂಗಕ್ಕಾಗಿ ನಾಗಪುರಕ್ಕೆ ಹೋದಾಗ ಅಶೋಕನ ಹೃದಯದಲ್ಲಿ ವಿರಹ ದುಃಖವು ಪ್ರವೇಶಿಸದಿರಲಿಲ್ಲ. ಅವನಿನ್ನು ಮುಂದಿನ ಕಾರ್ಯಕ್ರಮವನ್ನು ನಿಶ್ಚೈಸದಿರುವುದರಿಂದ ಲೋನಾವಳದಲ್ಲಿ ಕೆಲವು ಕಾಲ ಇರಬೇಕಾಯಿತು. ಅಧಿಕಾರಿ ದಂಪತಿಗಳಾದರೂ ಅವರ ಇಚ್ಛೆಯಂತೆ ಮುಂದಿನ ಎರಡು ತಿಂಗಳು ಅಲ್ಲೇ ಇರುವವರಿದ್ದರು. ಆ ಪ್ರೌಢ ದಂಪತಿಗಳಲ್ಲಿ ಅವನಿಗೂ ಆತ್ಮೀಯತೆಯ ಭಾವವು ಜಾಗೃತವಾಗಿದೆ. ಕೌಟುಂಬಿಕ ಜೀವನದ ಅನುಭವವು ಇವನಿಗೆ ಇರಲಿಲ್ಲ. ಆದರೆ ಮೊಟ್ಟಮೊದಲು ಇಲ್ಲಿಯೇ ಅದರ ರುಚಿಯನ್ನು ಕಂಡನು. ಮಾತ್ರವಲ್ಲದೆ ಅದರ ಮಧುರವಾದ ಸಂತೋಷವು ಅವನ ಭಾವುಕ ಹೃದಯದಲ್ಲಿ ಒಂದು ಬಗೆಯ ಪ್ರಭಾವವನ್ನು ಬೀರಿತು.

ಒಂದು ತಿಂಗಳ ಕಾಲ ಅರುಣಳು ಇವನೊಂದಿಗೆ ಇದ್ದು ಹೋದಳು. ಈ

ಅಲ್ಪಾವಕಾಶದಲ್ಲಿ ಅವಳಲ್ಲಿಯ ಯಾವ ದುಃಸ್ವಭಾವಪೂರ್ಣ ಭಾಗವನ್ನೂ ಇವನ ಕಂಡಿರಲಿಲ್ಲ. ಹೌದು, ಅವಳೊಮ್ಮೊಮ್ಮೆ ಕೆಲಸದವರಲ್ಲಿ ಬೇಕಾದದ್ದಕ್ಕಿಂತ ಹೆಚ್ಚು ಸಿಟ್ಟುಗೊಳ್ಳುತ್ತಿದ್ದಳು. ಜೊತೆಗೆ ಅಸಹಿಷ್ಣುತೆಯನ್ನೂ ತೋರಿಸಿದ್ದಳು. ಇದು ಅಶೋಕನಿಗೆ ಚೆನ್ನಾಗಿ ತೋರುತ್ತಿರಲಿಲ್ಲ. ಆದರೆ ಇದರ ವಿನಹ ಬೇರಾವ ಅವಗುಣಗಳೂ ಅವಳಲ್ಲಿರಲಿಲ್ಲ. ಪ್ರಾಯಶಃ ಅವಳು ತನ್ನ ವರ್ತನೆಯನ್ನು ತಾನೇ ಧ್ಯಾನಪೂರ್ವಕ ಗಮನಿಸುತ್ತಿದ್ದಳೆಂದು ತೋರುತ್ತೆ. ಅವಳು ಎಂದೂ ಅಶೋಕನಲ್ಲಿ ಚರ್ಚೆಯನ್ನಾಗಲೀ, ವಿರೋಧವನ್ನಾಗಲೀ ಕಟ್ಟಿಕೊಳ್ಳಲಿಲ್ಲ. ಅಶೋಕನ ರುಚಿ, ಅರುಚಿಗಳನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ವರ್ತಿಸುವುದಕ್ಕೆ ಪ್ರಯತ್ನಿಸುತ್ತಿದ್ದಳು.

ಇವನ ಚಿತ್ರಗಳಲ್ಲಿ ಒಳ್ಳೆಯ ಅಭಿರುಚಿಯನ್ನು ತೋರಿಸಿ, ಚಿತ್ರಕಾರನನ್ನು ಮುಕ್ತಕಂಠದಿಂದ ಹೊಗಳುವದು ಇತ್ಯಾದಿ ಅವಳ ಆಚಾರವಾದಂತಾಗಿತ್ತು. ಇವುಗಳೆಲ್ಲವುಗಳಿಂದ ಅಶೋಕನು ತುಂಬಾ ಪ್ರಭಾವಿತನಾಗಿದ್ದನು. ಅರುಣಳಿಗೆ ಇದೆಲ್ಲ ತಿಳಿದ ವಿಷಯಗಳು. ಯಾವುವೆಂದರೆ: ಅಶೋಕನಿಗೆ ಕಾಫಿಗೆ ಸಕ್ಕರೆ ಕಡಿಮೆ ಬೇಕು. ದಾಳಿಂಬೆ ಮತ್ತು ದ್ರಾಕ್ಷೆಗಳು ಅವನಿಗೆ ಪ್ರಿಯಕರವಾದವುಗಳು. ಮನೆಯಲ್ಲಿ ನಾಲ್ಕೈದು ಜನ ನೌಕರರಿದ್ದರೂ ತಾನೇ ಮಾರ್ಕೆಟಿಗೆ ಹೋಗಿ ಅವುಗಳನ್ನು ತರುತ್ತಿದ್ದಳು. ಅವನು ಗಿರಿಪ್ರಿಯನೆಂದು ಅವನನ್ನು ಆಗಾಗ್ಗೆ ಪರ್ವತಗಳಿಗೆ ಎಳೆದುಕೊಂಡು ಹೋಗುತ್ತಿದ್ದಳು. ಇದೆಲ್ಲವುಗಳಿಂದ ಅಶೋಕನು ಅರುಣಳು ತನಗನುಸರಿಸಿ ನಡೆಯಬಹುದೆಂದು ತಿಳಿದಿದ್ದನು. ಪ್ರತಿದಿನವೂ ರಾತ್ರಿಯ ಭೋಜನವು ಮುಗಿದಾಗ ದಿಲ್‌ರುಬಾ ಬಾರಿಸಿ ಮನೆಯಲ್ಲಿ ಎಲ್ಲರನ್ನೂ ಪ್ರಸನ್ನಗೊಳಿಸುತ್ತಿದ್ದಳು. ಆದರೆ ಇದರ ಮುಖ್ಯ ಉದ್ದೇಶವೂ ಅಶೋಕನ ತೃಪ್ತಿಯೇ. ಅದರಲ್ಲೂ ಅಶೋಕನ ಪ್ರೀತಿಯ ರಾಗ ತಾಳಗಳಿಂದ ಕೂಡಿದ ಹಾಡನ್ನೇ ಬಾರಿಸುತ್ತಿದ್ದಳು. ಆಗ ಅಶೋಕನು ಅದನ್ನು ಕೊನೆ ಮೊದಲಿಲ್ಲದೆ ಹೊಗಳುತ್ತಿದ್ದನು.

ನಾಗಪುರವನ್ನು ಸೇರುತ್ತಲೇ ಅರುಣಳು ಅಶೋಕನಿಗೊಂದು ಸುಂದರವಾದ ಪತ್ರ ಬರೆದಳು. ಅದರಲ್ಲಿ ಆ ಒಂದು ತಿಂಗಳ ಕಾವ್ಯರೂಪದ ವರ್ಣನೆಯನ್ನು ಮಾಡಿದ್ದಳು. ಕೊನೆಗೆ ತಾನು ಲೋನಾವಳದಲ್ಲಿ ಯಾವುದೊ ಒಂದು ಅಮೂಲ್ಯ ರತ್ನವನ್ನು ಬಿಟ್ಟುಬಂದಂತೆ ಭಾಸವಾಗುತ್ತಿದೆ, ಇದರಿಂದ ತನ್ನ ಹೃದ

ಯದಲ್ಲಿ ಒಂದು ವಿಚಿತ್ರ ವೇದನೆಯುಂಟಾಗುತ್ತಿದೆ—ಎಂದಿತ್ತು. ಅಲ್ಲದೆ ಅಶೋಕನ ಸುಂದರವೂ ಸ್ನೇಹಮಯವೂ ಆದ ಒಂದು ಪತ್ರವು ಅವಳಿಗೆ ತಲುಪುವ ತನಕ ಅವಳು ಸುಖಿಯಾಗಿರಲಾರಳೆಂದು ಆ ಪತ್ರದಲ್ಲಿ ಬರೆದಿತ್ತು.

ಅಶೋಕನ ಮನಸ್ಸಿನಲ್ಲಿ ಈ ಪತ್ರವು ಒಂದು ವಿಶೇಷತರವಾದ ಪರಿಣಾಮವನ್ನುಂಟು ಮಾಡಿತು. ಕೂಡಲೆ ಅದಕ್ಕೆ ಪ್ರತ್ಯುತ್ತರವನ್ನು ಬರೆದನು.

ಐದನೆಯ ದಿನ ಅರುಣಳಿಂದ ಪುನಃ ಉತ್ತರ ಬಂದಿತು. ಅದರಲ್ಲಿ ಅರುಣಳು ತನ್ನ ಸ್ಪಷ್ಟವಾದ ಪ್ರಣಯಭಾವನೆಯನ್ನು ತೋರಿಸಿದ್ದಳು. ಅವನ ಚಿತ್ರಕಲೆಯ ಬಗ್ಗೆಯೂ ಬಹಳವಾದ ಆಸಕ್ತಿಯನ್ನು ಕಾಣಿಸಿದ್ದಳು. ಕಲೆಯ ಬಗ್ಗೆ ಇದ್ದ ಅವನ ದೃಢಸಂಕಲ್ಪದಲ್ಲಿ ಅವಳಿಗೂ ಸ್ವಲ್ಪ ಪ್ರೋತ್ಸಾಹ ಸಿಕ್ಕಿದರೆ ಆಗ ಅವಳು ಧನ್ಯಳೆಂದು ಬರೆದಿದ್ದಳು.

ಇದಕ್ಕೆ ಅಶೋಕನು ಜೀವನದ ತನ್ನ ಗುರಿಯ ವಿಚಾರವನ್ನು ವರ್ಣಿಸಿ, ಅರುಣಳೆದುರು ತನ್ನ ಹೃದಯ ಮಂಥನ ಮಾಡಿದ್ದನು.

ಸ್ತ್ರೀ ಮತ್ತು ಕಲೆ, ಅಥವಾ ಯಾವುದಾದರೊಂದೇ ಸ್ತ್ರೀಯೋ ? ಕಲೆ-ಯೋ ? ಎಂಬ ತನ್ನ ಮನಸ್ಸಿನೊಳಗಿನ ಉಭಯ ಸಂಕಟದ ಬಗ್ಗೆ ಪ್ರಶ್ನಿಸಿ, ಇವುಗಳೆರಡರ ಸಫಲ ಸಮನ್ವಯವಾದೀತೇ ? ಎಂದೂ ಬರೆದು ಕೇಳಿದ್ದನು.

'ಈ ಸಮನ್ವಯವೇ ಜೀವನಕಲೆಯ ನಿಜವಾದ ಫಲ, ಅದು ನಿಶ್ಚಯವಾಗಿಯೂ ಆಗಲು ಸಾಧ್ಯವಿದೆ. ಇದರಲ್ಲಿ ತನಗೆ ದೃಢವಿಶ್ವಾಸವಿದೆ' ಎಂಬುದಾಗಿ ಅರುಣಳು ಕೂಡಲೆ ಉತ್ತರ ಬರೆದಳು. 'ಒಂದು ವೇಳೆ ಕಲೆ ಮತ್ತು ನಾರಿ ಇವೆರಡರೊಳಗೆ ಕಲಹವೇನಾದರೂ ಉದ್ಭವಿಸಿದುದೇ ಆದರೆ ತಾನಾಗಿಯೇ ಅಶೋಕನ ಮಾರ್ಗದಿಂದ ದೂರ ಸರಿದು ನಿಲ್ಲುವೆನೇ ವಿನಹ ಎಂದೂ ಅವನ ಧ್ಯೇಯದ ಅಧಃಪತನವನ್ನು ಮಾಡಲಾರೆನೆಂದೂ' ಬರೆದಿದ್ದಳು.

ಅಶೋಕನು ಪುನಃ ಬರೆದು ಕೇಳಿದನೇನೆಂದರೆ 'ಅರುಣಾ! ನಿನಗೆ ನನ್ನ ಅಧಿಕವಾದ ಸಹವಾಸವು ಬೇಸರವನ್ನುಂಟು ಮಾಡದೇ ? ಆಗ ನನ್ನನ್ನೇಕೆ ನೀನು ತಿರಸ್ಕರಿಸಬಾರದು ?' ಆಗ ಅದಕ್ಕೆ ಮರು ಟಪಾಲಿಗೇ ಉತ್ತರ ಸಿಕ್ಕಿತು 'ಪ್ರಣಯವು ಅಮರವಾದುದು, ಪ್ರಣಯವೇ ದೇವರೂಪ, ಅದೆಂದೂ ಭಂಗವಾಗಲಾರದು. ಸಾಲದ್ದಕ್ಕೆ ನಾನು ಈ ಲೋಕದಲ್ಲಿ ಮಾತ್ರ ನಿಮ್ಮ ಜೊತೆಯಾಗಿರುವುದಿಲ್ಲ. ಪರಲೋಕದಲ್ಲಿಯೂ ಅದನ್ನು ಅಗಲಲಾರೆ!

ದೂರದಲ್ಲಿರುವುದರಿಂದ ಅಶೋಕನ ದೃಷ್ಟಿಗೆ ಅರುಣಳು ಅತಿ ಸುಂದರಳಾಗಿ, ಅವಳ ರೂಪವು ಭವ್ಯವಾಗಿ ಕಾಣುವಂತಿತ್ತು. ಪ್ರೇಮ ವರ್ಣನೆಗಳಿಂದ ತುಂಬಿ ತುಳುಕುತ್ತಿದ್ದ ಪತ್ರಗಳು ಇಲ್ಲಿಂದ ಅರುಣಳಿಗೂ ಅಲ್ಲಿಂದ ಅಶೋಕನಿಗೂ ಬರುತ್ತ ಹೋಗುತ್ತ ಇದ್ದವು. ಅಶೋಕನಿಗೆ ಪುರಸ್ಕಾರ ರೂಪದಲ್ಲಿ ನಾಗಪುರದಿಂದ ಕೆಲವು ವಸ್ತುಗಳು ಬರುತ್ತಿದ್ದವು. ಜೊತೆಗೆ ಅರುಣಳ ಸ್ವಪ್ನವೂ ಅಶೋಕನಿಗೆ ಆಗಾಗ್ಗೆ ಬೀಳುತ್ತಿತ್ತು. ಪರಿಣಾಮವಾಗಿ ಅರುಣಳು ಅಶೋಕನ ಹೃದಯವನ್ನು ತನ್ನ ವಶಪಡಿಸಿಕೊಂಡಳು. ಈಗ ಅಶೋಕನ ಮನಸ್ಸಿನಲ್ಲಿ ಅವಳಿಂದಲೇ ತಾನು ತನ್ನ ಜೀವನದ ಪ್ರಥಮ ಸೋಪಾನವನ್ನು ಹತ್ತುವೆನೆಂಬ ಭರವಸೆಯುಂಟಾಯಿತು. ಕೊನೆಗೆ ಅರುಣಳ ವಿನಹ ಅವನ ಜೀವನವೇ ಸಾಗದು ಎಂಬಲ್ಲಿಯ ವರೆಗೂ ಬಂದುನಿಂತಿತು.

ಅರುಣಾ, ಅಶೋಕರ ವಿವಾಹ ನಿಶ್ಚಯವಾಯಿತು. ಕಲ್ಯಾಣ ಸಮಾಸಮಾರಂಭವು ಅರುಣಳ ಪರೀಕ್ಷೆಯು ಮುಗಿದೊಡನೆ ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ರಾಯಪುರದಲ್ಲಿ ವೈಭವದಿಂದ ನಡೆಯುವುದೆಂದೂ ತಿಳಿದು ಬಂದಿತು.

ಇಪ್ಪತ್ತೊಂದು

ಅಶೋಕನು ಸಾರಂಗಪುರಕ್ಕೆ ಪ್ರಯಾಣ ಬೆಳೆಸಿದ ಅನಂತರ ಮರಿಯಮಳು ತನ್ನ ಶೂನ್ಯ ಹೃದಯವನ್ನು ಹೊತ್ತುಕೊಂಡು ನೇರವಾಗಿ ಬಂಗಲೆಗೆ ಹೋದಳು. ಅವಳ ದೃಷ್ಟಿಯು ಬಂಗಲೆಯ ಕಡೆಗೆ ಬಿದ್ದುದೇ ತಡ, ಅವಳ ಎರಡೂ ಕಣ್ಣುಗಳೂ ತುಂಬಿಕೊಂಡವು. ಆ ಬಂಗಲೆಯ ಆತ್ಮವು ಎದ್ದು ಹೋದುದು ಮಾತ್ರವಲ್ಲದೆ ತನ್ನ ಹೃದಯದ ಆತ್ಮನನ್ನೂ ಎತ್ತಿಕೊಂಡು ಹೋದಂತೆ ಆಗ ಅವಳಿಗೆ ಭಾಸವಾಯಿತು.

ಆದರೆ ಮರಿಯಮಳು ಜೀವನದಲ್ಲಿ ಮನುಷ್ಯನ ಮಾನವೀಯತೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಅದನ್ನು ಅಗಾಧ ಶ್ರದ್ಧೆಯಿಂದ ನಂಬುವ ನಾರಿಯರ ಗುಂಪಿಗೆ ಸೇರಿದವಳು. ಸುಖದುಃಖಗಳ ಏರಿಳಿತಗಳು, ಬಡತನ, ಅಪಮಾನ, ವಿರಹ, ಇತ್ಯಾದಿಗಳ ಆಘಾತಗಳಿಂದಲೂ, ಅವಳ ಶ್ರದ್ಧೆಯು ವಿಚಲಿತವಾಗಲಿಲ್ಲ.

ಅವಳ ಮನಸ್ಸು ಹೇಳಿತು: ಭಾವನೆ ಎಂದರೆ ಯಾವುದು ಸಂಭವಿಸುವುದೋ, ಅದು ಒಳ್ಳೇಯದಕ್ಕೆಂದೇ. ವಿಧಿಯ ವಿಧಾನದಲ್ಲಿ ಪ್ರತಿಯೊಂದು ಕಾರ್ಯ ಮತ್ತು ಪ್ರಸಂಗಗಳಿಗೂ ಮಹತ್ವವಿದ್ದೇ ಇದೆ. ಅಲ್ಲದೆ ಅದರ ಅರ್ಥವೂ ಕೊನೆಗೆ ನಮಗೆ ತಿಳಿಯುವುದು.

ಇದೇ ಮಹಾಕಲ್ಪನೆಯಿಂದ ಅವಳು ತನ್ನ ವೇದನಾಭಾರವನ್ನು ಹೊತ್ತು ಕೊಂಡು, ಧೈರ್ಯದಿಂದ ತನ್ನ ಕಾರ್ಯಕಲಾಪಗಳಲ್ಲಿ ಮುಂದೊತ್ತುತ್ತಿದ್ದಳು. ನೀತಿಯ ಮೂಲಕ ನಿಯೋಜಿತ ಮಾರ್ಗದಲ್ಲಿ ಅವಳೂ ನಡೆಯಬೇಕಲ್ಲವೇ?

ಅಶೋಕನು ಹೋದ ನಾಲ್ಕು ತಿಂಗಳ ನಂತರ ಮರಿಯಮಳು ತನ್ನೊಳಗೆ ಇನ್ನೊಂದು ಜೀವನವನ್ನು ಅಡಗಿಸಿಕೊಂಡಿದ್ದಾಳೆಂಬ ಸತ್ಯವನ್ನು ಮರೆ ಮಾಡಲಾಗಲಿಲ್ಲ. ಮೊದಮೊದಲು ಇದರ ಅರಿವಾದಾಗ ಮರಿಯಮಳ ಆನಂದಕ್ಕೆ ಪಾರವೇ ಇರಲಿಲ್ಲ. ಇದೊಂದು ಅಶೋಕನ ಗುರುತೆಂಬುದೇ ಆ ಆನಂದಕ್ಕೆ ಕಾರಣ. ಅವಳ ಶರೀರದ ಒಂದೊಂದು ರೋಮರೋಮಗಳೂ ಕೂಡ ಮಾತೃತ್ವದ ಪವಿತ್ರ ಮತ್ತು ಮಂಗಲಕರವಾದ ಜವಾಬ್ದಾರಿಯನ್ನು ಪೂರ್ಣಗೊಳಿಸಲು ಆತುರಪಡುತ್ತಿದ್ದವು. ಈಗ ಅಶೋಕನು ಇವಳೊಬ್ಬಳನ್ನೇ ಬಿಟ್ಟು ಹೋಗಿಲ್ಲ ವೆಂಬ ಸಂತೋಷವು ಆ ಉದರದೊಳಗಿನ ಶಿಶುವಿನಿಂದ ಉಂಟಾಗಿದೆ.

ಆದರೆ ಇದೇ ಸುಖದ ಘಟನೆಯನ್ನು ಅನ್ಯದೃಷ್ಟಿಯಿಂದಲೂ ಕಾಣಲು ಸಾಧ್ಯವಿದೆ. ಅದು ಅತ್ಯಂತ ಕ್ರೂರ ಮತ್ತು ಮರ್ಮಾಹತವಾಗಿರಲೂ ಎಡೆ ಇದೆ. ಅದು ಮರಿಯಮಳಿಗೆ ಬಹುಬೇಗನೆ ತಿಳಿದೂ ಬಂದಿತು.—ಮಿಸ್ ಥಾಮಸರು ಮರಿಯಮಳನ್ನು ಗರ್ಜಿಸಿ ಕೇಳಿದರು:—

"ನಿಜವೇನು ಅದು?"

ಮರಿಯಮಳು ತಲೆಯನ್ನು ತಗ್ಗಿಸಿ, ಮೆತ್ತಗೆ ಕತ್ತಲುಗಿಸಿ, ನಿಜವೆಂದು ಹೇಳಿದಳು.

"ನಿನಗೆ ನಾಚಿಕೆಯಾಗುವುದಿಲ್ಲವೇನು?" ಎಂದು ಮೆಮ್‌ಸಾಹೇಬರು ಕೇಳಿದರು.

"ನಾಚಿಕೆ! ಇದರಲ್ಲೇನು ನಾಚಿಕೆ?" ಮರಿಯಮಳ ಬೋಧರಹಿತ ಮನವು ಇದಕ್ಕೂ ಹೆಚ್ಚಿನ ಉತ್ತರವನ್ನು ಕೊಡದಾಯಿತು.

"ಇದಕ್ಕೇ ವ್ಯಭಿಚಾರವೆನ್ನುತ್ತಾರೆಂಬುದೂ ನಿನಗೆ ತಿಳಿಯದೇ?" ಮಿಸ್

ಥಾಮಸರು ಗುಡುಗಿನಂತೆ ಹೇಳುತ್ತಿದ್ದರು-- "ಇದರ ಪರಿಮಾರ್ಜನೆಯಾಗಿದಿದ್ದರೆ ನೀನು ಈ ಬಂಗಲೆಯನ್ನು ಬಿಟ್ಟುಹೋಗಬೇಕಾಗುವುದು. ನಾನು ನನ್ನ ಮಿಶನಿನ ಹೆಸರನ್ನು ಕೆಡಿಸಲು ತಯಾರಿಲ್ಲ."

ಮರಿಯಮಳ ವದನವು ಶ್ವೇತವರ್ಣವನ್ನು ತಾಳಿತು. ಅವಳ ಕಣ್ಣುಗಳೆದುರು ನಕ್ಷತ್ರಗಳು ತಿರುಗುತ್ತಿರುವಂತೆ ಕಂಡಿತು. ಅವಳಿಗೆ ಈಗ ಕಾಣುವುದು ಸುತ್ತಲೂ ಅಂಧಃಕಾರ. ಯಾವುದನ್ನು ಅವಳು ಪವಿತ್ರವೆಂದೆಣಿಸಿದ್ದಳೋ, ಅದು ವ್ಯಭಿಚಾರವೆಂಬ ಅಪಶಬ್ದದಿಂದ ಕರೆಯಲ್ಪಡುವದೆಂಬುದನ್ನು ಅವಳ ಮನಸ್ಸು ಈಗ ತಿಳಿದುಕೊಂಡಿತು.

ಅವಳು ಮಾತೆತ್ತಲಿಲ್ಲ. ಮರಿಯಮಳ ಮೌನವನ್ನು ಕಂಡು ಮೆಮ್ ಸಾಹೇಬರು ಹೇಳಲಾರಂಭಿಸಿದರು. "ಆ ಆರ್ಟಿಸ್ಟ್ ಇಷ್ಟು ಕೀಳು ದರ್ಜೆಯವನೆಂದು ನಾನೆಣಿಸಿರಲಿಲ್ಲ. ನಾನವನನ್ನು ಬಹು ಸಭ್ಯನೆಂದೇ ನೋಡುತ್ತಿದ್ದೆ. ಅಬ್ಬಾ, ಮನುಷ್ಯನು ಎಷ್ಟು ಕಪಟಿಯೂ, ಮೋಸಗಾರನೂ ಆಗಿರುತ್ತಾನೆ?"

"ಇಲ್ಲ, ಇಲ್ಲ." ಮರಿಯಮಳು ಅಶ್ರುಜಲದಿಂದ ತುಂಬಿದ ಕಣ್ಣುಗಳೊಂದಿಗೆ ಉಸುರಿದಳು "ಅವರನ್ನು ಹಾಗೆನ್ನಬೇಡಿ. ನಿಮ್ಮ ಕಾಲುಗಳಿಗಾದರೂ ಎರಗುತ್ತೇನೆ. ಅವರಿಗೆ ಈ ವಿಚಾರವೇ ತಿಳಿದಿರಲಾರದು. ಅವರು ಇತರರಂತಲ್ಲ. ಖಂಡಿತವಾಗಿಯೂ ಅಲ್ಲ."

"ಹಾಗಿದ್ದರೆ ಈಗಲೂ ದಾರಿ ಇದೆ. ನೀನು ಅವನಿಗೆ ಪತ್ರಮೂಲಕ ಈ ಸುದ್ದಿಯನ್ನು ತಿಳಿಸಿ, ನಿನ್ನನ್ನು ವಿವಾಹವಾಗಲು ಕೇಳಿ, ಜೊತೆಗೆ ಅವನೂ ಕ್ರಿಸ್ತ ಧರ್ಮವನ್ನು ಆಚರಿಸಲು ಬರೆ. ಹಾಗಾದರೆ ಮಾತ್ರ ಈ ಪಾಪಪ್ರಕ್ಷಾಲನೆಯಾಗಲು ಸಾಧ್ಯ. ಅದಾಗದಿದ್ದರೆ ಮತ್ತೆ ನೀನಿಲ್ಲಿಂದ ಹೊರಟುಹೋಗಲೇಬೇಕಾಗುವುದು ತಿಳಿಯಿತೇ!"

ಮಿಸ್ ಥಾಮಸರು ಖಟ್‌ಖಟ್ ಎಂದು ಪಾದರಕ್ಷೆಗಳನ್ನು ಮೆಟ್ಟುತ್ತ ಕೋಣೆಯಿಂದ ಹೊರಗೆ ಹೋದರು.

ಹಣೆಯಲ್ಲೇನು ಬರೆದಿದೆಯೋ ಅದನ್ನು ಅನುಭವಿಸಿಯೇ ತೀರುವೆನು. ಆದರೆ ಅಶೋಕನಿಗೆ ಮಾತ್ರ ಈ ರೀತಿ ಪತ್ರ ಬರೆಯಲಾರೆನೆಂದು ಮರಿಯಮಳು ನಿಶ್ಚಯಿಸಿದಳು. ಧರ್ಮಪರಿವರ್ತನೆಯ ವಿಚಾರದಲ್ಲಿ ಅಶೋಕನ ಅಭಿಪ್ರಾಯವು ಇವಳಿಗಿಂತ ಭಿನ್ನವಾಗಿತ್ತು. ಅಲ್ಲದೆ ಅಶೋಕನಿಗೆ ಇಷ್ಟವಿಲ್ಲದಿದ್ದರೆ

ಅವನನ್ನು ಕಡ್ಡಾಯವಾಗಿ ಕಟ್ಟಿಹಾಕಲು ಇವಳ ಮನಸ್ಸು ಒಪ್ಪುತ್ತಿರಲಿಲ್ಲ. ಒಂದು ವೇಳೆ ಆಗ ಅಶೋಕನು ಇಲ್ಲಿಂದ ಹೊರಡುವಾಗ ಅವನಿಗೆ ಇಷ್ಟವಿರುತ್ತಿದ್ದರೆ ಇವಳನ್ನೂ ಅವಳೊಂದಿಗೆ ಕರೆದುಕೊಂಡು ಹೋಗಬಹುದಿತ್ತು. ಆಗ ಅವಳೂ ಅವನ ಜೊತೆಯಲ್ಲಿಯೇ ಇರಲು ಸಾಧ್ಯವಿತ್ತು. ಆದರೆ ಅವನು ಹಾಗೆ ಮಾಡದಿದ್ದುದರಿಂದ ಜಿಗಣಿಯಂತೆ ಅವನನ್ನು ಅವಳು ಅಂಟಿಕೊಂಡಿರುವುದು ನ್ಯಾಯವೇ? ಅಲ್ಲ. ಎಂದೂ ಅಲ್ಲ.

ಬಹಳವಾಗಿ ವಿಲಾಪಿಸಿ ಕೊರಗಿದ ಮೇಲೆ ಮಿಸ್ ಥಾಮಸರು ಇಟಾರಸೀಯಲ್ಲಿರುವ ಮಿಶನ್ ಆಸ್ಪತ್ರೆಯ ವಿಳಾಸಕ್ಕೆ ಒಂದು ಕೈಪತ್ರವನ್ನಿತ್ತರು. ಅಲ್ಲಿ ಇವಳ ಪ್ರಸವವು ಗುಪ್ತ ರೀತಿಯಿಂದ ಧರ್ಮಾರ್ಥವಾಗಿ ನಡೆಯುವುದೆಂದೂ ಹೇಳಿದಳು. ಆದರೆ ಹೊರಡುವ ಮುನ್ನ ಅವಳು ಹೆಸರನ್ನು ಬದಲಿಸಬೇಕೆಂದೂ ಸೂಚನೆ ಇತ್ತಳು. ಅಲ್ಲದೆ ಮಿಸ್ ಥಾಮಸ್, ಅಥವಾ ಪಾದರೀಪುರದ ಮಿಶನಿನ ವಿಷಯವಾಗಿ ಯಾರಿಗೆ ಏನನ್ನೂ ಹೇಳಬಾರದೆಂದು ತಿಳಿಸಿದಳು.

ಒಂದು ಚಿಕ್ಕ ಹಾಸಿಗೆ, ಒಂದು ಗಂಟನ್ನು ಹಿಡಿದುಕೊಂಡು ಮರಿಯಮಳು ಇಟಾರಸಿಗೆ ಹೋಗುವ ಮೋಟಾರಿನಲ್ಲಿ ಬಂದು ಕುಳಿತಳು. ಮುಂದೆ ಪಾದರೀಪುರದ ದರ್ಶನವೆಂದಾಗುವುದೊ ಅವಳಿಗೆ ತಿಳಿಯದು. ಅವಳ ಹನ್ನೆರಡು ವರ್ಷಗಳ ಸಿಹಿಕಹಿಗಳ ಇತಿಹಾಸವು ಇದೇ ಚಿಕ್ಕ ಕಾಡೂರಲ್ಲಿಯೇ ಬರೆಯಲಾಲಾಗಿತ್ತು. ಈ ದಿನ ತನ್ನ ಎಲ್ಲಾ ಪ್ರಿಯ ವಸ್ತುಗಳನ್ನಗಲಿ ಹೋಗುವಾಗ ಅವಳ ಹೃದಯವು ಒಡೆದು ಚೂರಾಗುವಂತೆ ಇತ್ತು.

ಆದರೆ ವಿಧಾತನ ಆದೇಶಾನುಸಾರವೋ ಎಂಬಂತೆ ಮೋಟಾರು ಹೊರಡುವ ಗಂಟೆಯಾಯಿತು. ಡ್ರೈವರನು ಹಾರ್ನ್ ಬಾರಿಸಿದನು. ಫುರ್ ಫುರ್ ಎಂದು ಮೋಟಾರು ಹೊರಟೇ ಹೋಯಿತು.

ಇಪ್ಪತ್ತೆರಡು

ಜಬಲ್‌ಪುರದ 'ಹೊಗಾರ್ಡನ್' ನಲ್ಲಿರುವ ಚಿಕ್ಕದಾದ ಸುಂದರ ಮನೆಗಳಲ್ಲಿ ಹೆಚ್ಚಾಗಿ ರೈಲ್ವೆ ನೌಕರರು ಮತ್ತು ಮಧ್ಯಮ ವರ್ಗದ ಜನರು ವಾಸಿಸುತ್ತಿ

ತ್ತಿರುವುವನ್ನು ಕಾಣಬಹುದು. ಅವುಗಳಲ್ಲಿ ಒಂದರ ಹೊರಮನೆಯ ಕೋಣೆ. ಗೋಡೆಯ ಮೇಲೆ ಹೊಡೆದ ಎರಡು ಬಲವಾದ ಗೂಟಕ್ಕೆ ಒಂದು ತೊಟ್ಟಿಲನ್ನು ಕಟ್ಟಲಾಗಿದೆ. ಅದರಲ್ಲಿ ಸಾಧಾರಣ ಮೂರು ತಿಂಗಳ ಮಗು ಸುಖವಾಗಿ ನಿದ್ರಿಸುತ್ತಿದೆ. ಅದೇ ಗೋಡೆಯ ಬದಿಯಲ್ಲಿ ಒಬ್ಬ ಯುವತಿಯು ನಿಂತುಕೊಂಡು ಮಗುವನ್ನು ಅಭಿಮಾನದಿಂದ ತೂಗುತ್ತಿದ್ದಾಳೆ, ಅವಳ ಕಣ್ಣುಗಳಲ್ಲಿ ವಾತ್ಸಲ್ಯಭಾವವು ದೇದೀಪ್ಯಮಾನವಾಗಿದೆ. ವದನದಲ್ಲಿ ಪರಮ ಸಮಾಧಾನದ ರೂಪವು ಕಾಣುತ್ತಿದೆ. ಅವಳ ಕಣ್ಣುಗಳೇನೊ ಆ ಮುದ್ದು ಮಗುವನ್ನು ನೋಡುತ್ತಿವೆ. ಆದರೆ ಬುದ್ಧಿಯು ಮಾತ್ರ ಅದರ ಭವಿಷ್ಯದ ವಿಷಯವಾಗಿ ಸ್ವಪ್ನವನ್ನು ಕಾಣುವುದರಲ್ಲಿ ಮಗ್ನವಾಗಿದೆ.

ಇಷ್ಟರಲ್ಲೆ ಪಕ್ಕದ ಅರೆಯಿಂದ ಒಂದು ಕರ್ಕಶ ಧ್ವನಿಯು ಕೇಳಿಬಂತು.

“ಮರಿಯಂ, ಓ ಮರಿಯಂ. ಎಲ್ಲಿ ಸತ್ತಿದ್ದೀಯಾ?”

ಮರಿಯಮಳ ಆ ಮಗ್ನಾವಸ್ಥೆಯು ಭಂಗವಾಯಿತು. ಅದರ ಸ್ಥಾನವನ್ನು ಗಾಬರಿಯು ಆವರಿಸಿಕೊಂಡಿತು. ಅವಳು ಅಲ್ಲಿಂದಲೇ ಕೂಗಿಕೊಂಡಳು ‘ಬಂದೇ’ ಎಂದು. ಈ ಶಬ್ದದ ದೆಸೆಯಿಂದ ಮಗುವಿನ ನಿದ್ದೆಯು ಭಂಗವಾಯಿತು. ಒಡನೆ ಅದು ಅಳಲಾರಂಭಿಸಿತು. ಮರಿಯಮಳು ತೊಟ್ಟಿಲನ್ನೊಮ್ಮೆ ವೇಗವಾಗಿ ಎಳೆದು ತೂಗಿ ಬಿಟ್ಟು ಹೊರಗೆ ಓಡಿದಳು.

“ಏನೇ, ಒಳಗೇನು ಮಾಡುತ್ತಿದ್ದೀ? ನಾನು ಎಷ್ಟು ಹೊತ್ತಿನಿಂದ ಗಂಟಲೊಡೆಯುವಂತೆ ಕೂಗುತ್ತಿದ್ದೇನೆ, ನೀನು ಉತ್ತರ ಕೂಡ ಕೊಡುವುದಿಲ್ಲ! ಯಾವಾಗಿನಿಂದ ಈ ಬೇಬೀ ಅಳುತ್ತಿದೆ........ನಿನಗೆ ಕೇಳಿಸಲಿಲ್ಲವೇ? ಎತ್ತಿಕೋ ಇದನ್ನು. ನಾನು ಮಾರ್ಕೆಟ್ ಕಡೆ ಹೋಗಿ ಬರಬೇಕು.”

“ನೀವು ಕರೆದುದು ಕೇಳಿಸಿಲ್ಲ ಅಕ್ಕ. ಕೇಳಿಸುತ್ತಿದ್ದರೆ ಒಡನೆ ಓಡಿ ಬರುತ್ತಿದ್ದೆ.”

“ನನ್ನ ಕರೆ ಕೇಳಿಸಿಲ್ಲ! ಈ ಬಗೆಯ ಯುವಾವಸ್ಥೆಯ ತಮಾಷೆಯ ಆಟಗಳು ನನ್ನಲ್ಲಿ ಸಾಗವು. ನಾನು ದಾವೂದ್ ಪೈಲವಾನನ ಮಗಳು. ತಿಳಿಯಿತೇ. ನನ್ನ ಪತಿಯೇ ನನಗೆ ಹೆದರುವಾಗ, ನಿನ್ನಂತಹ ಸೂಳೆಯರು ನನಗೆ ಎಷ್ಟು ಮಾತ್ರ! ಅದೇನು ಮಾಡುತ್ತಿದ್ದೆ ಒಳಗಡೆ? ಯಾರಾದರೂ ಬೇಕಾದವರು ಬಂದಿದ್ದರೇ?”

"ಇದೇನು ಹೇಳುತ್ತಿದ್ದೀರಿ ಅಕ್ಕಾ!" ಮರಿಯಮಳು ದುಃಖಿತಳಾಗಿ ಅಂದಳು "ನಾನು ಅಶೋಕನನ್ನು ಮಲಗಿಸುತ್ತಿದ್ದೆ."

"ಓಹೋ! ನಿನ್ನ ಅಶೋಕ್!" ಆ ಹೆಂಗಸು ಮುಖ ಗಂಟಿಕ್ಕಿಕೊಂಡು ಕ್ರೋಧದಿಂದ ಹೇಳಿದಳು. "ಅವನ ಅಪ್ಪನೆಲ್ಲಿದ್ದಾನೆಂದು ಗೊತ್ತಿಲ್ಲ........"

"ಇಲ್ಲ. ಇಲ್ಲ. ಹಾಗೆನ್ನಬೇಡ ಅಕ್ಕಾ, ನಿನ್ನ ಪಾದಗಳಿಗಾದರೂ ಎರಗುತ್ತೇನೆ." ಮರಿಯಮಳು ತನ್ನ ಒದ್ದೆಯಾದ ಕಣ್ಣುಗಳೊಡನೆ ಹೇಳಿದಳು.

"ನಾಟಕವನ್ನಾಡಲು ಚೆನ್ನಾಗಿ ಕಲಿತಿದ್ದೀಯಾ? ಮಾಸ್ಟರ್ನಿಯಾಗುವ ಬದಲು ನೀನು ಮಾರ್ಕೆಟಿನಲ್ಲಿ ಅಂಗಡಿಯನ್ನು ಹಾಕಿದ್ದರೆ ಇಷ್ಟು ಹೊತ್ತಿಗೆ ಸಾಹುಕಾರಿಣಿಯಾಗುತ್ತಿದ್ದೆ. ಎತ್ತಿಕೊ ಬೇಬಿನಾ. ನಾನು ಹೋಗಬೇಕು" ಹೀಗೆ ಹೇಳುತ್ತ ಮಗುವನ್ನು ಮರಿಯಮಳ ಕೈಯಲ್ಲಿ ಕೊಟ್ಟು, ಆಕೆ ಬಹು ಬಿರುಸಾಗಿ ಚಂಡಿಯಂತೆ ಹೊರಗೆ ನಡೆದಳು.

ಇಟಾರಸಿಯ ಮಿಶನ್ ಆಸ್ಪತ್ರೆಯಲ್ಲಿ ಮರಿಯಮಳಿಗೆ ಸುಖ ಪ್ರಸವವಾಯಿತು. ಮಗುವಿಗೆ ಮೂವತ್ತೇಳು ದಿನಗಳಾದಾಗ ಹೇಳದೆ ಅಲ್ಲಿಂದ ಮಗುವಿನೊಡನೆ ಎದ್ದು ಹೊರಟು ಬಂದು ಜಬಲ್‌ಪುರಕ್ಕೆ ಹೋಗುವ ಮೋಟಾರಿನಲ್ಲಿ ಕುಳಿತಿದ್ದಳು. ಜಬಲ್‌ಪುರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನರ್ಸ್ ಆಗಲು ಅವಳು ಪ್ರಯತ್ನಪಟ್ಟಳು. ಆದರೆ ಅವಿವಾಹಿತಳಾದರೂ ಒಂದು ಮಗುವಿನ ತಾಯಿಯಾದುದರಿಂದ ಅವಳನ್ನು ಆ ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ.

ಆ ಮೇಲೆ ಅವಳು ಎಲ್ಲೆಲ್ಲೂ ತಿರುಗಾಡಿದಳು. ಎಲ್ಲಿಯಾದರೂ ಅಡಿಗೆಯ ಕೆಲಸವೊ, ಅಥವಾ ಮಕ್ಕಳನ್ನು ನೋಡಿಕೊಳ್ಳುವ ಕೆಲಸವೊ ಸಿಕ್ಕುವುದೇ ಎಂಬ ಆಸೆಯಿಂದ ಅವಳು ಕೇಳದೆ ಇರುವ ಮನೆ ಇರಲಿಲ್ಲ. ಆದರೆ ಅವಳ ಮಾತೃತ್ವವು ಎಲ್ಲೆಡೆಯಲ್ಲಿಯೂ ಅಡ್ಡಬರುತ್ತಿತ್ತು. ಪ್ರತಿಯೊಂದು ಕಡೆಯಿಂದಲೂ ಅವಳು ಅಪಮಾನಿತಳಾಗಿ ಹೊರಗೆ ಬರಬೇಕಾಗಿ ಬಂತು. ಒಂದೆರಡು ಕಡೆಗಳಲ್ಲಿ ಜನರು ಅಗತ್ಯಕ್ಕಿಂತ ಹೆಚ್ಚು ಸಹಾನುಭೂತಿ ಮತ್ತು ದಯಾಪರತೆಯನ್ನು ಕಾಣಿಸಿದರು. ಆದರೆ ಕೂಡಲೆ ಅವರ ನೀತಿಯು ಸರಿಯಾಗಿಲ್ಲವೆಂಬುದನ್ನು ಮರಿಯಮಳು ಅರಿತುಕೊಂಡಳು.

ಇದೇ ರೀತಿಯಾಗಿ ಹೊಡೆತ ಅಪಮಾನಗಳನ್ನು ಸಹಿಸಿ ಸಹಿಸಿ ಕೊನೆಗೆ 'ಹೊ ಗಾರ್ಡನಿನ' ಪ್ರೈಮರಿ ಮಿಶನ್ ಗರ್ಲ್ಸ್ ಸ್ಕೂಲಿನಲ್ಲಿ ಒಂದು ಅಸ್ಥಿರ

ಉಪಾಧ್ಯಾಯಿನೀ ಕೆಲಸವು ಸಿಕ್ಕಿತು. ಬೇಸಿಗೆಯ ರಜೆಗೆ ಇನ್ನೂ ಒಂದೂವರೆ ತಿಂಗಳು ಬಾಕಿ ಇದೆ. ಅಲ್ಲಿಯ ವರೆಗೆ ಮಾತ್ರ ಅವಳ ನೌಕರಿಯೂ ಇದೆ.

ಭಾಗ್ಯವಶಾತ್ ಅವಳಿಗೆ ಮಿಸ್ಟರ್ ಜಾನ್‌ರಂತಹ ಸಹೃದಯರ ಆಶ್ರಯವೂ ಸಿಕ್ಕಿತು. ಮರಿಯಮಳು ಅವರಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ಕೇಳಲು ಬಂದಾಗಲೇ ಅವಳ ಕಥೆಯನ್ನು ಕೇಳಿ ಅವರಿಗೆ ಕನಿಕರ ಹುಟ್ಟಿತ್ತು. ಅವರು ಶುದ್ಧ ಆಸ್ತಿಕರಾದ ಕ್ರೈಸ್ತರಾಗಿದ್ದರು. ಬಹು ಒಳ್ಳೆಯ ಸ್ವಭಾವದವರು. ಮರಿಯಮಳ ದುರ್ದೆಶೆಯನ್ನು ಕಂಡು ಅವರಲ್ಲಿ ಕರುಣೆಯುಂಟಾಗಿ, ಅವರು ಮನಃಪೂರ್ವಕವಾಗಿ ಇವಳಿಗೆ ಸಹಾಯ ಮಾಡಲು ಹವಣಿಸಿದರು.

ಆದರೆ ಮೊದಲನೆಯ ದಿನದಿಂದಲೇ ಅವರ ಪತ್ನಿ ಗುಣವತಿಯು ಇವಳ ಮೇಲೆ ತನ್ನ ಅಧಿಕಾರ ದರ್ಪವನ್ನು ತೋರಿಸಲು ಆರಂಭಿಸಿದಳು. ಅವಳು ಮರಿಯಮಳನ್ನು ತನ್ನ ಮನೆಗೆಲಸಗಳಿಗಾಗಿ ಎಳೆದುಕೊಂಡು ಗದರಿಸುವುದು, ಬೈಯುವುದು ಮೊದಲಾದವುಗಳನ್ನು ಆರಂಭಿಸಿದಳು. ಇಷ್ಟಾದರೂ ಕೂಡ ಮರಿಯಮಳು ಈ ಆಶ್ರಯವನ್ನು ಬಿಡಲು ಇಚ್ಛಿಸುತ್ತಿರಲಿಲ್ಲ.

*   *   *   *

ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ಮರಿಯಮಳು ನಾಗಪುರದ ಸಮಾಚಾರ ಪತ್ರ ಒಂದರಲ್ಲಿ ಒಂದು ಸುದ್ದಿಯನ್ನು ಓದಿದಳು. ಓದಿದವಳೇ ಸ್ತಂಭೀಭೂತಳಾದಳು. ಕಣ್ಣುಗಳ ಎದುರಿನಲ್ಲಿ ನಕ್ಷತ್ರಗಳು ಮಿನುಗುತ್ತಿರುವಂತೆ ಆಗ ಅವಳಿಗೆ ಭಾಸವಾಯಿತು. ಆಗ ಅವಳು ಅವಳನ್ನೇ ಬಹಳ ಕಷ್ಟದಿಂದ ಸುಧಾರಿಸಿಕೊಂಡಳು. ಅದೇ ಸಮಾಚಾರವನ್ನು ಅವಳು ಎರಡನೆಯ ಬಾರಿ ಓದಿದಳು.

“ಏಪ್ರಿಲ್ ಇಪ್ಪತ್ತಾರನೆಯ ತಾರೀಕು ಪ್ರಾತಃಕಾಲದ ೯ ಗಂಟೆಗೆ ನಾಗಪುರದ ಸುಪ್ರಸಿದ್ಧ ಕಲಾಕಾರರಾದ ಶ್ರೀ ಅಶೋಕ್ ಠಾಕೂರರ ಶುಭ ವಿವಾಹವು—ಕುಮಾರೀ ಅರುಣಾ ಅಧಿಕಾರಿಯವರೊಂದಿಗೆ ರಾಯಪುರದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಸಮಕ್ಷಮದಲ್ಲಿ ಸಿವಿಲ್ ಮೆರೇಜ್ ಆಕ್ಟಿಗನುಸಾರವಾಗಿ ನೆರವೇರಿತು........”

ಈ ವೃತ್ತಾಂತವನ್ನು ತಿಳಿದ ಮರಿಯಮಳ ಹೃದಯಕ್ಕೆ ಅಪಾರವಾದ ದುಃಖದ ಪೆಟ್ಟು ತಗಲಿತು. ಇದೇ ಮೊತ್ತಮೊದಲನೆಯದಾಗಿ ಮಾನವತೆಯ ಮೇಲಿದ್ದ ಅವಳ ವಿಶ್ವಾಸವು ಕುಲುಕಿ ಹೋಯಿತು. ದೇವರ ನ್ಯಾಯಾನ್ಯಾಯದ ಮೇಲಿದ್ದ ಅಪಾರ ಶ್ರದ್ಧೆಯೂ ಕೂಡ ಮೊದಲಬಾರಿ ವಿಚಲಿತವಾಯಿತು. ಅವಳ ಕಠಿಣವಾದ ಆಶಾವಾದವೂ ಕೂಡ ಒಮ್ಮೆಗೆ ಅತ್ತ ಇತ್ತ ಅಲುಗಿಕೊಂಡಿತು.

ಅವಳು ಮನಸ್ಸಿನಲ್ಲೇ ವಿವಾಹದ ವಿಚಾರವು ಬಂದಾಗ ಅಶೋಕನು ಒಡನೆಯೆ ತಾನಿದ್ದೆಡೆಗೆ ಬಂದೇ ಬರುವನೆಂಬ ಒಂದು ಸೂಕ್ಷ್ಮವಾದ ಆಸೆಯಿಂದ ಇದ್ದಳು. ಆದರೆ ಇಂದು ಅವಳ ಆ ವಿಶ್ವಾಸ, ಆ ಸ್ವಪ್ನ ಎರಡೂ ಹರಿದು ಚೂರಾದವು. ಇನ್ನು ಮೇಲೆ ಅವಳು ಇಂತಹ ಯಾವುದೇ ಆಸೆಯನ್ನು ನೆನೆಸಿಕೊಂಡು ಸಂತೃಪ್ತಳಾಗಿರಲಾರದಾದಳು.

ಮರಿಯಮಳ ಪ್ರಣಯಾವಶೇಷದಲ್ಲಿ ಉಳಿದದ್ದೆಂದರೆ ಇನ್ನು ಮುಂದಿನ ಶೂನ್ಯ ಜೀವನ ಮಾತ್ರ. ಇನ್ನುಮೇಲಿನ ಜೀವನವು ಸಾವು ಇನ್ನೂ ಬರದಿರುವುದರಿಂದ ಬದುಕಿರಬೇಕಾದ ಬಾಳು. ಪ್ರಾಯಶಃ ಚಿಕ್ಕ ಅಶೋಕನು ಜೀವಿಸಬೇಕಾಗಿತ್ತು. ಅದಕ್ಕಾಗಿಯೇ ಆ ಸಾವೂ ಬಾರದೆ ಇದ್ದಿರಬಹುದು. ಇದನ್ನೆಣಿಸಿಕೊಂಡ ಮರಿಯಮಳ ಮನಸ್ಸು ಹೀಗೆಂದಿತು 'ಇಷ್ಟೆಲ್ಲ ನಡೆದು ಹೋದರೂ ಆ ದೈವನೀತಿ ಎಂಬುದು ಎಷ್ಟೊಂದು ದಯಾಗುಣದಿಂದ ಕೂಡಿದೆ !'

ಇಪ್ಪತ್ತಮೂರು

ವಿವಾಹಾನಂತರ ಅಶೋಕ್ ಮತ್ತು ಅರುಣಾ ಇವರಿಬ್ಬರೂ ಒಂದು ವಾರದ ತನಕ ವಾಲ್ಟೇಯರ್‌ನಲ್ಲಿದ್ದರು. ಸಮುದ್ರ ತಟದ ಮರಳ ಮೇಲೆ ಗಂಟೆಗಟ್ಟಲೆ ಕುಳಿತಿರುವುದು, ಒಮ್ಮೊಮ್ಮೆ ಅಲ್ಲೇ ಸ್ನಾನ ಮಾಡುವುದು, ಸಿನಿಮಾ, ಭೋಜನ, ಭ್ರಮಣ ಇತ್ಯಾದಿಗಳ ಸುಖಭೋಗಕ್ಕೆ ಹಗಲಿರುಳುಗಳ ಇಪ್ಪತ್ತನಾಲ್ಕು ತಾಸುಗಳೂ ಕಡಿಮೆಯೇ ಎಂದು ಅವರಿಬ್ಬರ ಆಗಿನ ಭಾವನೆ. ಜೀವನದ ಉತ್ಕಟಾನಂದದ ಪ್ರವಾಹದಲ್ಲಿ ನವದಂಪತಿಗಳು ತಮ್ಮನ್ನು ತಾವೇ

ಪೂರ್ಣವಾಗಿ ಹರಿಯುಬಿಟ್ಟರು. ಸಂಯಮ, ತರ್ಕ ಅಥವಾ ಸಾಮಾಜಿಕ
ಜವಾಬ್ದಾರಿಗಳಂತಹ ಯಾವುದೇ ಕಾರಣಗಳು ಇವರನ್ನು ಇದರಿಂದ ತಡೆಯ
ಬಾರದೆಂದು ಪ್ರಯತ್ನಿಸುತ್ತಿದ್ದರು.

ಅಶೋಕನು ಈ ಸುಖ ಮತ್ತು ಉನ್ಮಾದದ ಕಾಲದಲ್ಲಿ ತನ್ನನ್ನು ಪೂರ್ಣ
ವಾಗಿ ಅರುಣಳಿಗೆ ಸಮರ್ಪಿಸಿದನು. ಅರುಣಳ ಪ್ರಿಯವಾದ ಶಾರೀರಿಕ ಸೌಂದ
ರ್ಯದ ಮೋಹಿನಿಯು ಅಶೋಕನನ್ನು ಆತ್ಮವನ್ನೇ ಮರೆತುಬಿಟ್ಟವನಂತೆ ಮಾಡಿ
ವಶಮಾಡಿಕೊಂಡಿದ್ದಳು. ಅವನು ಕೆಲವು ದಿನಗಳ ತನಕ ತನ್ನ ಕಲೆ, ಜೀವನ
ಧ್ಯೇಯ ಇತ್ಯಾದಿಗಳ ವಿಚಾರವನ್ನು ಮರೆತೇ ಬಿಟ್ಟನು. ಆವ ಪ್ರಣಯ
ಸ್ವರ್ಗದ ಮಧುರ ಸ್ವಪ್ನಗಳಿಗಾಗಿ ಅರುಣಾಳು ಹಲವು ವರ್ಷಗಳಿಂದ ಕಾತರಿಸು
ತ್ತಿದ್ದಳೊ ಆ ಪ್ರಣಯ ಸ್ವರ್ಗವು ಈಗ ಆಕೆಗೆ ದೊರೆತಂತೆ ಕಂಡುಬಂತು.
ಅಶೋಕನಂತಹ ಆರೋಗ್ಯವಂತನೂ, ಸುಂದರನೂ ಈಗ ಸಂಪೂರ್ಣವಾಗಿ
ಅರುಣಳಿಗೆ ಸಮರ್ಪಿತನಾಗಿದ್ದಾನೆ. ಅವನೊಡನೆ ಇವಳು ತನ್ನ ಮನಬಂದಂತೆ
ಕುಣಿದಾಡಬಹುದು. ಅಶೋಕನ ದೇಹ, ಮನಸ್ಸು ಮತ್ತು ಆತ್ಮ ಇವುಗಳೆಲ್ಲ
ವುಗಳ ಮೇಲೂ ಇವಳ ಸಂಪೂರ್ಣ ಅಧಿಕಾರವಿದೆ ಎಂದು ಭಾವಿಸಿಕೊಂಡಳು.
ಈ ನವೀನ ವಿಜಯದಿಂದ ಅವಳಿಗೆ ಪರಮ ಸಂತೋಷವು ಉಂಟಾಯಿತು.
ವಾಲ್ಟೇಯರ್ ಎಂಬುದೇ ಸ್ವರ್ಗದ ಎರಡನೆಯ ಹೆಸರೆಂದೆಣಿಸಿದಳು.

ಆದರೆ ನಾಗಪುರಕ್ಕೆ ಬಂದಾಗ ಅವರ ಆ ವಾಲ್ಟೇಯರ್‌ನಲ್ಲಿನ ಸ್ವಪ್ನ
ಕಾಲವು ಸಮಾಪ್ತವಾಗಲೇ ಬೇಕಾಗಿತ್ತು. ನಾಗಪುರದಲ್ಲಿ ಅಶೋಕನ ಮನೆ
ಇದೆ, ಆದ್ದರಿಂದ ಕೆಲವು ಜವಾಬ್ದಾರಿಗಳಿವೆ, ಕರ್ತವ್ಯಗಳಿವೆ, ವ್ಯಾಪಾರ,
ಉದ್ಯೋಗ ಕೂಡ ಇದ್ದೇ ಇದೆ. ಅಲ್ಲಿ ಅರುಣಳಿಗೆ ತನ್ನ ಇಪ್ಪತ್ತನಾಲ್ಕು
ಘಂಟೆಗಳನ್ನು ಅರ್ಪಿಸುತ್ತಿದ್ದ ಅಶೋಕನು ಈಗ ಇಲ್ಲಿ ಹಾಗಿರಲಾಗಲಿಲ್ಲ.
ಅವನು ಈಗ ಅಗತ್ಯವಾಗಿ ತನ್ನ ಕಲಾಶಾಲೆಯಲ್ಲಿ ಕುಳಿತುಕೊಳ್ಳಬೇಕಾಗಿದೆ.
ಚಿತ್ರವನ್ನು ಚಿತ್ರಿಸುವುದರಲ್ಲಿ ನಾಲ್ಕೈದು ತಾಸುಗಳ ವ್ಯಯ ಮಾಡಬೇಕಾಗಿದೆ.
ಗ್ರಾಹಕರು ಬಂದರೆ ಅಥವಾ ಅವರ ಮನೆಗೆ ಇವನನ್ನು ಆಹ್ವಾನಿಸಿದರೆ ಅವರಿಗೂ
ತಕ್ಕ ಉತ್ತರ ಮತ್ತು ಸರಿಯಾದ ಕಾಲವನ್ನು ಸೂಚಿಸಬೇಕಾಗಿದೆ. ಇವೆಲ್ಲಾ
ಅರುಣಾಳಿಗೆ ತನ್ನ ನಿಧಿಯಲ್ಲೇನೋ ಕೊರತೆಯಾದಂತೆಯೂ, ಅವಳ ಆ ಏಕೈಕ
ಅಧಿಕಾರಕ್ಕೆ ಯಾರೋ ತಡೆಯುಂಟು ಮಾಡುವಂತೆಯೂ ತೋರುತಿತ್ತು, ಇದು

ಅವಳಿಗೆ ಒಗ್ಗಲಿಲ್ಲ.

ಅರುಣಾ ಸಂಪನ್ನರೂ, ಸುಖಾಸೀನರೂ ಆದ ಮಾತಾ ಪಿತರ ಏಕಮಾತ್ರ ಆಸೆಯ ಮುದ್ದು ಕುವರಿ. ಪುಸ್ತಕಗಳೊಳಗಿನ ಭಾವನಾ ಪ್ರಪಂಚದಲ್ಲಿ ಅವಳೂ ಸದಾ ವಿಹರಿಸುತ್ತಿದ್ದಳು. ಜೀವನವು ಕೇವಲ ಪ್ರಣಯ ಮತ್ತು ಆನಂದ ಇವುಗಳಿಂದ ಪರಿಪೂರ್ಣವಾದ ಸ್ವಪ್ನವೆಂದು ಅವಳ ನಂಬಿಕೆ. ಮೊದಲು ಆಕೆಗೆ ತನ್ನ ಪ್ರಿಯತಮನು ಕಲಾಕಾರನೆಂಬಬಗ್ಗೆ ತುಂಬಾ ಸಂತೋಷವಿದ್ದಿತು. ಆದರೆ ಆ ಕಲೆಗೆ ಸಾಧನೆ, ಪರಿಶ್ರಮ, ತಪಸ್ಸು ಇತ್ಯಾದಿಗಳ ಅಗತ್ಯವಿದೆ ಎಂದು ತಿಳಿದಾಗ ಅವಳಿಂದ ಸಹಿಸಲಾಗಲಿಲ್ಲ. ಅವಳ ಅಶೋಕನಿಗೊಂದು ಮನೆ ಇದೆ ಅದಕ್ಕೆ ಬಾಡಿಗೆ ಕೊಡಬೇಕಾಗುವುದು, ನೌಕರರಿದ್ದಾರೆ, ಅವರಿಗೆ ಸಂಬಳ ಕೊಡ ಬೇಕಾಗುವುದು, ಹಿಟ್ಟು, ಬೆಣ್ಣೆ, ಹಾಲು, ತುಪ್ಪ, ಸಕ್ಕರೆ ಇತ್ಯಾದಿಗಳಿಗೆ ಹಣ ಖರ್ಚು ಮಾಡಬೇಕಾಗಿದೆ ಎಂಬ ವಿಚಾರಗಳ ಬಗ್ಗೆ ಅವಳ ಮನಸ್ಸು ಹಿಂದೆ ಒಂದು ದಿನವೂ ಯೋಚಿಸಿರಲಿಲ್ಲ. ನಾಗಪುರಕ್ಕೆ ಬಂದು ಮೊದಲ ಬಾರಿ ಅವ ಳಿಗೆ ಈ ಎಲ್ಲ ವಿಚಾರಗಳೂ ತಿಳಿದಾಗ ಅವಳ ಮನಸ್ಸಿನಲ್ಲೇ ಕ್ರೋಧವು ಉಂಟಾ ಗುತ್ತಿತ್ತು. ಆಗಲೇ ಅವಳು ಜೀವನವು ಬರಿಯ ಸ್ವಪ್ನವಲ್ಲವೆಂದು ಅರಿತಳು.

ಅರುಣಾಳಿಗೆ ಕ್ಲಬ್ಬಿನ ಜೀವನವೆಂದರೆ ಪ್ರಾಣ. ಅವಳು ಕ್ಲಬ್ ಸದಸ್ಯ ಳಾಗಿದ್ದಳು ಎಂಬುದಕ್ಕೆ ಸಂದೇಹವಿಲ್ಲ. ತನ್ನೊಂದಿಗೆ ಅಶೋಕನನ್ನು ಎಳೆದು ಕೊಂಡು ಹೋಗುತ್ತಿದ್ದಳು. ಆದರೆ ಈ ಬಗೆಯ ಜೀವನವು - ಅಶೋಕನಿಗೆ ಯಾವುದೊಂದು ರೀತಿಯ ಅಭಿರುಚಿಯನ್ನೂ ಉಂಟು ಮಾಡುತ್ತಿರಲಿಲ್ಲ. ಈಗ ದಿನವೂ ಅರುಣಾಳಿಗಾಗಿ ಎರಡು ಮೂರು ಘಂಟೆಗಳಷ್ಟು ಕಾಲವನ್ನು ಅಲ್ಲಿ ಕಳೆ ಯಬೇಕಾಗುತ್ತಿತ್ತು.

* * * *

ಮಾಯಾದೇವಿಯು ಅರುಣಳನ್ನು ನೋಡುತ್ತಲೇ ತನ್ನ ದಯಾದೃಷ್ಟಿಯ ಕೃಪೆಯನ್ನು ಏತಕ್ಕಾಗಿ ಅರುಣಳ ಮೇಲೆ ಬೀರಿದ್ದಳೋ, ಅವಳು ಹೇಳಿದಳು—
" ತಾವು ಮಿಸ್ಟರ್ ಅಶೋಕ್ ಠಾಕೂರರನ್ನು ಮನುಷ್ಯರನ್ನಾಗಿ ಮಾಡಿದಿರಿ."

"ಹೇಗೆ?" ಅರುಣಳು ಪ್ರಶ್ನಿಸಿದಳು.

"ವಿವಾಹಕ್ಕೆ ಮುನ್ನ ಆ ಮಹಾಶಯರು ಯಾರೊಡನೆಯೂ ಮಾತೆತ್ತು

ತ್ತಿರಲಿಲ್ಲ. ಬಿದಿಗೆಯ ಚಂದಿರನಂತೆ ಕ್ಲಬ್ಬಿಗೆ ಬರುತ್ತಿದ್ದರು. ಹಾಗೇ ಬಂ
ವರು ಅರ್ಧ ಘಂಟೆಯೊಳಗೇನೇ ಹಿಂತಿರುಗಿ ಹೊರಟು ಹೋಗುತ್ತಿದ್ದರು
ಭೋಜನ ಅಥವಾ ಪಾರ್ಟಿಯ ಆಮಂತ್ರಣವನ್ನಿತ್ತರೆ ತನಗೆ ಬರಲಾಗುವುದಿಲ್ಲ
ಎಂಬುದಕ್ಕೆ ಸಾವಿರಾರು ಉಪಾಯಗಳನ್ನು ಹುಡುಕುತ್ತಿದ್ದರು. ಅಂತು
ಒಂದೊವ್ಮೆ ಬಂದರೂ ಬಹು ಸಪ್ಪೆಯಾಗಿರುತ್ತಿದ್ದರು. ಯಾಕೋ ಅವ
ಮೇಲೆ ಯಾರೋ ಭಾರೀ ಕಷ್ಟವನ್ನು ತಂದುಹಾಕಿದ್ದಾರೆಂಬಂತೆ ಕಾಣುತ್ತಿತ್ತು
ಕಲಾಕಾರರು ತಾನೆ? ಆದರೆ ಈಗ ಮಾನವರ ಶ್ರೇಣಿಯಲ್ಲಿ ಸೇರುತ್ತಿದ್ದಾರೆ
ಇದರ ಶ್ರೇಯವೆಲ್ಲವೂ ತಮಗೇ ಅಲ್ಲವೇ ಅರುಣಾದೇವೀ."

ಅರುಣಳು ಹೆಮ್ಮೆಯ ಮುಗುಳು ನಗೆಯೊಂದಿಗೆ ಇದರ ಅಭಿನಂದನೆ
ಯನ್ನು ಸ್ವೀಕರಿಸಿದಳು. ಅವಳಿಗೆ ತನ್ನ ಪ್ರಭಾವವನ್ನು ತಿಳಿದು ಬಹ
ಸಂತೋಷವಾಯಿತು. ಆದರೆ ಇದರ ಪರಿಣಾಮವನ್ನು ಸಾಧು ಅಶೋಕನು
ಅನುಭವಿಸಬೇಕಾಯಿತು. ಅವನನ್ನು ಮನುಷ್ಯನನ್ನಾಗಿ ಮಾಡುವ ಕೆಲಸವು
ಎರಡರಷ್ಟು ಉತ್ಸಾಹದಿಂದ ಆರಂಭವಾಯಿತು.

ಮಾಯಾದೇವಿಯಲ್ಲಿ ಯಾವ ಉದ್ದೇಶವಿತ್ತೆಂಬುದು ಅವಳಿಗೇ ಗೊತ್ತು.
ಆದರೆ ಅರುಣಾಳೊಂದಿಗೆ ಅವಳ ಮೈತ್ರಿಯು ದಿನದಿಂದ ದಿನಕ್ಕೆ ಹೆಚ್ಚುವುದನ್ನು
ಕಂಡ ಅಶೋಕನ ಮನಸ್ಸು ಒಂದು ರೀತಿಯ ಸಂದೇಹದಿಂದ ನಡುಗಿಕೊಂ
ಡಿತು.

ಒಂದು ದಿನ ಅಶೋಕನಿಗೆ ಮಾಯಾದೇವಿಯಿಂದ ಒಂದು ಓಲೆ ಬಂದಿತು
ಅದರಲ್ಲಿ ಅರುಣಾ ಮತ್ತು ಅಶೋಕರ ವಿವಾಹ ಸಂಭ್ರಮದ ಸಂತೋಷಕ್ಕಾಗಿ
ಭೋಜನಕ್ಕೆ ಬರಬೇಕೆಂದಿತ್ತು. ಆಮಂತ್ರಣವನ್ನು ಸ್ವೀಕರಿಸಬಾರದೆಂದು
ಅಶೋಕನ ಅಭಿಪ್ರಾಯ.

"ಆಮಂತ್ರಣವನ್ನೇಕೆ ಸ್ವೀಕರಿಸಬಾರದು" ಎಂದು ಅರುಣಳು ಬುಸುಗು
ಟ್ಟುತ್ತ ಕೇಳಿದಳು. "ಇಷ್ಟು ಶ್ರದ್ಧೆ ಆದರಗಳಿಂದ ನಮ್ಮನ್ನು ಅವರು ಕರೆದಿ
ದ್ದಾರೆ. ಅದಕ್ಕೆ ನಾವು ಅನಾದರವನ್ನು ತೋರುವುದೇ? ಅಲ್ಲದೆ ಅವರು
ನಿಮ್ಮ ಗ್ರಾಹಕರೂ ಆಗಿದ್ದಾರೆ."

"ಅಕಸ್ಮಾತ್ತಾಗಿ ಈ ವ್ಯವಹಾರ ವ್ಯಾಪಾರ ಬುದ್ಧಿಯು ನಿನಗೆಲ್ಲಿಂದ ಬಂತು
ಅರುಣಾ?" ಅಶೋಕನೆಂದನು. "ಮಾಯಾದೇವಿಯು ನನ್ನ ಗ್ರಾಹಕಳೆಂದು

ಹೇಳಿದವರಾರು. ಒಂದು ವೇಳೆ ಹಾಗಿದ್ದರೂ ಕೂಡ ಗ್ರಾಹಕರು ಹೇಳಿದ್ದ ನ್ನೆಲ್ಲ ನಾವು ಕೇಳಬೇಕೆಂದೇನೂ ಕಟ್ಟಳೆ ಇಲ್ಲ."

"ಬಹುಶಃ ನಿಮಗೆ ಮಾಯಾದೇವಿ ಎಂದರೆ ತಿರಸ್ಕಾರ. ಆದ್ದರಿಂದಲೇ ಹೀಗೆ ಹೇಳುತ್ತೀರಿ. ಹಾಗೆ ಅವರು ನಿಮಗೇನು ಕೇಡು ಬಯಸಿದ್ದಾರೆ. ಏತ ಕ್ಕೋಸ್ಕರ ಅವರಿಂದ ದೂರ ದೂರವಾಗಿ ಇರಲು ಯತ್ನಿಸುತ್ತೀರಿ?"

"ಅವಳು ಕೇಡೇನನ್ನೂ ಬಯಸಲಿಲ್ಲವೆನ್ನು. ಆದರೂ ಅವಳ ಸ್ನೇಹ ಸರಿಯಲ್ಲವೆಂದು ಏಕೋ ನನ್ನ ಮನಸ್ಸು ಅನ್ನುತ್ತಿದೆ."

"ಮನಸ್ಸು ಏನನ್ನೂ ಹೇಳುವುದಿಲ್ಲ. ಇದು ನಿಮ್ಮ ಕೆಟ್ಟ ಅಭಿಪ್ರಾಯ. ಹೋಗಲಿ ನಾನು ಚರ್ಚಿಸಲು ಇಷ್ಟಪಡುವುದಿಲ್ಲ. ಹೇಳಿರಿ. ಏನೆಂದು ಉತ್ತರ ಬರೆಯಲಿ?"

"ಅದೇ! ಬರಲು ಅಸಮರ್ಥರೆಂದು"

"ಇಲ್ಲ. ನಾನು ಹಾಗೆ ಬರೆಯಲಾರೆ"

"ಮತ್ತೇಕೆ ನನ್ನನ್ನು ಕೇಳುತ್ತೀಯಾ?"

"ಯಾವುದಾದರೂ ನಿಶ್ಚಯವಾಗುವುದಿದ್ದರೆ ನಮ್ಮಿಬ್ಬರ ಒಪ್ಪಿಗೆಯೊಂದಿಗೆ ಒಮ್ಮತದಿಂದ ಆಗಲೆಂದು ಮಾತ್ರ ಕೇಳುತ್ತಿದ್ದೇನೆ."

"ನಮ್ಮಿಬ್ಬರ ಒಪ್ಪಿಗೆಯೆಂದೇಕೆ ಹೇಳುತ್ತೀ, ನಿನ್ನ ಸ್ವಂತ ಅಭಿಪ್ರಾಯ ವೆನ್ನಬಾರದೇ?" ಅಶೋಕನು ಕಠಿಣತೆಯಿಂದ ಅಂದನು.

"ಹಾಗೆಂದೇ ತಿಳಿಯಿರಿ. ಸಮಾಜದಲ್ಲಿ ಯಾವ ರೀತಿ ನಡೆದುಕೊಳ್ಳಬೇ ಕೆಂದು ಗಂಡಸರಿಗಿಂತ ಹೆಂಗಸರೇ ಹೆಚ್ಚು ಬಲ್ಲರು. ಈ ಒಂದು ವಿಷಯದಲ್ಲಿ ಮಾತ್ರವಾದರೂ ನಿಮಗೆ ನನ್ನ ಮಾತನ್ನು ಕೇಳಬೇಕಾಗುವುದು ....ಹೇಳಿ, ಬರುತ್ತೇನೆ ಎಂದು ಬರೆದು ಬಿಡಲೇ?"

"ಇಲ್ಲ ಅರುಣಾ, ನನಗೆ ಇಚ್ಛೆಯೇ ಇಲ್ಲ."

"ಮತ್ತೆ ಅದೇ ಮಾತು!" ಅರುಣಾ ಉರಿದು ಬಿದ್ದವಳಂತಾಗಿ ಹೇಳಿ ದಳು—ಒಂದು ವೇಳೆ ನೀವು ಬಾರದಿದ್ದರೆ ನಾನು ಒಬ್ಬಂಟಿಗಳೇ ಹೋಗಬೇಕಾ ಗುವುದು. ಮಾಯಾದೇವಿಯಂತಹ ಮಾನ್ಯ ಸ್ತ್ರೀಯ ಅಪಮಾನವನ್ನು ನಾನು ಮಾಡಲಾರೆ"

"ಇದು ಚನ್ನಾಗಿರುವುದೇ ಅರುಣಾ? ನಮ್ಮ ಮನೆಯ ಜಗಳವನ್ನು

ಸಂತೆಗೆ ಕೊಂಡೊಯ್ಯುವುದರಿಂದ ಏನು ಲಾಭ?"

"ಅದಕ್ಕಾಗಿಯೇ ಇಷ್ಟು ಹೊತ್ತಿನಿಂದ ಹೇಳುತ್ತಿದ್ದೇನೆ—ಎದ್ದು ಬನ್ನಿರೀ ಎಂದು. ಇದು ಮಾಯಾದೇವಿಯ ಆಹ್ವಾನವಲ್ಲದೆ ಇನ್ನಾರದಾಗಿದ್ದರೂ ನಾನು ಇಷ್ಟು ಒತ್ತಾಯ ಪಡಿಸುತ್ತಿರಲಿಲ್ಲ." ಅರುಣಾ ನಮ್ರತೆಯಿಂದ ಹೇಳಿದಳು.

ಯಾವ ಕಾರಣಕ್ಕಾಗಿ ಅರುಣಾಳು ಒತ್ತಾಯಪಡಿಸುತ್ತಿದ್ದಳೊ ಅದೇ ಕಾರಣದಿಂದ ಅಶೋಕನು ಉಳಿದುಕೊಳ್ಳಲು ಪ್ರಯತ್ನಪಡುತ್ತಿದ್ದನು. ಆದರೆ ವ್ಯರ್ಥವಾಗಿ ವಾಕ್‌ಯುದ್ಧವನ್ನು ಮಾಡುತ್ತಿರುವುದರಿಂದ ಫಲವಿಲ್ಲವೆಂದು ತಿಳಿದು, ಹೇಳಿದನು "ನಿನ್ನ ಇಚ್ಛೆ ಹೇಗೋ ಹಾಗೆ"

ಇದೇ ರೀತಿಯಲ್ಲಿ ಸಿನೇಮಾಕ್ಕೆ ಹೋಗುವ ವಿಚಾರದಲ್ಲಿ ಮತಭೇದವು ಉಂಟಾಗುತ್ತಿತ್ತು. ಅರುಣಾಳಿಗೆ ಸಿನೆಮಾ ಎಂದರೆ ಜೀವ. ಯಾವ ಹೊಸ ಚಿತ್ರ ಬಂದರೂ ಬಿಡುತ್ತಿರಲಿಲ್ಲ. ಅಶೋಕನಾದರೂ ಉತ್ತಮ ಚಿತ್ರಗಳನ್ನಲ್ಲದೆ ಉಳಿದವನ್ನು ನೋಡುತ್ತಿರಲಿಲ್ಲ. ಅರುಣಾ ಅವನನ್ನು ಕಡ್ಡಾಯವಾಗಿ ಎಳೆದು ಕೊಂಡು ಹೋಗುತ್ತಿದ್ದಳು. ಏಕೆಂದರೆ ವಿವಾಹವಾಗಿ ಇನ್ನೂ ಒಂದು ತಿಂಗಳು ಕೂಡ ಆಗಿರಲಿಲ್ಲ. ಆದ್ದರಿಂದ ಒಬ್ಬಂಟಿಗಳಾಗಿ ಹೊರಗೆ ಹೋಗುವುದು ಒಳಿತಲ್ಲವೆಂದು ತಿಳಿದಿದ್ದಳು.

ಅಶೋಕನು ಇಂತಹ ಪ್ರಸಂಗಗಳನ್ನು ಬಹಳವಾಗಿ ಸಹಿಸಿಕೊಂಡೇ ಹೋಗುತ್ತಿದ್ದನು. ಅವನ ಸ್ವಭಾವವೇ ಅಂತಹದು. ಅವನು ದುರಾಗ್ರಹಿಯಲ್ಲ. ಇದೇ ಕಾರಣದಿಂದ ಯಾವಾಗಲೂ ಜಗಳ, ಚರ್ಚೆಗಳನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದನು. ವಿಧಿವಶಾತ್ ಒಂದು ದಿನ ಈ ಸಹನೆಯ ಎಲ್ಲೆಯೂ ಮೀರಿತು.

ಅವನು ತನ್ನ ಕೊಠಡಿಯೊಳಗೆ ಚಿತ್ರ ಬರೆಯುತ್ತ ಕುಳಿತಿದ್ದ. ಮಧ್ಯಾಹ್ನದ ಎರಡೂವರೆ ಘಂಟೆಯಷ್ಟು ಹೊತ್ತಿಗೆ ಅದರೊಳಗೆ ಹೊಕ್ಕಿದ್ದ. ಈಗ ಸಂಜೆಯ ಆರು ಘಂಟೆಯಾಗಿದೆ. ಅಲ್ಲಿಯೇ ಟೀಯೂ ಆಗಿತ್ತು. ಬಹಳ ದಿನಗಳ ಮೇಲೆ ಇಂದು ಅವನ ಮನಸ್ಸು ಒಂದು ಚಿತ್ರವನ್ನು ಚಿತ್ರಿಸುವುದರಲ್ಲಿ ಮಗ್ನವಾಗಿತ್ತು. ಅದನ್ನೇ ಪೂರ್ಣ ಮಾಡಿಬಿಡಬೇಕೆಂದು ಏಕಾಗ್ರತೆಯಿಂದ ಬಣ್ಣ ಬಳೆಯುತ್ತಿದ್ದನು. ಇಷ್ಟರಲ್ಲಿ ಬಾಗಿಲನ್ನು ತೆರೆದು ಹೊಸ್ತಿಲನ್ನು ದಾಟುತ್ತ ಅರುಣಾ ಒಳಗೆ ಬಂದಳು. ಮನೆಯ ಯಜಮಾನಿಯಲ್ಲವೇ? ಆದ್ದರಿಂದ

ಸ್ಟುಡಿಯೋದೊಳಗೆ ಬರಲು ಅವಳಿಗೆ ಅಪ್ಪಣೆಯ ಅವಶ್ಯಕತೆ ಇಲ್ಲ. ಅವಳು ರೇಷ್ಮೆಯ ಅಮೂಲ್ಯವಾದ ಸೀರೆಯನ್ನುಟ್ಟುಕೊಂಡಿದ್ದಳು. ಅವಳ ವೇಷಭೂಷಣಗಳನ್ನು ಕಂಡರೆ ಅವಳು ಆವುದೊ ಒಂಧು ಸಮಾರಂಭಕ್ಕೆ ಹೊರಟವಳಂತೆ ಕಾಣುತ್ತಿದ್ದಳು.

"ಇನ್ನೂ ನಿಮ್ಮ ಪೈಂಟಿಂಗ್ ಮುಗಿಯಲಿಲ್ಲವೇ? ಆರು ಹೊಡೆದಾಯಿತು. ಆಗಲೇ ನಾನು ಸಿಧ್ಧವಾಗಿ ನಿಮ್ಮನ್ನು ಕಾಯುತ್ತಿದ್ದೇನೆ. ಈಗ ಬರಬಹುದು, ಇನ್ನು ಸ್ವಲ್ಪ ಹೊತ್ತಿನಲ್ಲಿ ಬರಬಹುದು ಎಂದು. ಆದರೆ ನಿಮ್ಮ ಛಾಯೆಯೂ ಕಾಣಲಿಲ್ಲ. ಮೋಟಾರು ಕೂಡ........"

"ಅದೇನು ಅರುಣಾ, ಏತಕ್ಕಾಗಿ ನನ್ನನ್ನು ಕಾಯುತ್ತಿದ್ದೆ?" ಅಶೋಕನು ಕೂತಿದ್ದಂತೆಯೇ ತನ್ನ ಕತ್ತನ್ನು ಮಾತ್ರ ಅರುಣಾಳ ಕಡೆಗೆ ತಿರುಗಿಸಿ ಕೇಳಿದನು.

ಅಶೋಕನು ಅರುಣಾಳ ಶೃಂಗಾರ, ಅಭಿನಯಗಳನ್ನು ಹೊಗಳುವ ಮಾ-ತಂತಿರಲಿ, ಅದನ್ನು ದೃಷ್ಟಿ ಇಟ್ಟು ನೋಡಲೂ ಇಲ್ಲವೆಂಬುದು ಅರುಣಾಳಿಗೆ ಬಹಳ ಅತೃಪ್ತಿಯನ್ನುಂಟು ಮಾಡಿತು.

"ಏನು ಮರೆತೇ ಬಿಟ್ಟಿರೇ? ಸಂಜೆ ಆರೂವರೆ ಘಂಟೆಗೆ ಕ್ಲಬ್‌ನಲ್ಲಿ ಬ್ರಿಜ್ ಪಾರ್ಟಿ ಇದೆ! ಇಂದು ಬೆಳಿಗ್ಗೆಯೇ ಹೇಳಿಲ್ಲವೇ? ಅಲ್ಲಿಗೆ ಮಾಯಾದೇವಿ ಮಿಸ್ಟರ್ ರಾಯ್ ಅವರುಗಳೂ ಬರುವರೆಂದೂ ಹೇಳಿದ್ದೆ. ನಾವಿಬ್ಬರೂ ಸರಿಯಾದ ಸಮಯಕ್ಕೆ ಅಲ್ಲಿಗೆ ಬರುವೆವೆಂದು ನಾನು ಅವರಿಗೆ ಮಾತು ಕೊಟ್ಟು ಬಂದಿದ್ದೇನೆ. ಇನ್ನು ಅರ್ಧ ಘಂಟೆಯಷ್ಟೇ ಉಳಿದಿದೆ. ಯಾವಾಗ ಮುಖ ತೊಳೆಯುವುದು, ಬಟ್ಟೆ ಬದಲಾಯಿಸುವುದು, ಎಷ್ಟು ಹೊತ್ತಿಗೆ ಅಲ್ಲಿಗೆ ತಲಪುವುದು? ಎಳ್ರೀ, ಬೇಗ. ಹೀಗೇ ಕುಳಿತು ಬಿಟ್ಟರೆ ಹೇಗೆ? ಬೇಗ ಏಳಿ...."

"ಓಹ್ಹೊ, ಕ್ಷಮಿಸು........ ನನಗೆ ನಿಜವಾಗಿಯೂ ಮರೆತೇ ಹೋಗಿದೆ. ಆದರೆ ಅರುಣಾ, ನನಗೆ ಈ ದಿನ ಮಾತ್ರ ಬಿಡುವು ಕೊಟ್ಟರೆ ಬಹಳ ಉಪಕಾರ. ಈ ಚಿತ್ರವನ್ನು ಮುಗಿಸಲು ಮಾತ್ರ ಬಿಟ್ಟರೆ ಸಾಕು. ಕೇವಲ ಒಂದೂವರೆ ಘಂಟೆಯ ಕೆಲಸ ಉಳಿದಿದೆ, ಒಂದು ವೇಳೆ ನಾನು ಇದನ್ನು ಬಿಟ್ಟು ಎದ್ದೆನೆಂದರೆ ಎಲ್ಲಾ ಹಾಳಾಗುವುದು."

"ಒಂದೂವರೆ ಘಂಟೆ? ಓ ದೇವ್ರೇ! ಅವರುಗಳೇನೆಂದಾರು. ಇವರಿಗೆ

ಒಂದಿಷ್ಟು ಸಮಾಜದ ಕಲ್ಪನೆಯೇ ತಿಳಿಯದು, ಸಮಯದ ಬೆಲೆಯನ್ನೇ ಅರಿ
ಯರು ಎನ್ನಲಾರರೇ ? ಇಲ್ಲ, ಇಲ್ಲ. ಮಾಯಾದೇವಿ ಮಾತ್ರವೇ ಆಗುತ್ತಿದ್ದರೆ
ನಾನು ನಿಮ್ಮನ್ನು ಈ ರೀತಿ ಆಗ್ರಹ ಪಡಿಸುತ್ತಿದ್ದಿಲ್ಲ. ಏತಕ್ಕೆಂದರೆ ಅವರಿಗೆ
ನಿಮ್ಮ ಎಲ್ಲಾ ವಿಚಾರಗಳೂ ತಿಳಿದದ್ದೇ. ಆದರೆ ಮಿಸ್ಟರ್ ರಾಯ್ ಅವರು
ಏನೆಂದಾರು ?"

ಮಿಸ್ಟರ್ ರಾಯ್ ಅವರು ಐ. ಸಿ. ಎಸ್. ಪರೀಕ್ಷೆಯನ್ನು ಮುಗಿಸಿ,
ರಾಯಪುರದಲ್ಲಿ ಟ್ರೈನಿಂಗ್‌ನ್ನು ಪಡೆದು ಈಗ ಇತ್ತೀಚಿಗೆ ನಾಗಪುರದ ಅಸಿಸ್ಟೆಂಟ್
ಕಮಿಷನರರಾಗಿ ಬಂದಿದ್ದಾರೆ. ಮಿಸ್ಟರ್ ಮತ್ತು ಮಿಸೆಸ್ ಠಾಕೂರರ ವಿಳಾ
ಸದ ಮೇಲೆ ಅವರು ರಾಯಪುರದ ಶ್ರೀ. ಅಧಿಕಾರಿಗಳಿಂದ ಪರಿಚಯ ಪತ್ರ
ವನ್ನು ತಂದಿದ್ದಾರೆ.

ಆದರೆ ಅಶೋಕನು ತನ್ನ ಕಲಾಸಾಧನೆಯಲ್ಲಿ ಲೀನನಾಗಿದ್ದನು. ಆದ್ದ
ರಿಂದ ತೂಲಿಕೆಯನ್ನು ಮಧ್ಯದಲ್ಲೇ ಬಿಟ್ಟು ಬರಲು ಎಂದೂ ಮನಸ್ಸು ಮಾಡ
ಲಾರ. ಆಗ ಹೇಳಿದನು:

"ಮಿಸ್ಟರ್ ರಾಯ್ ಏನೆಂದಾರು ? ನನ್ನ ಪರವಾಗಿ ಅವರಲ್ಲಿ ಕ್ಷಮೆ
ಯನ್ನು ಕೇಳು. ಮತ್ತು ನನಗೆ ಸ್ಟುಡಿಯೋ ಕೆಲಸಗಳೂ ತುಂಬಾ ಇ
ಎಂದೂ ಹೇಳು. ಕಲೆಯ ಸ್ಫೂರ್ತಿ ಬಂದಿರಬಹುದೆಂದು ಆಗ ಅವರಿಗೆ ತಿಳಿಯ
ಬಹುದು."

"ನೀವು ಹೇಳಿದಂತೆ ಹೇಳುವುದಾದರೂ ಹೇಗೆ ? ತಮಾಷೆಯೆ
ಗೊತ್ತಾದ ಸಮಯಕ್ಕೆ ಯಾರಾದರೂ ತಮ್ಮ 'ಎಂಗೇಜ್‌ಮೆಂಟ' ನ್ನು ವ
ಯುತ್ತಾರೆಯೇ ? ಹೀಗಿದ್ದರೆ ಮೊದಲೇ ಏಕೆ ಆ ಆಮಂತ್ರಣವನ್ನು ತಿರಸ್ಕರಿ
ಬಾರದಿತ್ತು ? ಮಿಸ್ಟರ್ ರಾಯ್ ಖಂಡಿತವಾಗಿಯೂ ಬೇಸರಿಸದೆ ಇ
ಲಾರರು ? "

"ಬೇಸರವಾದರೆ ಆಗಲಿ. ಅವರಿಗಾಗಿ ನಾನು ಕಲಾಸಮಾಧಿಯಿಂ
ಎಚ್ಚರಗೊಳ್ಳಲೇ ? ನನಗಾಗಿ ಕ್ಷಮೆಯನ್ನು ಕೇಳು ಎಂದಿದ್ದೇನೆ. ಅಥ
ಕೇಳಲಿಲ್ಲವೆಂದರೆ ಬೇಡ. ಆ ಬಗ್ಗೆಯೂ ನಾನು ಚಿಂತಿಸುವದಿಲ್ಲ." ಅಶೋ
ಕನು ದೃಢವಾಗಿ ಹೇಳಿದನು.

"ಹಾಗೆಂದು ಹೇಳಲಾದೀತೇ ? 'ಪಪ್ಪಾ' ರವರ ಪತ್ರ ತಂದಿದ್ದಾ

ನೀವು ಈ ರೀತಿ ಅವರ ಅಪಮಾನವನ್ನು ಮಾಡಬಹುದೇ ? "

" ಇದರಲ್ಲಿ ಅಪಮಾನವೇತರದ್ದು ? ನಿನ್ನ ತಂದೆಯವರೇನಾದರೂ ಮಿಸ್ಟರ್ ರಾಯ್ ಅವರೊಂದಿಗೆ ಕಲಾಸೇವೆಯನ್ನು ಬಿಟ್ಟು ಬ್ರಿಜ್ ಪಾರ್ಟಿಗೆ ಹೋಗು ಎಂದು ಬರೆದಿದ್ದಾರೊ ? "

" ನೀವು ನನ್ನ ಮತ್ತು ನನ್ನ ತಂದೆಯವರ ಮಾನ ಕಳೆಯುತ್ತಿದ್ದೀರಿ. " ಅರುಣಾ ಸಿಟ್ಟಿಗೆದ್ದು ಹೇಳಿದಳು. " ಇದನ್ನು ನಾನು ಸಹಿಸಲಾರೆ. ನೀವು ಬರುವಿರೊ ಇಲ್ಲವೊ ಎಂಬುದನ್ನು ಖಂಡಿತವಾಗಿ ತಿಳಿಸಿ ಬಿಡಿ. "

" ಇಲ್ಲ ! " ಅಶೋಕನು ಅಪ್ರತಿಭನಾಗಿ ಅಂದನು.

" ಇಲ್ಲ ? " ಅರುಣಾ ಕ್ರೋಧದಿಂದ ಕೇಳಿದಳು.

" ಇಲ್ಲ. " ಅಶೋಕನು ಅಷ್ಟೇ ಶಾಂತಿಯಿಂದ ಹೇಳಿದನು.

" ನನ್ನಲ್ಲಿ ನಿಮಗೆ ವಾಸ್ತವವಾದ ಪ್ರೇಮವಿರುವುದೇ ಆದರೆ ನೀವು ನನ್ನೊಂದಿಗೆ ಬರಲೇ ಬೇಕು. " ಅರುಣಳು ಒತ್ತಾಯವಾಗಿ ಹೇಳಿದಳು.

" ನನಗೆ ನಿನ್ನಲ್ಲಿ ತುಂಬ ಪ್ರೇಮವಿದೆ. ಆದರೆ ಈ ದಿನ ಮಾತ್ರ ಈ ಚಿತ್ರವನ್ನು ಪೂರೈಸದೆ ಇಲ್ಲಿಂದ ಕದಲಲಾರೆ. "

" ನಿಮಗೆ ನನಗಿಂತಲೂ ಕಲೆಯೇ ಹೆಚ್ಚು ಪ್ರಿಯವಾದುದೇ ? ನಾನು ನಿಮ್ಮವಳಲ್ಲವೇ ? " ಅರುಣಾಳ ಶಬ್ದಗಳು ಏರುತ್ತಲೇ ಇದ್ದವು.

" ಇಂತಹ ವ್ಯರ್ಥವಾದ ಸಮಸ್ಯೆಗಳನ್ನೇತಕ್ಕಾಗಿ ಎಬ್ಬಿಸುತ್ತಿದ್ದೀಯಾ ಅರುಣಾ ? ಪ್ರಯೋಜನವಿಲ್ಲದ ಮಾತಿಗೆ ಇಷ್ಟು ಸಿಟ್ಟುಗೊಂಡರೆ ಫಲವಾದರೂ ಏನು ? ನನಗೆ ಇಚ್ಛೆ ಇಲ್ಲದಿದ್ದರೂ ನಿನ್ನೊಂದಿಗೆ ನಾನು ಎಷ್ಟು ಸಲ ಬಂದಿಲ್ಲ ? ಈ ಒಂದು ಬಾರಿ ನನ್ನನ್ನೇತಕ್ಕೆ ಮನ್ನಿಸಿ ಬಿಡಬಾರದು ? "

" ನಾನು ಯಾವ ಚರ್ಚೆಯನ್ನೂ, ಭಾಷಣವನ್ನೂ ಕೇಳಲು ಇಚ್ಛಿಸುವುದಿಲ್ಲ. ನಾನು ಮಾತು ಕೊಟ್ಟು ಬಂದಿರುವುದರಿಂದ ನೀವು ನನ್ನೊಂದಿಗೆ ಬಂದೇ ಬರಬೇಕು. "

" ಹಾಗಾದರೆ ನಾನೂ ಚರ್ಚೆ, ಭಾಷಣಗಳನ್ನು ಕೇಳಲಿಚ್ಛಿಸುವುದಿಲ್ಲ. ನೀನು ವ್ಯರ್ಥವಾಗಿ ನನ್ನ ಸಮಯವನ್ನು ಹಾಳುಮಾಡಬೇಡ " ಎನ್ನುತ್ತ ಮುಖ ತಿರುಗಿಸಿ ಚಿತ್ರದ ಹಲಗೆಯ ಮೇಲೆ ತನ್ನ ಕುಂಚವನ್ನು ಓಡಿಸಲಾರಂಭಿಸಿದ.

ಅರುಣಾಳಿಗೆ ಇದೆಲ್ಲವನ್ನು ಸಹಿಸಿಕೊಳ್ಳುವುದು ಕಠಿಣವಾಯಿತು. ಅವಳು ತನಗೆ ಅಪಾರವಾದ ಅಪಮಾನವಾಯಿತೆಂದು ತಿಳಿದುಕೊಂಡಳು.

" ಹಾಗಾದರೆ ನೀವು ಬರೋದಿಲ್ಲಾ ? "

ಅಶೋಕನು ತಿರುಗಿ ನೋಡಿದ. ಅರುಣಾ ಚಂಡಿಕೆಯ ರೂಪವನ್ನು ಧರಿಸಿದವಳಂತೆ ಎದುರಿಗೇ ನಿಂತಿದ್ದಳು. ಕ್ರೋಧಾವೇಶದಲ್ಲಿ ತನ್ನನ್ನು ತಾನು ಮರೆತಿದ್ದಳು. ಈ ಭಯಂಕರ ದೃಶ್ಯವನ್ನು ಕಂಡಾಗಲೂ ಅಶೋಕನ ಮನಸ್ಸು ವಿಚಲಿತವಾಗಲಿಲ್ಲ. ಆಗಲೂ, " ಬರುವುದಿಲ್ಲ " ಎಂದ.

" ಹಾಗಾದರೆ ಬೆಂಕಿ ಬೀಳಲಿ ನಿಮ್ಮ ಚಿತ್ರ ಕಲೆಗೆ ! ಈಗ ಅದಾವ ಚಿತ್ರವನ್ನು ಚಿತ್ರಿಸುತ್ತೀರಿ ನೋಡುತ್ತೇನೆ. " ಸಿಟ್ಟಿನಿಂದ ಹಲ್ಲನ್ನು ಕಡಿಯುತ್ತ ಅವಳು ಕೆಂಪು ಬಣ್ಣದಿಂದ ಮಿಶ್ರಿತವಾದ ಬಣ್ಣದ ತಟ್ಟೆಯನ್ನು ಕೂಡಲೆ ಆ ಸುಂದರವಾದ ಚಿತ್ರದ ಹಲಗೆಯ ಮೇಲೆ ಬಿಸುಟಿದಳು. ತಟ್ಟೆಯಲ್ಲಿದ್ದ ದಪ್ಪನಾದ ರಕ್ತರಂಗು ಕೆನ್‌ವಾಸಿನ ಮೇಲೆಲ್ಲ ಸಿಡಿಯಿತು. ಆ ಚಿತ್ರವಾದರೊ ಒಂದೇ ಕ್ಷಣದಲ್ಲಿ ತನ್ನಲ್ಲಿರುವ ಕಲಾವೈಭವವನ್ನೆಲ್ಲ ಕಳೆದುಕೊಂಡು, ರಾಕ್ಷಸೀ ನಗೆಯನ್ನು ನಗುವ ಪ್ರತಿಮೆಯಂತೆ ಕಾಣಿಸಿತು. ಆ ಕೆಂಪು ಬಣ್ಣದ ಕೆಲವು ಚುಕ್ಕೆಗಳು ಅಶೋಕನ ಮುಖ ಮತ್ತು ಶರೀರದ ಮೇಲೂ ಬಿದ್ದಿದ್ದವು. ಅದರಲ್ಲೂ ಅವನ ಹೃದಯದ ಭಾಗವು ಪೂರ್ಣ ರಕ್ತರಂಜಿತವಾದಂತೆ ಕಾಣುತ್ತಿತ್ತು. ಅಶೋಕನು ಚಿಂತಿತ ಮನಸ್ಕನಾಗಿ ಎದ್ದುನಿಂತುಕೊಂಡು ಬಗ್ಗಿ ತನ್ನೆದೆಯನ್ನು ಕಂಡಾಗ, ಅವನಿಗೆ ತನ್ನ ಹೃದಯವೇ ಗಾಯಗೊಂಡು ರಕ್ತಸ್ರಾವವಾಗುತ್ತಿದ್ದಂತೆ ಭಾಸವಾಯಿತು. ಅವನ ಕಣ್ಣುಗಳಿಂದ ಕಂಬನಿಗಳು ಉದುರಿದವು.

ಇಪ್ಪತ್ತನಾಲ್ಕು

ಆ ದುರ್ಘಟನೆಯ ಮೂಲಕ ಇಬ್ಬರೂ ಕ್ಲಬ್ಬಿಗೆ ಹೋಗಲಾರದಾದರು. ಅಶೋಕನು ತುಂಬಾ ಉದಾಸೀನನಾಗಿ ಒಂದು ಆರಾಮುಕುರ್ಚಿಯಲ್ಲಿ ಬಿದ್ದುಕೊಂಡು ಅಟ್ಟವನ್ನು ನೋಡುತ್ತಿದ್ದನು. ತಾನು ಅರುಣಾಳೊಂದಿಗೆ ವಿವಾಹ

ವಾದುದೇ ತಾನು ಮಾಡಿದ ಮಹಾಪರಾಧವೆಂದು ಅವನಿಗೆ ಇದೇ ಮೊದಲ ಬಾರಿ ತಿಳಿಯಿತು. ಅರುಣಾದೇವಿಯೂ ತನ್ನ ಶಯನಾಗಾರದಲ್ಲಿ ಬಿದ್ದುಕೊಂಡು ಅಳಲಾರಂಭಿಸಿದಳು.

ರಾತ್ರೆ ಅಶೋಕನು ಊಟ ಬೇಡವೆಂದನು. ಆದರೆ ಅರುಣಾಳ ಒತ್ತಾಯದಿಂದಾಗಿ ಒಂದೆರಡು ತುತ್ತಿಗಾದರೂ ಕೂಡಲೇ ಬೇಕಾಯಿತು. ಅವನು ಯಾವ ಮಾತನ್ನೂ ಎತ್ತಲಿಲ್ಲ. ಅರುಣಾ ಏನೆಂದರೂ ಅದನ್ನು ಚಾ-ಚೂ ತಪ್ಪದೆ ಪಾಲಿಸುತ್ತಿದ್ದ. ಅವನ ವಿಷಣ್ಣವದನವನ್ನು ಕಂಡ ಅರುಣಾಳ ಮನಸ್ಸು ಕರಗಿ ಹೋಯಿತು. ಅವಳು ಅಶೋಕನಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮೆಯನ್ನು ಬೇಡಿದಳು. ಆದರೆ ಅವಳ ಈ ಬಗೆಯ ಉಚ್ಚ ಭಾವನೆಯು ಕೇವಲ ಒಂದೆರಡು ವಾರಗಳ ತನಕ ಮಾತ್ರವಷ್ಟೇ ಉಳಿಯಿತು.

ಒಂದು ದಿನ ಇವರಿಬ್ಬರನ್ನೂ ಟೀ ಪಾರ್ಟಿಗೆ ಆಮಂತ್ರಿಸಿದಾಗ ಇವಳೊಬ್ಬಳೇ ಅಲ್ಲಿಗೆ ಹೋದಳು. ಮಾಯಾದೇವಿಯಂತಹ ತೀಕ್ಷ್ಣ ಬುದ್ಧಿಯ ವನಿತೆಗೆ ಇವಳೊಬ್ಬಳೇ ಯಾವ ಕಾರಣದಿಂದ ಬಂದಿದ್ದಾಳೆ ಎಂಬುದನ್ನು ತಿಳಿದುಕೊಳ್ಳಲು ಕಷ್ಟವಾಗಲಿಲ್ಲ. ಮನಸ್ಸಿನಲ್ಲೇ ಇವರಿಬ್ಬರೊಳಗೆ ಏನೋ ಮನಸ್ತಾಪವು ಎದ್ದಿರಬೇಕೆಂದು ಊಹಿಸಿಕೊಂಡಳು. ಮೂರು ನಾಲ್ಕು ಪ್ರಶ್ನೆಗಳಲ್ಲೇ ಗುಟ್ಟು ರಟ್ಟಾಯಿತು.

"ಏಕೆ ಇಂದೂ ಮಿಸ್ಟರ್ ಠಾಕೂರರಿಗೆ ಸಮಯವಾಗಲಿಲ್ಲವೇ?"

"ಇಲ್ಲ, ಅವರು ಪುನಃ ಸ್ಟುಡಿಯೋದೊಳಗೆ ಸೇರಿಕೊಂಡಿದ್ದಾರೆ. ಒಂದು ಶ್ರೇಷ್ಠತರಗತಿಯ ಚಿತ್ರವನ್ನು ಬರೆಯುತ್ತಿದ್ದಾರೆ." ಆ ಕಾರಣವು ಸುಳ್ಳಾಗಿದ್ದರೂ ಅರುಣಾಳು ಅದನ್ನೇ ಹೇಳದೆ ಬೇರೆ ವಿಧಿಯಿರಲಿಲ್ಲ. ಅವನು ನಿಜವಾಗಿಯೂ ಚಿತ್ರಶಾಲೆಯೊಳಗಿರಲಿಲ್ಲ. ಅವನು ಇಲ್ಲಿಗೆ ಬರಲು ಅಸಮರ್ಥನಾಗಿ ಮನೆಯಲ್ಲೇ ಉಳಿದುಕೊಂಡಿದ್ದ.

"ಶ್ರೇಷ್ಠ ತರಗತಿಯ ಚಿತ್ರ!" ಮಾಯಾದೇವಿಯು ವ್ಯಂಗ್ಯವಾಗಿ ಹೇಳಿದಳು. "ಅವರೆದುರಿಗೇನೇ ಇಷ್ಟು ಸುಂದರವಾಗಿರುವ ಸಜೀವವಾದ ಪ್ರತಿಮೆ ಓಡಾಡುತ್ತಿರುವಾಗಲೂ ಅವರ ಆ ನಿರ್ಜೀವ ಚಿತ್ರಗಳ ಮೇಲಿನ ಭ್ರಮೆಯು ಇಳಿಯಲಿಲ್ಲವೇ—ಈ ಸಾಕ್ಷಾತ್ತಾಗಿರುವ ಸೌಂದರ್ಯದ ತಿರಸ್ಕಾರವನ್ನು ಮಾಡಿ, ಅವರು ಬಣ್ಣಗಳ ಮಿಶ್ರಣದಲ್ಲಿ ಸೌಂದರ್ಯವನ್ನು ಹುಡುಕಲು ಹೋಗುತ್ತಾರೆ."

" ಇಲ್ಲ. ತಿರಸ್ಕಾರವನ್ನಾದರೂ ಏಕೆ ಮಾಡುತ್ತಾರೆ? "

" ಅದೇಕೆ ಮಾಡುವುದಿಲ್ಲ. " ಮಾಯಾದೇವಿಯು ಆವೇಶದೊಂದಿಗೆ ಹೇಳಿದಳು. " ನನಗೆ ತಿಳಿಯದೇ ಅರುಣಾದೇವಿ— ನಿಮ್ಮ ಹೃದಯದಲ್ಲಿ ಅದಾವ ಬಗೆಯ ಅತೃಪ್ತಿಯ ಜ್ವಾಲೆಯು ಉರಿಯುತ್ತಿದೆ ಎಂಬುದನ್ನು ನಾನು ಕಾಣಲಾರೆನೇ ? ಒಬ್ಬ ಸ್ತ್ರೀಯೇ ಇನ್ನೊಬ್ಬ ಸ್ತ್ರೀಯ ಹೃದಯವನ್ನು ಕಂಡು ಹಿಡಿಯಬಲ್ಲಳು. ನಾನು ನಿಮ್ಮ ಗೆಳತಿ. ಆದ್ದರಿಂದಲೇ ನನ್ನ ಹೃದಯವು ನಿಮಗೋಸ್ಕರ ಇಷ್ಟು ಬೇಯಲು ಕಾರಣ. ನೀವು ಸುಖದಿಂದಿರುತ್ತಿದ್ದರೆ ಎಷ್ಟು ಚೆನ್ನಾಗಿತ್ತು. "

" ನನಗೇನು ಕಡಿಮೆ. ಸುಖವಾಗಿಯೇ ಇದ್ದೇನೆ. "

" ನನಗೊಂದೂ ತಿಳಿಯದೆಂದು ನನ್ನಲ್ಲಿ ನಿಜವನ್ನು ಮುಚ್ಚಿಡಲು ಯತ್ನಿಸುತ್ತೀರಾ? ನಿಮ್ಮ ಅಂತರಂಗದಲ್ಲಿ ಬೇನೆ ಇದೆ ಎಂಬುದು ನನಗೆ ತಿಳಿದಿದೆ. ಆದ್ದರಿಂದ ಮಾತುಗಳನ್ನು ಇನ್ನು ಮುಂದರಿಸಲು ನಾನು ಇಚ್ಛಿಸುವುದಿಲ್ಲ. ಕಲಾವಿದರು ಯಾವಾಗಲೂ ಹೀಗೆಯೇ. ನಮ್ಮಂತಹ ಹೆಂಗಸರು ರಾಜ ಮಹಾರಾಜರ ಮನಸ್ಸನ್ನೊ ಅಥವಾ ಲಕ್ಷ್ಮೀಪುತ್ರರ ಮನಸ್ಸನ್ನೊ ಜಯಿಸ ಬಹುದು. ಆದರೆ ಇಂತಹ ವಿಶಿಷ್ಟ ಕಲಾಕಾರರ ಮನಸ್ಸನ್ನು ಜಯಿಸುವುದು ಅಸಾಧ್ಯ. "

" ಆದರೆ ಅವರ ಜೀವನದ ಒಂದು ವಿಶಿಷ್ಟವಾದ ಧ್ಯೇಯವಿರುತ್ತದೆ. ಅದಕ್ಕೆ........ "

" ಹೌದು, ಅದಕ್ಕೆ ಅವರು ಸಾಧನೆ ಮಾಡಬೇಕಾಗುತ್ತದೆ. ಆದರೆ ಇದರಿಂದ ನಮಗೆ ಸ್ತ್ರೀಯರಿಗೆ ಏನು ಬಂತು ? ಅವರ ಮೇಲೆ ತನ್ನ ಜೀವನ ವನ್ನು ಅರ್ಪಿಸಿದ ನಾರಿಯು ದುಃಖಿಯಾಗಿಯೇ ಉಳಿಯಬೇಕಾಗುತ್ತದೆ. ಅವಳ ವ್ಯಥಿತ ಹೃದಯದ ದುಃಖವನ್ನು ಕೇಳುವವರೇ ದಿಕ್ಕಿಲ್ಲ. "

" ಹಾಗೆಂದರೆ ? ತನ್ನ ಪತಿಯ ಜೀವನ ಧ್ಯೇಯಕ್ಕೆ ಸಹಾಯಕಳಾಗುವುದು ಪತ್ನಿಯ ಕರ್ತವ್ಯವಲ್ಲವೇ ? "

" ಸಾಮಾನ್ಯಳಾದ ಒಬ್ಬ ಪತ್ನಿಯು ತನ್ನ ಸಂಪೂರ್ಣ ವ್ಯಕ್ತಿತ್ವವನ್ನು ಕಳೆದುಕೊಂಡು, ಪುರುಷನ ನೆರಳಿನಂತಾಗಿ, ಅವನ ಅನುಗಾಮಿನಿಯಂತೆ ಬಾಳಲು ಸಿದ್ಧಳಾಗಿರಬಹುದು. ಆಧುನಿಕಳೂ, ಸುಶಿಕ್ಷಿತಳೂ, ಜಾಗೃತಳೂ

ಆದ ನಾರಿಯೂ ಕೂಡ ಈ ಅಭೀಷ್ಟವನ್ನು ಸಿದ್ಧಿಸಿಕೊಳ್ಳಲು ಆಶಿಸುವಳೇನು ?"

"ಇಲ್ಲ, ಇಲ್ಲ. ಇದೆಂದೂ ಆಗದು." ಅರುಣಾಳ ಅಂತರ್ಯದಲ್ಲಿದ್ದ 'ಎಮ್. ಎ.' ಪಾಸ್ ಆದ ನಾರೀತ್ವ ಜಾಗೃತವಾಯಿತು. "ಇದಕ್ಕಿಂತಲೂ ನಾವು ಸಾವನ್ನೇ ಒಳ್ಳೇಯದೆಂದು ಒಪ್ಪಿಕೊಳ್ಳಲು ಸಿದ್ಧರಿದ್ದೇವೆ. ಆದರೆ ನಮ್ಮ ಆತ್ಮದ ವಧೆಯನ್ನು ಮಾತ್ರ ಸಹಿಸಲಾರೆವು" ಎಂದಳು.

"ಈ ಮಾತು ನಿಜ. ಸ್ತ್ರೀಯರ ಸ್ವಭಾವದಲ್ಲಿ ಇನ್ನೊಂದು ವಿಶೇಷತೆ ಇದೆ ಅರುಣಾದೇವಿ. ಸ್ತ್ರೀಯರು ಪುರುಷರ ಮೇಲೆ ಮಾತ್ರ ತಮ್ಮ ಅಧಿಕಾರ ವನ್ನು ನಡೆಸುವುದಲ್ಲದೆ, ಅವರಿಗೆ ಸರಿಯಾದ ಸಂದರ್ಭ ಒದಗಿದರೆ ದೇವರಾಜ್ಯ ವನ್ನು ಕೂಡ ತಮ್ಮ ಪಾಲಿಗೆ ತೆಗೆದುಕೊಳ್ಳಲು ಆಶಿಸುತ್ತಾರೆ. ಇತಿಹಾಸದಲ್ಲಿ ಹೀಗೆ ನಡೆದೂ ಇದೆ. ಈ ಸಂಪೂರ್ಣ ಸರ್ವ ಶಕ್ತಿಯನ್ನು ಪಡೆಯದೆ ನಾವು ಸುಖಿಗಳಾಗಿರಲು ಸಾಧ್ಯವಿಲ್ಲ. ಆದರೆ ಕಲಾಕಾರರು ಇವೆಲ್ಲಕ್ಕಿಂತಲೂ ಮುಂದ ರಿದಂತೆ ಕಾಣುವುದು. ನಮ್ಮ ಸ್ತ್ರೀ ಸಹಜ ಪ್ರೇಮ ಹೃದಯವನ್ನು ಅವರಿಗೆ ಅರ್ಪಿಸಿ ಆಮರಣ ಪರ್ಯಂತ ಅಳುತ್ತಲೇ ಇರಬೇಕಾಗುವುದು."

"ಸಾಕು, ಸಾಕು. ಇರಲಿ ಬಿಡಿ ಮಾಯಾದೇವಿ." ಅರುಣಳು ಕಣ್ಣು ಗಳಲ್ಲಿ ನೀರನ್ನು ತುಂಬಿಕೊಂಡು ಹೇಳಿದಳು. "ಈ ತರದ ಮಾತುಗಳು ನನ್ನ ಹೃದಯವನ್ನು ಸೀಳುತ್ತವೆ........"

"ಕ್ಷಮಿಸಿ ಅರುಣಾದೇವಿ, ನಾನು ನಿಮ್ಮ ಗಾಯಗೊಂಡ ಹೃದಯಕ್ಕೆ ಬಿಸಿ ಎಣ್ಣೆ ಎರೆದಂತೆ ಮಾಡಿದೆ. ಇದು ನನ್ನ ತಪ್ಪು."

"ಇಲ್ಲ. ನೀವು ಹಾಗೆನ್ನಬೇಡಿ. ನನಗೆ ನಿಮ್ಮಲ್ಲೇನೂ ಭಿನ್ನಾಭಿಪ್ರಾ ಯವಿಲ್ಲ. ನೀವು ನನ್ನ ಹೃದಯದ ವೇದನೆಯನ್ನು ಅರಿತು ಸಹಾನುಭೂತಿ ಯನ್ನು ತೋರಿಸಿದುದಕ್ಕೆ ನಾನು ಕೃತಜ್ಞಳಾಗಿದ್ದೇನೆ."

ಅರುಣಾಳನ್ನು ಅಲ್ಲಿಂದ ಬೀಳ್ಕೊಟ್ಟ ಮೇಲೆ ಮಾಯಾದೇವಿಯು ಗಹ ಗಹಿಸಿ ನಕ್ಕು ಮನಸ್ಸಿನಲ್ಲಿಯೇ ನುಡಿದಳು.

"ಹ್ಹಾ ಹ್ಹಾ ಹ್ಹಾ ! ಅಶೋಕ್ ಬಾಬೂ, ಒಂದೊ ನೀವು ನನ್ನವರಾ ಗಿರಬೇಕು, ಇಲ್ಲವಾದರೆ ನಿಮ್ಮ ಮನೆಯನ್ನು ನಾನು ಸ್ಮಶಾನವನ್ನಾಗಿ ಮಾಡಿ ಬಿಡುವೆನು. ಹಾಗಾಗದಿದ್ದರೆ ನಾನು ಮಾಯಾದೇವಿಯಲ್ಲ. ನೀವು ಯಾರಲ್ಲಿ ದ್ವೇಷವನ್ನು ಕ್ರಯಕ್ಕೆ ಪಡೆದುಕೊಂಡಿದ್ದೀರಿ ಎಂಬುದರ ಅರಿವು ನಿಮಗಿಲ್ಲ."

ಇಪ್ಪತ್ತೈದು

ಅರುಣಾಳಿಗೆ ಈಗ ಅಶೋಕನ ವಿಷಯವಾದ ಯಾವ ವ್ಯವಹಾರಗಳೂ ಸಾರವಿಲ್ಲದವುಗಳಾಗಿದ್ದವು. ಅವಳು ಭಾವನಾ ಪ್ರಪಂಚದಲ್ಲಿ ಭ್ರಮಣಮಾಡು ತ್ತಿದ್ದ ಕುಮಾರಿ. ಅಶೋಕನಲ್ಲಿ ತನ್ನ ಸಂಪೂರ್ಣ ಮಹತ್ವಾಕಾಂಕ್ಷೆಯ ಅಧಿ ಕಾರವನ್ನು ಸ್ಥಾಪಿಸಲು ಎಂದು ಸಾದ್ಯವಾಗಲಿಲ್ಲವೋ ಅಂದಿನಿಂದ ತನ್ನನ್ನು ತಾನು ದುಃಖಿನಿ, ಅಭಾಗಿನಿ ಎಂದು ತಿಳಿಯಲಾರಂಭಿಸಿದಳು.

ಒಂದು ವೇಳೆ ಅರುಣಾಳ ಕೋಮಲವಾದ ಮಡಿಲಲ್ಲಿ ಒಂದು ಶಿಶುವು ಆಡಲಾರಂಭಿಸಿತೆಂದರೆ ಪ್ರಾಯಶಃ ಅದು ಒಂದು ಸ್ವಚ್ಛವಾದ ಪ್ರೇಮಪಾಶವಾಗ ಬಹುದೆಂದೂ, ಅದು ತಮ್ಮಿಬ್ಬರನ್ನೂ ನಿಕಟ ಸಂಪರ್ಕಕ್ಕೆ ತರಬಹುದೆಂದೂ ಅಶೋಕನು ಭಾವಿಸಿದ್ದನು. ಈ ಸಂಪರ್ಕವು ಸರ್ವಕಾಲಿಕವಾದ ಬಂಧನವಾಗಿ ಪರಿಣಮಿಸಿ, ಬಲವಾದ ಆಕರ್ಷಣೆಯಾಗಿದ್ದುಕೊಂಡು ಅವರ ವಿವಾಹವು ಹಾಗೆಯೇ ಕೊನೆಯ ತನಕ ಸಫಲವಾಗಬಹುದೆಂದೂ ಅವನು ತಿಳಿದುಕೊಂ ಡಿದ್ದನು.

ಆದರೆ ಅಕಸ್ಮಾತ್ತಾಗಿ ಈ ಕಲ್ಪನೆಯೂ ಭಂಗವಾಯಿತು. ಒಂದು ದಿನ ಬೆಳಿಗ್ಗೆ ಎದ್ದೊಡನೆ ಅಶೋಕನೊಡನೆ ಅರುಣಾಳು ಒಂದು ಬಗೆಯ ಅಭಿಮಾನ ದೊಂದಿಗೆ ಹೀಗೆಂದಳು:

"ನನ್ನ ಮಾತೃತ್ವದ ಸಂಕಲೆಯಿಂದ ನಾನು ಮುಕ್ತಳಾದೆ. ವರ್ತಮಾನ ಪತ್ರಿಕೆಯಲ್ಲಿ ಜಾಹೀರಾತಾದ ಮಾತ್ರೆಗಳು ಇದಕ್ಕೆ ಪೂರ್ಣ ಸಹಾಯಕ ವಾದುವು."

ಅಶೋಕನು ವಿಜ್ಞಾನದ ಈ ವಿಜಯದ ಕಥೆಯನ್ನು ಕೇಳಿ ದಂಗುಬಡೆದವ ನಂತಾದನು. ಅವನ ಸ್ವಪ್ನ ಮಹಲು ಮುರಿದು ಬಿತ್ತು. ಅವನ ಆಸೆ ನಿರಾಸೆಯಾಯಿತು. ಆಗ ಅವನ ಕೋಮಲ ಹೃದಯವು ಸೀಳಿದಂತೆ ಅವನಿಗೆ ಭಾಸವಾಯಿತು.

ಇದರಿಂದ ತಮ್ಮಿಬ್ಬರ ವಿವಾಹವು ಅಧಿಕ ದಿನಗಳ ವರೆಗೆ ಸ್ಥಾಯಿಯಾಗಿ ರಲಾರದೆಂಬುದು ಅಶೋಕನಿಗೆ ಸಂಪೂರ್ಣ ತಿಳಿಯಿತು. ಅವನ ಜೀವನದಲ್ಲಿ

ಅವನು ಅರುಣಾಳನ್ನು ವಿವಾಹವಾದುದು ಅಕ್ಷಮ್ಯವಾದ ಅಪರಾಧವೆಂದು ತಿಳಿದನು.

ಇಷ್ಟರಲ್ಲಿ ಅಬ್ದುಲ್ಲನು ಬಾದಾಮಿ ಬಣ್ಣದ ಒಂದು ಲಕ್ಕೋಟೆಯನ್ನು ತಂದು ಅಶೋಕನ ಕೈಗಿತ್ತನು.

ಒಡೆದು ನೋಡಿದಾಗ ಅವನು ತನ್ನ ವಿವಾಹದ ಒಂದು ತಿಂಗಳಮೊದಲು ಮರಿಯಮಳಿಗೆ ಬರೆದ ಪತ್ರ ಒಂದು ಸಿಕ್ಕಿತು. ಅದನ್ನು ಒಂದು ಹರಿದು ಹೋದ ಲಕ್ಕೋಟೆಯಿಂದ ತೆಗೆದನು. ಅದರ ಮೇಲೆ ಟಪ್ಪಾಲು ಆಫೀಸಿನ ಹಲವು ಮುದ್ರೆಗಳು ಬಿದ್ದಿದ್ದವು. ಎಲ್ಲೆಲ್ಲಿಗೋ ಹೋಗಿ ಸಾಧಾರಣ ಮೂರು ತಿಂಗಳ ಯಾತ್ರೆಯನ್ನು ಮುಗಿಸಿ ಆ ಪತ್ರವು ಅವನಲ್ಲಿಗೇ ಹಿಂದಿರುಗಿ ಬಂದಿದೆ. ಅವನು ಸೂಕ್ಷ್ಮವಾಗಿ ಮುದ್ರೆಗಳನ್ನು ಪರೀಕ್ಷಿಸಲಾರಂಭಿಸಿದ. ನಾಗಪುರ, ಬೈತೂಲ, ಪಾದರೀಪುರ, ಇಟಾರಸಿ, ಇತವಾರಿ ಮತ್ತು ಇಗತ್‌ಪುರಿ.... ಇನ್ನು ಮುಂದಿನ ಮುದ್ರೆಗಳನ್ನು ಓದಿ ಅರ್ಥಮಾಡಿಕೊಳ್ಳಲಾಗಲಿಲ್ಲ.

ಆ ಪತ್ರದಲ್ಲಿ ಅಶೋಕನು ತನ್ನ ವಿವಾಹವಾಗುವ ಅಭಿಪ್ರಾಯವನ್ನು ಸೂಚಿಸಿ, ಅವಳಿಂದ ಶುಭಕಾಮನೆಯನ್ನು ಕೇಳಿದ್ದನು. ತುಂಬಾ ಯೋಚಿಸಿ ಈ ನಿಶ್ಚಯವನ್ನು ಮಾಡಿದನೆಂದೂ ಅದರಲ್ಲಿ ಬರೆದಿತ್ತು. ಆದರೂ ಅವನ ಅಂತರ್ಯದಲ್ಲಿ ಅಶಾಂತಿ ಮತ್ತು ಭಯವು ಹೇಗೆ ಹರಡಿಕೊಂಡಿದೆ ಎಂಬುದೂ ಆ ಪತ್ರದಲ್ಲಿ ಬರೆಯಲಾಗಿತ್ತು. ಈ ಪ್ರಯೋಗವು ಸಫಲವಾದೀತೋ ಇಲ್ಲವೋ? ಆದರೂ ಈ ಅಪಾಯವನ್ನು ಅವನು ಎದುರಿಸಲು ನಿಶ್ಚಯಿಸಿದ್ದನು. ತನ್ನ ಕಲಾಸಾಧನೆಯಲ್ಲಿ ಪ್ರೇರಣೆ ಅಥವಾ ಪ್ರೋತ್ಸಾಹ ಸಿಗಬಹುದೇ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಈ ರೀತಿ ವಿವಾಹಿತನಾದನೇ?

ಕೊನೆಗೆ ಪಾದರೀಪುರವನ್ನು ಬಿಟ್ಟಂದಿನಿಂದ ಅವಳಿಂದ ಇವನಿಗೊಂದು ಪತ್ರವೂ ಇಲ್ಲವೆಂದೂ, ಆದ ಕಾರಣ ಯಾವ ಸಮಾಚಾರವೂ ತಿಳಿದಿಲ್ಲವೆಂದೂ ಬರೆದಿದ್ದನು. ಭಿಕ್ಷುಣಿಯ ದೀಕ್ಷೆಯಿಂದ ತನ್ನನ್ನು ತಾನು ಪಾರು ಮಾಡಿಕೊಂಡಿರಬಹುದೆಂದೂ, ಹಾಗೂ ಇಷ್ಟರಲ್ಲೇ ಯಾವುದಾದರೊಂದು ಸ್ವತಂತ್ರ ವೃತ್ತಿಯನ್ನು ಅವಲಂಬಿಸಿರಬಹುದೆಂದು ನಂಬಿದ್ದೇನೆ ಎಂದೂ ಬರೆದಿದ್ದನು.

ಹಾಗಿದ್ದರೆ ಮರಿಯಮಳಿಗೆ ಅಶೋಕನ ಮದುವೆಯ ಮಾತೇ ತಿಳಿಯದು. ಆದರೆ ಮರಿಯಮಳು ಈಗ ಎಲ್ಲಿದ್ದಾಳೆ? ಅವಳ ವಿಳಾಸವನ್ನು ತಿದ್ದಿ ಕೆಳಗಡೆ

ಅಂಚೆಯವರಿಂದ ಏನೋ ಬರೆಯಲಾಗಿತ್ತು. ಅದರಲ್ಲೂ ಇಟಾರಸೀ ಎಂಬುದ
ಮಾತ್ರ ಕಾಣಿಸುತ್ತಿತ್ತು. ಮಿಕ್ಕ ಭಾಗವೆಲ್ಲ ಹರಿದು ಹೋಗಿದೆ. ಪತ್ರ
ಮುಂದೆ ಎಲ್ಲಿಗೆ ಹೋಗಿದೆ ಎಂಬುದನ್ನು ಎಷ್ಟು ಪರಿಶೀಲಿಸಿದರೂ ಒಂದು
ಪ್ರಯೋಜನವಾಗಲಿಲ್ಲ.

ವಿವಾಹ ವಿಚಾರವಾಗಿ ಮರಿಯಮಳಿಗಿದ್ದ ಅಭಿಪ್ರಾಯವು ಅಸತ್ಯವಾ
ಅಶೋಕನ ಭಯವೇ ಸತ್ಯವಾಯಿತು. ಆದರೆ? ಈ ವಿನಾಶಕಾರಿಯಾದ
ಪರಾಜಯವು ಒಂದು ವೇಳೆ ಮರಿಯಮಳೊಂದಿಗೆ ವಿವಾಹವಾಗುತ್ತಿದ್ದರೆ ಸಂಭ
ವಿಸುತ್ತಿತ್ತೇ?

ಈ ದಿನ ಅವನು ಅರುಣಳೊಂದಿಗೆ ವಿವಾಹಸೂತ್ರದಿಂದ ಬಂಧಿತನಾಗಿ
ದ್ದಾನೆ. ಯಾವಳೋ ಅನ್ಯ ಸ್ತ್ರೀಯ ವಿಚಾರವಾಗಿ ಈ ರೀತಿಯ ಭಾವನೆ
ಗಳನ್ನು ಅವನು ಭಾವಿಸುವುದು ಅನುಚಿತ. ಇದರ ಪರಿಹಾರಕ್ಕಾಗಿಯೇ
ಎಂಬಂತೆ "ಅರುಣಾ" ಎಂದು ಕೂಗಿದನು.

ಅರುಣಾ ಬಂದಳು. ಸಮಾಧಾನದಿಂದ ಕೇಳಿದಳು "ಏನು ?"

"ಸಿನೆಮಾಕ್ಕೆ ಬರುವಿಯಾ ?"

ಈ ಅನಪೇಕ್ಷಿತ ಆಹ್ವಾನದಿಂದ ಅರುಣಾ ಸಂತೋಷಗೊಂಡಳು. ಇಂದು
ಅವಳ ಹೃದಯವು ಅಶೋಕನು ತನ್ನನ್ನು ಸಿನಿಮಾಕ್ಕೆ ಕರೆದುಕೊಂಡು ಹೋ-
ಗುವನೆಂಬ ಸೂಚನೆಯಿಂದಲೇ ತುಂಬಾ ಪ್ರಸನ್ನಗೊಂಡಿತು.

"ಯಾವಾಗ, ಯಾವುದು" ಅವಳು ಉತ್ಸಾಹದಿಂದ ಪ್ರಶ್ನಿಸಿದಳು.

"ಇವತ್ತೇ ಮೊದಲ ಆಟ, ನ್ಯೂ ಥಿಯೇಟರ್ಸ್ ಅವರ 'ಮುಕ್ತಿ' ಚಿತ್ರ
ಆರಂಭವಾಗಿದೆ."

"ಅಗತ್ಯವಾಗಿ ಹೋಗೋಣ!" ಅರುಣಾ ಮಕ್ಕಳಂತೆ ಕುಣಿದಾಡಲಾ
ರಂಭಿಸಿದಳು.

ಅಶೋಕನು ಈ ಸ್ತ್ರೀ-ಸಹಜ ಪ್ರಸನ್ನತೆಯನ್ನು ಕಂಡು ಮುಗುಳು ನಗೆ
ನಕ್ಕನು.

ಇಪ್ಪತ್ತಾರು

ಸಿನೇಮಾ ನೋಡಲು ಅಶೋಕನನ್ನು ಯಾವ ಉಲ್ಲಾಸವು ಪ್ರೇರೇಪಿತ್ತೋ ಅದೇ ಉಲ್ಲಾಸವು ಈಗಲೂ ಅವನಲ್ಲಿದೆ. ಇದನ್ನು ಕಂಡ ಅರುಣಾ—ಶ್ರೀಮತಿ ಮಾಯಾದೇವಿ ಅವರನ್ನು ಏತಕ್ಕೆ ನಮ್ಮಲ್ಲಿ ಟೀ-ಪಾರ್ಟಿಗೆ ಕರಿಯಾರದು ಎಂದು ಕೇಳಿದಳು. ಅವರಿಬ್ಬರೂ ಅವಳಲ್ಲಿಗೆ ಹಲವು ಬಾರಿ ಫಲಹಾಕ್ಕೆ ಹೋಗಿದ್ದರು.

ಸರಿ ! ಮುಂದಿನ ಶನಿವಾರ ಸಂಜೆ, ಇಂದಿನಿಂದ ಐದು ದಿನಗಳಲ್ಲಿ ಮಾಯಾದೇವಿಯನ್ನು ಆಹ್ವಾನಿಸುವುದೆಂದೂ ನಿಶ್ಚಯವಾಯಿತು. ಮಾಯಾದೇವಿಗೆ ಪತ್ರವನ್ನು ಕಳುಹಿದರು. ಆಮಂತ್ರಣವು ಸಂತೋಷದಿಂದ ಸ್ವೀಕೃತವಾಯಿತು.

ಆದರೆ ಶುಕ್ರವಾರದ ಮಧ್ಯಾಹ್ನದ ವೇಳೆಯಲ್ಲಿ ರಾಯಪುರದ ಶ್ರೀ. ಅಧಿಕಾರಿ ಅವರಿಂದ ಅವರ ಪತ್ನಿ ಅಸ್ವಸ್ಥಳಾಗಿದ್ದಾಳೆಂದೂ, ಅದಕ್ಕಾಗಿ ಅರುಣಾಳನ್ನು ಮೊದಲ ರೈಲಲ್ಲೇ ಅಲ್ಲಿಗೆ ಕಳುಹಿಸಿ ಕೊಡಬೇಕೆಂದೂ ಅಶೋಕನಿಗೆ ತಂತಿ ಬಂದಿತು. ಇದೇ ಚಿಂತೆಯಲ್ಲಿ ಆ ಹಗಲೆಲ್ಲ ಕಳೆಯಿತು. ರಾತ್ರಿಯ ಗಾಡಿಯಲ್ಲಿ ಅರುಣಾ ತಂದೆಯ ಮನೆಗೆ ಹೋದಳು. ಸ್ಟೇಶನ್‌ವರೆಗೆ ತಲುಪಿಸಲು ಅಶೋಕನೂ ಅವಳೊಡನೆ ಹೋಗಿದ್ದನು.

ಈ ಮಧ್ಯೆ ಮಧ್ಯಾಹ್ನವೇ ಮಾಯಾದೇವಿಗೆ ಅರುಣಾಳ ತಾಯಿಯ ಅನಾರೋಗ್ಯದ ದೆಸೆಯಿಂದ ನಾಳಿನ ಪ್ರೀತಿಭೋಜನವನ್ನು ನಿಲ್ಲಿಸಲಾಗಿದೆ ಎಂಬ ಖೇದ ಸೂಚನೆಯನ್ನು ಕೊಡಲಾಗಿತ್ತು. ಕೂಡಲೇ ಮಾಯಾದೇವಿ ಅಶೋಕನ ಮನೆಯವರೆಗೆ ಬಂದು ದಂಪತಿಗಳನ್ನು ಸಮಾಧಾನ ಪಡಿಸಿ ಹೋದಳು.

ಮರುದಿನ ಅರುಣಾಳಿಂದ ತಂತಿ ಬಂತು.

‘ ತಾಯಿಗೆ ಮಲೇರಿಯಾ ಆಗಿದೆ. ಚಿಂತೆಗೆ ಕಾರಣವಿಲ್ಲ. ನನ್ನ ಆಗಮನದಿಂದ ಅವರಿಗೆ ತುಂಬಾ ಸಮಾಧಾನ ಉಂಟಾಗಿದೆ.’

ಅಶೋಕನ ಮನಸ್ಸು ತುಸು ಹಗುರವಾಯಿತು. ಮಾಯಾದೇವಿಗೆ ತಂತಿಯನ್ನು ತೋರಿಸಿ ಬರಲು ಡ್ರೈವರನನ್ನು ಸೈಕಲ್ಲ ಕೊಟ್ಟು ಕಳುಹಿಸಿದ.

ಒಂದೂವರೆ ಘಂಟೆಯ ಬಳಿಕ ಆತ ಹಿಂತಿರುಗಿದ. ಬರುವಾಗ ಮಾಯಾದೇವಿಯು ಸುಂದರ ಅಕ್ಷರಗಳಲ್ಲಿ ಬರೆದಿದ್ದ ಒಂದು ಪತ್ರವನ್ನೂ ತಂದಿದ್ದ. ಚಿಂತೆ ದೂರವಾದುದಕ್ಕೆ ಹರ್ಷಪ್ರಕಟನೆ, ಮತ್ತು ಈ ಸಂತೋಷದ ಸಲುವಾಗಿ ಹಿಂದೆ ನಿಶ್ಚಯಿಸಿದ ಭೋಜನದ ಕಾರ್ಯಕ್ರಮವನ್ನು ಹಾಗೆಯೇ ಮುಂದರಿಸಬೇಕೆಂದು ಆ ಪತ್ರದಲ್ಲಿ ಬರೆದಿತ್ತು. ಆದರ ಆ ಪಾರ್ಟಿ ನಡೆಯುವುದು ಅಶೋಕನಲ್ಲಿ ಅಲ್ಲ, ಬದಲಾಗಿ ಮಾಯಾಳಲ್ಲಿ. ಭೇದವಿಷ್ಟೆ. ಅದರಲ್ಲೇ ಇನ್ನೊಂದು ಮುಖ್ಯ ವಿಷಯ. ಅವಳು ಅಶೋಕನನ್ನು ಕಂಡು ಒಂದೆರಡು ಮಾತನಾಡಬೇಕಾದ ಅವಶ್ಯಕತೆ. ಈ ವಿಚಾರವೂ ಪತ್ರದಲ್ಲಿ ಅಡಕವಾಗಿತ್ತು.

ಅಶೋಕನು ಇಂದು ಮಾಯಾದೇವಿಯ ಮೇಲಿನ ಆ ನಿಸ್ಸಾರ ಭಾವನೆಯನ್ನು ತ್ಯಜಿಸಿದ್ದನು. ಈ ರೀತಿಯ ನಿಸ್ಸಂಕೋಚ ವ್ಯವಹಾರವನ್ನು ಕಂಡ ಮಾಯಾ ತುಂಬಾ ಸಂತುಷ್ಟಳಾಗಿದ್ದಳು. ಈಗ ಅವಳಿಗೆ ಅಶೋಕನನ್ನು ಕಂಡಾಗ ಒಂದು ಬಗೆಯ ವಿಶೇಷವಾದ ಆತ್ಮೀಯತೆಯು ಕಂಡು ಬರಹತ್ತಿತು. ಈ ಪ್ರೇಮನಿಧಿಯ ಪ್ರಾಪ್ತಿಗಾಗಿ ಅವಳು ಏನೇನು ಬೇಕಾದರೂ ಮಾಡಲು ಸಿದ್ಧಳಾಗಿದ್ದಳು.

ಮಾಯಾವೇವಿಯ ನಡತೆಯಿಂದ ಅಶೋಕನಿಗೆ ಸಂದೇಹವಾಯಿತು. ಅಶೋಕನನ್ನು ಭೋಜನಾನಂತರ ಕುಳಿತುಕೊಳ್ಳುವ ಕೊಠಡಿಗೆ ಕರೆದೊಯ್ಯದೆ ಅವಳ ಶಯ್ಯಾಗಾರಕ್ಕೆ ಕರೆದೊಯ್ಯುವಂತೆ ಅವನಿಗೆ ಭಾಸವಾಯಿತು. ಅಶೋಕನು ಕೊಂಚ ಸ್ತಬ್ಧನಾಗಿ ಹಿಂದು ಮುಂದು ನೋಡುತ್ತಿದ್ದನು. ಇದನ್ನು ಮಾಯಾದೇವಿಯು ಕೂಡಲೇ ತಿಳಿದುಕೊಂಡಳು. “ಭಯ ಪಡಬೇಡಿ ಅಶೋಕ ಬಾಬೂ ಬನ್ನಿ, ನಾನೇನಾದರೂ ನಿಮ್ಮನ್ನು ಚಕ್ರಬಂಧ ಕೋಟೆಯೊಳಗೆ ಕರೆದೊಯ್ಯುವುದಿಲ್ಲ” ಎಂದಳು.

ಅಶೋಕನು ಸಂಕುಚಿತನಾಗಿ ಒಂದು ಕೋಚಿನ ಮೇಲೆ ಕುಳಿತನು. ಮಾಯಾದೇವಿಯು ಎದುರಿನ ಸೋಫಾದ ಮೇಲೆ ಮಂಡಿಸಿದಳು. ಈಗ ಅವಳ ಪ್ರತಿಯೊಂದು ಹಾವಭಾವಗಳಲ್ಲೂ ಆತ್ಮವಿಶ್ವಾಸವು ಬೊಟ್ಟಿಕ್ಕುತ್ತಿತ್ತು. ಆದರೆ ಅಶೋಕನು ಖಿನ್ನಮನಸ್ಕನಾಗಿದ್ದನು.

“ತಮ್ಮ ವೈವಾಹಿಕ ಜೀವನವು ಸುಖದಿಂದ ಸಾಗುತ್ತಿದೆ ತಾನೆ?”

ಎಂದೂ ಕೇಳದ ಈ ಪ್ರಶ್ನೆಯನ್ನು ಕೇಳಿ ಅಶೋಕನು ಆಶ್ಚರ್ಯಪಟ್ಟನು.

"ಸುಖವಾಗಿ ಸಾಗುತ್ತಿಲ್ಲವೆಂದು ಹೇಳಿದವರಾರು?"

"ಬೇರೆಯವರು ಹೇಳುವ ಅಗತ್ಯವೇನು? ನಾನೇ ಕೇಳುತ್ತಿದ್ದೇನೆ. ಈ ಅರುಣಾಳ ಮೋಹಜಾಲದಲ್ಲಿ ಹೇಗೆ ಸಿಲುಕಿಕೊಂಡಿರಿ?"

"ಸಿಕ್ಕಹಾಕಿಕೊಂಡಿಲ್ಲ...........ಪರೀಕ್ಷಿಸಿ ವಿವಾಹವಾಗಿದ್ದೇನೆ."

"ಮರಿಯಮಳನ್ನೆಲ್ಲಿ ಬಿಟ್ಟು ಬಂದಿರಿ ? ಸರಿಯಾಗಿ ಮಾಡಿದಿರಿ........ ಆ ಕಾಡುಹುಡಿಗಿಗಿಂತ ಅರುಣಾ ಅಧಿಕ ಸುಂದರಿಯಲ್ಲವೇ? ಆದರೆ ಆ ನಿಮ್ಮ ಕಲೆ, ಕಲಾಸಾಧನೆ, ಕಲಾಬೋಧನೆ ಮತ್ತು ಅದರ ಆರಾಧನೆ ಇವೆಲ್ಲ ಎಲ್ಲಿ ಮಾಯವಾದವು? ಇವೆಲ್ಲಾ ಒಬ್ಬ ಕೋಮಲಾಂಗಿಯ ಮೋಹಜಾಲದಲ್ಲಿ ಹುದುಗಿ ಹೋದವಲ್ಲವೇ ?"

"ವಿವಾಹವು ಆ ಸಾಧನೆಗೆ ಏನಾದರೂ ಅಡ್ಡಿ ಅಥವಾ ತಡೆಯನ್ನುಂಟು ಮಾಡುತ್ತಿದೆಯೇ, ಇಲ್ಲವೇ ಎಂಬ ಪ್ರಯೋಗವನ್ನು ಮಾಡುತ್ತಿದ್ದೇನೆ."

" ಆ ಪ್ರಯೋಗವು ವಿಫಲವಾಯಿತೆಂಬುವದನ್ನು ನಾನು ನೋಡುತ್ತಿದ್ದೇನೆ. "

" ಮಾಯಾದೇವೀ "

"ಏಕೆ ನಿಜವನ್ನು ಆಡಿದರೆ ಗಾಬರಿಗೊಳ್ಳುತ್ತೀರಿ ? ತಾವು ಒಬ್ಬ ಕ್ಷುದ್ರಳೂ, ತುಚ್ಛಳೂ ಆದ ;ಕಾಲೇಜು ವಿದ್ಯಾರ್ಥಿನಿಯಳೊಂದಿಗೆ ವಿವಾಹ ಮಾಡಿಕೊಂಡಿದ್ದೀರಿ...........ಇದು ನನಗೆ ತಿಳಿಯದೇ ? ನಿಮ್ಮ ಕಲೆಯನ್ನು ಅವಳು ಬೂದಿಗಿಂತಲೂ ಕಡೆಯಾಗಿ ಕಾಣುತ್ತಾಳೆ. ನಿಮ್ಮ ಈ ಉಚ್ಚ ಹೃದಯವನ್ನಾದರೊ ಅದಕ್ಕಿಂತಲೂ ಕೀಳ್ಮಟ್ಟದ್ದಾಗಿ ಕಾಣುತ್ತಾಳೆ."

"ಮಾಯಾದೇವೀ, ನಿಮಗೆ ವೈಯುಕ್ತಿಕವಾದ ಮಾತುಗಳನ್ನಾಡುವ ಅಗತ್ಯವೇನು ?"

"ಬಹುಶಃ ಈ ವಿಷಯಗಳನ್ನು ಬಹಿರಂಗ ಪಡಿಸುವ ಸಾಮರ್ಥ್ಯ ತಮ್ಮಲಿಲ್ಲ" ಮಾಯಾದೇವಿಯು ಕೃದ್ಧಳಾಗಿ ಹೇಳಿದಳು. " ಈ ರೀತಿಯಾದರೆ ಕಾರ್ಯ ಸಾಗುವುದು ಹೇಗೆ ಅಶೋಕ್ ಬಾಬೂ ? ನೀವು ನಿಮ್ಮನ್ನೇ ಎಷ್ಟು ಕಾಲ ಮೋಸ ಮಾಡಲು ಸಾಧ್ಯ? ಸ್ತ್ರೀಯ ಮೋಹವು ನಿಮ್ಮನ್ನೆಂದೂ ದೂರದಿಂದ ಕೂಡ ಸೋಂಕಲಾರದೆಂಬ ಅಭಿಪ್ರಾಯವು ನಿಮ್ಮದಾಗಿದ್ದಿತಲ್ಲವೇ? ಎಲ್ಲಿ ಹೋಯಿತು ಆ ನಿಮ್ಮ ಧ್ಯೇಯ ? ನನ್ನ ಪ್ರಣಯ ಯಾಚನೆಯನ್ನು ಒದು

ಹೋದಿರಿ. ಆದರೆ ಮತ್ತೆ ಆ ಹಳ್ಳಿಯ ಹುಡುಗಿಯತ್ತ ಮನಸ್ಸು ಚಲಿಸಿದಿರಿ. ಸರಿ, ಅದೇನೋ ಒಂದು ರೀತಿ. ಗಂಡಸರು ಹೆಚ್ಚಾಗಿ ಹಾಗೆ ಮಾಡುವುದುಂಟು. ಈಗ ಅರುಣಳ ಲಾವಣ್ಯಕ್ಕೆ ಮುಗ್ಧರಾಗಿದ್ದೀರಿ. ನಿಮ್ಮ ಕಲೆ ಎಲ್ಲಾ ನಾಶವಾಯಿತು. ಅರುಣಾಳಲ್ಲಾದರೂ ತಾವು ಅಂತಹ ಯಾವ ಭವ್ಯ ವಸ್ತುವನ್ನು ಕಂಡಿರಿ? ಹೇಳಿ—ರೂಪವೇ? ಅವಳಿಗಿಂತ ನಾನೇನೂ ಕಡಿಮೆಯವಳಲ್ಲ ಎಂಬುದನ್ನು ಖಂಡಿತವಾಗಿಯೂ ಹೇಳಬಲ್ಲೆ. ಧನವೇ? ಅದೇ ಆದರೆ ಅವಳ ಅಪ್ಪಂದಿರಂತಹ ಹತ್ತು ಜನರನ್ನು ನಾನು ಕ್ರಯಕ್ಕೆ ತೆಗೆದುಕೊಳ್ಳಬಲ್ಲೆ. ಬುದ್ಧಿಯೇ? ಇದರಲ್ಲಾದರೂ ಅವಳು ಕಾಲೇಜಿನಲ್ಲಿ ಓದುವ ಬರಿಯ ಮುಗ್ಧೆ ಮಾತ್ರ. ಬಾಕಿ ಉಳಿದದ್ದೆಂದರೆ ಕಲೆಯ ಮಾತು. ಅವಳಿಗಿಂತ ನೂರು ಪಾಲು ಕಲೆಯ ಮೇಲೆ ನನಗೆ ಅಭಿರುಚಿ ಇದೆ. ಅವಳಲ್ಲಿ ಏನನ್ನು ಕಂಡು ನನ್ನನ್ನು ತ್ಯಜಿಸಿ ಅವಳನ್ನು ಅರ್ಚಿಸಿದಿರಿ ಎಂಬುದನ್ನು ತಾವು ಹೇಳಬಲ್ಲಿರಾ?"

"ಈ ರೀತಿ ವ್ಯಕ್ತಿಗತ ಗುಣದೋಷಗಳ ಚರ್ಚೆಯಿಂದ ಪ್ರಯೋಜನವಾದರೂ ಏನು? ಆಗಿ ಹೋದುದನ್ನು ಮರೆತು ಬಿಡುವುದೇ ಲೇಸು."

"ತಾವು ಮರೆಯಬಹುದು. ಆದರೆ ನಾನು! ಹೇಗೆ ಮರೆಯಲು ಸಾಧ್ಯ-? ನನ್ನ ಪ್ರಣಯ ಯಾಚನೆಯನ್ನು ತಿರಸ್ಕರಿಸಿ, ಮರಿಯಮಳ ಬಾಹು ಪಾಶಗಳಲ್ಲಿ ಸಿಕ್ಕಿಕೊಳ್ಳಲು ತಮಗೆ ಸಂಕೋಚವೆನಿಸಲಿಲ್ಲವೇ? ಈಗ ಪುನಃ ಮರಿಯಮಳನ್ನು ಒದ್ದು, ಅರುಣಾಳನ್ನು ಹಿಂಬಾಲಿಸಿದಿರಿ! ಅರುಣಳಿಗಿಂತಲೂ ಸುಂದರಿಯೊಬ್ಬಳು ಸಿಕ್ಕರೆ ಅರುಣಾಳಿಗೂ ಮೋಸ ಮಾಡುವಿರಲ್ಲವೇ?"

ಅಶೋಕನು ತುಂಬಾ ಕುಪಿತನಾದನು. ಆಗ ಅವನೆಂದ— "ನಿಮಗೇನಾಗಬೇಕು ಈ ವಿಚಾರಗಳನ್ನೆಲ್ಲ ಕಟ್ಟಿಕೊಂಡು. ನನ್ನ ಜೀವನದ ಹೊಣೆಯು ನನಗೆ—ಇದರ ವಿವರಣೆಯನ್ನು ನಿಮ್ಮ ಮುಂದೆ ಇಡಬೇಕೆಂಬುದೇನಿದೆ? ನನ್ನ ಮರಿಯಮ್ ಮತ್ತು ಅರುಣಾ ಇವರಿಬ್ಬರನ್ನೂ ಒಂದೇ ಸಮನಾಗಿ ಅಪಮಾನ ಪಡಿಸುತ್ತಿದ್ದೀರಲ್ಲ? ಇದನ್ನು ನಾನೆಂದೂ ಸಹಿಸಲಾರೆ."

"ಓಹೋ, ಮರಿಯಮಳಿಗೆ ತಮ್ಮ ಹೃದಯದಲ್ಲಿ ಇನ್ನೂ ಸ್ಥಾನವಿದ್ದಂತೆ ಕಾಣುತ್ತಿದೆ.

"ಮಾಯಾದೇವಿ! ನಿಮ್ಮ ನಾಲಿಗೆಯ ಮೇಲೆ ನಿಮಗೆ ಹಿಡಿತವಿಲ್ಲವೇ?"

" ನಿಜವನ್ನು ಹೇಳುವದಕ್ಕೆ ನನಗೇತರ ಭಯ. "

" ಸರಿ. ಹಾಗಾದರೆ — ಆ ನಿಮ್ಮ ನಿಜವನ್ನು ಕಟ್ಟಿಡಿರಿ.........ನಾನು ಹೋಗುತ್ತೇನೆ " ಎನ್ನುತ್ತ ಅವನು ಸಿಟ್ಟಿನಿಂದ ಎದ್ದು ಹೊರಡಲು ಉದ್ಯುಕ್ತನಾದನು.

ಮಾಯಾದೇವಿಯು ಕೂಡಲೆ ಅವನ ಕೈಹಿಡಿದು ಝುಟ್ಟೆಂದು ಕೂರಿಸಿ ಹೇಳಲಾರಂಭಿಸಿದಳು. " ಈ ರೀತಿ ಸುಲಭವಾಗಿ ತಾವು ಹೊರಟು ಹೋಗಲಾರಿರಿ ಅಶೋಕ್ ಬಾಬೂ. ತಮಗೆ ನನ್ನ ಸತ್ಯಸಂದೇಶವು ಕಹಿಯಾಗುವುದಲ್ಲವೇ ? ನಿಮ್ಮ ವೈವಾಹಿಕ ಜೀವನವು ನನ್ನ ಮುಷ್ಟಿಯೊಳಗಿದೆ ಎಂಬುದು ತಮಗೆ ಗೊತ್ತಿದೆಯೆ ? ನಾನು ಇಚ್ಛಿಸುವುದೇ ಆದರೆ ಒಂದೇ ಕ್ಷಣದಲ್ಲಿ ಅದನ್ನು ಚೂರು ಚೂರಾಗಿಸಿ, ಪ್ರಪಂಚದ ಮುಂದೆ ತಮ್ಮ ದುರವಸ್ಥೆಯ ಡಂಗುರವನ್ನು ಬಾರಿಸಬಲ್ಲೆ. ಮರಿಯಮಳ ಕಥೆ ಅರುಣಾಳಿಗೆ ತಿಳಿಸಿದರೆ ನಿಮ್ಮ ಗತಿ ಏನಾಗಬಹುದು, ಎಂಬ ಯೋಚನೆಯಾದರೂ ನಿಮಗಿದೆಯೇ ? "

ಮಾಯಾದೇವಿಯ ಈ ಬೆದರಿಕೆಯ ನುಡಿಗಳಿಂದ ಅಶೋಕನು ನಿಜವಾಗಿಯೂ ಭಯಪಟ್ಟನು. ಇದನ್ನು ತಿಳಿದು ಮಾಯಾದೇವಿಯು ಅವನ ಬಳಿಗೆ ಬಂದು ಹೇಳಿದಳು : " ಹೆದರಬೇಡಿ. ನಾನು ಈ ಬಗೆಯಾಗಿ ತಮ್ಮ ಸರ್ವನಾಶವನ್ನು ಮಾಡಲಾರೆ. ಅರುಣಾ ನನ್ನ ಗೆಳತಿ " ಮಾಯಾದೇವಿ ಹೇಳುತ್ತ ಹೋದಳು— " ಈಗಲೂ ಕೂಡ ಸರ್ವನಾಶದಿಂದ ಉಳಿದುಕೊಳ್ಳಲು ಮಾರ್ಗವನ್ನು ಮಾಡಿಕೊಳ್ಳಬಹುದು. ಮತ್ತು ಈ ಪ್ರಶ್ನೆಯು ಕೊನೆಯವರೆಗೂ ನಿಶ್ಚಯವಾಗಬಹುದು. "

" ಯಾವ ಮಾರ್ಗ ? "

" ಓಹ್ಹೋ, ಏನು ಶಿಕೆ ! " ಎನ್ನುತ್ತ ಮಾಯಾದೇವಿಯು ತನ್ನ ಹೆಗಲ ಮೇಲಿನ ಸೀರೆಯ ಸೆರಗನ್ನು ಕೆಳಗೆ ಬಿಟ್ಟಳು. ಇದರಿಂದ ಅವಳ ಉರೋಭಾಗವವು ವಸ್ತ್ರರಹಿತವಾಯಿತು. ಹಾಗೆಯೇ ಅವಳ ಎದೆ ಮತ್ತು ಕತ್ತಿನ ಕೆಳಭಾಗದ ಅಂಗವು ದೃಷ್ಟಿಗೋಚರವಾಯಿತು. ಅಶೋಕನು ಈ ಲಜ್ಜಾರಹಿತ ಭಾವವಿಲಾಸವನ್ನು ಕಂಡು ತಾನು ನಾಚಿಕೆಪಟ್ಟು ದೃಷ್ಟಿಯನ್ನು ಕೆಳಗಿಳಿಸಿದನು. ಮಾಯಾದೇವಿಯು ಹತ್ತಿರದ ಮೇಜಿನ ಮೇಲಿದ್ದ ಜಪಾನೀ ಬೀಸಣಿಗೆಯನ್ನು ತೆಗೆದುಕೊಂಡು ಗಾಳಿ ಬಿಸಿಕೊಳ್ಳಲಾರಂಭಿದಳು. ಅವರಿಬ್ಬರೂ ಈಗ ಒಬ್ಬರಿ

ಗೊಬ್ಬರು ಬಹು ಸಮೀಪದಲ್ಲಿ ಕುಳಿತಿದ್ದಾರೆ. ಒಬ್ಬರ ಶ್ವಾಸೋಚ್ಛ್ವಾಸದ ಗಾಳಿಯ ಅನುಭವವು ಇನ್ನೊಬ್ಬರಿಗೆ ಆಗುವಷ್ಟು ಹತ್ತಿರ ಹತ್ತಿರವಾಗಿ ಅವರಿಬ್ಬರೂ ಕುಳಿತಿದ್ದಾರೆ.

"ಹೇಳಿ ಹಾಗಾದರೆ ತಾವು ಸಿದ್ಧರಿದ್ದೀರಿ ತಾನೆ?" ಮಾಯಾದೇವಿಯು ಕುಟಿಲ ಮಂದಹಾಸದೊಡನೆ ಕೇಳಿದಳು.

"ಏನು, ಯಾವುದಕ್ಕೆ?" ಅಶೋಕನು ಭಯಗೊಂಡವನಾಗಿ ಕೇಳಿದನು.

"ಅದೇ ಹಿಂದಿನ ಪ್ರಶ್ನೆಯನ್ನು ನಿಶ್ಚೈಸಲು .... ಎಂದೆಂದಿನ ವರೆಗೂ........"

"ಹೇಗೆ?"

"ತಾವು ಇಷ್ಟು ಕೂಡ ತಿಳಿಯಲಾರಿರಾ :ಅಶೋಕ್ ಬಾಬೂ?" ಮಾಯೆಯು ಯಾವಾಗ ಬೀಸಣಿಗೆಯನ್ನು ಮುಚ್ಚಿದಳೆಂದು ಗೊತ್ತಿಲ್ಲ. ಒಂದೇ ನಿಮಿಷದಲ್ಲಿ ತನ್ನ ಎರಡೂ ಗೌರವರ್ಣದ ಕೈಗಳನ್ನು ಮುಂದಕ್ಕೆ ಚಾಚಿ ಅವಳು ಅಶೋಕನ ಕತ್ತನ್ನು ಮುತ್ತಿದಳು. "ನೀವು ನನ್ನನ್ನು ಸ್ವೀಕರಿಸುವದೇ ಆದರೆ ಆ ಪ್ರಶ್ನೆಯು ಸದಾಕಾಲಕ್ಕೂ ಇತ್ಯರ್ಥವಾದಂತಾಗುವದು. ಯಾವುದಕ್ಕೆ ತಾವು........"

ವಾಕ್ಯವಿನ್ನೂ ಪೂರ್ಣವಾಗುವುಕ್ಕೆ ಎಡೆಗೊಡದೆ ಮಾಯಾದೇವಿಯು ತನ್ನ ಕೆಂಪುಕೆಂಪಾದ ತುಟಿಗಳನ್ನು ಅಶೋಕನ ತುಟಿಗಳ ಮೇಲಿಟ್ಟಳು. ಅಶೋಕನ ಶರೀರವು ಯಾವುದೊ ಒಂದು ವಿಚಿತ್ರವಾದ ಅಸಹ್ಯ ಅರುಚಿಯ ವೇದನೆಯಿಂದ ನಡುಗಿಕೊಂಡಿತು. ಕ್ಷಣವು ಕಳೆಯುವುದರೊಳಗಾಗಿ ಅಶೋಕನು ತನ್ನ ಎರಡೂ ಕೈಗಳಿಂದ ಮಾಯಾಳ ವಸ್ತ್ರವಿಹೀನ ಭುಜಗಳೆರಡನ್ನೂ ಹಿಡಿದು ಹಿಂದಕ್ಕೆ ತಳ್ಳಿದನು. ಪುನಃ ದೃಢಮನಸ್ಕನಾಗಿ ಎದ್ದು ನಿಂತನು. ಮಾಯಾದೇವಿಯು ರಭಸದಿಂದ ಹಿಂದಕ್ಕೆ ತಳ್ಳಲ್ಪಟ್ಟಳು. ಅವಳ ಶಿರವು ಕುರ್ಚಿಯ ತೋಳಿಗೆ ತಾಕಿ ತುಸು ಪೆಟ್ಟು ತಗಲಿತು.

"ಛೀ........ಮಾಯಾದೇವೀ, ಅರುಣಾ ನಿಮ್ಮ ಗೆಳತಿಯಲ್ಲವೇ? ಅವಳ ಮರೆಯಲ್ಲಿ ಅವಳಿಗೆ ಈ ರೀತಿ ವಿಶ್ವಾಸಘಾತ ಮಾಡಲು ನಿಮಗೆ ನಾಚಿಕೆ-ಭಯ ಎರಡೂ ಇಲ್ಲವೇ?"

ಮಾಯಾದೇವಿಯು ಬಿದ್ದಲ್ಲೇ ಚಡಪಡಿಸುತ್ತಿದ್ದಳು. ಆಗ ಅಲ್ಲಿಂದಲೇ

ಅವಳು ಕ್ರೋಧಾಗ್ನಿಯನ್ನು ಕಾರುತ್ತ ಗರ್ಜಿಸಿದಳು : "ಚೆನ್ನಾಗಿ ಯೋಚಿಸಿ ಅಶೋಕ್ ಬಾಬೂ ? ತಮಗೆ ನನ್ನ ಶಕ್ತಿಯ ಅರಿವಿಲ್ಲ. ತಮ್ಮ ಮನೆಯನ್ನು ಮಸಣವನ್ನಾಗಿ ಮಾಡಿ, ತಮ್ಮ ಮಾನ-ಮರ್ಯಾದೆಗಳ ಶವವನ್ನೆತ್ತಿಸದಿದ್ದರೆ ನನ್ನ ಹೆಸರು ಮಾಯಾ ಅಲ್ಲ ! "

ಅಶೋಕನು ಆ ನಾರಿಯ ಚಂಡಿಯಾಕೃತಿಯನ್ನು ಕಂಡು ಗಾಬರಿಯಾದನು. ಸಂತಪ್ತ ನಾರಿಯ ಇಂತಹ ಉಗ್ರ ರೂಪವನ್ನು ಅವನು ಹಿಂದೆಂದೂ ಕಂಡಿಲ್ಲ. ಅವನು ಅಸಹಾಯನಾಗಿ ಕುರ್ಚಿಯ ಬಳಿ ಹೋಗಿ 'ಧಮ್' ಎಂದು ಅದರಲ್ಲಿ ಬಿದ್ದನು. ಏನನ್ನು ಮಾಡುವುದು ಏನು ಬಿಡುವುದು ಎಂಬುದು ಆಗ ಅವನಿಗೆ ಹೊಳೆಯಲಿಲ್ಲ.

ಅವನ ಆತ್ಮದೊಳಗೆ ಒಂದು ದೊಡ್ಡ ಕ್ರಾಂತಿ ಎದ್ದಿತು. ಈ ದಿನ ಅವನ ಪ್ರತಿಷ್ಠೆ, ಮಾನ, ಮರ್ಯಾದೆಗಳ ಸರ್ವನಾಶವಾಗಲಿದೆ. ಅವನು, ಅವನ ಜೀವನ, ಸರ್ವಸ್ವವೂ ಇಂದು ಮಣ್ಣುಪಾಲಾಗುವುದು.

" ಮಾಯಾದೇವೀ, ಈ ರೀತಿ ನನ್ನನ್ನು ಕೆಡಿಸುವುದರಿಂದ ನಿಮಗೇನು ಲಾಭವಾಗುವದು ? " ಅಶೋಕನು ವಿನಯದಿಂದ ಪ್ರಶ್ನಿಸಿದನು.

" ಯಾಕಾಗದು ? ತಾವು ನನ್ನ ಹೃದಯದ ಕೂಗನ್ನು ಕೇಳಿಯೂ ಕೂಡ ಅದನ್ನು ಮೂಲೆಗೆ ತಳ್ಳಿ ನನ್ನ ನಾಶವನ್ನು ಮಾಡಿದಿರಿ .... ಅದು ? "

ಅಶೋಕನು ಹತಾಶನಾಗಿ ತಲೆ ತಗ್ಗಿಸಿದನು. ಈಗ ಅವನು ಮಾಯಾದೇವಿಯ ಇಷ್ಟವನ್ನು ಸಲ್ಲಿಸಬೇಕು, ಇಲ್ಲವೇ ತನ್ನ ಮಾನ-ಪ್ರತಿಷ್ಠೆಗಳನ್ನು ಮಣ್ಣುಗೂಡಿಸಬೇಕು.

ದೀರ್ಘವಾದ ಹೃದಯಮಂಥನದ ನಂತರ ಅಶೋಕನು ಒಂದು ನೆಲೆಯನ್ನು ಮುಟ್ಟಿದನು. ಮಾಯಾದೇವಿಯು ಏನು ಬೇಕಾದರೂ ಮಾಡಿಕೊಳ್ಳಲಿ, ಪ್ರತೀಕಾರವನ್ನೇ ಮಾಡಬೇಕೆಂದಿದ್ದರೆ ಅದನ್ನೇ ನೆರವೇರಿಸಲಿ. ಆದರೆ ನಾನು ಮಾತ್ರ ಎಂದೂ ಅವಳಿಗೆ ಮಣಿಯಲಾರೆ ಎಂದು ನಿಶ್ಚೈಸಿಕೊಂಡನು.

ಮತ್ತೆ ಎದ್ದು ನಿಂತ ಅಶೋಕ. ಈಗ ಅವನು ಕೈಕಾಲುಗಳು ನಡುಗುತ್ತಿರಲಿಲ್ಲ, ಹೃದಯವು ಬಡಬಡಿಸುತ್ತಿರಲಿಲ್ಲ, ಅಥವಾ ತಲೆಯು ತಿರುಗುತ್ತಲೂ ಇರಲಿಲ್ಲ.

" ಏನೆಂದು ನಿಶ್ಚಯವಾಯಿತು ? " ಮಾಯಾದೇವಿಯು ಗಂಭೀರ ವಾಣಿ ಯಿಂದ ಪ್ರಶ್ನಿಸಿದಳು.

" ನಿಶ್ಚಯವೇ ? ನಿಮ್ಮಂತಹ ಮಾಯಾವಿನಿಯರ ಅಮಂಗಲಕರವಾದ ಪಾಶಗಳಿಂದ ಬಂಧಿಸಿಕೊಳ್ಳಲು ಈ ಅಶೋಕನೆಂದೂ ಸಿದ್ಧನಿಲ್ಲ. ಒಂದು ಕ್ಷಣಕ್ಕೂ ಇದಕ್ಕೆ ಸಿದ್ಧನಿಲ್ಲವೆಂದು ತಿಳಿಯಿರಿ. "

" ಮತ್ತೆ ಯೋಚಿಸಿ ಅಶೋಕ್ ಬಾಬೂ ! ನನ್ನನ್ನು ನೀವಿನ್ನೂ ಸರಿ ಯಾಗಿ ಅರ್ಥ ಮಾಡಿಕೊಂಡಿಲ್ಲ. " ಮಾಯಾದೇವಿಯು ಹೇಳಿದಳು. ಆದರೆ ಈ ಬಾರಿ ಅವಳ ಭಾಷಣದಲ್ಲಿ ಮೊದಲಿನ ಬೆದರಿಕೆ ಇರಲಿಲ್ಲ. ಅದೇಕೊ ತಿಳಿಯದು.

" ನಿಮ್ಮನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. " ಅಶೋ ಕನು ನಿಶ್ಚಲನಾಗಿ ಹೇಳಿದನು. " ಜೊತೆಗೆ ನಿಮ್ಮಂತಹ ಅತಿವಿಲಾಸಿನಿಯರು ಸುಖವಾಗಿರುವವರ ಜೀವನದಲ್ಲಿ ವಿಷಬೀಜವನ್ನು ಬಿತ್ತುವ ಕೆಲಸದವರೆಂಬು ದನ್ನು ಚೆನ್ನಾಗಿ ಬಲ್ಲೆ. ಅದರ ಪರಿಣಾಮವೂ ಭಯಂಕರವಾಗಿರುವುದೆಂಬುದೂ ಗೊತ್ತಿದೆ.........ಆದರೂ.........ನಾನು ಹೋಗುತ್ತೇನೆ. "

ಅವನು ಮಾಯಾಳ ಕಡೆಗೆ ಬೆನ್ನು ತಿರುಗಿಸಿ ಹೋಗುವವನಿದ್ದ, ಅಷ್ಟರಲ್ಲೇ ಅವನಿಗೆ ಮೆಲ್ಲಗೆ ಅಳುವ ದನಿಯು ಕೇಳಿಸಿತು. ಆದ್ದರಿಂದ ನಿಂತಲ್ಲಿಯೇ ನಿಂತನು. ಹಿಂತಿರುಗಿ ನೋಡಿದಾಗ ಅವನು ಕಂಡ ದೃಶ್ಯ ಮಾಯಾದೇವಿಯು ತನ್ನ ರೇಶ್ಮೆ ಸೀರೆಯೊಳಗೆ ಮುಖವನ್ನಿಟ್ಟು ಅಳುತ್ತಿರುವುದು. ಅವನು ಅಲ್ಲಿಂ ದಲೇ ಅಂದನು : " ನನ್ನ ಹೃದಯದಲ್ಲಿ ನಿಮ್ಮ ದುಃಖಿತ ಮತ್ತು ಏಕಾಕೀ ಜೀವನದ ವಿಷಯವಾಗಿ ಸಹಾನುಭೂತಿ ಇತ್ತು. ನಾನು ನಿಮ್ಮ ನಿಜವಾದ ಮಿತ್ರನಾಗಬೇಕೆಂದು ಬಯಸುತ್ತಿದ್ದೆ. ಆದರೆ ಆ ನಿಮ್ಮ ಸುಖಲೋಲುಪ ಮಹತ್ವಾಕಾಂಕ್ಷೆಯು ಅದರ ಬಾಗಿಲನ್ನೂ ಮುಚ್ಚಿತು. ನಿಮ್ಮ ವಿಚಾರದಲ್ಲಿ ಬರಿಯ ಶರೀರಕ್ಕೇನೇ ಬೆಲೆ ಇರುವುದು. ಆದರೆ ಅದು ಕ್ಷಣಭಂಗುರವೆಂಬುದನ್ನು ನೀವು ಮರೆತಿದ್ದೀರಿ. ಇಂದಲ್ಲದಿದ್ದರೆ ಇನ್ನೊಂದು ದಿನ ಇದರ ಸತ್ಯಾಂಶವು ಆಗದಿರದು. ಅಂದಿನ ತನಕ ಕೆಲವು ದಿನಗಳ ಬೆಳದಿಂಗಳಲ್ಲಿ ನಿಮ್ಮ ರಾಕ್ಷಸೀ ಕ್ರೀಡೆಗಳೆಷ್ಟಿದ್ದರೂ ಆಡಿಕೊಂಡು, ಎಷ್ಟು ಬಲಿಗಳನ್ನು ತೆಗೆದುಕೊಳ್ಳಬೇಕೆಂದಿ ದೆಯೋ ಅಷ್ಟೆಲ್ಲವನ್ನೂ ತೆಗೆದುಕೊಂಡೇ ಬಿಡಿ."

ಈ ಬಗೆಯ ತಿರಸ್ಕಾರದ ವಚನಗಳಿಂದ ಮಾಯಾದೇವಿಯ ಮೂಕ ರೋದನವು ಮತ್ತೂ ಹೆಚ್ಚಾಯಿತು. ಅವಳು ಉಕ್ಕೇರಿ ಬರುವ ದುಃಖದಿಂದ ಅಳಲಾರಂಭಿಸಿದಳು. ಶೂಲದಂತಹ ಭಾವನೆಗಳ ಆವೇಗದಿಂದ ಅವಳ ಬಾಯಿಯು ಒಂದು ಶಬ್ದವನ್ನಾದರೂ ಹೊರಡಿಸಲಿಲ್ಲ. ಅಶೋಕನ ವಾಕ್ಯಗಳು ಹರಿತವಾದ ಚೂರಿಯಂತೆ ಅವಳ ಹೃದಯವನ್ನು ಇರಿಯುತ್ತಿದ್ದವು. ಅವನ ಮಾತಿನಲ್ಲಿರುವ ನಿಜಾಂಶವು ಕೂಡಲೆ ಅವಳ ಅಂತರಾಳವನ್ನು ಮುಟ್ಟಿತು. ಕ್ರೋಧದ ಸ್ಥಾನವನ್ನು ಆತ್ಮಗ್ಲಾನಿಯು ಆವರಿಸಿತು. ಪರಸ್ಪರ ವಿರೋಧ ಭಾವನೆಗಳು ಒಂದು ವಿಚಿತ್ರವಾದ ಹೃದಯಮಂಥನವನ್ನುಂಟು ಮಾಡಿದವು. ಆಗ ಅವಳಿಗೆ ಹಲವು ಬಗೆಯ ಭಾವನೆಗಳುಂಟಾದವು. ಅವಳ ಅಂತರ್ಯವು ಪರಿತಾಪವೆಂಬ ಜ್ವಾಲೆಯಿಂದ ಭಸ್ಮವಾದಂತಾಯಿತು. ನವ ಜಾಗೃತಿಯು ಅವಳ :ನೇತ್ರಗಳನ್ನು ತೆರೆದಂತಾಯಿತು. ಮಿಂಚಿನ ಏಟಿನಂತೆ ಒಂದೇ ಒಂದು ನಿಮಿಷ ಮಾತ್ರದಲ್ಲಿ ಅವಳಿಗೆ ನಿಜವಾದ ಸತ್ಯದ ಅರಿವಾದಂತಾಯಿತು. ಅವಳ ಕಳೆದು ಹೋದ ಹಿಂದಿನ ಜೀವನವು ಭಯಂಕರ ಪ್ರಕಾಶದೊಡನೆ ನಗ್ನರೂಪದಲ್ಲಿ ಎದುರು ನಿಂತಂತೆ ಕಂಡಿತು.

ಈ ಭಾವನಾವೇಗಗಳಿಂದ ಅವಳಿಗೆ ಅಶೋಕನು ಅಲ್ಲಿಂದ ಯಾವಾಗ ಎದ್ದು ಹೋದನೆಂಬುದೂ ತಿಳಿಯಲಿಲ್ಲ: ಅವನ ಮೋಟಾರು ಹೊರಟ ಶಬ್ದವಾದಾಗ ಎಚ್ಚೆತ್ತಂತಾದಳು. ಹೊರಗೆ ನೋಡಿದಾಗ ಅವನ ಗಾಡಿಯು ಆವರಣವನ್ನು ದಾಟುತ್ತಿತ್ತು. ಅದನ್ನು ಕಂಡ ಅವಳಿಗೆ ಹೃದಯದಲ್ಲಿ ಒಂದು ಅಪಾರವಾದ ಶೂನ್ಯತೆಯು ಅನುಭವವಾಯಿತು. ಆಗ ಅವಳು ಒಂದೇ ಸಮನೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ಇಪ್ಪತ್ತೇಳು

ಮರುದಿನ ಪ್ರಾತಃಕಾಲ ಎಂಟು ಘಂಟೆಗೆ ಮಾಯಾದೇವಿಯು ಬಂದಿದ್ದಾಳೆಂಬ ಸೂಚನೆಯನ್ನು ಅಬ್ದುಲ್ಲನು ಅಶೋಕನಿಗಿತ್ತನು.

ಅವನ್ನು ಕೇಳಿದ ಅಶೋಕನೊಮ್ಮೆ ಉರಿದುಬಿದ್ದನು. ಆದರೆ ಅವನು

ಬಟ್ಟೆ ಬದಲಾಯಿಸಿಕೊಂಡು ಹೊರಗಡೆ ಬಂದಾಗ ಮಾಯಾದೇವಿಯ ಕಡೆಗೆ ನೋಡಿದವನೇ ಸ್ತಂಭಿತನಾದನು.

ಮಾಯಾದೇವಿಯು ಸಂಪೂರ್ಣ ಆಡಂಬರ ರಹಿತವಾದ ಒಂದು ಸಾಧಾರಣ ಬಿಳಿ ಸೀರೆಯನ್ನು ಉಟ್ಟುಕೊಂಡು ಬಂದಿದ್ದಳು. ಗಲ್ಲಗಳ ಮೇಲೆ ಪೌಡರಿನ ತೆಳುವಾದ ಲೇಪವಿರಲಿಲ್ಲ. ಅಥವಾ ತುಟಿಗಳ ಮೇಲೆ ಮೆತ್ತುವ ಕೆಂಪು 'ಲಿಪ್‌ಸ್ಟಿಕ್' ಕೂಡ ಇಲ್ಲ. ಮೊದಲಿನ ಹೆಮ್ಮೆ ಮತ್ತು ಅಹಂಕಾರಿ ಮಾಯಾದೇವಿಗಿಂತ ಈ ಆಡಂಬರ ರಹಿತ, ವಿನಯಶೀಲ, ನತಮಸ್ತಕಳಾದ ಮಾಯಾದೇವಿಯು ಎಷ್ಟು ಭಿನ್ನಳಾಗಿದ್ದಾಳೆ ಎಂಬುದನ್ನು ಊಹಿಸಬಹುದು.

"ನಮಸ್ತೇ" ಮಾಯಾದೇವಿಯು ಎದ್ದು ನಿಂತು, ಆದರಪೂರ್ವಕವಾಗಿ ತನ್ನೆರಡು ಕೈಗಳನ್ನೂ ಜೋಡಿಸಿದಳು. "ನಾನು ಇಷ್ಟು ಮುಂಜಾನೆ ಏತಕ್ಕೆ ಬಂದೆನೆಂಬ ಬಗ್ಗೆ ತಮಗೆ ಆಶ್ಚರ್ಯವಾಗಬಹುದು.... ನಾನು ತಮ್ಮಲ್ಲಿ ಕ್ಷಮಾಯಾಚನೆಗಾಗಿ ಬಂದಿದ್ದೇನೆ." ಎಂದಳು.

ಅಶೋಕನು ಅವಾಕ್ಕಾದನು. ಈ ಅನಿರೀಕ್ಷಿತ ಪರಿವರ್ತನೆಯನ್ನು ಕಂಡು ಅವನ ಆ ಮೊದಲಿನ ಉರಿಯು ಶಾಂತವಾಯಿತು.

"ಕುಳಿತುಕೊಳ್ಳಿ, ಕುಳಿತುಕೊಳ್ಳಿ. ಕ್ಷಮೆಯೇ ? ಏತಕ್ಕಾಗಿ ಕ್ಷಮೆ ? ಒಂದು ಮಿನಿಟು. ಬಂದೆ. ಅಬ್ದುಲ್ಲಾ, ಓ ಅಬ್ದುಲ್ಲಾ! ಟೀ ತೆಗೆದುಕೊಂಡು ಬಾ—ಬೇಗ ! " ಹಾಗೆಯೇ ಮಾಯಾದೇವಿಯ ಬಳಿಯಲ್ಲಿರುವ ಕುರ್ಚಿಯಲ್ಲಿ ಕುಳಿತ.

"ನಾನು ನಿನ್ನೆ ರಾತ್ರಿ ತಮ್ಮ ಅಪಮಾನವನ್ನು ಮಾಡಿದೆ.... ಮೊದಲೂ ಮಾಡಿದ್ದೆ. ಅವುಗಳೆಲ್ಲದಕ್ಕೂ ಈಗ ಕ್ಷಮೆ ಬೇಡಲು ಬಂದಿದ್ದೇನೆ. ತಮ್ಮನ್ನು ನಾನು ನಿಜವಾಗಿಯೂ ಗುರುತಿಸಲಿಲ್ಲ ಅಶೋಕ ಬಾಬೂ. ಇಂದಿನ ವರೆಗೆ ನಾನು ಯಾವ ಪುರುಷನ ಮೇಲೂ ನನ್ನ ಕೃಪಾದೃಷ್ಟಿಯನ್ನು ಬೀರಿರಲಿಲ್ಲ. ಹಾಗೆಯೇ ಆತನೂ ನನ್ನ ಕಾಲುಗಳ ಮೇಲೆ ಬಿದ್ದು ಹೊರಳಾಡದೆ ಇರಲಿಲ್ಲ. ಆದರೆ ತಾವು ವೈಷಯಿಕ ವಾಸನೆಗಿಂತಲೂ ಮೇಲಿನ ಒಂದು ಉಚ್ಚ ಅನುಭವವನ್ನು ಪಡೆದವರೆಂಬುದನ್ನು ನಾನು ನಿನ್ನೆ ತಿಳಿದುಕೊಂಡೆ. ಮೊದಲು ಇದರಲ್ಲಿ ನನಗೆ ಪರಾಜಯವಾಯಿತು. ಆದ್ದರಿಂದ ಕ್ರೋಧ ಉಂಟಾಯಿತು. ಆದರೆ ನಿನ್ನೆ ಮಾತ್ರ ನನ್ನ ಕಣ್ಣುಗಳು ತೆರೆದುಕೊಂಡವು. ಮೊದಲು ನನಗೆ ತಾವು

ಎಷ್ಟು ಅಸ್ಪ್ರಾಶ್ಯರಾಗಿದ್ದಿರೊ ಅಷ್ಟೇ ಈಗಲೂ ಅಸ್ಪ್ರಾಶ್ಯರೆಂಬುದನ್ನು ಆ ತೆರೆದ ಕಣ್ಣುಗಳು ಕಂಡವು, ತಮ್ಮ ಪ್ರತಿಷ್ಠೆ ಮರ್ಯಾದೆಗಳಿಗೆ ಕೊಡಲಿ ಏಟು ಹಾಕಿ ತಮ್ಮ ಸರ್ವನಾಶ ಮಾಡುವುದೊಂದೇ ಬಾಕಿ ಇದೆ. ಆದರೆ ನಾನು ಅಷ್ಟು ನೀಚಳಲ್ಲ. ನನ್ನ ಈಗಿನ ಮಾತುಗಳಲ್ಲಿ ತಮಗೆ ವಿಶ್ವಾಸವಾಗುತ್ತಿದೆಯೇ ಅಶೋಕ ಬಾಬೂ ?"

ಅಶೋಕನು ಯಾವುದನ್ನೂ ಹೇಳಲಾರದಾದ. ಸುಮ್ಮಗೆ ಕುಳಿತಿದ್ದಂತೆಯೇ ಮಾಯಾಳ ಭಾಷಣವನ್ನು ಕೇಳುತ್ತಿದ್ದ. ಮಾಯಾಳು ಹೇಳುತ್ತಲೇ ಇದ್ದಾಳೆ.

"ನಿನ್ನೆ ನಾನು ಮೋಹದ ಆವರಣದೊಳಗೆ ಸಿಕ್ಕು ಅಂಧಳಾಗಿದ್ದೆ. ಆಗ ತಾವೇ ನನ್ನ ಉದ್ಧಾರವನ್ನು ಮಾಡಿದಿರಿ, ಈಗ ನನ್ನನ್ನು ಕ್ಷಮಿಸಲಾರಿರೇ ? "

ಒಂದು ಕ್ಷಣ ಅಶೋಕನು ಇದನ್ನು ನಂಬಲಿಲ್ಲ. ಆದರೆ ಮಾಯಾದೇವಿಯ ಒದ್ದೆ ಕಣ್ಣುಗಳು ಅಶೋಕನಿಗೆ ವಿಶ್ವಾಸವನ್ನು ಹೇಳುತ್ತಿದ್ದವು. ಈಗ ಆ ರಮಣಿಯ ಹೃದಯವು ಯಥಾರ್ಥವನ್ನು ತಿಳಿದುಕೊಂಡು ಸಂತಾಪದ ಜ್ವಾಲೆಯಿಂದ ಧಗಧಗಿಸುತ್ತಿತ್ತು.

"ಇಲ್ಲ, ಇಲ್ಲ. ನಿಮ್ಮಿಂದ ಕ್ಷಮಾಪಣೆಯನ್ನು ಬೇಡದಿದ್ದರೆ ನನಗೆ ಶಾಂತಿ ಸಿಗಲಾರದು. ನನ್ನನ್ನು ಮನಃಸಾಕ್ಷಿಯಾಗಿ 'ಕ್ಷಮಿಸಿದ್ದೇನೆ' ಎಂದು ನೀವು ಹೇಳಲೇ ಬೇಕು."

"ಹಾಗೆಯೇ ಆಗಲಿ. ಅದರಿಂದಲೇ ತೃಪ್ತಿ, ಸಂತೋಷ ಎಂದಿದ್ದರೆ ಕೇಳಿ—ಹೇಳಿಯೇ ಬಿಡುತ್ತೇನೆ 'ಕ್ಷಮಿಸಿದ್ದೇನೆ'. ಆದರೆ ಯಥಾರ್ಥವಾಗಿ ಕ್ಷಮೆ-ಗಿಮೆಗಳನ್ನು ಕೋರುವ ಅಂತಹ ಯಾವ ಘಟನೆಗಳೂ ನಡೆದಿಲ್ಲ. "

"ಅದೇಕೆ ಯಾವುದೂ ಇಲ್ಲ? ನನ್ನ ಜೀವನದ ಹೊಣೆಗಾರಿಕೆಯನ್ನು ಬದಲಿಸುವುದಕ್ಕೆ ತಾವೇ ಜವಾಬ್ದಾರರಿದ್ದೀರಿ. ಇಂದಿನಿಂದ ನನ್ನ ಜೀವನದ ಒಂದು ಹೊಸ ಪರಿಚ್ಛೇದವು ಆರಂಭವಾಗಲಿದೆ. ಕಳೆದ ಹದಿನೈದು ವರ್ಷಗಳ ಆ ಹೊಲಸು ಜೀವನದ ಅಂತ್ಯವಾಯಿತು. ಆ ಮಾಯಾದೇವಿಯೂ ಗತಿಸಿದಳು........ ನಿನ್ನೆಯೇ ! ಈಗ ತಮ್ಮ ಮುಂದೆ ಬೇರೊಬ್ಬ ಸ್ತ್ರೀ ಕುಳಿತಿದ್ದಾಳೆ. ಇಲ್ಲಿಯ ವರೆಗೆ ನನ್ನ ಇಚ್ಛಾಶಕ್ತಿಯನ್ನು ಕುಕರ್ಮಗಳಲ್ಲಿ ಉಪಯೋಗಿಸುತ್ತಿದ್ದೆ.

ಇನ್ನು ಮುಂದೆ ಸತ್ಕರ್ಮಗಳಲ್ಲಿ ಉಪಯೋಗಿಸಬೇಕೆಂದು ನಿಶ್ಚಯಿಸಿದ್ದೇನೆ."

"ಮಾಯಾದೇವೀ, ಇಂದು ನಾನು ನನ್ನ ಅಂತರಾಳದಿಂದ ಹೊರಡುವ ಸಂತೋಷದ ಧ್ವನಿಯಿಂದ ನಿಮ್ಮನ್ನು ಪ್ರಶಂಸಿಸುತ್ತೇನೆ." ಅಶೋಕನು ದಯೆದುಂಬಿದವನಾಗಿ ಹೇಳಿದನು.

"ಈಗ ಅಂತಿಮ ಭಿಕ್ಷೆಯನ್ನು ಬೇಡುತ್ತೇನೆ. ತಾವು ಈಗಲೂ ಕೂಡ ನನ್ನ ಆಪ್ತಮಿತ್ರರಾಗಿಯೂ ಪಥಪ್ರದರ್ಶಕರಾಗಿಯೂ ಇರಬೇಕು. ಈ ಭಿಕ್ಷೆಯನ್ನು ಬೇಡುವವಳು ನವೀನ, ಪುನರುಜ್ಜೀವಿತ ಮಾಯಾ."

"ಸರಿ" ಅಶೋಕನೆಂದನು. ಅವನ ವಾಣಿಯಲ್ಲಿ ಒಂದು ತರದ ಕಂಪನವಿತ್ತು.

"ಧನ್ಯವಾದ, ಬಹಳ ಧನ್ಯವಾದ. ಇಂದು ತಾವು ಮಾಡಿದ ಉಪಕಾರವು ಅಸೀಮವಾದುದು. ಈ ದಿನ ನನ್ನ ಪುನರ್ಜನ್ಮವಾಯಿತು. ಈಗ ನಾನು ಹೋಗುತ್ತೇನೆ."

ಮಾಯಾದೇವಿಯು ಹೊರಡಲು ಅನುವಾದಳು. ಅಶೋಕನೂ ಎದ್ದು ನಿಂತನು. ಮಾಯಾದೇವಿಯು ಕೈಗೂಡಿಸಲು ತನ್ನ ಬಲಗೈಯನ್ನು ಅಶೋಕನ ಮುಂದೆ ಚಾಚಿದಳು. ಅಶೋಕನು ಅದನ್ನು ನಿಸ್ಸಂಕೋಚವಾಗಿ ಸ್ವೀಕರಿಸಿದನು.

ಅಶೋಕನ ಕೈಯನ್ನು ತನ್ನ ಎರಡೂ ಹಸ್ತಗಳಿಂದಲೂ ಮೆದುವಾಗಿ ಅಮುಕುತ್ತ ಮಾಯಾದೇವಿಯು ಸ್ನೇಹಪೂರ್ವಕವಾಗಿ ತನ್ನ ಹೃದಯದ ಸಮಸ್ತ ಭಾವಗಳೊಂದಿಗೆ ಒಂದು ಆರ್ತ ಸಂಬೋಧನೆಯನ್ನು ಸೇರಿಸಿ ಕೆಳದನಿಯಲ್ಲಿ ಅಂದಳು:

"ಅಶೋಕ್ ಬಾಬೂ!"

ಅಷ್ಟರೊಳಗೇನೇ ಮಾಯಾದೇವಿಯು ಅಶೋಕನೆದುರು ನೆಲದ ಮೇಲೆ ಮಂಡಿಯೂರಿ ಬಹು ಶ್ರದ್ಧೆಯಿಂದ ತನ್ನ ಮಸ್ತಕವನ್ನು ಅವನೆದುರು ತಗ್ಗಿಸಿದಳು.

ಅಶೋಕನು ಚಟ್ಟೆಂದು ಅವಳ ಬಲಗೈಯನ್ನು ಹಿಡಿದೆತ್ತಿ ಅವಳನ್ನು ನಿಲ್ಲಿಸಿದನು. ಅದರಿಂದ ಅವಳು ಅಶೋಕನ ಚರಣಧೂಳಿಯನ್ನು ತೆಗೆದುಕೊಳ್ಳಲಾರದಾದಳು. ಆಗ ಅಶೋಕನು ಅತ್ಯಂತ ಆದರದಿಂದ ಮಾಯಾದೇವಿಯ ಕೈ-

ಬೆರಳುಗಳನ್ನು ಮೆದುವಾಗಿ ಚುಂಬಿಸಿದನು.

ಒಂದೇ ನಿಮಿಷದೊಳಗೆ ಮಾಯಾದೇವಿಯು ಬಾಗಿಲು ಕಡೆಗೆ ಹೋಗು ತ್ತಿರುವುದನ್ನು ಅಶೋಕನು ಕಂಡನು.

ಅಶೋಕನು ನೋಡುತ್ತಿದ್ದಂತೆಯೇ ಮಾಯಾದೇವಿಯ ಮೋಟಾರು ತನ್ನದೇ ಆದ ಭರ್ ಭರ್ ಶಬ್ದವನ್ನು ಮಾಡುತ್ತ ಹೊರಟುಹೋಯಿತು.

ಅಬ್ದುಲ್ಲನು ಓಡುತ್ತ ಚಾ ತಟ್ಟೆಯನ್ನು ತಂದನು.

"ಹುಜೂರ್, ಮಾಯಾದೇವಿಯವರು ಹೊರಟೇ ಹೋದರೇ?"

"ಹೌದು, ಹೊರಟು ಹೋದಳು. ಓಹ್ ! ಟೀ ತರಲು ಹೇಳಿದ್ದೆನಲ್ಲವೆ? ಸರಿ, ಬಿಡು. ಅವಳ ಬದಲು ನಾನೇ ಕುಡಿದು ಬಿಡುತ್ತೇನೆ."

ಇಪ್ಪತ್ತೆಂಟು

ಸಂಜೆಯ ಏಳೂವರೆ ಘಂಟೆಯಾಗಿರಬಹುದು. ಆಕಾಶದಲ್ಲಿ ಮೇಘವು ಹಬ್ಬಿತ್ತು. ಗಾಳಿಯು ವೇಗವಾಗಿ ಚಲಿಸುತ್ತಿತ್ತು. ಜೂನ್‌ತಿಂಗಳ ಕೊನೆಯ ದಿನ. ವರ್ಷಋತುವು ಪ್ರಾರಂಭವಾಗಿತ್ತು. ರಸ್ತೆಯ ಬದಿಯಲ್ಲಿ ವಿದ್ಯುದ್ದೀಪ ಗಳು ತಮ್ಮದೇ ಆದ ಪ್ರಭೆಯಿಂದ ಕಂಗೊಳಿಸುತ್ತಿದ್ದವು.

ಒಬ್ಬ ಸ್ತ್ರೀ ಕೈಯಲ್ಲೊಂದು ಚಿಕ್ಕ ಗಂಟನ್ನು ಹಿಡಿದುಕೊಂಡು ಅಶೋಕ್ ಠಾಕೂರರ ಮನೆಯನ್ನು ಹೊಕ್ಕಳು. ಅವಳು ತನ್ನನ್ನು ಯಾರೂ ಕಾಣಬಾರ ದೆಂಬ ಉದ್ದೇಶದಿಂದ ಹಿಂದೆಮುಂದೆ ನೋಡುತ್ತ ವೇಗವಾಗಿ ಸಾಗುತ್ತಿದ್ದಳು. ಒಳಗೆ ಹೋಗುತ್ತಲೇ ಮನೆಯ ಚಾಕರಿಯವರಿಗಾಗಿ ಕಟ್ಟಿದ ಮನೆಗಳಿದ್ದವು. ಈ ಸ್ತ್ರೀಯೂ ಅವುಗಳ ಸಮೀಪಕ್ಕೆ ನಡೆಯಲಾರಂಭಿಸಿದಳು. ಅಲ್ಲಿ ಒಬ್ಬ ಗಡ್ಡ ಬಿಟ್ಟುಕೊಂಡ ಪ್ರಾಯಸ್ಥನನ್ನು ಕಂಡ ಆ ಸ್ತ್ರೀ ಮೆದುವಾದ ದನಿಯಲ್ಲಿ ಕೂಗಿದಳು "ಅಬ್ದುಲ್ಲಾ"

"ಯಾರು ? ಯಾರದು ? ಅಬ್ದುಲ್ಲನು ಹೊರಗಡೆ ಕತ್ತಲೆಯಲ್ಲಿ ತನ್ನ ಕಣ್ಣುಗಳು ಎಷ್ಟು ದೂರದ ವರೆಗೆ ನೋಡಲು ಸಾಧ್ಯವಿತ್ತೋ ಅಲ್ಲಿಯ ವರೆಗೆ ಅಲ್ಲಿಂದಲೇ ಇಣಿಕಿ ನೋಡಿದನು. ಕೊನೆಗೆ ಸ್ವಲ್ಪ ಹೊತ್ತಿನ ನಂತರ ಅವನು

ಆಶ್ಚರ್ಯದಿಂದ ಹೇಳಿದನು:

"ಅರೇ, ಯಾರು ಮರಿಯಮ್ ?" ಎನ್ನುತ್ತ ಮುಂದರಿಸಿ "ಬಾ ಮಗೂ, ಬಾ. ಇಂದು ಒಮ್ಮೆಲೇ ಇಲ್ಲಿಗೆ ಹೇಗೆ ಬಂದೆ? ಆಂ ಇದೇನು ನೀನು ಪೂರ್ಣವಾಗಿ ಸೊರಗಿ ಹೋಗಿದ್ದೀಯಾ? ಏಕೆ ಮೈ ಚೆನ್ನಾಗಿಲ್ಲವೇ....?"

"ಹಾಗೇನೂ ಇಲ್ಲ ಅಬ್ದುಲ್ಲಾ, ಮೈ ಚೆನ್ನಾಗಿಯೇ ಇದೆ. ಅದೆಲ್ಲ ಹೋಗಲಿ ಬಿಡು. ನಿಮ್ಮ ಮನೆಯ ಮಾಲಿಕರೆಲ್ಲಿ?" ಅವಳ ವಾಣಿಯು ಕ್ಷೀಣವಾಗಿತ್ತು. ಅದರೊಂದಿಗೆ ಅಪಾರವಾದ ಬೇನೆಯೂ ಸೇರಿಕೊಂಡಿತ್ತು.

"ಕ್ಲಬ್ಬಿಗೆ ಹೋಗಿದ್ದಾರೆಂತ ಕಾಣುತ್ತೆ. ಈಗ ಒಂದರ್ಧ ಗಂಟೆಯೊಳಗೆ ಬರಬಹುದು."

"ಮನೆಯ ಯಜಮಾನಿ?"

"ಅವರೂ ಜೊತೆಯಲ್ಲೇ ಹೋಗಿದ್ದಾರೆ. ಆದರೆ ಅವರಿಗೆ ವಿವಾಹವಾದ ವಿಚಾರ ನಿನಗೆ ಹೇಗೆ ತಿಳಿಯಿತು?"

"ವರ್ತಮಾನಪತ್ರಿಕೆಯಲ್ಲಿ ಓದಿದೆ. ನಿಮ್ಮ ಯಜಮಾನಿ ಹೇಗಿದ್ದಾಳೆ ಅಬ್ದುಲ್ಲಾ?"

"ಚೆನ್ನಾಗಿಯೇ ಇದ್ದಾಳೆ."

"ಸಾಹೇಬರು ಸಂತೋಷದಿಂದಿದ್ದಾರೆ ತಾನೆ?"

"ಹೌದು. ಅವರೇನೋ ಸಂತೋಷದಿಂದಿದ್ದಾರೆ. ಆದರೆ ನೀನು ಯಾವಾಗ ಬಂದೆ? ಎಲ್ಲಿ ಇಳಿದುಕೊಂಡಿದ್ದೀಯಾ?" ಅಬ್ದುಲ್ಲನು ಪ್ರಶ್ನಿಸಿದ.

"ಊಂ, ಅದಕ್ಕೇನು—ನನ್ನದೊಂದು ಚಿಕ್ಕ ಕೆಲಸವಿದೆ ಅದನ್ನು ಮಾಡಬಲ್ಲೆಯಾ ಅಬ್ದುಲ್ಲಾ?"

"ಖಂಡಿತವಾಗಿ ಮಗೂ, ಏಕೆ ಮಾಡಲಾರೆ? ಅಗತ್ಯವಾಗಿ ಮಾಡುತ್ತೇನೆ ಹೇಳು ಅದೇನು?"

"ಈ ಗಂಟನ್ನು ಸಾಹೇಬರಿಗೆ ಕೊಡುತ್ತೀಯಾ?"

"ಆದೀತು, ಕೊಡುತ್ತೇನೆ. ಆದರೆ ನೀನು ಅವರನ್ನು ನೋಡುವುದಿಲ್ಲವೇ? ಅವರು ಈಗ ಅರ್ಧ ಘಂಟೆಯೊಳಗೆ ಬರುತ್ತಾರೆ."

"ನೋಡುತ್ತಿದ್ದೆ. ಆದರೆ ನಿಮ್ಮ ಮನೆಯ ಯಜಮಾನಿಯು ಕೆಟ್ಟದ್ದನ್ನೇ ಎಣಿಸಿಯಾಳು. ಇಂತಹ ಅಪಾಯವನ್ನು ಮೈಮೇಲೆ ಹಾಕಿಕೊಳ್ಳುವು

ದರಿಂದ ಲಾಭವಾದರೂ ಏನು ? "

"ಹೌದು. ಹಾಗೆಯೇ ಆದರೂ ಆಗಬಹುದು." ಅಬ್ದುಲ್ಲನು ಸ್ವಲ್ಪ ಯೋಚಿಸಿ ತನ್ನ ಬಿಳೀ ಗಡ್ಡದ ಮೇಲೆ ಕೈ ಆಡಿಸುತ್ತ ಹೇಳಿದ. ಆದರೆ ಅವಳು ಅಶೋಕನೊಡನೆ ಮಾತನಾಡದೇನೇ ಹೋಗುವುದು ಅವನಿಗೆ ಸರಿದೋರಲಿಲ್ಲ.

"ಒಂದು ವೇಳೆ ಧನಿಗಳು ನಿನ್ನನ್ನು ಕಾಣಬೇಕೆಂದರೆ ಮತ್ತೆ ಪುನಃ ಸಿಕ್ಕುವಿಯಾ ?"

"ಆದೀತು. ಪ್ರಾಯಶಃ........"

ಇಷ್ಟರಲ್ಲೇ ಮೋಟಾರಿನ ಆ ಎರಡು ದೀಪಗಳು ದೂರದಿಂದ ತಮ್ಮ ಪ್ರಕಾಶವನ್ನು ಬೀರುತ್ತ ಬರುವುದು ಕಂಡಿತು. ಮರಿಯಮಳು ಕೊಂಚ ಬೆದರಿದವಳಾಗಿ "ಅವರೇ ಬರುತ್ತಿರಬಹುದು ಅಬ್ದುಲ್ಲಾ. ನಾನೀಗ ಹೋಗುತ್ತೇನೆ" ಎನ್ನುತ್ತ ಅವಳು ಓಡುತ್ತಲೇ ಹೆಬ್ಬಾಗಿಲವನ್ನು ದಾಟಿದಳೆಂದು ಕಾಣುತ್ತೆ. ದಾಟಿದವಳೇ ಅಂಧಃಕಾರದಲ್ಲಿ ಲೀನಳಾದಳು. ಮೋಟಾರು ಬಂದು ಉದ್ದಕ್ಕೂ ಹೋಯಿತು. ಅದು ಅಶೋಕನದಲ್ಲ ಯಾರದೋ ಇನ್ನೊಬ್ಬರದಾಗಿತ್ತು. ಆದರೆ ಮರಿಯಂ ಪುನಃ ಹಿಂತಿರುಗಿ ಬರಲಿಲ್ಲ. ಅಬ್ದುಲ್ಲನು ಆ ಚಿಕ್ಕ ಗಂಟನ್ನು ಹಿಡಿದುಕೊಂಡು ಹಾಗೆಯೇ ಕತ್ತಲನ್ನು ನೋಡುತ್ತ ಸುಮ್ಮಗೆ ನಿಂತಿದ್ದನು.

ಎಂಟೂವರೆಯ ಹೊತ್ತಿಗೆ ಅಶೋಕ್, ಅರುಣಾ ಇಬ್ಬರೂ ಕ್ಲಬ್ಬಿನಿಂದ ಹಿಂತಿರುಗಿದರು. ಅರುಣಾ ಬಟ್ಟೆಗಳನ್ನು ಬದಲಾಯಿಸಲು ತನ್ನ ಸ್ವಂತ ಕೋಣೆಗೆ ಹೋದಾಗ, ಅಬ್ದುಲ್ಲನು ಸಮಯನ್ನು ಸಾಧಿಸಿ, ಮೆಲ್ಲಗೆ ಬಂದು ಆ ಗಂಟನ್ನು ಅಶೋಕನ ಬಳಿ ಇಟ್ಟು ಹೇಳಿದನು:

"ಹುಜೂರ್, ಮರಿಯಂ ಕೊಟ್ಟು ಹೋಗಿದ್ದಾಳೆ."

"ಮರಿಯಂ ! ಯಾವಾಗ? ಅವಳೆಲ್ಲಿ ಅಬ್ದುಲ್ಲಾ ?"

"ಅವಳು ಹಿಂದಿರುಗಿ ಹೋದಳು ಹುಜೂರ್ "

"ಎಲ್ಲಿಗೆ ಹೋದಳು ಅಬ್ದುಲ್ಲಾ? ಹೇಳು, ಬೇಗ ಹೇಳು."

"ಗೊತ್ತಿಲ್ಲ ಹುಜೂರ್............ ಆದರೆ ಪ್ರಾಯಶಃ ಇದರಲ್ಲೇನಾದರೂ ಪತ್ರವಿರಬಹುದು."

ಆಗ ಅಶೋಕನಿಗೆ ಒಂದು ಕ್ಷಣದ ವಿಲಂಬವೂ ಅತಿ ಕೆಟ್ಟದ್ದೆನಿಸಿತು.

ಆದ್ದರಿಂದ ಕೂಡಲೇ ಆ ಗಂಟನ್ನು ಆತುರತೆಯಿಂದ ಬಿಚ್ಚಿದನು. ನೋಡಿದರೆ ಅದರಲ್ಲೊಂದು ಕರವಸ್ತ್ರವಿತ್ತು.

ಇದು ಅದೇ ಹಿಂದಿನ ಕರವಸ್ತ್ರ. ಶತಪುತ್ರಾ ಪರ್ವತದ ಕಾಡಿನಲ್ಲಿ ಇವನು ಅವಳ ಕಣ್ಣೀರನ್ನು ಒರೆಸಿದ ಅದೇ ಕರವಸ್ತ್ರ.

ಅದರೊಂದಿಗೆ ಇನ್ನೊಂದು ವಸ್ತು ಇದ್ದಿತು. ಅದು ಒಂದು ಲಕ್ಕೋಟೆ. ಇದನ್ನು ಅವನು ತೀವ್ರ ಉತ್ಕಂಠಿತನಾಗಿ ತೆರೆದ. ಅದರಲ್ಲಿ ಅವನಿಗೆ ಸಿಕ್ಕಿದವೆಂದರೆ ನೂರು ರೂಪಾಯಿಗಳ ನಾಲ್ಕು ನೋಟುಗಳು ಮತ್ತು ಒಂದು ಚಿಕ್ಕ ಪತ್ರ.

ಆಂ! ಈ ರೂಪಾಯಿಗಳನ್ನು ಅವನೇ ಮರಿಯಮಳಿಗೆ ಕೊಟ್ಟಿದ್ದ. ಇದ್ದದ್ದು ಇದ್ದಂತೆ ಅದೇ ಲಕ್ಕೋಟೆಯೊಳಗೆ ಹಿಂದಕ್ಕೆ ಕೊಟ್ಟಿದ್ದಾಳೆ! ಆದರೆ ಲಕ್ಕೋಟೆಯೇನೋ ಅದೇ. ಆದರೆ ತುಸು ಕೊಳೆಯಾಗಿದೆ.

ಅಶೋಕನು ಪತ್ರವನ್ನು ಬಿಚ್ಚಿ ಓದಲಾರಂಭಿಸಿದನು:

"ಅಶೋಕ್ ಬಾಬೂ,

ಆ ದಿನ ತಾವು ನನಗೆ ನಾನ್ನೂರು ರೂಪಾಯಿಗಳನ್ನು ಕೊಟ್ಟು ನನ್ನನ್ನು ಆಳವಾದ ಚಿಂತಾಕೂಪಕ್ಕೆ ತಳ್ಳಿದಿರಿ. ತಾವು ನನ್ನ ಪ್ರೇಮಕ್ಕೆ ಪ್ರತಿಫಲವನ್ನು ಕೊಡುವಿರೆಂದು ನಾನು ಕಲ್ಪನೆಯನ್ನು ಕೂಡ ಮಾಡಿಲ್ಲ. ಇಂದು ನಾನು ಈ ರೂಪಾಯಿಗಳನ್ನು ಹಿಂದಕ್ಕೆ ಕೊಟ್ಟು ನನ್ನ ಹೃದಯ ವೇದನೆಯನ್ನು ತುಸು ಕಡಿಮೆ ಮಾಡಿಕೊಳ್ಳುತ್ತಿದ್ದೇನೆ.

ಮತ್ತು ಈ ಕರವಸ್ತ್ರ............ಇದರ ವಿಚಾರವಾಗಿ ಏನನ್ನು ಬರೆಯಲಿ! ಒಂದು ದಿನ ಇದು ಕಾಲುವೆಯಂತೆ ಹರಿಯುವ ನನ್ನ ಅಶ್ರುಧಾರೆಯನ್ನು ಕೂಡ ತಡೆಯುವಷ್ಟು ಶಕ್ತಿಶಾಲಿಯಾಗಿತ್ತು. ಆದರೆ ಇಂದು.........ಓಹ್ ಹೋಗಲಿ ಬಿಡಿ ಆ ಮಾತುಗಳು.

ತಾವು ಮತ್ತು ತಮ್ಮ ಶ್ರೀಮತಿ ಇಬ್ಬರೂ ಸುಖಿಗಳಾಗಿರಬೇಕೆಂದು ಆ ಈಶ್ವರನಲ್ಲಿ ನನ್ನ ಅನಂತ ಪ್ರಾರ್ಥನೆಗಳು.

—ಮರಿಯಮ್"

ಪತ್ರದಲ್ಲಿ ಊರ ಹೆಸರೂ ಇರಲಿಲ್ಲ. ತಾರೀಕೂ ಇಲ್ಲ. ವಿಳಾಸವಂತೂ ಮೊದಲೇ ಇಲ್ಲ. ಅವನ ಜೀವನದಲ್ಲಿ ಇದೇ ಮರಿಯಮಳ ಪ್ರಥಮ ಪತ್ರ.

ಅದರ ಒಂದೊಂದು ಶಬ್ದಗಳೂ ಅಶೋಕನ ಹೃದಯವನ್ನು ಶೂಲದಂತೆ ಚುಚ್ಚುತ್ತಿದ್ದವು. ಇಷ್ಟರಲ್ಲೇ ಅವನ ಬಾಯಿಯಿಂದ ಅಶಾಂತಿಯ ಒಂದು ದೀರ್ಘ ನಿಶ್ವಾಸವು ಹೊರಹೊರಟು ಬಂತು.

ಆ ಎಲ್ಲಾ ವಸ್ತುಗಳನ್ನು ತನ್ನ ತಲೆದಿಂಬಿನ ಅಡಿಗೆ ಇಟ್ಟನು. ಹಾಗೆಯೇ ಹುಚ್ಚನಂತೆ ಓಡುತ್ತ ಓಡುತ್ತ ಕೆಳಗಿಳಿದು ಬಂದು ಮೋಟಾರ ಬಳಿ ಹೋಗಿ ಧಮ್ ಎಂದು ಮೋಟಾರಿನ ಸೀಟಿನಲ್ಲಿ ಬಿದ್ದು ಕೂಗಿದನು "ಅಬ್ದುಲ್ಲಾ, ಅಬ್ದುಲ್ಲಾ........––" ಅವನ ಉಡಿಗೆಯು ಅರ್ಧ ಜಾರಿ ಕೆಳಗಿಳಿದಿದೆ ಎಂಬುದು ಕೂಡ ಅವನ ಮನಸ್ಸಿಗೆ ತಿಳಿದಿರಲಿಲ್ಲ.

"ಹುಜೂರ್"

"ಮರಿಯಮಳು ಎಲ್ಲಿ ಇಳಿದಿದ್ದಾಳೆ?"

"ಗೊತ್ತಿಲ್ಲ ಹುಜೂರ್" ಎನ್ನುತ್ತ ಮತ್ತೆ ಅಬ್ದುಲ್ಲ ಕೇಳಿದ "ಅವಳು ಯಾವ ಪತ್ರವನ್ನೂ ಕೊಟ್ಟಿಲ್ಲವೇ?"

"ಪತ್ರದಲ್ಲೊಂದೂ ಇಲ್ಲ. ನೀನೆಂತಹ ಮನುಷ್ಯ ಅಬ್ದುಲ್ಲಾ! ಇಷ್ಟು ವಯಸ್ಸಾಯಿತು ಪ್ರಯೋಜನವೇನು? ಅವಳ ವಿಳಾಸವನ್ನಾದರೂ ಕೇಳಿ ತಿಳಿದುಕೊಳ್ಳುವ ಎಂಬ ಯೋಚನೆಯು ನಿನ್ನ ತಲೆಗೆ ಬರಲಿಲ್ಲ."

"ತಪ್ಪಾಯಿತು ಹುಜೂರ್"

"ಅವಳು ಯಾವಾಗ ಬಂದಳು?"

"ಈಗ ಸುಮಾರು ಒಂದು ಘಂಟೆ ಹಿಂದೆ."

"ಆ ಮೇಲೆ ಯಾವ ಕಡೆ ಹೋದಳು?"

"ಆ ಕಡೆ" ಅಂಧಕಾರದೆಡೆಗೆ ಬೆರಳನ್ನು ತೋರುತ್ತ ಅಬ್ದುಲ್ಲ ಹೇಳಿದ.

"ಹಾಗಾದರೆ ನಡೆ. ಬೇಗನೇ ಮೋಟಾರಿನಲ್ಲಿ ಕುಳಿತುಕೋ. ಅವಳನ್ನು ಹುಡುಕಿ ತರೋಣ."

"ಹುಜೂರ್ ತಮ್ಮ ಕೋಟನ್ನು ತರಲೇ?"

"ಬೇಡ ಕಾಣಯ್ಯಾ! ಸಮಯವೆಲ್ಲಿದೆ? ನಡೆ ಬೇಗ!"

ಅವನು ಅಬ್ದುಲ್ಲನನ್ನು ಕೈಹಿಡಿದೆಳೆದೇ ಮೋಟಾರಿನಲ್ಲಿ ಕುಳ್ಳಿರಿಸಿದನೆಂದು ತೋರುತ್ತೆ. ಆ ಮೋಟಾರು ಕಾರು ಗಾಳಿಯೊಡನೆ ಸಂಭಾಷಿಸುತ್ತಾ ಓಡಲಾರಂಭಿಸಿತು. ಅರುಣಾಳಲ್ಲಿ ಯಾರೂ ಏನನ್ನೂ ಹೇಳಲಿಲ್ಲ. ಅವರಿಬ್ಬರೂ

ಎಲ್ಲಿಗೋ ಹೋದರೆಂಬ ಅರಿವೂ ಅವಳಿಗೆ ಇರಲಿಲ್ಲ.

"ಮರಿಯಮಳು ಹೇಗೆ ಕಾಣುತ್ತಿದ್ದಳು ಅಬ್ದುಲ್ಲಾ ?"

"ಏನೊ ಒಂದು ತರ ಇದ್ದಳು ಹುಜೂರ್. ಮೈಯಲ್ಲಿ ಚೆನ್ನಾಗಿರಲಿಲ್ಲ ವೆಂದು ಕಾಣುತ್ತೆ."

"ಒಹ್ !" ಅಶೋಕನು ಒಂದು ನಿಟ್ಟುಸಿರನ್ನು ಬಿಟ್ಟನು.

ವ್ಯಾಕುಲನಾಗಿದ್ದ ಅಶೋಕನು ಒಂದೊಂದು ಜಾಗವನ್ನೂ ಪ್ರತಿಯೊಂದು ರಸ್ತೆ ಬೀದಿಗಳನ್ನೂ ಬಿಡದೆ ಮರಿಯಮಳನ್ನು ಹುಡುಕಿದನು. ದಾರಿಯಲ್ಲಿ ಎಲ್ಲಾದರೂ ಹೆಂಗಸೊಬ್ಬಳು ಹೋಗುತ್ತಿದ್ದರೆ ಅಲ್ಲೇ ಮೋಟಾರನ್ನು ನಿಧಾನಿಸಿ ಅವಳ ಮುಖದ ಕಡೆಗೆ ದಿಟ್ಟಿಸಿ ನೋಡುತ್ತಿದ್ದನು. ಅದು ಮರಿಯಮಳಲ್ಲ ವೆಂದು ತಿಳಿದಾಗ ಪುನಃ ನಿರಾಶನಾಗಿ ಎರಡರಷ್ಟು ವೇಗದಿಂದ ಮೋಟಾ ರನ್ನು ಓಡಿಸುತ್ತಿದ್ದನು. ಏಕೆಂದರೆ ಈಗ ತಾನೆ ನಿಧಾನವಾಗಿ ಓಡಿಸಿದನಲ್ಲವೇ ಆ ವೇಳೆಯನ್ನು ಕೂಡಿಸಿಕೊಳ್ಳುವುದಕ್ಕೆ.

ಇದೇ ರೀತಿಯಾಗಿ ಅವನು ಮೂರು ನಾಲ್ಕು ಇಗರ್ಜಿಗಳನ್ನು ಕ್ರಿಸ್ತರ ಹೊಟೆಲುಗಳನ್ನು, ಧರ್ಮಶಾಲೆ, ರೈಲ್ವೆ ಸ್ಟೇಶನಿನ ಪ್ರಯಾಣಿ ಕರ ತಂಗುವ ಸ್ಥಳ ಎಲ್ಲವನ್ನೂ ಹುಡುಕಿದನು. ಮಾತ್ರವಲ್ಲದೆ ಧನತೋಲಾ ಧರ್ಮಪೇಟೆ, ಸಿವಿಲ್ ಲಾಯಿನ್ಸ್, ಸಾದರ್ ಬಜಾರ್ ಇತ್ಯಾದಿ ರಸ್ತೆಗಳನ್ನೂ ಸುತ್ತಿದನು. ಆದರೆ ಎಲ್ಲಿಯೂ ಮರಿಯಮಳ ಸುಳಿವೇ ಕಾಣಲಿಲ್ಲ.

ಪೆಟ್ರೋಲು ಉರಿಯುತಿತ್ತು, ಮೋಟಾರು ಓಡುತ್ತಿತ್ತು. ಕೆಲವೆಡೆ ನಿಲ್ಲುವುದು. ಅಬ್ದುಲ್ಲ ಕೆಳಗಿಳಿದು ವಿಚಾರಿಸುವದು. ಮರಿಯಮಳು ಈಕಡೆ ಬರಲಿಲ್ಲವೆಂದು ತಿಳಿದಾಗ, ಅಶೋಕನು ನಿರಾಶನಾಗುತ್ತಾನೆ. ಪುನಃ ಮೋಟಾರು ಮುಂದಕ್ಕೆ ಸಾಗುವುದು.

ಅದೇ ಮೋಟಾರಿನ ಸ್ಟಾರ್ಟ್ ಆಗುವ 'ಫುರ್, ಫುರ್' ಅದೇ ಬ್ರೇಕ್ ಹಾಕುವ ಶಬ್ದ, ಅದೇ ಪೊಂಪ್ಯಾಯ ಕರ್ಕಶ ರೋದನ.

ಹೊತ್ತು ಹೋದಂತೆ ಅಶೋಕನ ನಿರಾಶೆಯೂ ಹೆಚ್ಚುತ್ತಿತ್ತು, ಧೈರ್ಯವು ಕುಗ್ಗುತ್ತಿತ್ತು. ಗಂಟಲು ಮತ್ತು ನಾಲಿಗೆ ಒಣಗಿ ಕಣ್ಣುಗಳು ಕೆಂಪೇರುತ್ತಿ ದ್ದವು. ಕೊನೆಗೂ ಮರಿಯಮಳೆಲ್ಲಿಯೂ ಸಿಗಲೇ ಇಲ್ಲ.

ಅಕಸ್ಮಾತ್ತಾಗಿ ಅವನಿಗೊಂದು ಯೋಚನೆ ಹೊಳೆಯಿತು. ಅವಳು

ಇಟಾರಸೀ 'ಪೆಸೆಂಜರ್' ರೈಲಲ್ಲಿ ಏಕೆ ಹಿಂದಿರುಗಿರಬಾರದೆಂಬ ಸಂದೇಹವು ಅಶೋಕನಿಗೆ ಉಂಟಾಯಿತು. ಒಡನೆ ಸ್ಟೇಶನ್ನಿನ ಕಡೆಗೆ ಮೋಟಾರನ್ನು ಓಡಿಸಿದನು.

ಹತ್ತು ಘಂಟೆಯಾಗಿರಬಹುದು. ಇಟಾರಸೀ ರೈಲು ನಿಲ್ದಾಣವನು ಬಿಡಲು ತಯಾರಾಗಿ ನಿಂತಿತ್ತು. ಪ್ಲೇಟ್‌ಫಾರ್ಮ್‌ನಲ್ಲಿ ಜನರ ಗುಂಪು ಅಧಿಕ ವಾಗಿಯೇ ಇತ್ತು. ಇದರಿಂದ ಜನರ ಮಧ್ಯೆ ಅಶೋಕನಿಗೆ ದಾರಿಯನ್ನು ಮಾಡಿಕೊಂಡು ಹೋಗುವದು ಕಷ್ಟವಾಗುತ್ತಿತ್ತು. ಆದರೂ ಜನರಿಂದ ಬೈಗ ಳನ್ನು ಕೇಳುತ್ತಲೂ, ಅವರಿಂದ ನೂಕುನುಗ್ಗಲನ್ನು ಸಹಿಸುತ್ತಲೂ ಅಶೋ ಕನು ಅಲ್ಲಿ ಇಲ್ಲಿ ಪ್ರತಿಯೊಂದು ರೈಲು ಕೋಣೆಗಳಲ್ಲಿಯೂ ಮರಿಯಮಳನ್ನು ಹುಡುಕುತ್ತಿದ್ದನು.

ರೈಲಿನ ಗಂಟೆಯಾಯಿತು, ಗಾರ್ಡ್ ಸಿಗ್ನಲನ್ನು ಕೊಟ್ಟ, ಸೀಟಿ ಕೇಳಿ ಸಿತು. ಅಶೋಕನ ಪ್ರಾಣವೇ ಹೋದಂತಾಯಿತು. ಅವನ ಓಟವು ಇನ್ನೂ ಹೆಚ್ಚಾಗಲಾರಂಭಿಸಿತು. ಅವನು ಓಡುತ್ತ ಸ್ತ್ರೀಯರ ಕೋಣೆಯ ಬಳಿಗೆ ಹೋಗಿ, ವ್ಯಾಕುಲವನ್ನೊಳಗೊಂಡ ಆರ್ತ ದನಿಯಲ್ಲಿ ಕೂಗಿದ—

"ಮರಿಯಮ್–ಮರಿಯಮ್ !"

ಎಲ್ಲಿಂದಲೂ ಯಾವ ಉತ್ತರವೂ ಬರಲಿಲ್ಲ. ರೈಲು ಗಾಡಿಯ ವೇಗವು ಕ್ರಮವಾಗಿ ಅಧಿಕವಾಗುತ್ತಿತ್ತು. ಕಣ್ಣ ಮುಂದಿನಿಂದ ಒಂದೊಂದು ಕಂಪಾರ್ಟ್ ಮೆಂಟೂ ಹಾದುಹೋಗುತ್ತಿತ್ತು. ಕೊನೆಯ ಗಾಡಿಯೂ ಅಶೋಕನ ಎದುರಿ ಗಿಂದ ಹಾದು ಮುಂದೆ ಹೋಯಿತು.

ಪ್ಲೇಟ್‌ಫಾರ್ಮ್‌ನಲ್ಲಿದ್ದ ಗುಂಪೂ ಚದರಿತು. ಆದರೆ ಅಶೋಕನು ಅಲ್ಲೇ ದೀನ ಮೂರ್ತಿಯಾಗಿ ನಿಂತಿದ್ದನು. ಅವನ ಕಣ್ಣುಗಳ ಅಂಚಿನಲ್ಲಿ ನೀರು ಸೂಸುತ್ತಿತ್ತು.

ಮತ್ತೆ ಮಳೆಬೀಳಲಾರಂಭಿಸಿತು.

"ಈಗ ಮನೆಗೆ ಹೋಗೋಣ ಹೂಜೂರ್" ಎಂಬ ಅಬ್ದುಲ್ಲನ ಮಾತು ಗಳು ಅಶೋಕನ ಕಿವಿಗೆ ಬಿದ್ದಾಗ ಅವನ ತಂದ್ರಿತೆಯು ಭಂಗವಾಯಿತು. ಅವನ ಕಣ್ಣೆದುರು ನಾಲ್ಕನೆಯ ಪ್ಲಾಟ್‌ಫಾರ್ಮ್‌ನಲ್ಲಿ ಕಲ್ಕತ್ತೆಯ ಕಡೆಗೆ ಹೋಗುವ ಹೌರಾ ಎಕ್ಸ್‌ಪ್ರೆಸ್ ರೈಲು, ಕಾಣಿಸಿತು.

ವಿಧಿಯ ವಿಚಿತ್ರ ವಿಧಾನದ ಅನುಸಾರವಾಗಿ ಅದರ ಮೂರನೆಯ ದರ್ಜೆಯ ಹೆಂಗಸರ ಬೋಗಿಯಲ್ಲಿ ಮರಿಯಮಳು ತನ್ನ ಬೆರಳೆಡೆಯಲ್ಲಿ ಜಬ್ಬಲ್‌ಪುರದ ಟಿಕೆಟ್ಟನ್ನು ಇರಿಸಿಕೊಂಡು ಕುಳಿತಿದ್ದಳು. ಅವಳು ನಾಗಪುರದ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ಸ್ವಪ್ನಗಳನ್ನು ಬೀಳ್ಕೊಳ್ಳುತ್ತ ಹೊರಟು ಹೋಗುತ್ತಿದ್ದಳು.

ಇಪ್ಪತ್ತೊಂಭತ್ತು

ಅವರಿಬ್ಬರೂ ಮನೆಗೆ ಹಿಂತಿರುಗುವಾಗ ಸುಮಾರು ಹತ್ತೂಮುಕ್ಕಾಲು ಘಂಟೆಯಾಗಿರಬಹುದು. ಅರುಣಾಳು ಶಯನಾಗಾರದಲ್ಲಿ ವಿದ್ಯುಚ್ಛಕ್ತಿಯ ದೀಪವನ್ನುರಿಸುತ್ತ ಆರಾಮಕುರ್ಚಿಯಲ್ಲಿ ಬಿದ್ದುಕೊಂಡು ಅಶೋಕನ ದಾರಿಯನ್ನು ನೋಡುತ್ತಿದ್ದಳು. ಅವಳ ಗಂಭೀರ ಮುಖವನ್ನು ಕಂಡಾಗಲೇ ಅಶೋಕನು ಇದು ಬಿರುಗಾಳಿಯ ಮುನ್ನ ಉಂಟಾಗುವ ಶಾಂತಿ ಎಂದೆಣಿಸಿದನು.

ಅರುಣಾಳು ಧೂಳಿನಿಂದ ಆವರಿಸಲ್ಪಟ್ಟ ಅಶೋಕನ ಆ ಬಾಡಿದ ಮುಖವನ್ನು ಕಂಡೂ ಕೂಡ ಒಂದು ನಿಮಿಷದ ಸಮಯವನ್ನು ಕೊಡದೆ ಓಡಿ ಹೋಗಿ ಕೋಣೆಯ ಬಾಗಿಲನ್ನು ಮುಚ್ಚಿ ಬಂದಳು. ಹೊರಗಿರುವವರು ಅವರ ತರ್ಕ ವಿತರ್ಕಗಳನ್ನು ಕೇಳದಿರಲೆಂದೇ ಹೀಗೆ ಮಾಡಿರಬೇಕು. ಕೈಯಲ್ಲಿ ಅದೇ ಪುಟ್ಟ ಗಂಟನ್ನು ಹಿಡಿದುಕೊಂಡು ಹೇಳಿದಳು :

" ಏನು ಇದು ನಿಜವೇ ? "

" ಹೌದು ನಿಜ. "

" ನಿಜವೇ ! " ಅರುಣಾಳು ಕರ್ಕಶ ಸ್ವರದಲ್ಲಿ ಪುನಃ ಹೇಳಿದಳು : " ನಿಮಗೆ ಒಪ್ಪಿಕೊಳ್ಳಲು ನಾಚಿಕೆಯಾದರೂ ಬರುವದಿಲ್ಲವೇ ? "

" ನಿಜವಿರುವುದನ್ನು ಒಪ್ಪಿಕೊಳ್ಳುವುದರಲ್ಲಿ ನಾಚಿಕೆ ಏನು ? "

" ಸಾಲದ್ದಕ್ಕೆ ಈ ಕೀಟಲೇ ಮಾತೇ ? ಮೊದಲೇ ತಿಳಿದಿದ್ದರೆ ನಾನೆಂದೂ ನಿಮ್ಮನ್ನು ವರಿಸುತ್ತಿರಲಿಲ್ಲ. ನಾನು ಮುಗ್ಧೆಯಾಗಿದ್ದೆ. ನಿಮ್ಮ ಬಲೆಯಲ್ಲಿ ಸಿಲುಕಿಕೊಂಡೆ. "

"ಇದೆಲ್ಲಾ ಏನು ಹೇಳುತ್ತಿರುವೆ ಅರುಣಾ ? ನಿನ್ನ ದರ್ಶನವಾಗಬೇಕಾದರೆ ಮೊದಲೇ ಮರಿಯಮಳು ನನ್ನ ಜೀವನದಲ್ಲಿ ಸೇರಿಕೊಂಡಿದ್ದಳೆಂಬುದಕ್ಕಾಗಿಯೇ ನಿನ್ನಲ್ಲಿ ನಾನಿದನ್ನು ಹೇಳಿರಲಿಲ್ಲ. ಆದರೆ ಎಂದು ನಿನ್ನೊಂದಿಗೆ ವಿವಾಹಿತನಾದೆನೊ ಅಂದಿನಿಂದ ಭಗವಂತನನ್ನು ನೆನೆಸಿ ಹೇಳುತ್ತೇನೆ— ನಿನ್ನ ವಿಷಯವಾಗಿ ಖಂಡಿತವಾಗಿಯೂ ನಂಬಿಗಸ್ತನಾಗಿಯೇ ಇದ್ದೇನೆ."

"ಹಾಗಾದರೇ ಈಗ ಏಕೆ ನೀವು ಅವಳ ಬೆನ್ನ ಹಿಂದೆ ಹೋದಿರಿ ?"

"ನಾನು ಈ ಹಿಂದೆ ಅವಳಿಗೆ ಕೆಲವು ರೂಪಾಯಿಗಳ ಸಹಾಯವನ್ನು ಮಾಡಿದ್ದೆ. ಅವಳು ಈಗ ಅವೆಲ್ಲವನ್ನು ಹಿಂದಿರುಗಿಸಿ ಹೋಗಿದ್ದಾಳೆ. ಅವಳು ಎಂತಹ ಕಷ್ಟದಲ್ಲಿ ಸಿಕ್ಕಿಬಿದ್ದಿದ್ದಾಳೊ ? ಒಬ್ಬ ಆಪ್ತಮಿತ್ರನಂತೆ ನಾನು ಅವಳಿಗೆ ಸಹಾಯ ಮಾಡಲು ಇಚ್ಛಿಸುತ್ತಿದ್ದೆ."

"ಒಬ್ಬ ಆಪ್ತಮಿತ್ರನಂತೆ !" ಅರುಣಾಳು ಹುಬ್ಬುಗಂಟಿಕ್ಕಿಕೊಂಡು ಹೇಳಿದಳು : "ಪ್ರೇಯಸಿ ಎಂದೇಕೆ ಹೇಳುವುದಿಲ್ಲ? ನನ್ನನ್ನು ವರಿಸಿ ಇನ್ನೊಬ್ಬ ಸ್ತ್ರೀಯಲ್ಲಿ ಪ್ರಣಯ ಸಂಬಂಧವನ್ನಿಟ್ಟುಕೊಳ್ಳಲು ನಿಮಗೆ ಲಜ್ಜೆ ಎಂಬುದೇ ಇಲ್ಲವೇ?" ಹಾಯ್ ! ಅಮ್ಮಾ! ನಾನು ಮೋಸ ಹೋದೆ. ನಿಮ್ಮ ಈ ಸುಸ್ವರೂಪದ ಅಂತರಂಗದೊಳಗೆ ವಿಷವು ತುಂಬಿದೆ ಎಂಬುದು ನನಗೇನು ಗೊತ್ತು. ಗೊತ್ತಿದ್ದರೆ ಈ ಮನೆಯೊಳಗೆ ಎಂದೂ ಕಾಲಿಡುತ್ತಿದ್ದಿಲ್ಲ." ಹಾಗೆಯೇ ಅವಳು ಗೋಳೊ ಎಂದು ಅಳಲಾರಂಭಿಸಿದಳು.

"ಅರುಣಾ, ಕೊಂಚ ತಿಳಿವಳಿಕೆಯಿಂದ ಕೆಲಸ ಮಾಡು. ಬೇಕಾದರೆ ನಿನಗೆ ಘಟನೆಯ ವಿವರಣೆಯನ್ನು ಕೂಡ ನಾನು ಕೊಡಲು ಸಿದ್ಧನಿದ್ದೇನೆ. ಆದರಲ್ಲಿಯ ಒಂದಕ್ಷರವನ್ನೂ ಅಡಗಿಸುವುದಿಲ್ಲ. ಆದರೆ ನೀನು ಮಾತ್ರ ನನ್ನ ಸಚ್ಚರಿತ್ರತೆಯ ಮೇಲೆ ಮಸಿಯನ್ನು ಬಳಿಯಬೇಡ."

"ಅಹಾ ! ನಿಮ್ಮ ಸಚ್ಚರಿತ್ರತೆಯೇ ! ಪರಸ್ತ್ರೀಯಲ್ಲಿ ಸಂಬಂಧವನ್ನಿಟ್ಟುಕೊಂಡೂ ಸಚ್ಚರಿತ್ರತೆಯ ಸೋಗನ್ನು ಹಾಕುತ್ತಿದ್ದೀರಿ."

"ಅರುಣಾ, ಅರುಣಾ !" ಅಶೋಕನು ಕಾತರನಾಗಿ ಕೂಗಿದನು.

"ಈ ಪತ್ರ—ಮತ್ತು ಕೈವಸ್ತ್ರ ಇವುಗಳು ಏನನ್ನುತ್ತವೆ? ಇವಕ್ಕಿಂತಲೂ ಹೆಚ್ಚಿನ ಸಾಕ್ಷಿಯು ಬೇಕೇ? ನಾನೇನು ಹಳ್ಳಿಯ ಮಂಕು ಹುಡುಗಿಯೇ? ಒಂದು ವೇಳೆ ಹಾಗಿರುತ್ತಿದ್ದರೆ ನೀವು ನನ್ನ ಕಣ್ಣುಗಳಿಗೆ ಮಣ್ಣೆರಚಬಹುದಿತ್ತು.

ಇಲ್ಲ, ನಾನಿದನ್ನು ಸಹಿಸಲಾರೆ. ವ್ಯಭಿಚಾರಿಯೊಂದಿಗೆ ನನ್ನ ಜೀವನವನ್ನು ಸಾಗಿಸಲಾರೆ. ನಾನು ನಾಳೆಯೇ ನಮ್ಮ ಮನೆಗೆ ಹೋಗುತ್ತೇನೆ. ನನಗೂ ಆತ್ಮಾಭಿಮಾನ, ಆತ್ಮಸಮ್ಮಾನ, ಎಂಬುದಿದೆ. ನಾನು ನಿಮ್ಮ ಆಶ್ರಿತಳೇನೂ ಅಲ್ಲ. ಹಾಗಿರುತ್ತಿದ್ದರೆ ಎಲ್ಲವನ್ನು ಸಹಿಸುತ್ತ ಸುಮ್ಮನಿರುತ್ತಿದ್ದೆ."

ಬೆವರಿನಿಂದ ಅಶೋಕನ ಬಟ್ಟೆಯು ನೆನೆದಿತ್ತು. ನಿಶ್ಯಕ್ತತೆಯ ಕಾರಣದಿಂದ ಅವನ ಹೃದಯವು ಒಂದು ಬಗೆಯಾಗಿ ಕಂಪಿಸುತ್ತಿತ್ತು. ಇಷ್ಟು ಸುಲಭವಾಗಿ ಕಂಡೂ ಕೈ ಬಿಟ್ಟ ಮರಿಯಮಳ ದುಃಖಪ್ರದ ವಿಚಾರ, ಮೇಲೆ ಸಾಲದ್ದಕ್ಕೆ ಪತ್ನಿಯ ಮುಖದಿಂದ ಒಂದರ ಹಿಂದೆ ಒಂದು ಎಂಬಂತೆ ಹೊರಟ ಕಠೋರ ವಾರ್ತೆಗಳು ಇವೆರಡರ ಪ್ರಹಾರಗಳನ್ನು ಸಹಿಸುವುದು ಅಶೋಕನ ಶಕ್ತಿಗೆ ಮೀರಿತ್ತು. ಅವನು ಹಾಸಿಗೆಗೆ ಹೋಗಿ ಧೊಪ್ಪೆಂದು ಬಿದ್ದುಕೊಂಡನು. ಅರುಣಾ ಕುರ್ಚಿಯ ಮೇಲೆ ಅಳುತ್ತಾ ಕುಳಿತಿದ್ದಳು. ಮುಕ್ಕಾಲು ಘಂಟೆಯ ತನಕ ಯಾರೂ ಏನನ್ನೂ ಮಾತನಾಡಲಿಲ್ಲ. ಈ ತನಕವೂ ದೀಪವು ಉರಿಯುತ್ತಲೇ ಇದೆ. ಅರುಣಾಳು ಎದ್ದು ದೀಪವನ್ನಾರಿಸಿ ತನ್ನ ಮಂಚಕ್ಕೆ ಹೋಗಿ ಅಲ್ಲಿ ಮಲಗಿದಳು. ಆದರೆ ಈಗಲೂ ಅವಳು ಗುಸುಗುಟ್ಟುತ್ತ ಅಳುತ್ತಿದ್ದಳು.

ಅರುಣಾ ಬೆಳಗ್ಗೆ ಬೇಗನೆ ಎದ್ದು, ಟ್ರಂಕ್‌ನಲ್ಲಿ ಸಾಮಾನು ಬಟ್ಟೆ ಬರೆಗಳನ್ನೆಲ್ಲ ಇರಿಸಿ, ಪ್ರಾತಃಕಾಲದ ಕಲ್ಕತ್ತಾ ಮೇಲಿನಲ್ಲಿ ರಾಯಪುರಕ್ಕೆ ಹೊರಡಲು ಅನುವಾದಳು. ಅಶೋಕನು ಮತ್ತೊಮ್ಮೆ ಅವಳನ್ನು ಸಮಾಧಾನ ಪಡಿಸಿದನು. ಆದರೂ ಅದರ ಪರಿಣಾಮವೇನೂ ಒಳ್ಳೆಯದಾಗಲಿಲ್ಲ.

ರಾತ್ರಿಯಿಂದಲೇ ಅಶೋಕನ ಶರೀರವು ನೋಯುವಂತಿತ್ತು. ಹಾಸಿಗೆಯಿಂದ ಏಳುವುದೇ ಬೇಡವೆನ್ನುವಂತಿತ್ತು ಅವನ ಆಗಿನ ಸ್ಥಿತಿ. ಜೊತೆಗೆ ಮೈಯೂ ನೋಯುತ್ತಿತ್ತು. ಅರುಣಾಳು ಹೋಗುವುದಕ್ಕೆ ಮೊದಲು ಅಶೋಕನು ಅಬ್ದುಲ್ಲನನ್ನು ಕೂಗಿ "ಅವಳೊಂದಿಗೆ ಸ್ಟೇಶನಿನ ವರೆಗೆ ಹೋಗಿ, ಅವಳನ್ನು ಗಾಡಿಯಲ್ಲಿ ಸುಖವಾಗಿ ವ್ಯವಸ್ಥೆಯೊಂದಿಗೆ ಕುಳ್ಳಿರಿಸಿ ಬಾ" ಎಂದನು. ಅರುಣಾಳು ಸಿಟ್ಟಿಗೆದ್ದು ಹೇಳಿದಳು: "ಅಗತ್ಯವಿಲ್ಲ, ನಾನೇ ಎಲ್ಲವನ್ನು ನೋಡಿಕೊಳ್ಳುತ್ತೇನೆ."

"ಒಂದೇ ರಾತ್ರಿಯಲ್ಲಿ ನಾನು ಈ ಒಂದು ಚಿಕ್ಕ ಸೇವೆಯನ್ನು ಮಾಡ

ದಷ್ಟು ಪರಕೀಯನಾಗಿ ಹೋದೆನೇ ಅರುಣಾ ?" ಅಶೋಕನು ದೀನನಾಗಿ ಮೆಲ್ಲಗೆ ಕೇಳಿದನು. ಅರುಣಾಳು ತುಸು ಲಜ್ಜಿತಳಾದುದೇನೋ ಸಹಜ. ಆದರೆ ಏನೂ ಮಾತನಾಡಲಿಲ್ಲ.

ಅಬ್ದುಲ್ಲನು ಸ್ಟೇಶನಿನಿಂದ ಬಂದವನು ಒಳ್ಳೆಯ ಜಾಗವೇ ಸಿಕ್ಕಿತೆಂದನು.

ಅಶೋಕನು ಒಂದು ದೀರ್ಘ ಶ್ವಾಸವನ್ನು ಬಿಟ್ಟು, ಮಗ್ಗುಲು ಮಗುಚಿ ಮಲಗಿಕೊಂಡು, ಕಂಬಳಿಯೊಳಗೇ ತನ್ನ ಮುಖವನ್ನು ಮುಚ್ಚಿಕೊಂಡನು. ಅಬ್ದುಲ್ಲನು ಅವನ ಹೊದಿಕೆಯಿಂದ ಹೊರಬಿದ್ದ ಕಾಲನ್ನು ಮುಚ್ಚಿಬಿಟ್ಟು, ಸೊಳ್ಳೆ ಪರದೆಯನ್ನು ಸರಿಪಡಿಸಿ ಮೆತ್ತಗೆ ಹೊರಗೆ ಹೋದನು. ಈ ಸಮಯದಲ್ಲಿ ಯಜಮಾನರಿಗೆ ಏಕಾಂತವೇ ಸಮಾಧಾನವನ್ನುಂಟು ಮಾಡಬಹುದೆಂಬುದನ್ನು ಅಬ್ದುಲ್ಲನು ತಿಳಿದಿದ್ದನು.

ಮೂವತ್ತು

ಮೂರು ದಿನಗಳ ತನಕ ಅಶೋಕನ ಜ್ವರದ ಜ್ವಾಲೆಯು ಕಡಿಮೆಯಾಗಲಿಲ್ಲ. ಎಲುಬುಗಳು ನೋಯಲಾರಂಭಿಸಿದವು. ಅವನಿಗೆ ನಿದ್ದೆಯೂ ಬರುತ್ತಿರಲಿಲ್ಲ. ಅದರಲ್ಲೂ ಈ ಶಾರೀರಿಕ ಪೀಡೆಗಿಂತಲೂ ಅವನ ಆ ಆಂತರಿಕ ಪೀಡೆ ಹೆಚ್ಚಾಗಿತ್ತು.

ನಾಲ್ಕನೆಯ ದಿನ ಅವನಿಗೆ ಜ್ವರವು ಇಳಿದಾಗ ಅಬ್ದುಲ್ಲನನ್ನು ಕರೆದು ಕೆಲವು ನಗದನ್ನು ಅವನ ಕೈಗಿತ್ತು ಹೇಗಾದರೂ ಎಲ್ಲಿಂದಾದರೂ ಮರಿಯಮಳ ವಿಚಾರಗಳನ್ನು ತಿಳಿದು ಬರಲು ಅವನನ್ನು ಪಾದರೀಪುರದ ದಾರಿಯಾಗಿ ನೋಡಿಕೊಂಡು ಹೋಗಲು ಹೇಳಿದನು. ಪಾದರೀಪುರದಿಂದಾಚೆ ಎಲ್ಲಿ ಬೇಕಿದ್ದರೂ ಹೋಗಿ ನೋಡಿಕೊಂಡು ಬರತಕ್ಕದ್ದು. ಹಣ ಎಷ್ಟು ಖರ್ಚಾದರೂ ಸರಿಯೇ ಮರಿಯಮಳ ವಿಳಾಸ ಮತ್ತು ವಿಚಾರಗಳನ್ನು ಪತ್ತೆ ಹಚ್ಚಲೇಬೇಕು. ಎಂದು ಹೇಳಿ ಅಬ್ದುಲ್ಲನನ್ನು ಅಲ್ಲಿಂದ ಕಳಿಸಿದನು.

ಆರನೆ ದಿನ ಅಬ್ದುಲ್ಲನು ಹಿಂತಿರುಗಿ ಬಂದು ಮರಿಯಮಳನ್ನು ಹುಡುಕಲು ಯಾವ ರೀತಿಯಲ್ಲಿ ಎಲ್ಲೆಲ್ಲಿ ಪ್ರಯತ್ನಿಸಿದನೆಂಬ ಕಥೆಯನ್ನು ಹೇಳಿದನು.

"ಮೊದಲು ಪಾದರೀಪುರಕ್ಕೆ ಹೋದೆ. ಅಲ್ಲಿ ಮೆಮ್‌ಸಾಹೇಬಳು ಮರಿಯಮಳನ್ನು ಅವಳು ಗರ್ಭಿಣಿಯಾದ ನಿಮಿತ್ತದಿಂದ ಮನೆಯಿಂದ ಹೊರಗೆ ಹಾಕಿದಳೆಂಬ ವಿಷಯವನ್ನು ಜೊಸೆಫ್ ತಾತನಿಂದ ತಿಳಿದೆ. ಆದರೂ ಮರಿಯಮಳು ಮೆಮ್‌ಸಾಹೇಬಳಲ್ಲಿ ವಿನಂತಿಯ ಮೇಲೆ ವಿನಂತಿಯನ್ನು ಮಾಡಿಕೊಂಡ ನಂತರ ಮೆಮ್‌ಸಾಹೇಬರು ಇಟಾರಸಿಯ ಒಂದು ಮಿಶನ್ ಆಸ್ಪತ್ರೆಗೆ ಪತ್ರ ಒಂದನ್ನು ಕೊಟ್ಟು, ಕಳುಹಿಸಿದರಂತೆ. ಅನಂತರ ಅವಳ ಸಮಾಚಾರ ಒಂದೂ ತಿಳಿಯದಂತೆ.

ಅನಂತರ ನಾನು ಇಟಾರಸಿಗೆ ಹೋಗಿ, ಅಲ್ಲಿಯ ಮಿಶನ್ ಆಸ್ಪತ್ರೆಯ ಬಳಿ ಸುತ್ತಾಡಲಾರಂಭಿಸಿದೆ. ಅಲ್ಲಿ ಕೆಲವರನ್ನು ಕೇಳಲು ಅಲ್ಲಿಗೆ ಮರಿಯಮಳೆಂಬ ಹೆಸರಿನ ಯಾವ ಸ್ತ್ರೀಯೂ ಬಂದು ಪ್ರಸೂತಿ ಸೌಕರ್ಯವನ್ನು ಪಡೆದುಕೊಂಡು ಹೋಗಿಲ್ಲವೆಂದೂ, ಅಲ್ಲದೆ ಅವಳಂತೆಯೇ ರೂಪವುಳ್ಳ ಪ್ರೀಟಾ ಫ್ರೇಂಕಲಿನ್ ಎಂಬಾಕೆಯೊಬ್ಬಳು ಬಂದಿದ್ದಳೆಂದೂ, ಅವಳು ಮಗುವಿನ ಹೆಸರನ್ನು ಹೇಳಲಾರಳೆಂದೂ ಅವರುಗಳು ತಿಳಿಸಿದರು."

"ಓಹ್! ಆ ಮಗು ನನ್ನದೇ ಅಬ್ದುಲ್ಲಾ! ಆ ಫ್ರೇಂಕಲಿನ್ ಹುಡುಗಿಯೇ ಮರಿಯಮ್. ಅಪವಾದ ಅಪಮಾನಗಳಿಂದ ಬಚಾಯಿಸಿಕೊಳ್ಳಲು ಹೆಸರನ್ನು ಬೇರ್ಪಡಿಸಿಕೊಂಡಿರಬೇಕು. ಸರಿ, ನಂತರ?" ಅಶೋಕನು ಆತುರತೆಯಿಂದ ಕೇಳಿದನು.

"ಆಕೆಯು ಒಂದು ದಿನ ತನ್ನ ಕೂಸನ್ನು ಎತ್ತಿಕೊಂಡು ಅಕಸ್ಮಾತ್ತಾಗಿ ಮಾಯವಾದಳು. ಹೊರಟು ಹೋಗುವಾಗ ಒಂದು ಚಿಕ್ಕ ಚೀಟಿಯನ್ನು ಇಟ್ಟು ಹೋಗಿದ್ದಳು. ಅದರಲ್ಲಿ ಇಷ್ಟೇ ಬರೆದಿತ್ತು. ಅವಳು ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಿಲ್ಲವೆಂದೂ, ಜನರ ಕುದೃಷ್ಟಿ ಮತ್ತು ತನಗೆ ಕೆಟ್ಟ ಹೆಸರು ಬರುವುದನ್ನು ಕಾಪಾಡಿಕೊಳ್ಳಲು ಯಾರೂ ಗುರುತಿಸದಂಥ ಊರಿಗೆ ಹೋಗುವಳೆಂದೂ ಬರೆದಿತ್ತು."

"ಅಬ್ದುಲ್ಲಾ!" ಅಶೋಕನು ಆರ್ತಸ್ವರದಿಂದ ಕೂಗಿದನು.

"ಏಕೆ ಹುಜೂರ್? ನಾನಿಲ್ಲೇ ಇದ್ದೇನೆ."

"ಈ ಹೊಟ್ಟೆಯೊಳಗೆ ಎಂತಹ ದಾರುಣವಾದ ನೋವಾಗುತ್ತಿದೆ, ಹಾಯ್! " ಎನ್ನುತ್ತ ಅಶೋಕನು ತೀವ್ರ ವ್ಯಥೆಯ ದೆಶೆಯಿಂದ ಹೊರ ಳಾಡಲಾರಂಭಿಸಿದನು.

ಅಬ್ದುಲ್ಲನು ಮುಂದೆ ಬಂದು ಹೊಟ್ಟೆಯಮೇಲೆ ಮೆದುವಾಗಿ ಕೈಯಾ ಡಿಸಲಾರಂಭಿಸಿದನು. "ಹುಜೂರ್, ತುಸು ವಿರಮಿಸಿದರೆ ಒಳ್ಳೆಯದಾದೀತು." ಎಂದ.

"ಹೊಟ್ಟೆ ಮಗುಚುತ್ತಿದೆ. ಒಂದು ಬಟ್ಟಲನ್ನು ಸ್ವಲ್ಪ ತಾ" ಅಶೋಕ ನಿಗೆ ವಾಂತಿಯಾಯಿತು.

"ಅನಂತರ ಸ್ವಲ್ಪ ಚೇತರಿಸಿಕೊಂಡಮೇಲೆ ಅವನು ಮಾತನಾಡ ಲಾರಂಭಿಸಿದನು:

"ಒಂದು ಸಲ ನನ್ನ ಕೈಗೆ ಸ್ವರ್ಗವೇ ಸಿಕ್ಕಿತ್ತು. ಆದರೆ ನಾನೇ ಅದನ್ನು ತಿಳಿಗೇಡಿತನದಿಂದ ಕಳೆದುಕೊಂಡೆ. ಇಂದು ಅದಕ್ಕಾಗಿ ಶಿಕ್ಷೆಯನ್ನು ಅನು ಭವಿಸುತ್ತಿದ್ದೇನೆ. ಹಾಯ್! ಪುನಃ ಅದೇ ಹಾಳಾದ ನೋವು. ಅಬ್ದುಲ್ಲಾ ಅಯ್ಯೋ!"

ಅಬ್ದುಲ್ಲನು ಈ ಬಾರಿ ಬಹಳ ಚಿಂತಿತನಾದನು.

"ಡಾಕ್ಟರನ್ನು ಕರತರಲೇ ಹುಜೂರ್?"

"ಸರಿಯಪ್ಪಾ, ಸರಿ. ಕರ್ಕೊಂಡು ಬಾ" ಅಶೋಕನು ನರಳುತ್ತಲೇ ಅಂದನು. "ಇರು, ಸ್ವಲ್ಪ ಇರು. ಹೊಟ್ಟೆ ಮಗುಚುತ್ತಿದೆ." ಪುನಃ ವಾಂತಿ ಯಾಯಿತು ಮೈ ಬೆವರಲಾರಂಭಿಸಿತು.

ಅವನ ಮೈಮೇಲೆ ಅಬ್ದುಲ್ಲನು ಕೈಯಾಡಿಸಿ ನೋಡಿದ. ತುಸು ಬಿಸಿ ಇತ್ತು. ವಾಂತಿಯನಂತರ ಕೊಂಚ ಶಾಂತವೂ ಆಯಿತು. ಅಬ್ದುಲ್ಲನು ಡಾಕ್ಟ ರನ್ನು ಬರಹೇಳಿ ಬಂದ.

"ಅಬ್ದುಲ್ಲಾ ನೋವು ನನ್ನನ್ನು ಬಹಳವಾಗಿ ಹಿಂಡುತ್ತೆ. ನಾನು ಬದುಕು ವೇನೊ ಇಲ್ಲವೊ ಎಂಬುದು ನನಗೇ ಸಂದೇಹ."

"ಡಾಕ್ಟರರು ಈಗ ಬರಬಹುದು ಹುಜೂರ್. ಅನಂತರ ನಿಮಗೆ ಸುಖ ವಾದೀತು. ನೀವು ನಿಶ್ಚಿಂತರಾಗಿರಿ." ಎಂದು ಅಬ್ದುಲ್ಲನು ವಿಶಾಸವಿತ್ತನು.

ಡಾಕ್ಟರ್ ಬಂದರು. ಬಹಳ ಸಾವಧಾನದಿಂದ ಅಶೋಕನ ಪರೀಕ್ಷೆ

ಯನ್ನು ಮಾಡಿದರು. ಅವರ ಗಂಭೀರ ಮುಖವನ್ನು ಕಂಡ ಅಬ್ದುಲ್ಲನ ಹೃದಯವು 'ಧಕ್' ಎಂದಿತು.

ಡಾಕ್ಟರರೆಂದರು : "ಅಪೆಂಡಿಸಾಯಿಟ್ ಆದಂತೆ ತೋರುತ್ತೆ. ಎಕ್ಸ್‌ರೇ ತೆಗೆಯುವುದು ಉತ್ತಮ. ಅದರಿಂದ ಭಯ ಮತ್ತು ಸಂಶಯಗಳು ದೂರವಾಗುತ್ತವೆ."

ಕೂಡಲೆ ಅಂಬುಲೆನ್ಸ್ ಗಾಡಿಯನ್ನು ಕರೆದುದಾಯಿತು. ಮೇಯೋ ಆಸ್ಪತ್ರೆಯಲ್ಲಿ ಎಕ್ಸ್‌ರೇ ತೆಗೆದರು. ಫೋಟೋ ನೋಡಿದಲ್ಲಿ 'ಎಪೆಂಡಿಸಾಯಿಟ್' ಆಗಿರುವುದು ಆವಶ್ಯಕ ಎಂಬುದು ತಿಳಿಯಿತು. ಇಲ್ಲವಾದರೆ ಒಂದಲ್ಲ ಒಂದು ದಿನ ಇದು ಪ್ರಾಣಕ್ಕೇ ಅಪಾಯ ತಂದೊಡ್ಡಬಹುದು. ಎಂದು ಡಾಕ್ಟರರ ಉಪದೇಶವಾಗಿತ್ತು.

ಮುಂದಿನ ತಿಂಗಳ ಮೊದಲ ವಾರದಲ್ಲಿ ಆಪರೇಶನ್ ಮಾಡುವುದೆಂದು ನಿಶ್ಚಯವಾಯಿತು. ಅಶೋಕನನ್ನು ಪುನಃ ಅವನ ಬಂಗಲೆಗೇ ತಂದಿರಿಸಿದರು.

ಅಬ್ದುಲ್ಲನು ತನ್ನ ಕಣ್ಣೀರನ್ನು ಒರಸುತ್ತಾ ಧನಿಯ ಸೇವೆ-ಶುಶ್ರೂಷೆಗಳನ್ನು ಮಾಡುತ್ತಿದ್ದನು. ಅವನು ಈಗ ನಿಯಮಿತವಾಗಿ ದಿನಕ್ಕೆ ಐದು ಬಾರಿಯಂತೆ ನಮಾಜ್ ಮಾಡಲು ಆರಂಭಿಸಿದ. ಅದರ ಕೊನೆಗೆ ಅವನ ಯಜಮಾನರು ಬೇಗನೆ ಗುಣಮುಖವಾಗಲೆಂದು 'ಖುದಾ'ನನ್ನು ಪ್ರಾರ್ಥಿಸುತ್ತಿದ್ದ. ಅಶೋಕನ ಈ ದುರ್ದಿನಗಳಲ್ಲಿ ಅಬ್ದುಲ್ಲನೇ ಅವನ ಆಧಾರವಾಗಿದ್ದನು.

ಮಾಯಾದೇವಿಯು ಸ್ವತಃ ಬಂದು ಒಬ್ಬ ನರ್ಸಳಂತೆ ಕೆಲವು ಗಂಟೆಗಳ ತನಕ ಪೂರ್ಣ ಹೃದಯ ಮತ್ತು ಮನಸ್ಸಿನಿಂದ ಅಶೋಕನ ಸೇವೆಯನ್ನು ಮಾಡಿ ಹೋಗುತ್ತಿದ್ದಳು. ಅವಳ ಕ್ಲಬ್, ಸಿನೇಮಾ ಇತ್ಯಾದಿಗಳು ಪೂರ್ಣವಾಗಿ ನಿಂತು ಹೋಗಿದ್ದವು. ಗೆಳೆಯ ಗೆಳತಿಯರ ಮನೆಗೆ ಹೋಗುವುದೂ ಸಂಪೂರ್ಣವಾಗಿ ಕೊನೆಗೊಂಡಿತ್ತು.

ಆಪರೇಶನಿನ ದಿನವು ಹತ್ತಿರ ಹತ್ತಿರಕ್ಕೆ ಬಂದಂತೆ ಅಬ್ದುಲ್ಲಾ ಮತ್ತು ಮಾಯಾಳ ಚಿಂತೆಯು ಹೆಚ್ಚಾಗಲಾರಂಭಿಸಿತು. ಅಶೋಕನು ನಿದ್ರೆಯಲ್ಲೂ, ಸ್ವಪ್ನದಲ್ಲೂ, ತೀವ್ರಜ್ವರದ ಜ್ವಾಲೆಯಲ್ಲೂ "ಮರಿಯಮಳು ಬರಲಿಲ್ಲ" ಎನ್ನುತ್ತಿದ್ದನು. ಒಮ್ಮೊಮ್ಮೆ "ನಾನು ನೀಚನು. ನನ್ನನ್ನು ಕ್ಷಮಿಸು ಮರಿಯಂ"

ಎಂದೂ ಗೊಣಗುತ್ತಿದ್ದನು.

ಮೊದಲು ಮರಿಯಮಳನ್ನು ಮಾಯಾದೇವಿಯು ಕುರುಡು ಕಣ್ಣು ಗಳಿಂದಲೂ ಕಾಣಲು ಇಚ್ಛಿಸುತ್ತಿರಲಿಲ್ಲ. ಆದರೆ ಈಗ ಅವಳದೇ ಧ್ಯಾನ ವಾಗಿದೆ. ಅವಳು ಅಬ್ದುಲ್ಲನನ್ನು ಒಂದು ಬದಿಗೆ ಕರೆದು ತೀವ್ರವಾದ ಆಸೆ ಯಿಂದ ಕೇಳಿದಳು:

“ಎಷ್ಟಾದರೂ ಹಣ ವೆಚ್ಚವಾಗಲಿ,....ಅದರ ಚಿಂತೆ ಇಲ್ಲ. ಹೇಗಾದರೂ ಮರಿಯಮಳು ಬರಲಾರಳೇ ?”

“ನನಗೂ ಅದೇ ಬೇಕಾದುದು. ಆದರೇನು ಮಾಡಲಿ ಒಂದೂ ಮನ ಸ್ಸಿಗೆ ಹೊಳೆಯುವುದಿಲ್ಲ” ಎನ್ನುತ್ತ ವಿಚಾರ ಮಗ್ನನಾದ ಅವನು ನಿಸ್ತಬ್ಧನಾಗಿ ನಿಂತುಕೊಂಡನು.

ಮೂವತ್ತೊಂದು

ಮರಿಯಮಳು ತನ್ನ ಎಲ್ಲಾ ಸುಖಸ್ವಪ್ನಗಳನ್ನು ನಾಗಪುರದಲ್ಲೇ ಬಿಟ್ಟು ಕೊಟ್ಟು ಮಳೆ ಸುರಿಯುತ್ತಿದ್ದ ಆ ರಾತ್ರಿಯಲ್ಲಿಯೇ ಹೌರಾ ಎಕ್ಸ್‌ಪ್ರೆಸ್ಸಿನಲ್ಲಿ ಹೋಗುತ್ತಿದ್ದಳು. ಹೊರಗೆ ಅಂಧಕಾರವು ಆವರಿಸಿಕೊಂಡಿತ್ತು. ಆಕಾಶವು ಕಪ್ಪು ಮೋಡಗಳಿಂದ ಆಚ್ಛನ್ನವಾಗಿತ್ತು.

ಆ ರೈಲು ಕೋಣೆಯಲ್ಲಿ ಮೊದಲೇ ಜನಸ್ತೋಮವು ಹೆಚ್ಚಾಗಿತ್ತು. ದುಃಖದಿಂದ ಜರ್ಜರವಾದ ಮರಿಯಮಳನ್ನು ಕಂಡರೂ ಜೊತೆಯ ಪ್ರಯಾಣಿ ಕರು ಅವಳಿಗೆ ಕುಳಿತುಕೊಳ್ಳಲು ಒಂದಿಷ್ಟು ಜಾಗವನ್ನೂ ಕೊಡಲಿಲ್ಲ. ಆದ್ದ ರಿಂದ ಕೆಳಗೆ ಬಾಗಿಲ ಬಳಿ ತನ್ನ ಮೂಟೆಯ ಮೇಲೆ ಕುಳಿತು ಅವಳು ತನ್ನ ವಿಚಾರದಲ್ಲೇ ಮಗ್ನಳಾಗಿದ್ದಳು.

ಜೂನ್ ಇಪ್ಪತ್ತೇಳನೆಯ ತಾರೀಕು. ಪಾಠಶಾಲೆಯ ಹೆಡ್ ಮಿಸ್ಟ್ರೆಸ್ ಅವಳಿಗೆ ಜುಲಾಯಿ ಎರಡನೆಯ ತಾರೀಕಿನಿಂದ ಶಾಲೆಗೆ ಕೆಲಸಕ್ಕೆ ಬರಬೇಕೆಂದು ಸೂಚನೆಯನ್ನಿತ್ತಿದ್ದಳು. ಇದರ ಆಶೆಯಿಂದ ಅವಳು ಅಪ್ರಯೋಜಕ ಮತ್ತು ಪ್ರಣಯಭಂಗಗಳ ಪರ್ವತದಂತಹ ದಿನಗಳನ್ನು ಕಳೆದಿದ್ದಳು. ಅಶೋಕನ

ವಿವಾಹ ಸಮಾಚಾರವನ್ನು ಓದಿದ ನಂತರವಂತೂ ಅವಳ ಪ್ರೀತಿ ಎಂಬ ನಾಟಕದ ಕೊನೆಯ ಪರದೆಯೇ ಬಿದ್ದಂತಾಗಿತ್ತು. ಕೇವಲ ಒಂದು ಚಿಕ್ಕ ಉಪಸಂಹಾರವು ಮಾತ್ರ ಉಳಿದಿತ್ತು. ಅದೂ ಮುಗಿದ ನಂತರ ಆ ದುಃಖಾಂತ ನಾಟಕವು ಸದಾಕಾಲಕ್ಕೂ ಅಂತ್ಯವಾಗಬೇಕಾಗಿದ್ದಿತು. ಅದನ್ನೇ ಪೂರ್ತಿಗೊಳಿಸಲು ಅವಳು ಗುಣವತೀ ಜಾನ್ ಅವರಿಂದ ಒಂದು ದಿನದ ರಜೆಯನ್ನು ಪಡೆದು ನಾಗಪುರಕ್ಕೆ ಹೊರಟಿದ್ದಳು. ಇದರಿಂದ ಅವಳು ಆ ಯಾವುದೇ ದಾರುಣವಾದ ವೇದನಾಮಯ ಸ್ಮೃತಿ ಚಿಹ್ನೆಯು ತನ್ನಲ್ಲಿಲ್ಲದಂತೆ ಮಾಡಬೇಕೆಂದು ಎಣಿಸಿಸಿದ್ದಳು. ಆ ಎರಡು ವಸ್ತುಗಳು ಯಾರವೊ ಅವರಿಗೇ ಅದು ಸೇರಲಿ. ಆದರೆ ಅವಳಿಗೆ ಒಂದೇ ಒಂದು ಮೋಹವಿತ್ತು. ಅದು ಅಶೋಕನನ್ನು ಕೊನೆಯ ಬಾರಿ ಅತಿ ದೂರದಿಂದಲಾದರೂ ನೋಡುವ ಆಸೆ. ಏಕೆಂದರೆ ಇದೇ ಅಂತಿಮ ಬಾರಿ ಅವಳು ತನ್ನ ಜೀವನದಲ್ಲಿ ಅವನನ್ನು ಕಾಣುವುದು. ಅನಂತರ ಸದಾಕಾಲಕ್ಕೂ ಅವನಿಂದ ದೂರವಾಗಿರುವುದೇ ಅವಳ ಎಣಿಕೆ.

ತನ್ನ ಮಗುವನ್ನು ಗುಣವತಿಯ ವಶಕ್ಕೊಪ್ಪಿಸಿ, ಇಪ್ಪತ್ತನಾಲ್ಕು ಘಂಟೆಯ ರಜೆಯನ್ನು ಪಡೆದು ಪ್ರಾತಃಕಾಲ ಜಬಲ್‌ಪುರದಿಂದ ಹೊರಟಳು. ನಾಗಪುರಕ್ಕೆ ಬಂದು ಅಲ್ಲಿ ನಾಲ್ಕೈದು ಘಂಟೆಗಳ ಕಾಲವಿದ್ದು ರಾತ್ರಿಯ ರೈಲಲ್ಲಿ ಹಿಂತಿರುಗುತ್ತಿದ್ದಳು. ಇದಕ್ಕೆ ಇನ್ನೂ ಒಂದು ಕಾಣವಿತ್ತು. ಅವಳಿಗೆ ಮಗುವನ್ನು ಒಂದೆಡೆಗೆ ಬಿಟ್ಟು ತಾನೊಂದೆಡೆಗೆ ಇರಲು ಸಾಧ್ಯವಾಗದು. ಸ್ತ್ರೀ ಸಹಜ ಗುಣವೆಂದರೆ ಇದೇ.

ವಿಚಾರ ಚಕ್ರವು ತೀವ್ರ ಗತಿಯಿಂದ ಅವಳ ತಲೆಯೊಳಗೆ ತಿರುಗುತ್ತಿತ್ತು. ಅವಳ ಚಿತ್ತವು ಸ್ಥಿರವಾಗಿರಲಿಲ್ಲ. ಅವಳ ಕಣ್ಣುಗಳು ಮಸಕಾಗಿದ್ದವು. ಅವುಗಳಿಗೆ ಏನೂ ಕಾಣಿಸುತ್ತಲಲೆ ಇರಲಿಲ್ಲ. ಅವಳ ಕೋಣೆಯೊಳಗೆ ದೀಪಗಳಿವೆ, ಅವಳೊಂದಿಗೆ ಇತರ ಪ್ರಯಾಣಿಕಗಿದ್ದಾರೆ ಎಂಬುದರ ಅರಿವೂ ಅವಳಿಗೆ ಇಲ್ಲ. ಕಿಟಕಿಯ ಹೊರಗೆ ಅಂಧಕಾರ, ಅಂತೆಯೇ ಮರಿಯಮಳ ಹೃದಯದಲ್ಲೂ ಅಂಧಕಾರ.

ಆದರೆ ಇದೇಕೆ ಅವಳಿಗೆ ಬಾರಿ ಬಾರಿಗೂ ಇಷ್ಟು ತೃಷೆಯುಂಟಾಗತ್ತಿದೆ ? ಸಾಲದುದಕ್ಕೆ ಗಂಟಲು ಜೇರೆ ಒಣಗಿ ಹೋಗುವಂತಿದೆ.

ನೀರು ಸಿಗುವ ಎಲ್ಲಾ ಸ್ಟೇಶನುಗಳಲ್ಲೂ ಇಳಿದು ಅವಳು ನೀರು ಕುಡಿ

ಯಲು ಪ್ರಯತ್ನಿಸುತ್ತಿದ್ದಳು. ಒಮ್ಮೊಮ್ಮೆ ನೀರು ಸಿಗುತ್ತಿತ್ತು, ಕೆಲವೊಮ್ಮೆ ಸಿಗುತ್ತಿರಲಿಲ್ಲ. ಒಂದೊಂದು ಸಲ ನೀರಿನವ ಅವಳ ಬಳಿ ಬರುತ್ತಲೇ ರೈಲು ತನ್ನ 'ಧಸ್' 'ಧಸ್' ಶಬ್ದದೊಂದಿಗೆ ಜಾಗವನ್ನು ಬಿಟ್ಟು ಮುಂದೆ ಸಾಗುತ್ತಿತ್ತು. ಇವಳೊಂದಿಗೆ ಪ್ರಯಾಣ ಮಾಡುತ್ತಿದ್ದ ಇತರ ಹೆಂಗಸರು "ಎಷ್ಟು ನೀರು ಕುಡಿಯುವಳಪ್ಪಾ?" ಎನ್ನುತ್ತಿದ್ದರು.

ಅವಳ ಅಂತರ್ಯದಲ್ಲಿ ಎಂದೂ ತೀರದ ತೃಷೆ ಇರುವುದೇನೋ ನಿಜ. ಆದರೆ ಅವಳ ಶರೀರವೇಕೆ ಕಂಪಿಸುತ್ತಿದೆ? ಕಿವಿಗಳೇಕೆ ಶೂನ್ಯವಾಗುತ್ತಿವೆ? ಕಣ್ಣುಗಳೇಕೆ ಉರಿಯುತ್ತಿವೆ?

ಇಷ್ಟರಲ್ಲಿ ಒಬ್ಬ ಸ್ತ್ರೀಯ ಕೈಯು ಇವಳ ಮೈಗೆ ತಗುಲಿತು. "ರೀ ಇವಳ ಮೈ ಮುಟ್ಟಿ ನೋಡಿ ಹೇಗೆ ಕಾದುಹೋಗಿದೆ!"

ನಿಜ, ತುಂಬಾ ಬಿಸಿ ಏರಿದೆ. ಜ್ವರದ ಆ ಕಠೋರ ಕಾವಿನಿಂದ ಅವಳು ಮೂರ್ಛಿತಳಂತಾಗಿದ್ದಳು.

ಈ ಅರ್ಧ ಮೂರ್ಛಿತ ಅವಸ್ಥೆಯಲ್ಲಿ ಅವಳು ಯಾವಾಗ ಗೊಂದಿಯಾ ಸ್ಟೇಶನಿನಲ್ಲಿ ಇಳಿದು, ಎಷ್ಟು ಹೊತ್ತಿಗೆ ಇನ್ನೊಂದು ರೈಲಲ್ಲಿ ಕುಳಿತಳೋ ಅವಳಿಗದು ತಿಳಿಯದು. ಅದೇ ಅವಸ್ಥೆಯಲ್ಲಿ ಅವಳಿದ್ದ ಮನೆಯನ್ನು ಸೇರಿದಳು. ಅವಳ ಚೇತನಾಶಕ್ತಿಯೇ ಲುಪ್ತವಾಗಿ ಹೋಗಿತ್ತು.

ಮನೆಯನ್ನು ಸೇರುತ್ತಲೇ ಅವಳು ಬಾಲಕನು ಏಗಿ ಏಗಿ ಅಳುತ್ತಿದ್ದುದನ್ನು ಕಂಡಳು. ಆ ಅಳು ಅವಳ ಬೆಂದ ಹೃದಯವನ್ನು ಹೋಳು ಮಾಡಿತು. ಅವಳನ್ನು ನೋಡುತ್ತಲೇ ಗುಣವತಿಯು ಕ್ರೋಧಿತಳಾಗಿ ಹೇಳಿದಳು: "ಎಂತಹ ಸುಟ್ಟ ಮೊಗದ ಹೆಂಗಸು ನೀನು. ತಾಯಿಯೇ, ಏನು ರಕ್ಕಸಿಯೇ? ಕಾಯಿಲೆ ಮಗುವನ್ನು ಬಿಟ್ಟು ಎಲ್ಲೆಲ್ಲೊ ಹೋಗಿದ್ದಾಳೆ. ರಾತ್ರಿ ಪೂರಾ ಅತ್ತು ಅತ್ತು ಒಂದು ಗಳಿಗೆಯಾದರೂ ನಿದ್ರೆ ಮಾಡಲು ಬಿಡುತ್ತಿದ್ದರೆ ಆಣೆ ಇದೆ. ಇಂತಹ ಮಗುವನ್ನು ನಾನೆಲ್ಲೂ ನೋಡಿಲ್ಲ. ತಂದೆ ಇಲ್ಲದ ಮಗುವಾದರೆ ಏನಾಯಿತು?" ಆದರೆ ಮರಿಯಮಳ ಕಿವಿಗಳಿಗೆ ಈ ತೀವ್ರ ಶಬ್ದಗಳು ಕೇಳಿಸಲೇ ಇಲ್ಲ. ಒಂದು ವೇಳೆ ಅವಳ ಕಿವಿಗಳಿಗೆ ಅದು ಬಿದ್ದಿದ್ದರೂ ಅವುಗಳ ಅರ್ಥವು ಇವಳ ಮೇಲೆ ಯಾವ ಪ್ರಭಾವವನ್ನು ಬೀರಲಿಲ್ಲ.

ಅವಳು ಮಗುವನ್ನು ಮಮತೆಯಿಂದ ಎದೆಗಪ್ಪಿಕೊಂಡು ಅದಕ್ಕೆ ಹಾಲನ್ನು ಉಣಿಸಲಾರಂಭಿಸಿದಳು.

ಅಹ್ಹಾ ! ಅದರ ಶರೀರವೂ ಎಷ್ಟು ಬೆಚ್ಚಗಿದೆ. ಕಾದ ಹಂಚಿನಂತೆ ಸುಡುತ್ತಿದೆ. ಮರಿಯಮಳ ಹೃದಯವು ಧಸಕ್ಕೆಂದಿತು. ಜೊತೆಗೆ ಕಣ್ಣುಗಳಲ್ಲಿ ನೀರೂ ಹರಿಯಲಾರಂಭಿಸಿತು.

ಮೂವತ್ತೆರಡು

ಆಪರೇಶನಿಗೆ ಒಂದು ದಿನ ಮೊದಲು ಅಶೋಕನನ್ನು ಮೇಯೋ ಆಸ್ಪತ್ರೆಗೆ ಸೇರಿಸಲಾಯಿತು. ಒಬ್ಬ ಡಾಕ್ಟರು ಬಂದು ಅಶೋಕನ ಹೃದಯದ ಗತಿ, ನಾಡಿ, ಕಣ್ಣು ಇತ್ಯಾದಿಗಳನ್ನು ನೋಡಿಕೊಂಡು ಹೋದರು. ಐದು ನಿಮಿಷಗಳ ನಂತರ ಒಬ್ಬ ನರ್ಸ್ ಬಂದಳು. ಒಂದು ಶ್ವೇತಚೂರ್ಣವನ್ನು ಅಶೋಕನಿಗೆ ತಿನಿಸಿ, ಅದರ ಮೇಲೆ ಒಂದಿಷ್ಟು ನೀರನ್ನು ಕುಡಿಸಿದಳು. ಔಷಧಿಯನ್ನು ತಿನಿಸುವ ಈ ಕ್ರಮವು ಹಲವು ಬಾರಿ ನಡೆಯಿತು.

ಸಂಜೆ ಡಾಕ್ಟರ್ ರಾಯ್ ಅವರು ಬಂದು ಇವನನ್ನು ನೋಡಿ ಹೋದರು. ಅವರೇ ಅಶೋಕನಿಗೆ ಶಸ್ತ್ರ ಚಿಕಿತ್ಸೆ ಮಾಡುವ ಮುಖ್ಯ ಡಾಕ್ಟರ್. ಅವರೊಂದಿಗೆ ಇನ್ನಿಬ್ಬರು ಡಾಕ್ಟರುಗಳೂ, ಮೂರು ಜನ ನರ್ಸ್‌ಗಳೂ ಬಂದು ಈ ಕೇಸಿನ ವಿಷಯವಾಗಿ ವಿಚಾರ-ವಿನಿಮಯಗಳನ್ನು ಮಾಡಿದರು. ಇದರ ದೆಸೆಯಿಂದ ಅಶೋಕನ ಕೋಣೆಯು ಅಕಸ್ಮಾತ್ತಾಗಿ ಗಂಭೀರ ವಾತಾವರಣವನ್ನು ಹೊಂದಿತು. ಇದರ ಪ್ರತಿಛಾಯೆಯು ಅಬ್ದುಲ್ಲನ ಮುಖದ ಮೇಲೂ ಬಿತ್ತು. ಆದರೂ ತೋರಿಕೆಗೆ ಸಂತೋಷವದನನಾಗಿ ಇರುವವನಂತೆ ನಟಿಸಲು ವ್ಯರ್ಥವಾಗಿ ಪ್ರಯತ್ನಿಸುತ್ತಿದ್ದನು.

"ನನ್ನ ಒಂದೇ ಒಂದು ಆಸೆ ಇದೆ ಅಬ್ದುಲ್ಲಾ, ನಾನು ಮೃತನಾದ ನಂತರ........"

"ಇಲ್ಲ, ಹುಜೂರ್, ಹೀಗೆ ಮೃತ್ಯು ವಿಚಾರಗಳನ್ನು ದಯವಿಟ್ಟು ಮಾಡಬೇಡಿರಿ. ದೇವರು ತಮ್ಮನ್ನು ಅಗತ್ಯವಾಗಿ ಇದರಿಂದ ಪಾರುಮಾಡುತ್ತಾನೆ."

"ನಾಳೆಗೆ ಏನಾಗಬಹುದೋ ತಿಳಿಯದು ಅಬ್ದುಲ್ಲಾ. ಅಪೆಂಡಿಸಾಯಿಟಿ ಅಪರೇಶನ್‌ಗಳೇನೋ ಸಫಲವಾಗುತ್ತವೆ. ಆದರೆ ರೋಗಿಯು ಕೂಡ ಇದಕ್ಕೆ ಸಹಾಯ ಮಾಡಬೇಕು. ನನಗಾದರೊ ಈಗ ಜೀವಿಸಿರುವುದಕ್ಕೆ ಯಾವ ಮುಖ್ಯ ಮೋಹವೂ, ಉದ್ದೇಶವೂ ಕಾಣಿಸುವುದಿಲ್ಲ. ಸತ್ತರೇನೇ ನನಗೆ ಶಾಂತಿ ಸಿಗುವುದು. ಆದ್ದರಿಂದ........"

"ಹಾಗೆಂದೂ ಆಗದು ಹುಜೂರ್. ನಿನ್ನೆ ರಾತ್ರೆ ನನಗೊಂದು ಸ್ವಪ್ನವಾಗಿತ್ತು. ಅದರಲ್ಲಿ ಮರಿಯಮಳು ಬಂದಂತೆಯೂ, ನಿಮ್ಮ ಆಪರೇಶನ್ ಸಫಲವಾದಂತೆಯೂ ಕಂಡೆನು."

"ಸರಿ. ಇವೆಲ್ಲ ನಿನ್ನ ಮಲಗುವ ಸಮಯದ ಯೋಚನೆಗಳಿಗೆ ಪ್ರತಿಫಲವಾದ ಸ್ವಪ್ನಗಳು." ಅಶೋಕನು ಕ್ಷೀಣವಾದ ನಗೆಯನ್ನು ಬೀರುತ್ತ ಹೇಳಿದನು. ಅವನ ಮಾತುಗಳಲ್ಲಿ ಉದಾಸೀನತೆಯೂ ಕೂಡಿಕೊಂಡಿತ್ತು. "ಹೀಗೇನಾದರೂ ಆಗಿ ಹೋಗುವುದಾದರೆ ಒಳಿತೇ. ಆದರೆ ಒಂದು ವೇಳೆ ಆಗದೆ ಹೋಯಿತೆನ್ನು. ಆಗ ನನ್ನ ಒಂದೇ ಒಂದು ಕೊನೆಯ ಇಚ್ಛೆ ಇದೆ."

"ಹುಜೂರ್ "

"ನನ್ನ ಮರಣಾನಂತರ ನನ್ನ ಅಂತಿಮ ಕ್ರಿಯೆಗಳನ್ನು ಪಾದರೀಪುರದಲ್ಲೆ ಮಾಡತಕ್ಕದ್ದು. ಆ ಚಿಕ್ಕ ಜಲಪಾತದ ಬಳಿಯಲ್ಲಿ ಒಂದು ಬಕುಲವೃಕ್ಷವಿದೆಯಲ್ಲವೇ? ಅದೇ ಸ್ಥಳದಲ್ಲಿ. ಮತ್ತು ಅಲ್ಲಿ ಒಂದು ಚಿಕ್ಕ ಸ್ಮೃತಿಮಂದಿರವನ್ನು ಕಟ್ಟಿಸಬೇಕು."

ಪಾಪ, ಅಬ್ದುಲ್ಲನು ಕೆಳಮುಖದವನಾಗಿ ಇದೆಲ್ಲವನ್ನೂ ಕೇಳುತ್ತಿದ್ದನು. ಒಂದು ದೀರ್ಘಶ್ವಾಸವು ಮಾತ್ರ ಅವನ ಬಾಯಿಂದ ಹೊರಬಂದಿತು.

ಅಶೋಕನು ಮನಸ್ಸಿನಲ್ಲೆ ಮೃತ್ಯುವಿನ ಸ್ವಾಗತಕ್ಕೆ ಅಣಿ ಮಾಡುತ್ತಿದ್ದನು. ಆದ್ದರಿಂದ ಅವನ ಹೃದಯದಲ್ಲಿ ಒಂದು ವಿಚಿತ್ರವಾದ ವಿರಕ್ತಿಪೂರ್ಣ ಶಾಂತಿಯು ನೆಲೆಸಿತ್ತು. ಚಿಂತೆ ಮತ್ತು ಭಯ ಇವೆರಡೂ ಅಬ್ದುಲ್ಲನನ್ನು ಆವರಿಸಿದ್ದರಿಂದ ಅವನಿಗೆ ಮಾತನಾಡುವುದಕ್ಕೇ ಕಷ್ಟವಾಗುತ್ತಿತ್ತು. ಮಾಯಾದೇವಿಯು ಬಂದು ಹೋಗುತ್ತಿದ್ದಾಗ ಮಾತ್ರ ಅಬ್ದುಲ್ಲನಿಗೆ ತುಸುವಾದರೂ ಶಾಂತಿ ಸಿಗುತ್ತಿತ್ತು. ಯಾವ ಸ್ತ್ರೀಯನ್ನು ಅವನು ಹಿಂದೆ ತಿರಸ್ಕಾರದ ಕಣ್ಣಲ್ಲಿ ಕಾಣುತ್ತಿದ್ದನೊ ಅವಳೇ ಈಗ ಅವನ ಆಧಾರವಾಗಿದ್ದಾಳೆ.

ನೂಕುವ ಗಾಡಿಯಲ್ಲಿ ಅಶೋಕನನ್ನು ಮಲಗಿಸಿ ಆಪರೇಶನ್ ಥಿಯೇ
ರಿಗೆ ಕೊಂಡುಹೋದಾಗ ಅಬ್ದುಲ್ಲನ ಎದೆಯ ಧಡಧಡಿಕೆಯು ಹೆಚ್ಚಾಗಿ ತುಂಬ
ಭಯಗ್ರಸ್ತನಾದನು. ಆಗ ಅವನಲ್ಲಿ ಆಪರೇಶನ್ ಥಿಯೇಟರ ಬಳಿಗೆ ಹೋಗ
ವುದಕ್ಕೂ ಧೈರ್ಯವಿರಲಿಲ್ಲ. ತುಸು ದೂರದಲ್ಲಿರುವ ಅಶ್ವತ್ಥ ಮರದಡಿಯ
ನಿಂತು ಆ ಆಪರೇಶನ್ ಥಿಯೇಟರ್ ಕಡೆಗೆ ಒಂದೇಸಮನೆ ನೋಡುತ್ತಿದ್ದ.

ಮೂವತ್ತಮೂರು

ಮರಿಯಮ್ ಮತ್ತು ಅವಳ ಮಗು ಇವರಿಬ್ಬರ ಅಸ್ವಸ್ಥತೆಯ ಕಾರಣ
ದಿಂದ ಅವಳ ಜೀವನವು ಅಶಾಂತವೂ ಕಠಿನವೂ ಆಗಿತ್ತು. ಚಿಂತೆ ಮತ್ತು
ಕಷ್ಟಗಳ ಈ ಭಾರಿ ಭಾರದಡಿಯಲ್ಲಿ ಬಿದ್ದು ಅವಳು ಎಂದು ಚಚ್ಚಿ ಹೋಗ
ವಳೊ ತಿಳಿಯದು. ತರತರದ ವಿಚಾರಗಳು ಅವಳ ಮನಸ್ಸಿನಲ್ಲಿ ಚಕ್ರದಂ
ತಿರುಗುತ್ತಿದ್ದವು.

ಒಂದು ದಿನ ಅವಳು ಬೆಳಗ್ಗೆ ಪಾಠಶಾಲೆಗೆ ಹೋದಾಗ ಅವಳ ಒಬ್ಬ ಸಹ
ಉಪಾಧ್ಯಾಯಿನಿಯು ಕೇಳಿದಳು.

"ನೀವು ಇಂದಿನ ವರ್ತಮಾನ ಪತ್ರಿಕೆಯಲ್ಲಿರುವ ಒಂದು ಚಮತ್ಕಾರ
ವನ್ನು ಓದಿದಿರೆ? ಒಬ್ಬ ಕಲಾಕಾರನು ಮೃತಪಟ್ಟ ಅನಂತರವೂ ಅವನಿಗೆ
ವೈದ್ಯರು ಜೀವವಿತ್ತರಂತೆ. ಆಶ್ಚರ್ಯ! ಇಂದ್ರಜಾಲದಂತೆ ಇದೆ ಅಲ್ಲವೇ ?"

ಕಲಾಕಾರ ಎಂಬ ಹೆಸರು ಕಿವಿಗೆ ಬಿದ್ದೊಡನೆ "ಎಲ್ಲಿ? ಯಾವುದು ? "
ಮರಿಯಮಳು ಉತ್ಸುಕತೆಯಿಂದ ಕೇಳಿದಳು.

"ನೀವು ಪತ್ರಿಕೆಯನ್ನು ನೋಡಲೇ ಇಲ್ಲವೇ ? ನಮ್ಮ ಶಾಲೆಯಲ್ಲೆಲ್ಲ
ಇದೇ ಅದ್ಭುತ ಘಟನೆಯ ಚರ್ಚೆಯಾಗುತ್ತಿದೆ!"

"ಇಲ್ಲ. ನಾನು ಇತ್ತೀಚೆಗೆ ಪತ್ರಿಕೆಗಳನ್ನು ನೋಡುವುದಿಲ್ಲ. ಆದರೆ ಈಗ
ಆ ವಿಚಿತ್ರ ಮತ್ತು ಅದ್ಭುತ ಸಮಾಚಾರವನ್ನೊಳಗೊಂಡ ಆ ಪತ್ರಿಕೆಯಾದರೂ
ಎಲ್ಲಿದೆ ?"

"ಆಫೀಸಿನಲ್ಲಿರಬಹುದು."

ಒಂದೇ ಶ್ವಾಸದಲ್ಲಿ ಕ್ಷುಧಿತಳಂತೆ ಮರಿಯಮ್ ಅದನ್ನು ಓದಿದಳು. ಆದರೂ ಅವಳಿಗೆ ನಂಬಿಕೆಯಾಗಲಿಲ್ಲ. ಅವಳು ಆಗ ಏನನ್ನು ಓದುತ್ತಿದ್ದಾಳೆಂಬುದು ಕೂಡ ಅರಿಯಳು. ಇದು ನಿಜವಾದ ಘಟನೆಯೋ ಇಲ್ಲವೇ ಇದೊಂದು ಸ್ವಪ್ನವೋ ಎಂದು ವಿಚಾರಮಾಡತೊಡಗಿದಳು. ಅದರಲ್ಲಿ ಹೀಗೆಂದು ಬರೆದಿತ್ತು.

"ನಿನ್ನೆ ಪ್ರಾತಃಕಾಲ ಮೇಯೋ ಆಸ್ಪತ್ರೆಯಲ್ಲಿ ಒಂದು ಅದ್ಭುತ ಘಟನೆಯು ನಡೆಯಿತು. ಅದರಲ್ಲಿ ಸತ್ತವರನ್ನು ಬದುಕಿಸಿ, ಅವನಲ್ಲಿ ಪುನಃ ಪ್ರಾಣವನ್ನು ಸಂಚಾರ ಮಾಡಿಸಲಾಯಿತು. ಆ ವ್ಯಕ್ತಿಯು ನಾಗಪುರದ ಪ್ರಖ್ಯಾತ ಕಲಾಕಾರರಾಗಿದ್ದ ಶ್ರೀ ಅಶೋಕ್ ಠಾಕೂರರು.

"ನಿನ್ನೆ ಬೆಳಿಗ್ಗೆ ಒಂಭತ್ತು ಘಂಟೆಯ ಹೊತ್ತಿಗೆ ಶ್ರೀ ಠಾಕೂರರಿಗೆ ಅಪೆಂಡಿಸಾಯಿಟ್ ಆಪರೇಶನ್ನಿಗಾಗಿ ಆಪರೇಶನ್ ಥಿಯೇಟರಿಗೆ ಸೇರಿಸಲಾಗಿತ್ತು. ಅವರ ಮೂರ್ಛೆಗೆ ಕ್ಲೋರೋಫಾರ್ಮ್‌ನ್ನು ಕೊಡುತ್ತಿದ್ದಾಗ ಅಸಿಸ್ಟೆಂಟ್ ಡಾಕ್ಟರರ ಅಸಾವಧಾನದಿಂದ ಅದರ ಪರಿಣಾಮವು ಜಾಸ್ತಿಯಾಗಲು ಅಶೋಕ್ ಠಾಕೂರರು ಎಷ್ಟು ಹೊತ್ತಿಗೆ ಮೂರ್ಛೆಯ ನಾಲ್ಕನೆಯ ಅವಸ್ಥೆಗೆ ಬಂದರೆಂದು ತಿಳಿಯಲಿಲ್ಲ. ಇದರ ಫಲವಾಗಿ ರೋಗಿಯ ಶ್ವಾಸೋಚ್ಛ್ವಾಸವು ನಿಂತು ಹೋಯಿತು. ನಾಡಿಯೂ ಸ್ತಬ್ಧವಾಯಿತು. ಮುಖವು ರಕ್ತರಹಿತವಾಗಿ ನೀಲಿ ಬಣ್ಣವನ್ನು ತಾಳಿತು.

"ಆದರೆ ಈ ತಪ್ಪು ಕೆಲಸವಾದುದು ಇತರ ಡಾಕ್ಟರುಗಳಿಗೆ ಕೂಡಲೇ ತಿಳಿದು ಹೋಯಿತು. ಒಡನೆ ಹೃದಯ ಚಲನೆಗೆ ಬೇಕಾದ ಇಂಜಕ್ಷನ್ನನು ಕೊಡಲಾಯಿತು. ಹಾಗೆಯೇ ಶ್ವಾಸೋಛ್ವಾಸವು ಆರಂಭವಾಗಲು ಕೃತಕ ಶ್ವಾಸಕೋಶವನ್ನು ಉಪಯೋಗಿಸಿದರು. ಆಬಳಿಕ ಮೂರು ನಾಲ್ಕು ನಿಮಿಷಗಳ ನಂತರ ಹೃದಯದ ಕ್ಷೀಣವಾದ ಬಡಿತವು ಕೇಳಲಾರಂಭಿಸಿತು. ಹಾಗೆಯೇ ಎದೆಯ ತಿದಿಯೂ ತನ್ನ ಕೆಲಸವನ್ನು ಮಾಡಲಾರಂಭಿಸಿತು.

"ಶ್ರೀ ಠಾಕೂರರ ಅಪೆಂಡಿಸಾಯಿಟ್ ಆಪರೇಶನ್ ಸಫಲವಾಗಿದ್ದು ಈಗ ಅವರ ಮೂರ್ಛಾವಸ್ಥೆಯು ಮೆಲ್ಲಮೆಲ್ಲಗೆ ದೂರವಾಗುತ್ತಿದೆ.

"ಇಲ್ಲಿ ಖೇದದೊಂದಿಗೆ ಅಶೋಕ್ ಠಾಕೂರರ ವ್ಯಕ್ತಿಗತ ಜೀವನಕ್ಕೆ ಸಂಬಂಧಿಸಿದ ಒಂದು ದುಃಖಪ್ರದ ಘಟನೆಯನ್ನು ತಿಳಿಸುವುದೂ ಆವಶ್ಯಕ.

ಈಗ ತಾನೆ ಈ ಸಮಾಚಾರವು ನಮಗೆ ಗೊತ್ತಾಗಿದೆ. ಅವರ ಪತ್ನಿ ಶ್ರೀಮ ಅರುಣಾ ಠಾಕೂರಳು ಹೋದ ವಾರ ರಾಯಪುರದ ಕೋರ್ಟಿನಲ್ಲಿ ವಿವಾ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದಾರಂತೆ. ಈ ಸುದ್ದಿಯು ನಮಗೆ 'ವಿಶ್ವ ಮಿತ್ರ' ಪತ್ರಿಕೆಯಿಂದ ತಿಳಿದು ಬಂದಿದೆ."

ಸುಖ ಮತ್ತು ದುಃಖ, ಆನಂದ ಮತ್ತು ಆಶ್ಚರ್ಯಗಳ ಸಮ್ಮಿಶ್ರಣ ಭಾ ನೆಗಳಿಂದ ಮರಿಯಮಳ ಹೃದಯವು ತುಂಬಿಹೋಯಿತು. ಅವಳ ಮನಸ್ಸಿನ ಒಂದು ಭೀಷಣ ಅಶಾಂತಿಯು ನೆಲೆಗೊಂಡಿತು. ಅವಳು ಹುಚ್ಚಿಯಂತೆ ಕೂ ಕೊಂಡಳು. "ನಾನು ಹೋಗುತ್ತೇನೆ. ಈಗಲೇ ಅವರ ಬಳಿ ಹೋಗುತ್ತೇನೆ ಅವರಿಗೆ ಈಗ ನನ್ನ ಅವಶ್ಯಕತೆ ಇದೆ."

ಮೂವತ್ತನಾಲ್ಕು

ಆಪರೇಶನಿನ ಆರು ಘಂಟೆಗಳ ಮೇಲೆ ಅಶೋಕನ ಮೂರ್ಛಾವಸ್ಥೆಯು ತಿಳಿಯಾಯಿತು. ಆಗ ಮೊತ್ತಮೊದಲು ಅಸ್ಪಷ್ಟವಾಣಿಯಿಂದ ಹೊರಟ ಒಂದೇ ಒಂದು ಶಬ್ದ 'ಮರಿಯಂ' ಎಂಬುದು.

ಅಬ್ದುಲ್ಲನು ಬಳಿಯಲ್ಲೇ ನಿಂತಿದ್ದಾನೆ. ಆದರೆ ಅವನಲ್ಲಿ ಅಶೋಕನ ಇಚ್ಛಾಪೂರ್ತಿಗೆ ಬೇಕಾದ ಸಾಧನವಾವುದೂ ಇರಲಿಲ್ಲ. ಅಶೋಕನಿಗೆ ಮತ್ತೆ ಔಷಧಿ ಕುಡಿಸಿ ಮಲಗಿಸಲಾಯಿತು. ಇದೇ ಕ್ರಮವು ನಡೆಯುತ್ತಲೇ ಇತ್ತು. ಮೂರನೆಯ ದಿನ ಸ್ವಲ್ಪ ಸೌಖ್ಯವಾಯಿತು. ನಾಲ್ಕನೆಯ ದಿನ ಇನ್ನೂ ಹೆಚ್ಚು ಸೌಖ್ಯವಾಗಿತ್ತು. ಆದರೂ ನಿತ್ರಾಣವು ಇನ್ನೂ ಇದೆ.

"ಆಪರೇಶನ್ನೇನೋ ಆಯಿತು. ಆದರೆ ಮರಿಯಮಳು ಬರಲೇ ಇಲ್ಲವಲ್ಲ ಅಬ್ದುಲ್ಲಾ!" ಅಶೋಕನು ಇಳಿಸ್ವರದಲ್ಲಿ ಅಂದನು. "ನಿನ್ನ ಸ್ವಪ್ನವು ಸತ್ಯ ವಾಗಿ ಪರಿಣಮಿಸಲಿಲ್ಲ."

"ಹುಜೂರ್" ಅಬ್ದುಲ್ಲನು ಚಿಂತಿತನಾಗಿ ಹೇಳಿದನು.

ಆಗ ಒಬ್ಬ ನರ್ಸ್ ಆ ಕೋಣೆಯೊಳಗೆ ಪ್ರವೇಶಿಸಿದಳು. ಅವಳೊಂದಿಗೆ ಒಬ್ಬಳು ಸಾಕಷ್ಟು ಸೋತು ಹೋದ, ಅಶಕ್ತಳಾದ, ಮಾಸಿದ ಬಟ್ಟೆಯನ್ನು ಧರಿ

ಸಿದ್ದ ಯುವತಿಯೂ ಇದ್ದಳು. ಅವಳ ಮುಖದಲ್ಲಿ ಭಯ, ಚಿಂತೆ, ಕುತೂಹಲ ಇತ್ಯಾದಿ ಭಾವಗಳು ಕಾಣುತ್ತಿದ್ದವು.

"ಯಾರು ಮರಿಯಮಳೇ ?" ಅಶೋಕನು ತಲೆಯೆತ್ತಿ ಕುಳಿತುಕೊಳ್ಳುವ ಪ್ರಯತ್ನವನ್ನು ಮಾಡುತ್ತ ಉತ್ತೇಜಿತನಾಗಿ ಕೇಳಿದನು.

"ಹೌದು" ಮರಿಯಮಳು ಉತ್ತರವನ್ನಿತ್ತಳು, ಅವಳ ಮಾತುಗಳೂ ಕೆಳಧನಿಯಲ್ಲಿದ್ದವು.

ನರ್ಸ್ ಕೂಡಲೇ ಓಡಿಹೋಗಿ ಅಶೋಕನ ತಲೆಯನ್ನು ಕೆಳಗಿರುವ ದಿಂಬಿನ ಮೇಲಿರಿಸಿ, ಕಠಿಣತೆಯಿಂದ ಹೇಳಿದಳು,

"ಇಲ್ಲ, ಇಲ್ಲ. ನೀವು ಎಂದೂ ಮೈ ಅಲುಗಿಸಕೂಡದು. ಒಂದು ವೇಳೆ ನೀವು ಹೇಳಿದಂತೆ ಕೇಳದಿದ್ದರೆ ನಾನು ಇವಳನ್ನು ಪುನಃ ಹಿಂದಕ್ಕೆ ಕರೆದು ಕೊಂಡು ಹೋಗಬೇಕಾಗುವುದು."

"ಬೇಡ, ಬೇಡ. ನಿಮ್ಮ ಮಾತಿನಂತೆ ನಡೆಯುತ್ತೇನೆ. ಅವಳನ್ನು ಮಾತ್ರ ಹೊರಗೆ ಕಳುಹಿಸಬೇಡಿ. ಅಬ್ದುಲ್ಲಾ ಸ್ವಲ್ಪ ಜಾಗ್ರತೆ. ಹಿಂದೆ ಹೇಳದೆ ಕೇಳದೆ ಹೋದಂತೆ ಈಗಲೂ ಹಾಗೆಯೇ ಮಾಡಿಯಾಳು. ಓಹ್ " ಅವನು ತುಂಬಾ ನಿತ್ರಾಣನಾಗಿದ್ದರಿಂದ ಅಸಹಾಯನಾಗಿ ತನ್ನ ತಲೆಯನ್ನು ಕೆಳಗಿಳಿಸಿದನು.

ಒಡನೆ ಮರಿಯಮಳು ಅವನ ಹಾಸಿಗೆಯ ಬಳಿಯಲ್ಲಿ ಹೋಗಿ ಕುಳಿತಳು. ಅಶೋಕನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ನಯವಾದ ನುಡಿಯಲ್ಲಿ ಹೇಳಿದಳು, "ಅಶೋಕ್ ಬಾಬೂ, ಸಂದೇಹಪಡಬೇಡಿ. ಈಗ ನಾನೆಂದೂ ಇಲ್ಲಿಂದ ಹೋಗಲಾರೆ. ಇನ್ನು ನಿಮ್ಮನ್ನಗಲಿ ಎಂದೆಂದೂ ಹೋಗುವುದಿಲ್ಲ."

"ಮರಿಯಮ್, ಇದೇನು ? ಇದು ನಿನ್ನ ರೂಪವೇ ? ಇಲ್ಲವೇ ನಾನೇನಾದರೂ ಸ್ವಪ್ನವನ್ನು ಕಾಣುತ್ತಿರುವೆನೋ ?"

"ಅಶೋಕ್ ಬಾಬೂ, ನಾನೇ ಮರಿಯಮ್. ನೀವು ಸ್ವಪ್ನವನ್ನು ಕಾಣುತ್ತಿಲ್ಲ. ನಿಜವನ್ನೇ ಕಾಣುತ್ತಿದ್ದೀರಿ." ಮರಿಯಮಳು ಸ್ನೇಹಭಾವದಿಂದ ಹೇಳಿದಳು.

ಇಷ್ಟರವರೆಗೆ ಅಬ್ದುಲ್ಲನು ದೂರ ನಿಂತಿದ್ದವನು ಈಗ ಉಲ್ಲಾಸದಿಂದ ಕೂಡಿದವನಾಗಿ ಮುಂದಕ್ಕೆ ಬಂದು ಹೇಳಿದನು "ನೀನು ಬಂದೆಯಾ ಮರಿಯಂ!

ಈಗ ನನ್ನ ಒಡೆಯರು ಕೂಡಲೇ ಗುಣ ಹೊಂದುವರು. ಯ್ಯಾ ಖುದಾ! ನಿನ್ನ ಲೀಲೆಯು ಅದೆಷ್ಟು ವಿಚಿತ್ರವಾಗಿದೆ!" ಅವನು ಅಲ್ಲಿಯೇ ಕೈಗಳನ್ನೆತ್ತಿ ಕೃತಜ್ಞತೆಯಿಂದೊಡಗೂಡಿ ತಮ್ಮೆಲ್ಲರ ಕ್ಷೇಮ ಸಮಾಚಾರಗಳನ್ನು ಕೈಗೊಳ್ಳುತ್ತಿರುವ ಆ ಅಲ್ಲಾನ ಉಪಕಾರವನ್ನು ಬಹುವಾಗಿ ನೆನಿಸಿ, ಆನಂದವಿಭೋರನಾಗಿ ಬಾಲಕನಂತೆ ಹಾರುತ್ತ ಕುಣಿಯುತ್ತ ಹೊರಗೆ ಹೋದನು. ಅಲ್ಲದೆ ಅವನಿಗೆ ತುಂಬಾ ಸಂತೋಷ. ಏಕೆಂದರೆ ಅವನ ಕನಸು ನನಸಾಯಿತಲ್ಲವೇ?"

ನರ್ಸ್ ಕೂಡ ಮುಗುಳುನಗೆಯೊಂದಿಗೆ ಹೊರಗೆ ಹೋದಳು.

"ನೀನು ನನ್ನನ್ನು ಕ್ಷಮಿಸಿದೆಯಾ ಮರಿಯಮ್?"

"ಕ್ಷಮಿಸುವಂತಹ ಘಟನೆಯಾದರೂ ಏನಿದೆ?"

"ನಾನು ಘನಘೋರವಾದ ಅಪರಾಧವನ್ನು ಮಾಡಿದ್ದೇನೆ. ಭಯಂಕರವಾದ ಅಪಮಾನವನ್ನು ನಿನಗೆ ತಂದೊಡ್ಡಿದ್ದೇನೆ. ನೀನು ನನ್ನನ್ನು ಕ್ಷಮಿಸಿದೆ ಎಂದು ಹೇಳು. ಇಲ್ಲವಾದರೆ ನನ್ನ ಹೃದಯಕ್ಕೆ ಶಾಂತತೆ ಸಿಗಲಾರದು."

"ಒಳ್ಳೇದು, ಹಾಗಾದರೆ ಕೇಳಿ—ಕ್ಷಮಿಸಿದೆ."

"ಆಹಾ, ನೀನೆಷ್ಟು ಗುಣವಂತೆ ಮರಿಯಂ!" ಅವನು ಕೃತಜ್ಞತೆಯಿಂದ ಹೇಳಿದನು. "ಈಗ ಪುನಃ ನೀನು ನನ್ನನ್ನು ಅಗಲಿ ಹೋಗಲಾರೆಯಲ್ಲವೇ?"

"ಇಲ್ಲ" ಎನ್ನುತ್ತ ಮರಿಯಮಳು ತುಂಬಾ ಸಾಕಾದವಳಾಗಿ ತನ್ನ ತಲೆಯನ್ನು ಮಂಚದ ಮೇಲಿನ ದಿಂಬಿನ ಮೇಲಿರಿಸಿದಳು.

ಅಶೋಕನು ಮೈತ್ರಿಭಾವದೊಂದಿಗೆ ಅವಳ ಕೈಯನ್ನು ತುಸು ಒತ್ತಿದನು. ಇದರಿಂದ ಮರಿಯಮಳ ಆತ್ಮವು ಆನಂದಮಗ್ನವಾಯಿತು.

"ಮಗುವೆಲ್ಲಿದೆ?" ಅಶೋಕನು ಮೆದುವಾಗಿ ಕೇಳಿದನು.

ಇದೆಲ್ಲ ಇವರಿಗೆ ಹೇಗೆ ತಿಳಿಯಿತೆಂದು ಮರಿಯಮಳು ಚಕಿತಳಾದಳು. ಅವಳು ಪ್ರಶ್ನಿಸಿದಳು "ನಿಮಗೆ ಯಾರು ಹೇಳಿದರು?"

"ಯಾರೋ ಹೇಳಿದರು............ನೀನು ನಮ್ಮ ಮಗುವೆಲ್ಲಿದೆ ಹೇಳು. ನಿನ್ನೊಂದಿಗೆ ತೆಗೆದುಕೊಂಡು ಬಂದಿರುವೆಯಾ?"

"ಇಲ್ಲ, ನನ್ನೊಡನೆ ಹೇಗೆ ತಂದೇನು" ಅವಳು ಬಾಡಿದ ಮುಖದವಳಾಗಿ ಹೇಳಿದಳು. "ಪುಟ್ಟ ಮಗು ಜಬಲ್‌ಪುರದಲ್ಲಿ ಅಸೌಖ್ಯದಿಂದಿದೆ."

"ಯಾರ ಹತ್ತಿರವಿದೆ? ಅದನ್ನು ಹಾಗೆಯೇ ಏತಕ್ಕೆ ಬಿಟ್ಟು ಬಂದೆ?"

"ಏನು ಮಾಡಲಿ, ಅದಕ್ಕೆ ಪ್ರಯಾಣವನ್ನು ಸಹಿಸಿಕೊಳ್ಳುವಷ್ಟು ಶಕ್ತಿ ಇರಲಿಲ್ಲ."

"ಈಗ ಅದೆಲ್ಲಿದೆ ?"

"ಹೋ ಗಾರ್ಡನ್ ಮಿಶನ್ ಅನಾಥಾಲಯದಲ್ಲಿದೆ."

"ಓಹ್ !" ಅಶೋಕನ ಬಾಯಿಯಿಂದ ಒಂದು ನಿಟ್ಟುಸಿರು ಹೊರಗೆ ಬಂದಿತು. ಅವನದೇ ಮಗು ಅನಾಥಾಲಯದಲ್ಲಿ! ಅವನ ಕಣ್ಣುಗಳು ತುಂಬಿಕೊಂಡವು. ಅವನಿಗೆ ಮರಿಯಮಳ ಶೈಶವಾವಸ್ಥೆಯ ನೆನಪಾಯಿತು. ಆ ಬಾಲಕಿಯ ಜೀವನವೂ ಅನಾಥಾಲಯದಲ್ಲೇ ಸಾಗಿತ್ತು. ಮರಿಯಮಳ ತಂದೆಯು ಅವಳನ್ನು ಬಿಟ್ಟು ಹೋದನು. ತಾಯಿ ತೀರಿಕೊಂಡಳು. ಆದ್ದರಿಂದ ಮರಿಯಮಳಿಗೆ ಅನಾಥಾಲಯದ ದ್ವಾರವನ್ನು ಕಾಣಬೇಕಾಯಿತು. ಆದರೆ ಈ ಶಿಶುವಿನ ಮಾತಾಪಿತರಿಬ್ಬರೂ ಜೀವಂತರಾಗಿದ್ದು ಅದಕ್ಕೆ ಅನಾಥಾಲಯದ ಕೃಪೆಗೊಳಗಾಗಬೇಕಾಯಿತು. ಈ ದೈವೀ ಕಟಾಕ್ಷವನ್ನು ನೆನೆದ ಅಶೋಕನ ಹೃದಯವು ತುಂಬಾ ಭಾರವಾಯಿತು.

ಅಶೋಕನ ಕಣ್ಣುಗಳಲ್ಲಿ ನೀರನ್ನು ಕಂಡ ಮರಿಯಮಳ ಹೃದಯವು ದ್ರವಿತವಾಯತು. ಆಗ ಅವಳೆಂದಳು: "ಈಗ ತಮಗೆ ಅದರ ಚಿಂತೆ ಬೇಡ. ದೇವರ ದಯೆ ಇದ್ದರೆ ಅದೂ ಸೌಖ್ಯವಾದೀತು. ತಾವು ನನಗೆ ಪುನಃ ಸಿಕ್ಕಿದಿರಲ್ಲವೇ--ನನಗೆ ಎಲ್ಲವೂ ಸಿಕ್ಕಿದಂತಾಯಿತು. ಈಗ ನನ್ನಂತಹ ಧನ್ಯಳಾರಿದ್ದಾಳು."

ಈ ರೀತಿ ದುಃಖದಿಂದ ಬೆಂದ ಇಬ್ಬರು ವಿರಹಿ ಪ್ರೇಮಿಗಳ ಮಿಲನವಾಗುತ್ತಿದ್ದಾಗ ಹೊರಗಿನ ಗೇಟಿನ ಹತ್ತಿರ ಮಾಯಾದೇವಿಯು ಕೈಯಲ್ಲಿ ಒಂದು ವರ್ತಮಾನ ಪತ್ರಿಕೆಯನ್ನು ಹಿಡಿದುಕೊಂಡು ಮೋಟಾರು ಕಾರಿನಿಂದ ಇಳಿದಳು. ಅಬ್ದುಲ್ಲನಾದರೊ ಅವಳನ್ನೇ ಕಾದು ಕುಳಿತವನಂತೆ ಅಲ್ಲಿಗೆ ಓಡುತ್ತ ಹೋಗಿ ಬಹಳ ಸಂತೋಷದಿಂದ ಮರಿಯಮಳು ಬಂದಿರುವ ಸೂಚನೆಯನ್ನಿತ್ತನು.

ಮಾಯಾದೇವಿಯು ವೇಗದಿಂದ ಮರಿಯಮಳನ್ನು ಕಾಣಲು ಬಂದಳು.

ಮರಿಯಮಳ ಮುಖವೊಮ್ಮೆ ಅವಳನ್ನು ನೋಡಿದೊಡನೆ ಹುಬ್ಬುಗಂಟಿಕ್ಕಿಕೊಂಡಿತು. ಆದರೆ ಮಾಯಾದೇವಿಯ ವದನದಲ್ಲಿ ನಿಜವಾದ ಪ್ರಸನ್ನತೆ ಮತ್ತು ಸ್ನೇಹ ಭಾವಗಳನ್ನು ಅಲ್ಲದೆ ಅವಳ ಸಾಧಾರಣ ವೇಷ ಭೂಷಣಗಳನ್ನು

ಕಂಡ ನಂತರ ಆ ತಿರಸ್ಕಾರ ಭಾವವು ಕಡಿಮೆಯಾಯಿತು.

"ನೀನು ಬಂದುದು ಬಹಳ ಒಳಿತಾಯಿತು ಮರಿಯಂ" ಮಾಯಾದೇ ಬಹಳ ಸಭ್ಯ ರೀತಿಯಲ್ಲಿ ಹೇಳಿದಳು. "ಅಣ್ಣ ಅಶೋಕರಾದರೊ ನಿನ್ನ ಆ ಮನಕ್ಕಾಗಿ ತಮ್ಮ ಪ್ರಾಣವನ್ನೇ ಹಾಸಿ ಕುಳಿತಿದ್ದರು. ಈ ದಿನ ಅವರಿಗೂ ನನಗೂ ನೀನು ನವಜೀವನವನ್ನು ದಯಪಾಲಿಸಿದೆ."

ಮರಿಯಮಳು ಅವಳೆಡೆಗೆ ಕೃತಜ್ಞತೆಯಿಂದ ನೋಡಿದಳು.

ಪುನಃ ಅಶೋಕನತ್ತ ನೋಡುತ್ತ ಮಾಯಾದೇವಿ ಎಂದಳು—"ತಾವು ವೃತ್ತಪತ್ರದಲ್ಲಿ ಈ ಸುದ್ದಿ ಓದಿದಿರಾ?"

"ಏನು?"

"ವಿವಾಹ ವಿಚ್ಛೇದನೆಗೆ ಸಲ್ಲಿಸಿದ್ದ ಅರುಣಾಳ ಅರ್ಜಿಯು ಮಂಜೂರಾಯಿತು. ತಮ್ಮ ವಕೀಲರು ಅದರ ವಿಷಯವಾಗಿ ಪ್ರತಿವಾದಿಯು ಯಾವ ವಿರೋಧವನ್ನು ಮಾಡಲು ಇಚ್ಛಿಸುವುದಿಲ್ಲ. ಅಥವಾ ಅದನ್ನು ರುಜು ಪಡಿಸಲೂ ಆಶಿಸುವುದಿಲ್ಲ. ಎಂಬುದಾಗಿ ಕೋರ್ಟಿನ ನ್ಯಾಯಾಧೀಶರಿಗೆ ತಿಳಿಸಿದರು. ಅದರ ಆಧಾರದ ಮೇಲೆ ನ್ಯಾಯಾಧೀಶನು ತೀರ್ಪನ್ನಿತ್ತರು."

"ಆದದ್ದು ಒಳಿತೇ ಆಯಿತು." ಅಶೋಕನು ಮೆಲ್ಲಗೆ ಹೇಳಿದನು.

ಮರಿಯಮಳು ತನ್ನ ಅನಾರೋಗ್ಯದ ಮಗುವನ್ನು ಜಬಲ್‌ಪುರದಲ್ಲೇ ಬಿಟ್ಟು ಬಂದಿದ್ದಾಳೆಂಬುದು ಮಾಯಾದೇವಿಗೆ ತಿಳಿದಾಗ ಅವಳ ಹೃದಯವು ವ್ಯಥೆಗೊಂಡಿತು. ಕೂಡಲೆ ಹೇಳಿದಳು: "ನಾನು ಈಗಲೇ ಕಾರಿನಲ್ಲಿ ಜಬಲ್‌ಪುರಕ್ಕೆ ಹೋಗುತ್ತೇನೆ. ಮಗುವನ್ನು ನನ್ನೊಂದಿಗೇ ಕರತರುತ್ತೇನೆ."

ಮರಿಯಮಳಿಂದ ಒಂದು ಪತ್ರವನ್ನು ಪಡೆದುಕೊಂಡು ಮಾಯಾ ಕೂಡಲೆ ಜಬಲ್‌ಪುರಕ್ಕೆ ಹೊರಟಳು. ಅಲ್ಲಿ ಅನಾಥಾಲಯದ ಸಂಚಾಲಿಕೆಯ ಕೈಯಲ್ಲಿ ಆ ಅನಾಥಾಲಯಕ್ಕಾಗಿ ಐನೂರು ರೂಪಾಯಿಗಳ ದಾನವಿತ್ತು ಆ ಮಗುವಿನ ಮೇಲೆ ತನ್ನ ಅಧಿಕಾರವನ್ನು ಪ್ರಾಪ್ತ ಮಾಡಿಕೊಂಡಳು. ದುರ್ಭಾಗ್ಯವಶಾತ್ ಡಾಕ್ಟರು ಆಗಲೇ ಮಗುವಿಗೆ 'ಟಾಯಿಫಾಡ್' ಆಗಿದೆ ಎಂದರು. ಆದ್ದರಿಂದ ಈಗ ಆ ಮಗುವನ್ನು ಇಲ್ಲಿಂದ ತೆಗೆದುಕೊಂಡು ಹೋಗುವುದು ಅಪಾಯಕರವೆಂದು ಅವರು ಸೂಚಿಸಿದರು. ಮಾಯಾದೇವಿಯು ಸ್ತಬ್ಧಳಂತಾದಳು. ಆಗ ಮನಸ್ಸಿನಲ್ಲೇ "ಹೇಗಾದರೂ ಈ ಶಿಶುವು ಆರೋಗ್ಯವಾಗಿ ಬಾಳು

ವಂತೆ ಭಗವಂತನು ಕೃಪೆಮಾಡಲಿ” ಎಂದಳು.

ಅಲ್ಲಿಂದ ಅಶೋಕನಿಗೊಂದು ತಂತಿ ಇತ್ತಳು. ಅದರಲ್ಲಿ ‘ ಮಗುವನ್ನು ಕೂಡಲೆ ಅಲ್ಲಿಂದ ತೆಗೆದುಕೊಂಡು ಹೋಗುವುದು ಉಚಿತವಲ್ಲವೆಂದು ಡಾಕ್ಟರರ ಅಭಿಪ್ರಾಯವಿದೆ. ಆದ್ದರಿಂದ ತಾನೂ ಕೆಲವು ದಿನ ಜಬಲ್‌ಪುರದಲ್ಲಿದ್ದು, ಮಗುವಿನ ಆರೋಗ್ಯವು ಸುಧಾರಿಸಿದಾಗ ಅದನ್ನು ಜೊತೆಗೆ ಕರೆದುಕೊಂಡು ನಾಗಪುರಕ್ಕೆ ಹಿಂತಿರುಗುವೆ’ ಎಂದಿತ್ತು. ಅದರಲ್ಲಿ ರೋಗದ ಹೆಸರನ್ನು ಮಾತ್ರ ಬರೆದಿರಲಿಲ್ಲ.

ಅಶೋಕ್ ಮತ್ತು ಮರಿಯಂ ತಂತಿ ಸಮಾಚಾರವನ್ನು ಕಂಡು ಒಮ್ಮೆ ಭಯಗೊಂಡರು. ಆದರೂ ಅಶೋಕನು ಮರಿಯಮಳಿಗೆಂದನು : “ ಮಾಯಾ ದೇವಿಯು ಮಗುವಿನ ಬಳಿ ಇರುವಾಗ ಚಿಂತೆ ಭಯಗಳ ಮಾತೇ ಬೇಕಾ ಗಿಲ್ಲ. ”

ಮಾಯಾದೇವಿಯು ಪ್ರತಿದಿನವೂ ಮಗುವಿನ ಆರೋಗ್ಯದ ವಿಚಾರ ವನ್ನು ಅದರ ಮಾತಾಪಿತರುಗಳಿಗೆ ಬರೆಯುತ್ತಿದ್ದಳು. ಅವಳು ತನು-ಮನ-ಧನಗಳಿಂದ ಆ ಮಗುವನ್ನು ಕಾಪಾಡಿದಳು. ಅನುಭವಸ್ಥರಾದ ವೈದ್ಯರನ್ನು ಕರೆಸಿದಳು. ಹಗಲು ಇರುಳುಗಳಿಗೆ ಆ ಹುಡುಗನ ಶುಶ್ರೂಶೆಗಾಗಿ ದಾದಿಯರ ನ್ನಿಟ್ಟಳು. ಬೆಲೆಬಾಳುವ ಉತ್ತಮ ಔಷಧಿಯಿಂದ ಉಪಚರಿಸಿದಳು. ಇತರ ಎಲ್ಲಾ ವಿಚಾರಗಳನ್ನು ಮರೆತು ಪ್ರತಿದಿನವೂ ಮಗುವು ಸುಖವಾಗಲಿ, ಸೌಖ್ಯ ವಾಗಲಿ ಎಂದೇ ಯೋಚಿಸುತ್ತಿದ್ದಳು. ಈ ರೀತಿಯ ಸೇವೆಯಿಂದ ಮಾಯಾ ದೇವಿಯ ಶುಷ್ಕಗೊಂಡ ಅತೃಪ್ತ ವಾತ್ಸಲ್ಯವು ಚಿಗುರಿ ಚೇತನಗೊಂಡಿತು.

ಹದಿನೈದನೆಯ ದಿನ ಜ್ವರವು ಇಳಿಯಿತು. ಮಾಯಾದೇವಿಯು ಈ ಶುಭ ಸಮಾಚಾರವನ್ನು ಅಶೋಕನಿಗೆ ತಿಳಿಸುತ್ತ ಇನ್ನು ಮೂರು-ನಾಲ್ಕು ದಿನ ಗಳಲ್ಲಿ ಮಗುವನ್ನು ತುಂಬಾ ಸುರಕ್ಷಿತವಾಗಿ ಕರೆದು ತರುವೆನೆಂದು ಪತ್ರ ಬರೆದಳು.

ಇತ್ತ ಅಶೋಕನು ಮರಿಯಮಳನ್ನು ಪಡೆದ ನಂತರ ತೀವ್ರವಾಗಿ ಆರೋಗ್ಯಗೊಳ್ಳುತ್ತಿದ್ದನು. ಆರನೆಯ ದಿನ ಅವನ ಹೊಟ್ಟೆಯ ಹೊಲಿಗೆಯನ್ನು ಬಿಚ್ಚಿದರು. ಅನಂತರ ಹತ್ತನೆಯ ದಿನ ಅವನನ್ನು ಆಸ್ಪತ್ರೆಯಿಂದ ಹೊರಗೆ ಕಳುಹಲಾಯಿತು.

ಅವನ ಆರೋಗ್ಯವೇನೊ ಸುಖದಿಂದ ಉತ್ತಮಗೊಳ್ಳುತ್ತಿತ್ತು. ಆ ಮರಿಯಮಳು ದಿನ ದಿನಕ್ಕೆ ಕ್ಷೀಣವಾಗುತ್ತಿದ್ದಳು. ಆದರೂ ಅವಳ ಹೃದಯ ಅಪಾರವಾದ ಆನಂದದಿಂದ ತುಂಬಿಕೊಂಡಿತ್ತು. ಆದರೆ ಅತಿ ವ್ಯಾಕುಲಗೊಂ ಅವಳ ಶರೀರಕ್ಕೆ ಈ ಅಪಾರ ಆನಂದದ ಸುಖವನ್ನು ಹೊರಲು ಅಸಾ ವಾಗಿತ್ತು. ಅವಳ ಕಣ್ಣುಗಳಲ್ಲಿ ಒಂದು ಬಗೆಯ ಕಾಂತಿಯು ಜ್ವಲಿಸುತ್ತಿತ್ತು ಶರೀರದಲ್ಲಿ ಮಾತ್ರ ಭಯಂಕರ ನಿತ್ರಾಣವಿತ್ತು.

ಅಶೋಕನು ಮರಿಯಮಳ ಈ ಅವಸ್ಥೆಯನ್ನು ಏನೆಂದು ತಿಳಿದುಕೊ ಬೇಕು? ಅವನು ವ್ಯಥಿತನಾಗುತ್ತಾ ಒಂದು ಅಜ್ಞಾತವಾದ ಭಯದಿಂದ ಒ ಗಿಂದೊಳಗೆ ಕಂಪಿಸುತ್ತಿದ್ದನು.

ಇಂದು ಸಂಜೆ ಚಿಕ್ಕ ಅಶೋಕನೊಡನೆ ಮಾಯಾದೇವಿಯು ಬರುವ ಳೆಂದು ತಂತಿ ಸಿಕ್ಕಿದೆ. ಮರಿಯಮಳ ಕಾಂತಿಹೀನ ವದನವೂ ಅಂದು ಪ್ರಸನ್ನ ತೆಯಿಂದ ಅರಳಿದೆ. ಅಶೋಕನ ಹೃದಯವೂ ಮಧುರ ಆಸೆ ಮತ್ತು ವಿಚಿತ್ರವಾದ ಉತ್ಕಂಠತೆಯಿಂದ ತುಂಬಿಕೊಂಡಿತ್ತು.

ಅಶೋಕನು ತನ್ನ ಬೆನ್ನ ಹಿಂದೆ ದೊಡ್ಡ ದಿಂಬನ್ನು ಇರಿಸಿ ಅರ್ಧ ಮಲಗಿದವನಂತೆ ಇದ್ದನು. ಮರಿಯಮಳು ಅದೇ ಮಂಚದ ಎಡ ಮಗ್ಗುಲಲ್ಲಿ ಕುಳಿತಿದ್ದಳು.

ಮಾಯಾದೇವಿಯು ಚಿಕ್ಕ ಅಶೋಕನನ್ನು ಅವನ ರೇಷ್ಮೆಯ ಹಾಸಿಗೆ ಯೊಂದಿಗೆ ಅಶೋಕನೆಡೆಗೆ ತರುತ್ತಿದ್ದಳು. ಮಗುವನ್ನು ಕಂಡಕೂಡಲೆ ಅವಳ ಕಣ್ಣುಗಳು ವಾತ್ಸಲ್ಯದಿಂದ ತುಂಬಿ ಥಳಥಳಿಸಲಾರಂಭಿಸಿದವು.

ಅಶೋಕನು ಆತುರತೆಯಿಂದ ಮಗುವನ್ನು ತೆದೆದುಕೊಳ್ಳಲು ಕೈ ಚಾಚಿ ದನು. ಮರಿಯಮಳಲ್ಲಿ ಕೈಗಳನ್ನು ಚಾಚಿ ಹಿಡಿಯುವುದಕ್ಕೂ ಶಕ್ತಿ ಇರ ಲಿಲ್ಲ. ಆದ್ದರಿಂದ ಅವಳು ಕೇವಲ ತನ್ನ ಪ್ರೇಮಲ ದೃಷ್ಟಿಯನ್ನು ಮಾತ್ರ ಮಗುವಿನತ್ತ ಬೀರಿದಳು.

"ಇಲ್ಲ, ಮರಿಯಂ ಈಗ ಇವನನ್ನು ನಿನಗೆ ಕೊಡಲಾರೆ. ನಾನೇ ಬದುಕಿಸಿ ತಂದವಳು. ಆದ್ದರಿಂದ ಇವನು ಈಗ ನನ್ನವನೇ. ನನ್ನಲ್ಲಿ ಇವ ನೆಷ್ಟು ಸಲಿಗೆಯಾಗಿದ್ದಾನೆ ನೋಡಲ್ಲ!" ಎನ್ನುತ್ತ ಮಗುವನ್ನು ನೋಡುತ್ತ ಅವರ ಆಟಕ್ಕಾಗಿ ತನ್ನ ಮುಖವನ್ನು ಕೋತಿಯ ಮುಖದಂತೆ ಮಾಡಿದಳು.

ಆಗ ಆ ನಿತ್ರಾಣದಲ್ಲಿದ್ದ ಮಗುವೂ ಕೂಡ ಮುಗುಳ್ನಗೆಯನ್ನು ಬೀರಿತು. ಮರಿಯಮಳೂ ನಕ್ಕಳು. ಆದರೆ ಆ ನಗುವಿನಲ್ಲಿ ಸ್ವಾರಸ್ಯವಿರಲಿಲ್ಲ.

"ಹೌದು. ಅಕ್ಕಾ ಇನ್ನು ಮೇಲೆ ಅವನನ್ನು ನೀನೇ ನೋಡಿಕೊಳ್ಳಬೇಕು. ಅವನನ್ನು ಪಾಲಿಸುವ ಶಕ್ತಿ ಈಗ ನನ್ನಲ್ಲಿ ಉಳಿಯಲಿಲ್ಲ." ಹೇಳುತ್ತ ಹೇಳುತ್ತ ಒಮ್ಮೆಲೆ ಮರಿಯಮಳು ಮತ್ತಷ್ಟು ಶಕ್ತಿ ಹೀನಳಾದಳು. ಆಗ ಅವಳು ತನ್ನ ತಲೆಯನ್ನು ಅಶೋೕಕನ ಎದೆಯ ಮೇಲಿಟ್ಟಳು.

ಅಶೋಕನು ಅವಳ ಶಿರವನ್ನು ಮೆದುವಾಗಿ ಸವರುತ್ತ ಪುನಃ ಚಿಕ್ಕ ಅಶೋಕನನ್ನು ಕೈಗೆ ತೆಗೆದುಕೊಳ್ಳಲು ತನ್ನ ಕೈಗಳನ್ನು ಮುಂದೊಡ್ಡಿದನು.

"ಊಹುಂ! ಈ ಮಗುವು ನನ್ನ ಕೈಗಳಿಂದ ನಿಮಗೆ ಸಿಗಲಾರದು, ಮರಿಯಮಳ ಕೈಗಳಿಂದಲೇ ಸಿಗಬೇಕು. ಇದರ ಅಧಿಕಾರವು ಅವಳದ್ದೇ ಆಗಿದೆ." ಎನ್ನುತ್ತ ಮಾಯಾದೇವಿಯು ಮಗುವನ್ನು ಮರಿಯಮಳ ಕಡೆಗೆ ನೀಡಿದಳು. ಮರಿಯಮಳ ಕೈಗಳಲ್ಲಿ ಈಗ ಆ ಮಗುವನ್ನು ತೆಗೆದುಕೊಳ್ಳುವಷ್ಟೂ ಶಕ್ತಿ ಇರಲಿಲ್ಲ. ಆದ್ದರಿಂದ ಅವಳು ಅದನ್ನು ಒಮ್ಮೆ ತನ್ನ ಕೈಗಳಿಂದ ಮುಟ್ಟಿದಳು ಮಾತ್ರ.

ಅಶೋಕನು ಅತ್ಯಂತ ಆತುರತೆಯಿಂದ ಮಗುವನ್ನು ತೆಗೆದುಕೊಂಡನು. ವಾತ್ಸಲ್ಯದ ಪ್ರಥಮ ಆವೇಗದೊಂದಿಗೆ ಅದರ ಕಪೋಲಗಳಿಗೆ ಬಹಳವಾದ ಮಮತೆಯ ಚುಂಬನವನ್ನಿತ್ತನು. ಮರಿಯಮಳು ತನ್ನ ಶಕ್ತಿಯನ್ನು ಕಣ್ಣುಗಳಲ್ಲಿ ಕೇಂದ್ರೀಕರಿಸಿ ಈ ಪವಿತ್ರ ದೃಶ್ಯವನ್ನು ನೋಡುತ್ತಿದ್ದಳು.

ಅನಂತರ ಉಳಿದ ಎಲ್ಲಾ ಶಕ್ತಿಯನ್ನು ಸೇರಿಸಿ ಅವಳು ತನ್ನ ತಲೆಯನ್ನೆತ್ತಿ ಅಶೋಕನು ಚುಂಬಿಸಿದ ಎಡೆಗೇನೇ ಅವಳೂ ಕಷ್ಟದಿಂದ ಮುತ್ತನ್ನಿತ್ತಳು. ಅದರಲ್ಲಿ ಅವಳ ಅವಸರವೆಷ್ಟಿದ್ದಿತೆಂಬುದನ್ನು ಅವಳು ಮಾತ್ರ ಬಲ್ಲಳು.

ಅನಂತರ ಮರಿಯಮಳು ತನ್ನ ತಲೆಯನ್ನು ಅಶೋಕನ ತೊಡೆಯ ಮೇಲಿರಿಸಿದಳು. ಹಾಗೆಯೇ ಕಣ್ಣುಗಳನ್ನು ಮುಚ್ಚಿಕೊಂಡಳು. ಅವಳ ನಾಲಿಗೆಯಿಂದ ಕೇವಲ 'ಅಶೋಕ್' ಎಂಬ ಒಂದೇ ಒಂದು ಶಬ್ದ ಹೊರಟಿತು. ನಂತರ ಬಂದುದು ಒಂದು ದೀರ್ಘ ಶ್ವಾಸ. ಶರೀರದಲ್ಲಿ ಒಂದು ಸಾಧಾರಣ ನಡುಕ ಉಂಟಾಯಿತು ಒಂದು ತೆರೆಯಂತೆ. ಅನಂತರ ಪೂರ್ಣ ಶಾಂತಿ.

ಆಮೇಲೆ ಅವಳು ಸ್ವಲ್ಪವೂ ಅಲುಗಲಿಲ್ಲ. ಅಶೋಕನು ಈ ವಿಚಿತ್ರ ಸ್ತಬ್ಧತೆಯನ್ನು ಕಂಡು ಭಯಗೊಂಡು ಕೂಗಿದನು—'ಮರಿಯಂ'

ಮರಿಯಮಳು ಒಂದನ್ನೂ ಮಾತನಾಡಲಿಲ್ಲ.

ಮಾಯಾದೇವಿಯು ಓಡಿಹೋಗಿ ಬಾಲಕನನ್ನು ತನ್ನ ಕೈಗೆ ತೆಗೆದು ಕೊಂಡಳು. ಅಶೋಕನು ಮರಿಯಮಳ ಗಲ್ಲವನ್ನು ಹಿಡಿದು ಮೇಲಕ್ಕೆತ್ತಿದನು. ಬಹಳ ವ್ಯಾಕುಲನಾಗಿ ಪುನಃ ಕರೆದನು 'ಮರಿಯಂ!'

ಆದರೆ ಮರಿಯಮಳು ಮತ್ತೂ ಮಾತನಾಡಲಿಲ್ಲ. ಅವಳ ಕಣ್ಣುಗಳು ಮುಚ್ಚಿಕೊಂಡಿದ್ದವು. ಇದರಿಂದ ಅವಳು ಅತ್ಯಂತ ಸುಖದ ನಿದ್ರೆಯನ್ನು ಮಾಡುತ್ತಿದ್ದಳೆಂದು ಕಾಣುತ್ತಿತ್ತು.

ಅಶೋಕನು ತನ್ನ ಘ್ರಾಣೇಂದ್ರಿಯವನ್ನು ಅವಳ ಮೂಗಿನ ಬಳಿ ಕೊಂಡು ಹೋದನು. ಶ್ವಾಸವು ನಿಂತೇ ಹೋಗಿತ್ತು. ನಾಡಿಯ ಮೇಲೆ ಕೈಯಿಟ್ಟನು—ಅದೂ ನಿಂತಿತ್ತು. ಉಳಿದ ಲಕ್ಷಣವೆಂದರೆ ಅವಳು ದೀರ್ಘ ನಿದ್ರೆಯಿಂದ ಇನ್ನೆಂದೂ ಎಚ್ಚರಗೊಳ್ಳಲಾರಳೆಂಬುದು ಮಾತ್ರ.

"ಒಹ್! ಮರಿಯಂ, ನೀನು ಪುನಃ ನನ್ನನ್ನು ಅಗಲಿ ಹೋದೆಯಾ?" ಅಶೋಕನು ದುಃಖಿತ ಹೃದಯದೊಂದಿಗೆ ಆರ್ತಧ್ವನಿಯೊಂದಿಗೆ ಅಳಲಾರಂಭಿಸಿದನು. ಮಾಯಾದೇವಿಯು ಮಗುವನ್ನೆತ್ತಿಕೊಂಡು ನಿಶ್ಚಿಂತಳಂತೆ ಇದ್ದಳು. ಆದರೂ ಅವಳ ಕಣ್ಣುಗಳೂ ಒದ್ದೆಯಾಗಿದ್ದವು.

ಮೂವತ್ತೊಂದು

ಮಾಯಾದೇವಿಯು ಮನಸ್ಸಿನಲ್ಲೇ ಎಂದುಕೊಂಡಳು — "ಒಂದು ವೇಳೆ ಮರಿಯಮಳಿಗೆ ಬಂದ ಆ ಮೃತ್ಯುವು ನನಗೆ ಬರುತ್ತಿದ್ದರೆ ನಾನು ಧನ್ಯಳಾಗುತ್ತಿದ್ದೆ. ಅದಕ್ಕೋಸ್ಕರ ನಾನು ನನ್ನ ಎಲ್ಲಾ ವೈಭವ ಮತ್ತು

ಸಂಪೂರ್ಣ ಸಂಪತ್ತಿಗೆ ತಿಲಾಂಜಲಿಯನ್ನೀಯಲು ಕೂಡ ಹಿಂಜರಿಯುತ್ತಿರಲಿಲ್ಲ."

ಅಶೋಕ್! ಯಾವ ಆಚಾರ-ವಿಚಾರಗಳೆಂಬ ಹುಟ್ಟಿನಿಂದ ತನ್ನ ದೋಣಿಯನ್ನು ಸಾಗಿಸಲು ಪ್ರಯತ್ನಿಸಿ, ಅವು ತುಂಬಾ ಗಟ್ಟಿಮುಟ್ಟಾಗಿವೆ ಎಂದು ತಿಳಿದಿದ್ದನೋ ಅವೇ ಇಂದು ಶಕ್ತಿ ಇಲ್ಲದವುಗಳೆಂಬಂತೆ ಅವನಿಗೆ ತೋರುತ್ತಿದ್ದುವು. ಅವನು ಹಾಸಿಗೆಯಲ್ಲಿಯೇ ಬಿದ್ದು ಯೋಚಿಸುತ್ತಿದ್ದನು.

"ಸ್ತ್ರೀ ಮತ್ತು ಕಲೆ ಇವುಗಳೆರಡರ ಸಮನ್ವಯವಾಗಲಾರದು ಎಂಬ ಎಂತಹ ಭ್ರಮೆಯು ನನ್ನನ್ನು ಕಾಡಿಸುತ್ತಿತ್ತು. ಇವುಗಳೆರಡೂ, ಅಥವಾ ಇವುಗಳಲ್ಲಿ ಯಾವುದಾದರೊಂದು ದ್ರೋಹಿಯಾಗಿದ್ದರೆ ಆಗ ಮಾತ್ರ ಈ ಎರಡರ ಮಧ್ಯೆ ವಿರೋಧ ಉಂಟಾಗಲೂ ಸಾಧ್ಯ. ಆ ಸಮಯದಲ್ಲಿ ನನಗೆ ಕಲೆಯ ರಹಸ್ಯವೇ ತಿಳಿದಿಲ್ಲವೆನ್ನಬೇಕು. ಆ ದಿನಗಳಲ್ಲಿ ನಾನು ಮರೀಚಿಕೆಯ ಕಡೆಗೆ ಧಾವಿಸುತ್ತಿದ್ದೆ. ಇಲ್ಲವೆಂದರೆ ಮರಿಯಮಳನ್ನು ನಾನೇಕೆ ಬಿಡುತ್ತಿದ್ದೆ."

"ಮರಿಯಂ ನಾನು ನಿಜವಾದ ಕಲಾಕಾರನಾಗಿದ್ದರೆ ನಿನ್ನ ಸೌಜನ್ಯವನ್ನು ಎಂದೂ ನಿರಾದರ ಮಾಡುತ್ತಿರಲಿಲ್ಲ. ನಾನು ನಿನಗೆ ಎಲ್ಲಾ ವಿಧದಿಂದಲೂ ದುಃಖವನ್ನೇ ಕೊಟ್ಟೆ. ಆದರೆ ಅದರ ಬದಲಾಗಿ ನೀನು ನನಗೆ ನಿಜವಾದ ನಿಷ್ಕಾಮ ಪ್ರೇಮವನ್ನು ಧಾರೆ ಎರೆದು ಕೊಟ್ಟಂತೆ ಕೊಟ್ಟೆ. ನೀನು ಜೀವಂತಳಾಗಿರುವಾಗಲೇ ನಿನ್ನ ಬೆಲೆಯನ್ನು ಅಳೆಯಲಾರದೆ ಹೋದ ನನ್ನಂತಹ ದುರ್ಭಾಗ್ಯನಾರಿದ್ದಾನೆ.— ?"

ಮರಿಯಮಳ ಮರಣಾನಂತರ ಮಾಯಾದೇವಿಯು ಚಿಕ್ಕ ಅಶೋಕನನ್ನು ತನ್ನ ಮನೆಗೇ ಕರೆದುಕೊಂಡು ಹೋಗಿ ಅಲ್ಲಿಯೇ ಅವನ ಲಾಲನೆ ಪಾಲನೆಗಳನ್ನು ಮಾಡಲಾರಂಭಿಸಿದಳು. ಮರಿಯಮಳು ಬಿಟ್ಟು ಹೋದ ಹಾಗೂ ಕೊಟ್ಟು ಹೋದ ಉತ್ತರದಾಯಿತ್ವವನ್ನು ಪೂರ್ಣಗೊಳಿಸುವುದರಲ್ಲಿ ಆವಳಿಗೆ ಅಭಿಮಾನವೇ ಇತ್ತು. ಆ ಮಗುವು ಅಶೋಕನದೆಂಬುದೊಂದೇ ಅವಳಿಗೆ ಅಭಿಮಾನ, ಆನಂದ, ಸುಖಗಳಿಗೆ ಹೆಚ್ಚಿನ ಕಾರಣವೆನ್ನಬಹುದು.

ಪಾದರೀಪುರದ ಆ ಜಲಪಾತದ ಬಳಿಯಲ್ಲೇ, ಬಕುಲಮರದ ಎಲೆಗಳ ಸಳಸಳ ಎಂದು ಶಬ್ದಮಾಡುತ್ತಿದ್ದ, ಮರಿಯಂ ಮತ್ತು ಅಶೋಕನ ಪ್ರಣಯ ಸಾಕ್ಷಿಯಾದ ಯಾವ ಸ್ಥಳವಿತ್ತೊ ಅಲ್ಲಿಯೇ ಮರಿಯಮಳ ಗೋರಿಯನ ಕಟ್ಟಿದರು. ಅಲ್ಲಿಯೇ ಒಂದು ಸುಂದರವಾದ ಸ್ಮಾರಕ ಮಂದಿರವನ್ನು ಕಟ್ಟಿ ಸಲಾಯಿತು. ಅಲ್ಲಿಗೆ ಪ್ರತಿತಿಂಗಳೂ ಅಶೋಕ್ ಮತ್ತು ಮಾಯಾದೇ ಯರು ಹೋಗಿ ಹೂಗಳನ್ನು ಅರ್ಪಿಸಿ ಬರುತ್ತಿದ್ದರು. ಅವರೊಂದಿಗೆ ವೃದ್ಧ ಅಬ್ದುಲ್ಲನೂ ಇದ್ದೇ ಇರುತ್ತಿದ್ದನು.